ಕರುನಾಡು ಎಗ್ಸಾಂ.ಇನ್

# ಪ್ರಚಲಿತ ಘಟನೆಗಳು

ಮಾರ್ಚ್

2013

ಸಂಪರ್ಕಿಸಿ:KARUNADUEXAMS@GMAIL.COM

## ರಾಜ್ಯ

**ರಾಜ್ಯ ಗೋಸೇವಾ ಆಯೋಗ ರಚನೆ ಆದೇಶ ಹೊರಡಿಸಿದ ಸರ್ಕಾರ**

ರಾಜ್ಯದಲ್ಲಿ ಗೋಹತ್ಯೆಯನ್ನು ನಿಯಂತ್ರಿಸಿ ಗೋವುಗಳನ್ನು ರಕ್ಷಿಸುವ ಸಂಬಂಧ ಕರ್ನಾಟಕ ರಾಜ್ಯ ಗೋಸೇವಾ ಆಯೋಗವನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ವಿವಿಧ ಇಲಾಖೆಯ ನಿರ್ದೇಶಕರುಗಳು ಈ ಆಯೋಗದ ಸರ್ಕಾರಿ ಸದಸ್ಯರಾಗಿರುವ ಈ ಆಯೋಗಕ್ಕೆ ಎಂ.ಬಿ. ಪುರಾಣಿಕ್ ರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಸಮಿತಿಯ ಸರ್ಕಾರೇತರ ಸದಸ್ಯರುಗಳು:

- ಎಸ್.ಶಿವರಾಮು, ಡಾ.ಮಿತ್ತಲ್, ಭಾರತಿ ಪಾಟೀಲ್, ಶ್ರೀನಿವಾಸ ಪಾಟೀಲ್, ಶಿವಪ್ಪ ಕಡಪಟ್ಟಿ, ಉತ್ತಮ್ ಚಂದ್ ಬಿಗಡ, ದಯಾನಂದ ಸ್ವಾಮೀಜಿ ಮತ್ತು ಧರ್ಮ ಪ್ರಸಾದ್.
- ಗೃಹ ಕಂದಾಯ, ಗ್ರಾಮೀಣಭಿವೃದ್ದಿ ಮತ್ತು ಪಂಚಾಯತ್ ರಾಜ್ ನಗರಾಭಿವೃದ್ಧಿ, ರಾಜ್ಯ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಆಯುಕ್ತರು ಮತ್ತು ಕೃಷಿ ಮಾರುಕಟ್ಟೆ ಇಲಾಖೆ ನಿರ್ದೇಶಕರು ಆಯೋಗದ ಸರ್ಕಾರಿ ಸದಸ್ಯರುಗಳು

**ಮಾರ್ಚ್ 3, ಕನ್ನಡ ಚಲನಚಿತ್ರ ದಿನ**

ಕನ್ನಡ ಚಿತ್ರ ರಸಿಕರಿಗೆ ಸಿಹಿ ಸುದ್ದಿ, ಇನ್ನು ಮುಂದೆ ಪ್ರತಿ ವರ್ಷ "ಮಾರ್ಚ್ 3" ರನ್ನು ಕನ್ನಡ ಚಲನಚಿತ್ರ ವರ್ಷವನ್ನಾಗಿ ಆಚರಿಸಲು ಕರ್ನಾಟಕ ಚಲನಚಿತ್ರ ಮಂಡಳಿ ನಿರ್ಧರಿಸಿದೆ. ಕನ್ನಡದ ಪ್ರಥಮ ವಾಕ್ಚಿತ್ರ "ಸತಿ ಸುಲೋಚನ" ಮಾರ್ಚ್ 3, 1934 ರಲ್ಲಿ ತೆರೆಕಂಡಿತ್ತು ಆದ್ದರಿಂದ ಈ ದಿನವನ್ನು ಕನ್ನಡ ಚಲನಚಿತ್ರವನ್ನಾಗಿ ಆಚರಿಸಲು ಮಂಡಳಿ ನಿರ್ಣಯ ಕೈಗೊಂಡಿದೆ. ಅಂದಿನಿಂದ ಕನ್ನಡ ಚಿತ್ರರಂಗ 79 ವರ್ಷಗಳನ್ನು ಪೂರೈಸಿ ಪ್ರಬುದ್ದತೆಯ ಮೆಟ್ಟಿಲನ್ನು ಏರುತ್ತಿರುವುದ ಸಂತಸದ ವಿಷಯ.

- ದೇಶದ ಮೊದಲ ವಾಕ್ಚಿತ್ರ "ಆಲಂ ಆರಾ" 1931 ರಲ್ಲಿ ತೆರೆಕಂಡಿತ್ತು. ಈ ಚಿತ್ರ ತೆರೆಕಂಡ ಮೂರು ವರ್ಷಗಳ ಬಳಿಕ "ಸತಿ ಸುಲೋಚನಾ" ಚಿತ್ರ ತೆರೆಯ ಮೇಲೆ ಮೂಡಿಬಂದಿತು.
- ಆಂಧ್ರಪ್ರದೇಶದಲ್ಲಿ "ಭಕ್ತ ಪ್ರಹ್ಲಾದ", ತಮಿಳುನಾಡಿನಲ್ಲಿ "ಕಾಳಿದಾಸ", ಮಹಾರಾಷ್ಟ್ರದಲ್ಲಿ "ಅಯೋಧ್ಯಾಚ ರಾಜ" ಮತ್ತು ಗುಜರಾತಿನಲ್ಲಿ "ನರಸೀಮೆಹತಾ" ಪ್ರಥಮ ವಾಕ್ಚಿತ್ರಗಳು. ಈ ಚಿತ್ರಗಳು ಸತಿ ಸುಲೋಚನಾದ ಮುಂಚೆಯೇ ತೆರೆಕಂಡಿದ್ದವು.
- 1934 ರಲ್ಲಿ ತೆರೆಕಂಡ "ಭಕ್ತ ಧ್ರುವ" ಚಿತ್ರ ಕನ್ನಡದ ಎರಡನೇ ವಾಕ್ಚಿತ್ರ.
- "ಸತಿ ಸುಲೋಚನಾ"ದಲ್ಲಿ ಇಂದ್ರಜಿತ್ ಪಾತ್ರದಲ್ಲಿ ಅಭಿನಯಿಸಿದ್ದ ಎಂ.ವಿ.ಸುಬ್ಬಯ್ಯ ನಾಯ್ಡು ಮೊದಲ ವಾಕ್ಚಿತ್ರದ ಹೀರೊ.
- 1954 ರಲ್ಲಿ ತೆರೆಕಂಡ "ಬೇಡರ ಕಣ್ಣಪ್ಪ" ನೂರು ದಿನ ಪೂರೈಸಿದ ಕನ್ನಡದ ಮೊದಲ ಚಿತ್ರ.
- 1962 ರ ಸಮಯದಲ್ಲಿ ತೆರೆಕಂಡ "ಅಮರ ಶಿಲ್ಪಿ ಜಕಣಚಾರಿ" ಕನ್ನಡದ ಮೊದಲ ಕಲರ್ ಚಿತ್ರ. ಕಲ್ಯಾಣ್ ಕುಮಾರ್ ಈ ಚಿತ್ರದ ನಾಯಕರು.

**ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾಗಿ ವಘೇಲ ಪ್ರಮಾಣ ವಚನ**

ರಾಜ್ಯ ಹೈಕೋರ್ಟ್ ನ ನೂತನ ಮುಖ್ಯ ನ್ಯಾಯಾಧೀಶರಾಗಿ ಡಿ. ಎನ್. ವಘೇಲಾ ರವರು ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ವಘೇಲಾ ರವರು ಭಗವಂತನ ಹೆಸರಿನಲ್ಲಿ ಗೋಪ್ಯತೆಯ ಪ್ರತಿಜ್ಞಾ ವಿಧಿಯನ್ನು ರಾಜ್ಯಪಾಲರಿಂದ ಸ್ವೀಕರಿಸಿದರು.

- ಮುಖ್ಯ ನ್ಯಾಯಮೂರ್ತಿಗಳಾಗಿದ್ದ ವಿಕ್ರಂ ಸೇನ್ ರವರು ಸುಪ್ರೀಂ ಕೋರ್ಟನ ನ್ಯಾಯಾಧೀಶರಾಗಿ ನೇಮಕಗೊಂಡ ಬಳಿಕ ಈ ಸ್ಥಾನ ತೆರವಾಗಿತ್ತು. ಬಳಿಕ ನ್ಯಾಯಮೂರ್ತಿ ಕೆ.ಶ್ರೀಧರ್ ರಾವ್ ರವರು ಹಂಗಾಮಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿದ್ದರು.

ವಘೇಲಾ ರವರ ಬಗ್ಗೆ:

- 1954 ರ ಆಗಸ್ಟ್ 11 ರಂದು ಗುಜರಾತ್ ನಲ್ಲಿ ಜನಿಸಿದ ನ್ಯಾ.ವಘೇಲಾ ರವರು ನ್ಯಾಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. 1975 ರಲ್ಲಿ ರಾಜಕೋಟ್ ನಲ್ಲಿ ವಕೀಲ ವೃತ್ತಿ ಆರಂಭಿಸಿದ ಅವರು ಬಡ ಕಾರ್ಮಿಕರು, ಕಾರ್ಮಿಕ ಸಂಘಟನೆಗಳ ಪರವಾಗಿ ನ್ಯಾಯ ಮಂಡಿಸಿ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

1999 ರಲ್ಲಿ ಗುಜರಾತ್ ಹೈಕೋರ್ಟನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡು, 2001 ರಿಂದ ಕಾಯಂ ನ್ಯಾಯಮೂರ್ತಿಯಾದರು.

**ವಿಶ್ವ ಪ್ರವಾಸೋದ್ಯಮ ಮೇಳದಲ್ಲಿ ಕರ್ನಾಟಕದ ಮೆರಗು**

ಜರ್ಮನಿಯ ಬರ್ಲಿನ್ ನಗರದಲ್ಲಿ ನಡೆಯುತ್ತಿರುವ ವಿಶ್ವದ ಅತಿ ದೊಡ್ಡ ಪ್ರವಾಸಿ ಮೇಳದಲ್ಲಿ ಕರ್ನಾಟಕದ ಕಲೆ ಗಮನ ಸೆಳೆಯುತ್ತಿದೆ. ದೇಶ ವಿದೇಶದಿಂದ ಭಾಗವಹಿಸಿರುವ ಪ್ರವಾಸಿ ಏಜೆನ್ಸಿಗಳು ನಮ್ಮ ಕಲೆಯನ್ನು ಕುತೂಹಲವಾಗಿ ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

- ಚನ್ನಪಟ್ಟಣದ ಬೊಂಬೆಗಳು, ಬಿದರಿ ಕಲೆಯ ವಿನ್ಯಾಸಗಳು, ಲಂಬಾಣಿ ಅಲಂಕಾರಿಕ ವಸ್ತುಗಳು ಮತ್ತು ನವಲಗುಂದ ನೆಲಹಾಸುಗಳು ವಿಶ್ವ ಪ್ರವಾಸಿ ಮೇಳದಲ್ಲಿ ನೋಡುಗರ ಗಮನ ಸೆಳೆದಿವೆ.
- ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಈ ಬಾರಿ ಚಿತ್ರಗಳ ಬದಲು ಕರಕುಶಲ ವಸ್ತುಗಳಿಂದ ಮಳಿಗೆಯನ್ನು ಅಲಂಕರಿಸಿದೆ ಆಗಾಗಿ ಕರ್ನಾಟಕದ ಮಳಿಗೆ ಇತರೆ ರಾಜ್ಯದ ಮಳಿಗೆಗಳಿಗಿಂತ ವೈಶಿಷ್ಟವಾಗಿದೆ.
- ಮೇಳದಲ್ಲಿ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅರವಿಂದ್ ಜಾಧವ್ ನೇತೃತ್ವದ ನಿಯೋಗ ಭಾಗವಹಿಸಿದೆ.

**ಸಹ್ಯಾದ್ರಿ ಸಂರಕ್ಷಣಾ ನಿಧಿ ಸ್ಥಾಪನೆಗೆ ಶಿಫಾರಸ್ಸು**

ಕರ್ನಾಟಕದ ಪಶ್ಚಿಮ ಘಟ್ಟದ ಪ್ರದೇಶ ರಕ್ಷಣೆಗೆ "ಸಹ್ಯಾದ್ರಿ ಸಂರಕ್ಷಣಾ ಪಡೆ"ಯನ್ನು ಸ್ಥಾಪಿಸಬೇಕು ಎಂದು ಪಶ್ಚಿಮ ಘಟ್ಟಗಳ ಕಾರ್ಯಪಡೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಕಾರ್ಯಪಡೆಗಳ ಐದು ವರ್ಷಗಳ ಕಾರ್ಯಕ್ರಮ ಕುರಿತು ಮಾಹಿತಿ ನೀಡುವ ಪುಸ್ತಕ "ಹಸಿರು ಹೆಜ್ಜೆ" ಯಲ್ಲಿ ಈ ಶಿಫಾರಸ್ಸು ಮಾಡಲಾಗಿದೆ.

ಕಾರ್ಯಪಡೆಯ ಇತರೆ ಶಿಫಾರಸ್ಸುಗಳು:

- ಪಶ್ಚಿಮಘಟ್ಟಗಳ ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಗಾಗಿ ಮೀಸಲಿರುವ ವಿಶೇಷ ಪ್ಯಾಕೇಜ್ ನಲ್ಲಿ ಅರಣ್ಯ ಇಲಾಖೆಯನ್ನು ನೇರವಾಗಿ ತೊಡಗಿಸಿಕೊಳ್ಳಬೇಕು ಮತ್ತು ಸ್ಥಳೀಯರಿಗೆ ಉದ್ಯೋಗ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.
- ಜಲ ವಿದ್ಯುತ್, ನದಿ ತಿರುವು ಯೋಜನೆಗಳಂತಹ ಪರಿಸರ ನಾಶಕ್ಕೆ ಕಾರಣವಾಗುವ ಬೃಹತ್ ಯೋಜನೆಗಳನ್ನು ಈ ಪ್ರದೇಶದಲ್ಲಿ ಕೈಬಿಡಬೇಕು ಮತ್ತು ಗಣಿಗಾರಿಕೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು.
- ಸಿದ್ದಾಪುರ, ಶಿರಿಸಿ, ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿರುವ ದೇವರ ಕಾಡು ಪ್ರದೇಶವನ್ನು ಜನರ ಸಹಭಾಗಿತ್ವದಿಂದ ಸಂರಕ್ಷಿಸಬೇಕು ಎಂದು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

**BSc ಪಧವೀಧರಿಗೂ ಎಂಜನಿಯರಿಂಗ್ ಲ್ಯಾಟರಲ್ ಪ್ರವೇಶ: ರಾಜ್ಯ ಸರ್ಕಾರ ಒಪ್ಪಿಗೆ**

ಡಿಪ್ಲೋಮಾ ಕೋರ್ಸಗಳ ಮಾದಿಯಲ್ಲೇ ಮುಂದಿನ ಶೈಕ್ಷಣಿಕ ಸಾಲಿನಿಂದ BSc ಪದವೀಧರರಿಗೂ ಎಂಜನಿಯರಿಂಗ್ ಮೂರನೇ ಸೆಮಿಸ್ಟರ್ ಗೆ ಲ್ಯಾಟರಲ್ ಪ್ರವೇಶ ನೀಡಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. AICTE ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರ ಈ ನಿಯಮವನ್ನು ಜಾರಿಗೊಳಿಸಲು ಸಜ್ಜಾಗಿದ್ದು, ಇದಕ್ಕೆ ಸಂಬಂಧಿಸಿದ ಕಡತಕ್ಕೆ ಶಿಕ್ಷಣ ಸಚಿವ ಸಿ.ಟಿ.ರವಿ ರವರು ಅಂಕಿತ ಹಾಕಿದ್ದಾರೆ. 2011 ರಲ್ಲೇ AICTE ರಾಜ್ಯಕ್ಕೆ ಈ ಬಗ್ಗೆ ನಿರ್ದೇಶನ ನೀಡಿದ್ದರೂ ಇದುವರೆಗೂ ಜಾರಿಯಾಗಿರಲಿಲ್ಲ.

- AICTE ಮಾರ್ಗಸೂಚಿ ಪ್ರಕಾರ ಎಂಜನಿಯರಿಂಗ್ ಪ್ರವೇಶ ಪಡೆಯುವ ವಿದ್ಯಾರ್ಥಿಯು BSc ಪದವಿಯಲ್ಲಿ ಶೇ.45 ರಷ್ಟು ಅಂಕಗಳನ್ನು ಪಡೆದಿರಬೇಕು. ಜತೆಗೆ ದ್ವಿತೀಯ ಪಿಯುಸಿ ಯಲ್ಲಿ ಗಣಿತ ವಿಷಯವನ್ನು ಕಡ್ಡಾಯವಾಗಿ ಓದಿರಬೇಕು.
- ಅಲ್ಲದೇ ಎರಡನೇ ವರ್ಷದ ಪಠ್ಯಕ್ರಮಗಳ ಜತೆಗೆ ಎಂಜನಿಯರಿಂಗ್ ನ ಪ್ರಥಮ ವರ್ಷದಲ್ಲಿ ಬರುವ ಎಂಜನಿಯಿಂಗ್ ಗ್ರಾಫಿಕ್ಸ್ ಅಥವಾ ಡ್ರಾಯಿಂಗ್ ಮತ್ತು ಎಂಜನಿಯರಿಂಗ್ ಮೆಕಾನಿಕ್ಸ್ ನ್ನು ಓದಬೇಕು.
- ಲ್ಯಾಟರಲ್ ಪ್ರವೇಶ ಬಯಸುವ ವಿದ್ಯಾರ್ಥಿಗಳು ಅದಕ್ಕಾಗಿಯೇ ನಡೆಸಲಾಗುವ ಸಿಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು.
- ಈಗಿರುವ ಡಿಪ್ಲೋಮಾ ಕೋರ್ಸ್ ನಂತರದ ಪ್ರವೇಶದಲ್ಲಿ ಯಾವುದೇ ಬದಲಾವಣೆಗಳನ್ನು ತಂದಿಲ್ಲ. ಆದರೆ BSc ಮೇಲೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಡಿಪ್ಲೋಮ ವಿದ್ಯಾರ್ಥಿಗಳ ಸೀಟು ಹಂಚಿಕೆ ಆದ ಮೇಲೆ ಮಾತ್ರ ಅವಕಾಶ ನೀಡಲಾಗುವುದು.
- ಸದ್ಯ ಸೀಟು ಹಂಚಿಕೆ ಪ್ರಮಾಣ ಮತ್ತಿತ್ತರ ರೂಪುರೇಶೆಗಳು ಅಂತಿಮಗೊಂಡಿಲ್ಲವಾದೂ ಈ ತಿಂಗಳ ಅಂತ್ಯದೊಳಗೆ ಬಗ್ಗೆ ಸರ್ಕಾರ ಅಂತಿಮ ಪ್ರಕಟಣೆ ಹೊರಡಿಸಲಿದೆ.

- ಪ್ರತಿ ವರ್ಷ ಸುಮಾರು 25,000 ಕ್ಕೂ ಹೆಚ್ಚು ಎಂಜನಿಯರ್ ಸೀಟುಗಳು ಖಾಲಿ ಉಳಿಯುತ್ತಿವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ BSc ಮೇಲಿನ ಪ್ರವೇಶದ ಮೂಲಕ 5000 ಸೀಟುಗಳು ಭರ್ತಿಯಾಗುವು ಭರವಸೆಯನ್ನು ಹೊಂದಲಾಗಿದೆ.

**ಜೈವಿಕ ಇಂಧನ ಉತ್ತೇಜನಕ್ಕೆ ರಾಜ್ಯದಲ್ಲಿ ಹೊಂಬೆಳಕು ಯೋಜನೆ ಜಾರಿ**

ಜೈವಿಕ ಇಂಧನ ಉತ್ತೇಜನ ಮತ್ತು ಜೈವಿಕ ಇಂಧನ ಉತ್ಪನ್ನಗಳ ಮಾರಾಟವನ್ನು ಸುಗಮಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ "ಹೊಂಬೆಳಕು" ಮತ್ತು "ಹೊಂಗಿರಣ" ಎಂಬ ಹೊಸ ಯೋಜನೆಗಳನ್ನು ಆರಂಭಗೊಳಿಸಿದೆ. ಈ ಯೋಜನೆಗಳಿಗೆ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ರವರು ಇತ್ತೀಚೆಗೆ ಚಾಲನೆ ನೀಡಿದರು. ಈ ಎರಡೂ ಯೋಜನೆಗಳ ಪಕ್ಷಿ ನೋಟ ಇಲ್ಲಿದೆ.

**ಹೊಂಬೆಳಕು:**

- ಈ ಯೋಜನೆಯಡಿ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಮಹಿಳಾ ಸ್ವ-ಸಹಾಯ ಸಂಘಗಳಿಗೆ ಕಿರು ತೈಲ ಉತ್ಪಾದನಾ ಯಂತ್ರಗಳನ್ನು ಒದಗಿಸಲಿದೆ. 60 ಸ್ವಸಹಾಯ ಸಂಘಗಳಿಗೆ ಯಂತ್ರಗಳನ್ನು ಒದಗಿಸಲಿದ್ದು, ಇದಕ್ಕಾಗಿ ರೂ.1.5 ಕೋಟಿ ಮೀಸಲಿಡಲಾಗಿದೆ. ಸರ್ಕಾರವೂ ಸ್ವಯಂಸೇವಾ ಸಂಸ್ಥೆಗಳಿಗೆ ಯಂತ್ರಗಳನ್ನು ನೀಡಲಿದೆ. ಸ್ವ ಸಹಾಯ ಸಂಘಗಳು ಸ್ವಯಂಸೇವಾ ಸಂಸ್ಥೆಗಳ ಮೂಲಕ ಯಂತ್ರವನ್ನು ಬಳಕೆ ಮಾಡಲು ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

**ಹೊಂಗಿರಣ:**

- ಜೈವಿಕ ಇಂಧನ ಉತ್ಪಾದನೆಗೆ ಪೂರಕವಾದ ಸಸಿಗಳ ಪೂರೈಕೆ, ಬೀಜಗಳ ಖರೀದಿ, ಜೈವಿಕ ಇಂಧನ ಮತ್ತು ಹಿಂಡಿ ಸೇರಿದಂತೆ ಇತರೆ ಉತ್ಪನ್ನಗಳನ್ನು ಮಾರಾಟ ಮಾಡುವ ಸಲುವಾಗಿ ಹೊಂಗಿರಣ ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ರಾಜ್ಯದ ವಿವಿಧೆಡೆ ಮಳಿಗೆಗಳನ್ನು ಸ್ಥಾಪಿಸಲಾಗುವುದು. ಈ ಮಳಿಗೆಗಳು ರೈತ ಮತ್ತು ಮಂಡಳಿಯ ನಡುವೆ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡಲಿವೆ.

**ಕರ್ನಾಟಕ ಜೈವಿಕ ಅಭಿವೃದ್ಧಿ ಮಂಡಳಿ:**

- ಕರ್ನಾಟಕ ಸರ್ಕಾರವೂ ಜೈವಿಕ ಅಭಿವೃದ್ಧಿ ನೀತಿಯನ್ನು 9.9.2008 ರಲ್ಲಿ ಜಾರಿಗೊಳಿಸಿದೆ. ಸಸ್ಯ ಜನ್ಯ ಇಂಧನ ಮೂಲಗಳನ್ನು ಅಭಿವೃದ್ಧಿಪಡಿಸಿ ಕಚ್ಚಾ ತೈಲಗಳ ಮೇಲಿನ ಅವಲಂಭನೆಯನ್ನು ತಗ್ಗಿಸುವುದು ಮತ್ತು ಕೃಷಿ ವಲಯದ ಮೂಲಕ ಇಂಧನದ ಭದ್ರತೆಯನ್ನು ಬಲಪಡಿಸುವುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಸಮುದಾಯವನ್ನು ಈ ನಿಟ್ಟಿನಲ್ಲಿ ತೊಡಗಿಸಿಕೊಂಡು ಗ್ರಾಮೀಣಭಿವೃದ್ಧಿಯನ್ನು ಬೆಂಬಲಿಸುವುದಾಗಿರುತ್ತದೆ.
- ಈ ಎಲ್ಲಾ ಕೆಲಸಗಳನ್ನು ನಿರೀಕ್ಷಿಸಿದ ಮಟ್ಟಕ್ಕೆ ಕೊಂಡೊಯ್ಯಲು ಸರ್ಕಾರ ದಿನಾಂಕ 6.12.2010 ರಂದು "ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ" ಯನ್ನ ಸ್ಥಾಪಿಸಿದೆ. ಈ ಮಂಡಳಿಯು ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ.

**ಕರ್ನಾಟಕ ಜೈವಿಕ ಅಭಿವೃದ್ಧಿ ಮಂಡಳಿ ಧ್ಯೇಯೋದ್ದೇಶಗಳು:**

- ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.
- ವಿವಿಧ ಪ್ರದೇಶಗಳಿಗೆ ಯೋಗ್ಯವಾದ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸಲು ಕೃಷಿಯೇತರ ಭೂಮಿಯನ್ನು ಗುರುತಿಸುವುದು.
- ಜೈವಿಕ ಎಥನಾಲ್ ಉತ್ಪಾದನೆಗಾಗಿ ಕಬ್ಬು, ಬೀಟ್ ರೂಟ್, ಜೋಳ ಮುಂತಾದ ಬೆಳೆಗಳನ್ನು ಪ್ರೋತ್ಸಾಹಿಸುವುದು.
- ಎಥನಾಲ್ ಉತ್ಪಾದನೆ ಮತ್ತು ಬಳಕೆಯನ್ನು ಹೆಚ್ಚಿಸುವುದು.
- ವಿಶ್ವವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಗಳನ್ನು ಜೈವಿಕ ಇಂಧನ ಕ್ಷೇತ್ರದ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದು.

**ರಾಜ್ಯದಲ್ಲಿ ಇತರೆ ಜೈವಿಕ ಇಂಧನ ಕಾರ್ಯಕ್ರಮಗಳು:**

ಹಸಿರು ಹೊನ್ನು ಯೋಜನೆ:

- ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಈ ಯೋಜನೆಯನ್ನು ಹೊರತಂದಿದೆ. ಈ ಯೋಜನೆಯಡಿ ರೈತರು ತಮ್ಮ ಸ್ವಂತ ಜಮೀನುಗಳಲ್ಲಿ ಜೈವಿಕ ಇಂಧನ ಸಸಿಗಳಾದ "ಸೀಮಾ ರೂಬಾ", "ಜತ್ರೋಪ", "ಹೊಂಗೆ" ಮತ್ತು ಬೇವು ಇತ್ಯಾದಿ ಸಸಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಲಭ್ಯವಿರುವ ಅನುದಾನ ಉಪಯೋಗಿಸಿಕೊಂಡು ಬೆಳೆಸುವ ಇಂಧನ ಸ್ವಾವಲಂಭನೆ ಮತ್ತು ಪರಿಸರ ಸ್ನೇಹಿ ಕಾರ್ಯಕ್ರಮವಾಗಿದೆ.

ಬರಡು ಬಂಗಾರ ಕಾರ್ಯಕ್ರಮ:

- ಇಡೀ ರಾಜ್ಯದಲ್ಲಿ ಪಾಳು ಬಿದ್ದ ಅರಣ್ಯ ಅಥವಾ ಯಾವುದೇ ಸರ್ಕಾರ ಭೂಮಿ, ಬರಡು ಬಿದ್ದ ಕೃಷಿ ಭೂಮಿ, ಗೋಮಾಳ, ಕೆರೆ ಅಂಗಳಗಳಲ್ಲಿ ಗ್ರಾಮ ಅರಣ್ಯ ಸಮಿತಿ, ಕೆರೆ ಬಳಕೆದಾರರ ಸಮಿತಿ ಹಾಗೂ ಇತರೆ ಸಮುದಾಯವನ್ನು ತೊಡಗಿಸಿಕೊಂಡು ಜೈವಿಕ ಇಂಧನ ಸಸಿ ನೆಡುವ ಕಾರ್ಯಕ್ರಮವೇ "ಬರಡು ಬಂಗಾರ".

ಸುವರ್ಣ ಭೂಮಿ ಯೋಜನೆ:

- ಸಣ್ಣ ಮತ್ತು ಅತಿ ಸಣ್ಣ ರೈತರ ಆದಾಯ ಹೆಚ್ಚಿಸಲು 5 ಎಕರೆಗಳಿಂತ ಕಡಿಮೆ ಭೂಮಿ ಹೊಂದಿರುವ ರೈತರಿಗೆ ರೂ.10000 ಧನ ಸಹಾಯ ಮಾಡುವ ಮೂಲಕ ರೈತರು ತಮ್ಮ ಜಮೀನಿನ ಬದು, ಬೇಲಿಗುಂಟಗಳಲ್ಲಿ ಜೈವಿಕ ಇಂಧನ ಸಸಿಗಳನ್ನು ನೆಡಲು ಅವಕಾಶ ಕಲ್ಪಿಸಿದೆ.

ಜೈವಿಕ ಇಂಧನ ಉದ್ಯಾನ ಸ್ಥಾಪನೆ:

- ಕರ್ನಾಟಕ ರಾಜ್ಯ ಜೈವಿಕ ಅಭಿವೃದ್ಧಿ ಮಂಡಳಿ ಸಹಾಯದೊಂದಿಗೆ ಜೈವಿಕ ಇಂಧನ ಉದ್ಯಾನವನ್ನು ಹಾಸನ ಜಿಲ್ಲೆಯ ಮಡೇನೂರಿನಲ್ಲಿ ಸ್ಥಾಪಿಸಿದ್ದು, ಜಿಲ್ಲೆಯ 70 ಗ್ರಾಮಗಳನ್ನು "ಜೈವಿಕ ಇಂಧನ ಗ್ರಾಮಗಳೆಂದು" ಘೋಷಿಸಿದೆ. ರಾಷ್ಟ್ರದಲ್ಲೇ ಪ್ರಥಮವಾಗಿ ಜೈವಿಕ ಇಂಧನದ "Green Fuel Retail Outlet" ಪೆಟ್ರೋಲ್ ಪಂಪನ್ನು ಬಿಪಿಸಿಎಲ್ ಯೊಂದಿಗೆ ಈ ಕೇಂದ್ರದಲ್ಲಿ ಸ್ಥಾಪಿಸಲು ಒಡಂಬಡಿಕೆಗೆ ಸಹಿ ಹಾಕಲಾಗಿದೆ.

ಬಯೋ ಡಿಸೇಲ್ ಉತ್ಪಾದನೆ:

- ಕರ್ನಾಟಕ ರಾಜ್ಯ ಜೈವಿಕ ಅಭಿವೃದ್ಧಿ ಮಂಡಳಿಯ ಮಾರ್ಗದರ್ಶನದೊಂದಿಗೆ ರಾಜ್ಯದಲ್ಲೇ ಪ್ರಥಮವಾಗಿ "Eco Green Fuel Pvt Ltd" ಎಂಬ ಸಂಸ್ಥೆಯು ಬೆಂಗಳೂರಿನ ಪೀಣ್ಯ ಬಳಿ ಪ್ರತಿದಿನ ಮೂರು ಸಾವಿರ ಲೀಟರ್ ಬಯೋ ಡಿಸೇಲ್ ಉತ್ಪಾದನೆಯನ್ನು ಮಾಡುತ್ತಿದೆ. ಮತ್ತು 50 ಸಾವಿರ ಟನ್ ಬಯೋ ಡಿಸೇಲ್ ಉತ್ಪಾದನೆ ಸಾಮರ್ಥ್ಯವುಳ್ಳ "Southern Bio Diesel Technologies" ದೇವನಹಳ್ಳಿ ಸಮೀಪ ಯಶಸ್ವಿಯಾಗಿ ಸ್ಥಾಪಿಸಲಾಗುತ್ತಿದೆ.

**CCI-ಕರ್ನಾಟಕದ ಅಧ್ಯಕ್ಷರಾಗಿ ಸೌಮಿತ್ರ ಭಟ್ಟಚಾರ್ಯ ನೇಮಕ**

Confederation of India Industries ಕರ್ನಾಟಕದ ಅಧ್ಯಕ್ಷರಾಗಿ ಬಾಸ್ಕೋ ದ ಜಂಟಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಸೌಮಿತ್ರ ಭಟ್ಟಚಾರ್ಯ ಯವರು ಆಯ್ಕೆಯಾಗಿದ್ದಾರೆ. ಮೈನಿ ಪ್ರಿಸಿಷನ್ ಪ್ರಾಡಕ್ಟ್ಸ್ ಲಿಮಿಟೆಡ್ ನ ನಿರ್ದೇಶಕರಾದ ಸಂದೀಪ್ ಕುಮಾರ್ ಮೈನಿ ರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಸೌಮಿತ್ರ ಭಟ್ಟಚಾರ್ಯ:

- ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟ್ ನಲ್ಲಿ ಚಾರ್ಟೆಡ್ ಅಕೌಂಟ್ಸ್ ನ್ನು ಮುಗಿಸಿರುವ ಭಟ್ಟಚಾರ್ಯ ರವರು ಸದ್ಯ ಬಾಸ್ಕೋ ಲಿಮಿಟೆಡ್ ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ. ಹಣಕಾಸು, ಅಕೌಂಟ್, ಕಾನೂನು, ತೆರಿಗೆ ಸೇರಿದಂತೆ ಕಾರ್ಪೊರೇಟ್ ಉದ್ಯಮದಲ್ಲಿ ಸುಮಾರು 28 ವರ್ಷಗಳ ಅನುಭವವನ್ನು ಇವರು ಹೊಂದಿದ್ದಾರೆ.

ಸಂದೀಪ್ ಕುಮಾರ್ ಮೈನಿ:

- ಸಂದೀಪ್ ಕುಮಾರ್ ಮೈನಿ ರವರು ಆಟೋಮೋಟಿವ್, ಏರೋಸ್ಪೇಸ್, ಪ್ಲಾಸ್ಟಿಕ್ ಮತ್ತು ಎಲೆಕ್ಟ್ರಿಕಲ್ ಸೇರಿದಂತೆ ದೇಶಿಯ ಮತ್ತು ವಿದೇಶಿಯ ಮಾರುಕಟ್ಟೆಯಲ್ಲಿ ಪ್ರಸಿದ್ಧಿ ಹೊಂದಿರುವ ಮೈನಿ ಕಂಪನಿಯ ಚೇರಮನ್ ಮತ್ತು ಡೈರೆಕ್ಟರ್ ಆಗಿ 2007 ರಿಂದ ಸೇವೆ ಸಲ್ಲಿಸುತ್ತಿದ್ದಾರೆ.

**ರಾಜ್ಯದ ಭೂ ಚೇತನ ಯೋಜನೆ ಫಿಲಿಪ್ಪೀನ್ಸ್ ಗೆ ಮಾದರಿ**

ರಾಜ್ಯದ ಭೂ ಚೇತನ ಯೋಜನೆಯನ್ನು ಅಳವಡಿಸಿಕೊಳ್ಳಲು ಫಿಲಿಪ್ಪೀನ್ಸ್ ದೇಶ ಈಗ ಮುಂದಾಗಿದೆ. ಕೃಷಿಯಲ್ಲಿ ತಾಂತ್ರಿಕ ಅಳವಡಿಕೆಯೊಂದಿಗೆ ಶೇ.20 ರಷ್ಟು ಉತ್ಪಾದನೆಯನ್ನು ಹೆಚ್ಚಿಸುವ ಈ ಯೋಜನೆಯನ್ನು ಈಗಾಗಲೇ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ಸಹ ಜಾರಿಗೊಳಿಸಲಾಗಿದೆ.

- ರಾಜ್ಯದ ಈ ಯೋಜನೆಯ ಯಶಸ್ವಿಯನ್ನು ಗಮನಿಸಿ ಫಿಲಿಪ್ಪೀನ್ಸ್ ಅಲ್ಲಿ ಜಾರಿಗೆ ತರಲು ಮುಂದಾಗಿದೆ. ರಾಜ್ಯ ಸರ್ಕಾರ ಈ ಯೋಜನೆಯನ್ನು ಇಕ್ರಿಸ್ಯಾಟ್ (ICRISAT) ಮೂಲಕ ಅನುಷ್ಠಾನಕ್ಕೆ ತಂದಿದೆ.

ಭೂ ಚೇತನ ಬಗ್ಗೆ:

- ಭೂ ಚೇತನ ಯೋಜನೆಯನ್ನು ರಾಜ್ಯ ಸರ್ಕಾರ ಹೈದ್ರಾಬಾದ್ ನಲ್ಲಿರುವ ಇಕ್ರಿಸ್ಯಾಟ್ (International Crop Research Institute for Semi Arid Tropics) ಸಂಸ್ಥೆಯೊಂದಿಗೆ ಕೈಜೋಡಿಸುವ ಮೂಲಕ 2009 ರಿಂದ ಜಾರಿಗೆ ತಂದಿದೆ. ಮೊದಲ ಹಂತದಲ್ಲಿ 6 ಜಿಲ್ಲೆಗಳಲ್ಲಿ ಜಾರಿ ಮಾಡಲಾಯಿತು. 2011-12 ನೇ ಸಾಲಿನಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

- 2013-14 ನೇ ಸಾಲಿನ ಬಜೆಟ್ ನಲ್ಲಿ 144 ಲಕ್ಷ ಎಕರೆ ಒಣ ಪ್ರದೇಶ ಸೇರಿದಂತೆ 24 ಲಕ್ಷ ನೀರಾವರಿ ಪ್ರದೇಶ ಸೇರಿ 168 ಲಕ್ಷ ಎಕರೆ ಪ್ರದೇಶಕ್ಕೆ ವಿಸ್ತರಿಸಿ 75 ಕೋಟಿ ನೀಡುವುದಾಗಿ ಪ್ರಕಟಿಸಲಾಗಿದೆ.

ಯೋಜನೆ ಮುಖ್ಯ ಉದ್ದೇಶ:

- ರಾಜಸ್ತಾನ ನಂತರ ದೇಶದಲ್ಲಿ ಅತಿ ಹೆಚ್ಚು ಒಣ ಭೂಮಿಯನ್ನು ಹೊಂದಿರುವ ರಾಜ್ಯ ಕರ್ನಾಟಕ. ರಾಜ್ಯದ ಬಹುತೇಕ ಕೃಷಿ ಚಟುವಟಿಕೆ ಮಳೆ ಆಧಾರಿತವಾಗಿದೆ. ಈ ಪ್ರದೇಶಗಳಲ್ಲಿ ನಾವೀನ್ಯ ಕೃಷಿ ತಾಂತ್ರಿಕತೆಯನ್ನು ಅಳವಡಿಸಿ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ.
- ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ತಾಂತ್ರಿಕ ಭಾಗವನ್ನು ಇಕ್ರಿಸ್ಯಾಟ್ ನೀಡಲಿದೆ. ಮಣ್ಣಿನ ಪರೀಕ್ಷೆ, ಜಲಾನಯನ ಪ್ರದೇಶ ಅಭಿವೃದ್ಧಿ ಮತ್ತು ಭೂ ಸಂರಕ್ಷಣೆ ಕಾರ್ಯಗಳ ಅನುಷ್ಠಾನ ಮೂಲಕ ಮಳೆ ಅವಲಂಬಿತ ಪ್ರದೇಶಗಳಲ್ಲಿ ಕೃಷಿ ಇಳುವರಿಯನ್ನು ವೃದ್ಧಿಸುವುದು ಭೂ ಚೇತನ ಯೋಜನೆಯ ಪ್ರಮುಖ ಗುರಿಯಾಗಿದೆ.

**ಚೆನ್ನೈ – ಬೆಂಗಳೂರು ಕಾರಿಡಾರ್ ಚಿತ್ರದುರ್ಗದವರೆಗೆ ವಿಸ್ತರಣೆ**

ಚೆನ್ನೈ - ಬೆಂಗಳೂರು ಕಾರಿಡಾರ್ ಯೋಜನೆಯನ್ನು ಚಿತ್ರದುರ್ಗದವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರ ಒಪ್ಪಿರುವುದಾಗಿ ಕೇಂದ್ರ ಕೈಗಾರಿಕಾ ಸಚಿವ ಆನಂದ್ ಶರ್ಮಾ ಹೇಳಿದ್ದಾರೆ. ಈ ಯೋಜನೆಯನ್ನು ಚಿತ್ರದುರ್ಗದವರೆಗೆ ವಿಸ್ತರಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು.

- ದೆಹಲಿ-ಮುಂಬೈ ಕಾರಿಡರ್ ಯೋಜನೆಯ ಮಾದರಿಯಲ್ಲೇ ಚೆನ್ನೈ-ಬೆಂಗಳೂರು ಕಾರಿಡಾರ್ ಯೋಜನೆಯನ್ನು 100 ಮಿಲಿಯನ್ ಡಾಲರ್ ನಲ್ಲಿ ರೂಪಿಸಲಾಗುತ್ತಿದೆ.
- ಜಪಾನ್ ಇಂಟರ್ ನ್ಯಾಷಷನಲ್ ಏಜೆನ್ಸಿ ಮತ್ತು ಸಂಬಂಧಪಟ್ಟ ರಾಜ್ಯಗಳು ಜೊತೆಯಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿವೆ.
- ಈ ಯೋಜನೆಯಿಂದ ಉದ್ಯೋಗ ಸೃಷ್ಟಿ ಸೇರಿದಂತೆ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಬೇಡಿಕೆ ಬರಲಿದೆ.

**ಮಂಗಳೂರು ಬಂದರು ಜೊತೆ ONGC ಒಪ್ಪಂದ**

ಮಂಗಳೂರಿನಲ್ಲಿ ಧ್ರವೀಕೃತ ನೈಸರ್ಗಿಕ ಅನಿಲ ಆಮದು ಟರ್ಮಿನಲ್ ಸ್ಥಾಪನೆಯ ಅಧ್ಯಯನ ಕುರಿತಂತೆ ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ (ONGC), ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ನಿಗಮ ಮತ್ತು ಜಪಾನಿನ ಮಿತ್ ಸುಯಿ ನಡುವೆ ಒಡಂಬಡಿಕೆಗೆ ಸಹಿ ಹಾಕಿವೆ. ರಾಜ್ಯ ಮುಖ್ಯ ಮಂತ್ರಿಗಳಾದ ಜಗದೀಶ್ ಶೆಟ್ಟರ್, ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ವೀರಪ್ಪ ಮೊಯ್ಲಿ ಅವರ ಉಪಸ್ಥಿತಿಯಲ್ಲಿ ಸಹಿ ಹಾಕಲಾಯಿತು.

- ಈ ಯೋಜನೆಯ ತಗುಲಿರುವ ಅಂದಾಜು ವೆಚ್ಚ ಸುಮಾರು 2800 ರಿಂದ 4,200 ಕೋಟಿ.
- ಆರಂಭಿಕ ಹಂತದಲ್ಲಿ ಟರ್ಮಿನಲ್ 20-30 ಲಕ್ಷ ಟನ್ ಸಾಮರ್ಥ್ಯ ಹೊಂದಿರಲಿದೆ. ಬಳಿಕ ಅದರ ಸಾಮರ್ಥ್ಯವನ್ನು 50 ಲಕ್ಷ ಟನ್ ಗಳ ವರೆಗೆ ವಿಸ್ತರಿಸುವ ಸಾಧ್ಯತೆ ಇದೆ.
- ಮೊದಲ ಹಂತದ ಯೋಜನೆಯು ಮುಂದಿನ 3-4 ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯನ್ನು ಹೊಂದಲಾಗಿದೆ.

**ಜನಶ್ರೀ ವಿಮಾ ಯೋಜನೆ "ಆಮ್ ಆದ್ಮಿ" ಯೋಜನೆಯೊಂದಿಗೆ ವಿಲೀನ: ರಾಜ್ಯ ಸಚಿವ ಸಂಪುಟ**

ಜನಶ್ರೀ ವಿಮಾ ಯೋಜನೆಯನ್ನು ಕೇಂದ್ರ ಸರ್ಕಾರದ "ಆಮ್ ಆದ್ಮಿ" ವಿಮಾ ಯೋಜನೆಯ ಜತೆಗೆ ವಿಲೀನಗೊಳಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. "ಆಮ್ ಆದ್ಮಿ" ಯೋಜನೆಯಡಿ ವಿಮಾ ಯೋಜನೆಯನ್ನು ಮುಂದುವರೆಸಲು ಕೇಂದ್ರ ಸರ್ಕಾರ ಉದ್ದೇಶಿಸಿರುವ ಕಾರಣದಿಂದಾಗಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ಆಮ್ ಆದ್ಮಿ ಮತ್ತು ಜನಶ್ರೀ ಯೋಜನೆಗಳ ಉದ್ದೇಶ ಮತ್ತು ರಚನೆ ಒಂದೇ ರೀತಿ ಇರುವುದರಿಂದ ಕೇಂದ್ರ ಸರ್ಕಾರ ಇವೆರಡು ಯೋಜನೆಗಳನ್ನು ವಿಲೀನಗೊಳಿಸಲು ಸೂಚಿಸಿದೆ.

- ಸದ್ಯ ಈ ಯೋಜನೆಯಡಿ 45 ವೃತ್ತಿಪರ ನೌಕರರು ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ವೃತ್ತಿಪರರನ್ನು ಸೇರಿಸಲಾಗುವುದು.
- ಇಲ್ಲಿಯ ವರೆಗೂ ಭಾರತೀಯ ಜೀವಾ ನಿಗಮದಡಿ (LIC) ಯಡಿ ಕಾರ್ಯನಿರ್ವಹಿಸುತ್ತಿದ್ದ ಈ ಯೋಜನೆಯು ಇನ್ನು ಮುಂದೆ ಕಂದಾಯ ಇಲಾಖೆಯಡಿ ಬರಲಿದೆ.
- ಈ ಯೋಜನೆಯಡಿ ಸ್ವಾಭಾವಿಕವಾಗಿ ಸಾವನ್ನಪ್ಪಿದವರಿಗೆ ರೂ.30 ಸಾವಿರ, ಅಪಘಾತದಲ್ಲಿ ಮಡಿದವರಿಗೆ ರೂ.75 ಸಾವಿರ ಮತ್ತು ವಿಕಲಚೇತನರಿಗೆ ರೂ.37.5 ಸಾವಿರ ವಿಮಾ ಸೌಲಭ್ಯ ನೀಡಲು ಅವಕಾಶವಿದೆ.
- ಯೋಜನೆಗೆ ರೂ.200 ಪ್ರೀಮಿಯಂ ಕಟ್ಟಬೇಕು ಇದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮವಾಗಿ ಪಾವತಿಸಲಿವೆ

**2013-14 ನೇ ಸಾಲಿನಲ್ಲಿ ರಾಜ್ಯದ ಆಹಾರ ಧಾನ್ಯ ಉತ್ಪಾದನೆ ಗುರಿ 130 ಲಕ್ಷಟನ್**

ಅಸಮರ್ಪಕ ಮಳೆ ಮತ್ತು ಸತತ ಬರಗಾಲದ ಹಿನ್ನಲೆಯಲ್ಲೆ 2013-14 ನೇ ಸಾಲಿನಲ್ಲಿ 130 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದೆ ಎಂದು ಅಧಿಕೃತ ಮೂಲಗಳು ಹೇಳಿವೆ. ಕಳೆದ ವರ್ಷ 136.55 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆ ಗುರಿಯನ್ನು ಸರ್ಕಾರ ಹೊಂದಿತ್ತು. ಕಳೆದ ಎರಡು ವರ್ಷಗಳಲ್ಲಿ ಸಮರ್ಪಕ ಮಳೆ ಆಗದಿರುವ ಕಾರಣ ಆಹಾರ ಧಾನ್ಯಗಳ ಉತ್ಪಾದನೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿರುವುದರಿಂದ ಉತ್ಪಾದನೆಯಲ್ಲಿ ಹಿನ್ನಡೆ ಆಗಲಿದೆ. ಆದರೆ ಸಾಗುವಳಿ ಪ್ರದೇಶದ ವಿಸ್ತೀರ್ಣದಲ್ಲಿ ಅಲ್ಪ ಮಟ್ಟದ ಹೆಚ್ಚಳವಾಗಲಿದೆ. 2013-14 ನೇ ಸಾಲಿನಲ್ಲಿ ಒಟ್ಟು ಸಾಗುವಳಿ ಪ್ರದೇಶ 82.60 ಲಕ್ಷ ಹೆಕ್ಟೇರ್ ಗಳಷ್ಟೂ ಇರಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ 81.85 ಲಕ್ಷ ಹೆಕ್ಟೇರ್ ಗಳಷ್ಟು ಗುರಿ ಹೊಂದಲಾಗಿತ್ತು.

- ಮೂಲಗಳ ಪ್ರಕಾರ ಈ ಬಾರಿ ಧಾನ್ಯ ಬೆಳೆಗಳನ್ನು 54.16 ಹೆಕ್ಟೇರ್ ಪ್ರದೇಶ ವಿಸ್ತೀರ್ಣದಲ್ಲಿ ಬೆಳೆಯುವ ಮೂಲಕ 115 ಲಕ್ಷ ಟನ್ ಉತ್ಪಾದನಾ ಗುರಿಯನ್ನು ಹೊಂದಲಾಗಿದೆ.
- 2013-14 ನೇ ಸಾಲಿನಲ್ಲಿ 15.5 ಲಕ್ಷ ಟನ್ ಬೇಳೆಕಾಳು ಉತ್ಪಾದನೆ ಗುರಿಯನ್ನು ಸರ್ಕಾರ ಹೊಂದಿದೆ. ಜೋಳ 41.56 ಲಕ್ಷ ಟನ್ ಮತ್ತು ಭತ್ತ 38.4 ಲಕ್ಷ ಟನ್ ಗಳಷ್ಟು ಉತ್ಪಾಸಿಸುವ ಗುರಿಯನ್ನು ಹೊಂದಿಲಾಗಿದೆ.
- ಎಣ್ಣೆಕಾಳು ಉತ್ಪಾದನೆ 2013-14 ನೇ ಸಾಲಿನಲ್ಲಿ 15.75 ಲಕ್ಷ ಟನ್ ಗಳಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ 15.2 ಲಕ್ಷ ಟನ್ ಉತ್ಪಾದನ ಗುರಿಯನ್ನು ಹೊಂದಿತ್ತು.
- ಇನ್ನು ವಾಣಿಜ್ಯ ಬೆಳೆಗಳ ಪೈಕಿ ಹತ್ತಿ ಉತ್ಪಾದನೆ 12.7 ಲಕ್ಷ ಬೇಲ್ (1 ಬೇಲ್ = 170 ಕೆ.ಜಿ)ಗಳಷ್ಟು ಇರಲಿದ್ದು, ಬಿಟಿ ಹತ್ತಿ ಉತ್ಪಾದನೆಯ ಪಾಲು ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ. ಉಳಿದಂತೆ ಕಬ್ಬು 400 ಲಕ್ಷ ಟನ್ ಮತ್ತು ತಂಬಾಕು 1.2 ಲಕ್ಷ ಉತ್ಪಾದಿಸುವ ಗುರಿ ಹೊಂದಲಾಗಿದೆ.

## ರಾಷ್ಟ್ರೀಯ

**2013-14 ನೇ ಕೇಂದ್ರ ಬಜೆಟ್ ಮಂಡಿಸಿದ: ಚಿದಂಬರಂ**

ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ರವರು ಗುರುವಾರ ಲೋಕಸಭೆಯಲ್ಲಿ 2013-14 ನೇ ಸಾಲಿನ ಬಜೆಟ್ ಮಂಡನೆ ಮಾಡಿದರು. 2013-14 ನೇ ಸಾಲಿನ ಯೋಜನಾ ವೆಚ್ಚವನ್ನು ಶೇ.6.58 ರಷ್ಟು ಹೆಚ್ಚಿಸಲಾಗಿದ್ದು, ರೂ.5.53 ಲಕ್ಷ ಕೋಟಿಗೆ ಏರಿಕೆಯಾಗಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ (ಜಿಡಿಪಿ) ಶೇ.5.2 ರಷ್ಟು ವಿತ್ತೀಯ ಕೊರತೆ ಅಂದಾಜು ಮಾಡಲಾಗಿದೆ. 2013-14 ನೇ ಹಣಕಾಸು ವರ್ಷದಲ್ಲಿ ಶೇ.4.8 ರಷ್ಟು ತಗ್ಗಿಸುವ ಗುರಿ ಹೊಂದಿಸಲಾಗಿದೆ. 2013-14 ನೇ ಸಾಲಿನಲ್ಲಿ ಬಜೆಟ್ ನಲ್ಲಿ ವ್ಯಕ್ತಪಡಿಸಿರುವ ಪ್ರಮುಖ ಅಂಶಗಳು ಇಲ್ಲಿವೆ.

- 2013-14 ನೇ ಸಾಲಿನ ಬಜೆಟ್ ಗಾತ್ರ ರೂ.16,65,297 ಕೋಟಿ. ಇದರಲ್ಲಿ ಯೋಜನಾ ವೆಚ್ಚ ರೂ.5.55 ಲಕ್ಷ ಕೋಟಿ ಮತ್ತು ಯೋಜನೇತರ ವೆಚ್ಚ ರೂ.11.10 ಲಕ್ಷ ಕೋಟಿ ಸೇರಿದೆ.
- ಕೃಷಿಗೆ ರೂ. 7 ಲಕ್ಷ ಕೋಟಿ ಸಾಲ: 2013-14 ನೇ ಸಾಲಿನಲ್ಲಿ ಕೃಷಿ ಸಾಲವನ್ನು ರೂ.7 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ರೂ.5,75,000 ಕೋಟಿ ನೀಡಲಾಗಿತ್ತು. ಸಕಾಲಕ್ಕೆ ಬೆಳೆ ಸಾಲ ಮರುಪಾವತಿ ಮಾಡುವ ರೈತರಿಗೆ ಶೇ.4 ರಷ್ಟು ಬಡ್ಡಿ ಪಾವತಿಸುವ ಯೋಜನೆಯನ್ನು ಮುಂದುವರೆಸಲಾಗುವುದು. ಇಲ್ಲಿಯವರೆಗೆ ಇದು ಕೇವಲ ರಾಷ್ಟ್ರೀಕೃತ ಬ್ಯಾಂಕ್ ಗಳು, ಸಹಕಾರಿ ಬ್ಯಾಂಕ್ ಗಳಿಂದ ಪಡೆಯುವ ಸಾಲಕ್ಕೆ ಮಾತ್ರ ಅನ್ವಯಿಸುತ್ತಿತ್ತು. ಇನ್ನು ಮುಂದೆ ಖಾಸಗಿ ಬ್ಯಾಂಕ್ ಗಳಿಂದ ಪಡೆಯುವ ಬ್ಯಾಂಕ್ ಸಾಲಕ್ಕೂ ವಿಸ್ತರಿಸಲಾಗುವುದು.
- ಮಹಿಳಾ ಬ್ಯಾಂಕ್: ದೇಶದಲ್ಲೇ ಸರ್ಕಾರಿ ರಂಗದಲ್ಲಿ ಮೊದಲಲೆನಿಸಿರುವ ಮಹಿಳಾ ಬ್ಯಾಂಕ್ ಸ್ಥಾಪನೆಯ ಬಗ್ಗೆ ಬಜೆಟ್ ನಲ್ಲಿ ಮಂಡಿಸಲಾಗಿದೆ. ಈ ಮಹಿಳಾ ಬ್ಯಾಂಕ್ ಗೆ ರೂ.1,000 ಕೋಟಿ ಮೂಲ ನಿಧಿಯನ್ನು ಸರ್ಕಾರ ಒದಗಿಸಲಿದೆ. ಏಕಾಂಗಿ ಮತ್ತು ನಿರುದ್ಯೋಗಿ ಮಹಿಳೆಯರಿಗೆ ಈ ಯೋಜನೆಯಿಂದ ಅನುಕೂಲವಾಗಲಿದೆ.
- ವಿಶೇಷ ನಿರ್ಭಯ ನಿಧಿ: ದೆಹಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ಯುವತಿಯ ಗೌರವಾರ್ಥ ರೂ.1000 ಕೋಟಿ ರೂಪಾಯಿ ಮೂಲ ನಿಧಿ ಹೊಂದಿದ ವಿಶೇಷ ನಿರ್ಭಯ ನಿಧಿ ಸ್ಥಾಪಿಸಲಾಗುವುದು.
- ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ (ICDS) ರೂ.17,700 ಕೋಟಿಗೆ ಹೆಚ್ಚಿಸಲಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.11.7 ರಷ್ಟು ಏರಿಕೆಯಾಗಿದೆ.
- ರಕ್ಷಣಾ ವೆಚ್ಚದಲ್ಲಿ ಶೇ.14 ರಷ್ಟು ಏರಿಕೆ: 2013-14 ನೇ ಸಾಲಿನಲ್ಲಿ ರಕ್ಷಣಾ ಕ್ಷೇತ್ರಕ್ಕೆ ರೂ.2,03,672 ಕೋಟಿಗಳನ್ನು ಮೀಸಲಿಡಲಾಗಿದೆ. ಇದರಲ್ಲಿ ರೂ.86,714 ಕೋಟಿಯನ್ನು ಮೂಲ ವೆಚ್ಚಕ್ಕೆ ಮೀಸಲಿಡಲಾಗುವುದು.
- ಪ್ರಸ್ತುತ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ (National Food Security Act) ಜಾರಿಗೆ ರೂ.10,000 ಕೋಟಿ ಮೊತ್ತವನ್ನು ಮೀಸಲಿಡಲಾಗಿದೆ.
- ಈ ಬಾರಿ ದುಬಾರಿಯಾಗಲಿರುವ ವಸ್ತುಗಳು: ಆಮದು ಕಚ್ಚಾ ರೇಷ್ಮೆ, ಸಿಗರೇಟ್, ವಿದೇಶಿ ಐಷರಾಮಿ ಕಾರುಗಳು, ವಿದೇಶಿ ವಿಲಾಸಿ ದೋಣಿಗಳು, 2000 ರೂಪಾಯಿ ಮೀರಿದ ಮೊಬೈಲ್.

- ಬೆಂಗಳೂರಿ-ಮುಂಬೈ ಕಾರಿಡಾರ್: ಬೆಂಗಳೂರು-ಮುಂಬೈ ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆಯ ಸಿದ್ದತೆಯನ್ನು ಕೈಗೆತ್ತಿಕೊಳ್ಳುವುದಾಗಿ ಬಜೆಟ್ ನಲ್ಲಿ ತಿಳಿಸಲಾಗಿದೆ. ಬೆಂಗಳೂರು-ಮುಂಬೈ ಕಾರಿಡಾರ್ ಯೋಜನೆ ರಾಜ್ಯದ 550 ಕಿ,ಮೀ ರಸ್ತೆ ಮತ್ತು 330 ಕಿ.ಮೀ ರೈಲು ಮಾರ್ಗಗಳನ್ನು ಹೊಂದಿದೆ.
- ಬೆಂಗಳೂರು ಮೆಟ್ರೊಗೆ ಈ ಬಾರಿಯ ಬಜೆಟ್ ನಲ್ಲಿ ರೂ.1660 ಕೋಟಿ ರೂಪಾಯಿ ನೀಡಲಾಗಿದೆ.
- ರೇಷ್ಮೆ ಆಮದು ಸುಂಕವನ್ನು ಶೇ.5 ರಿಂದ ಶೇ.15 ರಷ್ಟು ಹೆಚ್ಚಿಸಲಾಗಿದ್ದು, ರಾಜ್ಯದ ರೇಷ್ಮೆ ಬೆಳೆಗಾರರಿಗೆ ಅಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಅಲ್ಲದೇ ನೇಕಾರರಿಗೆ ಶೇ.6 ರಷ್ಟು ದರದಲ್ಲಿ ಸಾಲ ನೀಡಲಾಗುವುದು.

**<u>ಕೇಂದ್ರ ಬಜೆಟ್: ಕೆಲವು ಉಪಯುಕ್ತ ಮಾಹಿತಿಗಳು</u>**

- 2013-14 ನೇ ಸಾಲಿನ ಬಜೆಟ್ ಚಿದಂಬರಂ ರವರ ಪಾಲಿಗೆ 8 ನೇ ವಾರ್ಷಿಕ ಬಜೆಟ್. ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಮೊರಾರ್ಜಿ ದೇಸಾಯಿಯವರ ನಂತರ ಅತಿ ಹೆಚ್ಚು ಬಜೆಟ್ ಮಂಡಿಸಿದ ಎರಡನೇಯವರು ಚಿದಂಬರಂ.
- ಮೊರಾರ್ಜಿ ದೇಸಾಯಿಯವರು 10 ಬಾರಿ ಬಜೆಟ್ ಮಂಡಿಸುವ ಮೂಲಕ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದವರು ಎಂಬ ಹಿರಿಮೆಯನ್ನು ಹೊಂದಿದ್ದಾರೆ.
- ಮಧ್ಯಂತರ ಮತ್ತು ವಿಶೇಷ ಬಜೆಟ್ ಗಳು ಸೇರಿ ಈ ಸಾಲಿನ ಬಜೆಟ್ ಭಾರತದ 82 ನೇ ಬಜೆಟ್ ಎಂಬುದು ವಿಶೇಷ. ಇದುವರೆಗೂ 66 ವಾರ್ಷಿಕ, 12 ಮಧ್ಯಂತರ ಮತ್ತು 4 ವಿಶೇಷ ಬಜೆಟ್ ಗಳನ್ನು ಮಂಡಿಸಲಾಗಿದೆ.
- ಸ್ವಾತಂತ್ರ್ಯ ನಂತರ ದೇಶದ ಪ್ರಥಮ ಬಜೆಟ್ ನ್ನು ಆರ್.ಕೆ.ಷಣ್ಮುಗಂ ಶೆಟ್ಟಿಯವರು ನವೆಂಬರ್ 26, 1947 ರಂದು ಮಂಡಿಸಿದ್ದರು.
- ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ, ವೈ.ಬಿ.ಚವಾಣ್, ಯಶ್ವಂತ್ ಸಿನ್ಹಾ ಮತ್ತು ಸಿ.ಡಿ.ದೇಶಮುಖ್ ರವರು 7 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ.
- ಭಾರತದ ಮೊದಲ ಮಧ್ಯಂತರ ಬಜೆಟನ್ನು ಟಿ.ಟಿ.ಕೃಷ್ಣಂಚಾರಿ ರವರು ನವೆಂಬರ್ 30, 1956 ರಲ್ಲಿ ಮಂಡಿಸಿದರು, ಮತ್ತೇ ಎರಡನೇ ಮಧ್ಯಂತರ ಬಜೆಟ್ ನ್ನು ಅವರೇ 1965 ರಲ್ಲಿ ಮಂಡಿಸಿದ್ದರು. ಉಳಿದಂತೆ ಮೂರನೇ ಮತ್ತು ನಾಲ್ಕನೇ ಮಧ್ಯಂತರ ಬಜೆಟ್ ನ್ನು ವೈ.ಬಿ.ಚವಾಣ್ ರವರು 1971 ರಲ್ಲಿ ಮತ್ತು 1974 ರಲ್ಲಿ ಮಂಡಿಸಿದ್ದರು.

**<u>ಮೇಘಾಲಯ ಮತ್ತು ನಾಗಲ್ಯಾಂಡ್ ಚುನಾವಣಾ ಫಲಿತಾಂಶ</u>**

ತ್ರಿಪುರ, ಮೇಘಾಲಯ ಮತ್ತಯ ನಾಗಾಲ್ಯಾಂಡ್ ರಾಜ್ಯಗಳಲ್ಲಿ ನಡೆದ ವಿಧಾನಸಭೆ ಫಲಿತಾಂಶ ಹೊರಬಿದ್ದಿದೆ. ನಿರೀಕ್ಷೆಯಂತೆ ತ್ರಿಪುರ ದಲ್ಲಿ ಸಿಪಿಎಂ ತ್ರಿಪುರದಲ್ಲಿ ಜಯಭೇರಿ ಬಾರಿಸಿದೆ. ಚುನಾವಣಾ ಫಲಿತಾಂಶದ ವರದಿ ಇಲ್ಲಿದೆ.

ತ್ರಿಪುರ:

- ವಿಧಾನಸಭೆಯ ಒಟ್ಟು 60 ಸ್ಥಾನಗಳಲ್ಲಿ ಸಿಪಿಎಂ 49 ಸ್ಥಾನಗಳನ್ನು ಗೆದ್ದಿದೆ. ಈ ಚುನಾವಣೆಯಲ್ಲಿ ಕೇವಲ 10 ಸೀಟುಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ಬಾರಿ ಮುಖಭಂಗ ಅನುಭವಿಸಿದೆ. ಸಿಪಿಐ ಒಂದು ಸ್ಥಾನದಲ್ಲಿ ಮಾತ್ರ ಜಯಗಳಿಸಿದೆ.

- 1978 ರ ಬಳಿಕ ಸಿಪಿಎಂ ಕಂಡ ಅದ್ಭುತ ಗೆಲುವ ಇದಾಗಿದೆ. ಅಂದು 56 ಕ್ಷೇತ್ರಗಳಲ್ಲಿ ಸಿಪಿಎಂ ವಿಜಯ ಪತಾಕೆಯನ್ನ ಹಾರಿಸಿತ್ತು.
- ದೇಶದ ಅತ್ಯಂತ ಬಡ ಮುಖ್ಯಮಂತ್ರಿ ಎಂದು ಪ್ರಸಿದ್ಧರಾಗಿರುವ 'ಮಾಣಿಕ್ ಸರ್ಕಾರ್" ರವರು ಸತತ ನಾಲ್ಕನೇ ಬಾರಿಗೆ ಮುಖ್ಯ ಮಂತ್ರಿಯಾಗಲಿದ್ದಾರೆ.

ಮೇಘಾಲಯ:

- ಮೇಘಾಲಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ 29 ಕ್ಷೇತ್ರಗಳಲ್ಲಿ ಗೆಲುವನ್ನು ಪಡೆದುಕೊಂಡಿದೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ 25 ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಪಡೆದಿತ್ತು.
- ರಾಷ್ಟ್ರೀಯ ಕಾಂಗ್ರೆಸ್ ತೊರೆದು ನ್ಯಾಷನಲ್ ಪೀಪಲ್ಸ್ ಪಾರ್ಟಿಯನ್ನು ಕಟ್ಟಿದ್ದ ಪಿ.ಎ ಸಂಗ್ಮಾ ರವರು ಕೇವಲ 2 ಸ್ಥಾನಗಳನ್ನು ಗೆದ್ದಿದ್ದಾರೆ. ಉಳಿದಂತೆ ಯುಡಿಎ ಪಕ್ಷ 8 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ.
- ಮೇಘಾಲಯದ ಮುಖ್ಯಮಂತ್ರಿಗಳಾಗಿ ಮುಖುಲ್ ಸಂಗ್ಮಾ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ನಾಗಾಲ್ಯಾಂಡ್:

- ನಾಗಾಲ್ಯಾಂಡ್ ನಲ್ಲಿ ಮತ್ತೆ ನಾಗಾ ಪೀಪಲ್ಸ್ ಫ್ರಂಟ್ ಪಕ್ಷ ಅಧಿಕಾರದ ಗದ್ದುಗೆಯನ್ನು ಏರಿದೆ. 38 ಸ್ಥಾನಗಳಲ್ಲಿ ಜಯಗಳಿಸಿ ಸ್ವತಂತ್ರವಾಗಿ ಮೂರನೇ ಭಾರಿ ರಾಜ್ಯವನ್ನು ಆಳಲಿದೆ.

**ಭೂ ವಿಜ್ಞಾನ ಕ್ಕೆ ಸಂಬಂಧಿಸಿದ ಒಡಂಬಡಿಕೆಗೆ ಸಹಿ ಹಾಕಿದ ಭಾರತ ಮತ್ತು ಯು.ಕೆ**

ಭೂ ವಿಜ್ಞಾನ ಮತ್ತು ಪರಿಸರ ಸಂಶೋಧನೆಗೆ ಸಂಬಂಧಿಸಿದ ಒಡಂಬಡಿಕೆಗೆ ಭಾರತ ಮತ್ತು ಯು.ಕೆ ನವದೆಹಲಿಯಲ್ಲಿ ಪರಸ್ಪರ ಸಹಿ ಹಾಕಿದವು. ಈ ಒಪ್ಪಂದವು ಉಭಯ ದೇಶಗಳ ನಡುವೆ ಸಂಶೋಧನೆ ಕೈಗೊಳ್ಳಲು ಸಹಕಾರಿಯಾಗಲಿದೆ.

- ಪವನಶಾಸ್ತ್ರ, ಹೈಡ್ರಾಲಜಿ ಮತ್ತು ಹವಾಮಾನ ಬದಲಾವಣೆ ಗೆ ಸಂಬಂಧಿಸಿದ ತಂತ್ರಜ್ಞಾನ ಮತ್ತು ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಹಾಯವಾಗಲಿದೆ.
- ಉಭಯ ದೇಶಗಳ ನಡುವೆ ವೈಜ್ಞಾನಿಕ ಮತ್ತು ತಾಂತ್ರಿಕ ಕೌಶಲ್ಯಗಳನ್ನು ವಿನಿಮಯ ಮಾಡಿಕೊಳ್ಳಲು ಈ ಒಪ್ಪಂದ ಪೂರಕವಾಗಲಿದೆ.
- ಪರಿಸರ ಸಂಶೋಧನೆಯಲ್ಲಿ ಹೊಸ ಹೊಸ ಅವಿಷ್ಕಾರ ಮತ್ತು ಅದಕ್ಕೆ ಸಂಬಂಧಿಸಿದ ಸಹಾಯವನ್ನು ಎರಡೂ ದೇಶಗಳು ಕೈಗೊಳ್ಳಲಿವೆ.
- ಈ ಒಡಂಬಡಿಕೆಯು ಭಾರತಕ್ಕೆ ಅತ್ಯಂತ ಸಹಕಾರಿಯಾಗಲಿದ್ದು, ಭಾರತದ ಕೃಷಿ ವ್ಯವಸ್ಥೆ ಹವಾಮಾನ ವೈಪರೀತ್ಯದಿಂದ ಉಂಟಾಗಲಿರುವ ವ್ಯತಿರಿಕ್ತ ಪರಿಣಾಮವನ್ನು ಪೂರ್ವಭಾವಿಯಾಗಿ ಗುರುತಿಸುವ ಮೂಲಕ ತಗ್ಗಿಸಬಹುದಾಗಿದೆ

**ಭಾರತ, ಆಫ್ಘಾನಿಸ್ತಾನ ಮತ್ತು ಅಮೆರಿಕಾ ನಡುವೆ ಎರಡನೇ ತ್ರಿಪಕ್ಷೀಯ ಸಭೆ**

ಭಾರತ, ಆಫ್ಘಾನಿಸ್ತಾನ ಮತ್ತು ಅಮೆರಿಕಾ ದೇಶಗಳ ನಡುವೆ ಎರಡನೇ ತ್ರಿಪಕ್ಷೀಯ ಸಭೆ ಇತ್ತೀಚೆಗೆ ದೆಹಲಿಯಲ್ಲಿ ನೇರವೇರಿತು. ಆಫ್ಘಾನಿಸ್ತಾನದ ಪ್ರತಿನಿಧಿಯಾಗಿ ವಿದೇಶಾಂಗ ಸಚಿವ ಜವೆದ್ ಲುದಿನ್, ಅಮೆರಿಕಾದ ಪರವಾಗಿ ರಾಬರ್ಟ್ ಒ ಬ್ಲೇಕ್ ಮತ್ತು ಭಾರತದ ಪರವಾಗಿ ವೈ.ಕೆ. ಸಿನಾಃ ರವರು ಪ್ರತಿನಿಧಿಸಿದ್ದರು.

- ಸಾಮಾಜಿಕ ಭದ್ರತೆ, ರಾಜಕೀಯ ವಿಚಾರ, ವಾಣಿಜ್ಯ, ವ್ಯಾಪಾರ ಮುಂತಾದ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
- ಆಫ್ಘಾನಿಸ್ತಾನದಲ್ಲಿ ಶಾಂತಿ ಸುವ್ಯವಸ್ಥೆ, ಪ್ರಜಾಪ್ರಭುತ್ವ ಹಿತಾಸಕ್ತಿ ಸೇರಿದಂತೆ ಸಮತೋಲನ ಅಭಿವೃದ್ಧಿಗೆ ಶ್ರಮಿಸಲು ಭಾರತ ಮತ್ತು ಅಮೆರಿಕಾ ನಿರ್ಣಯ ಕೈಗೊಂಡವು.
- ಭಾರತ, ಆಫ್ಘಾನಿಸ್ತಾನ ಮತ್ತು ಅಮೆರಿಕಾ ದೇಶಗಳ ಮೊದಲನೇ ತ್ರಿಪಕ್ಷೀಯ ಸಭೆ ಸೆಪ್ಟೆಂಬರ್ 25, 2012 ರಲ್ಲಿ ನ್ಯೂಯಾರ್ಕ್ ನಲ್ಲಿ ನಡೆದಿತ್ತು.

**ಸಾಮಾಜಿಕ ಭದ್ರತೆಗೆ ಪರಸ್ಪರ ಸಹಿ ಹಾಕಿದ ಭಾರತ ಮತ್ತು ಪೋರ್ಚುಗಲ್**

ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಭಾರತ ಮತ್ತು ರಿಪಬ್ಲಿಕ್ ಆಫ್ ಪೋರ್ಚಗಲ್ ದೇಶಗಳ ನಡುವೆ ನವದೆಹಲಿಯಲ್ಲಿ ಮಹತ್ವದ ಒಪ್ಪಂದವೊಂದು ಏರ್ಪಾಟ್ಟಿದೆ. ಭಾರತದ ಕಡಲಾಚೆ ವ್ಯವಹಾರ ಸಚಿವ ವಯಲಾರ್ ರವಿ ಮತ್ತು ಪೋರ್ಚುಗಲ್ ನ ವಿದೇಶಾಂಗ ಸಚಿವ "ಸಕದುರ ಕಾಬ್ರಲ್ ಪೊರ್ಟಸ್ (Sacadura Cabral Portas) ರವರು ಇತ್ತೀಚೆಗೆ ಈ ಒಪ್ಪಂದಕ್ಕೆ ಪರಸ್ಪರ ಸಹಿ ಹಾಕಿದರು.

- ಉಭಯ ದೇಶಗಳ ನಡುವೆ ವ್ಯಾಪಾರ ವಹಿವಾಟು ಬಲಗೊಳಿಸಲು ಮತ್ತು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಈ ಒಪ್ಪಂದ ಸಹಕಾರಿಯಾಗಲಿದೆ. ಸದ್ಯ 75000 ಭಾರತೀಯರು ಪೋರ್ಚುಗಲ್ ನಲ್ಲಿ ನೆಲೆಸಿದ್ದು, ಇವರೆಲ್ಲರೂ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ.

**ತ್ರಿಪುರ, ಮೇಘಾಲಯ ಮತ್ತು ನಾಗಾಲ್ಯಾಂಡ್ ಗೆ ಹೊಸ ಮುಖ್ಯ ಮಂತ್ರಿಗಳು**

ತ್ರಿಪುರಾ:

* ಇತ್ತೀಚೆಗೆ ತ್ರಿಪುರಾದಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿದ ಸಿಪಿಎಂ ಪಕ್ಷದ ನಾಯಕ ಮತ್ತು ದೇಶ ಕಂಡ ಅತಿ ಬಡ ಮುಖ್ಯ ಮಂತ್ರಿ ಮಣಿಕ್ ಸರ್ಕಾರ್ ಸತತ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು.

* ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿ ಬಸು ನಂತರ ದೀರ್ಘಾವಧಿವರೆಗೆ ಅಧಿಕಾರ ಚಲಾಯಿಸಿದ ಎರಡನೇ ಕಮ್ಯೂನಿಷ್ಟ್ ಮುಖ್ಯಮಂತ್ರಿ ಎಂಬ ಕೀರ್ತಿ ಮಾಣಿಕ್ ಸರ್ಕಾರ್ ರವರಿಗೆ ಸಲ್ಲಲಿದೆ.

ಮೇಘಾಲಯ:

- ಮುಕುಲ್ ಸಂಗ್ಮಾ ರವರು ಮೇಘಾಲಯದ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ವಹಿಸಿಕೊಂಡರು. ಮೇಘಾಲಯದ ರಾಜ್ಯಪಾಲರಾದ ರಂಜಿತ್ ಶೇಖರ್ ಮೊಶಶರಿ ರವರು ಸಂಗ್ಮಾ ರವರಿಗೆ ಪ್ರಮಾಣ ವಚನ ಬೋಧಿಸಿದರು. ಸಂಗ್ಮಾ ರವರು ರಾಷ್ಟ್ರೀಯ ನ್ಯಾಷನಲ್ ಕಾಂಗ್ರೆಸ್ ನ ಹಿರಿಯ ಮುಂಖಡರಾಗಿದ್ದಾರೆ.

ನಾಗಾಲ್ಯಾಂಡ್:

- ಒಟ್ಟು 60 ಕ್ಷೇತ್ರಗಳಿಗೆ ನಡೆದ ವಿಧಾನ ಸಭೆ ಚುನಾವಣೆಯಲ್ಲಿ, 38 ಕ್ಷೇತ್ರಗಳಲ್ಲಿ ವಿಜಯ ಪತಾಕೆ ಹಾರಿಸಿದ ನಾಗ ಪೀಪಲ್ಸ್ ಫ್ರಾಂಟ್ (NPF) ಪಕ್ಷದ ಮುಖಂಡ ನಿಪಿಯೋ ರಿಯೋ (Niphiu Rio) ರವರು ನಾಗಾಲ್ಯಾಂಡ್ ಮುಖ್ಯಮಂತ್ರಿಯಾಗಿ ಸತತ ಮೂರನೇ ಬಾರಿಗೆ ಅಧಿಕಾರ ವಹಿಸಿಕೊಂಡರು. 63 ವರ್ಷದ ರಿಯೋ ರವರಿಗೆ ನಾಗಾಲ್ಯಾಂಡ್ ನ ರಾಜ್ಯಪಾಲ ನಿಖಿಲ್ ಕುಮಾರ್ ರವರು ಪ್ರಮಾಣ ವಚನ ಬೋಧಿಸಿದರು.

## ಸ್ಪಾಮ್ ಮೇಲ್: ಭಾರತಕ್ಕೆ ಮೂರನೇ ಸ್ಥಾನ

ಜಾಗತಿಕ ಮಟ್ಟದಲ್ಲಿ ಸ್ಪಾಮ್ ಮೇಲ್ (Spam mail) ರವಾನೆ ಮಾಡುವ ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ ಮೂರನೇ ಸ್ಥಾನ ದೊರೆತಿದೆ. ವಿಶ್ವದಲ್ಲೇ ಅತಿ ಹೆಚ್ಚು ಸ್ಪಾಮ್ ಮೇಲ್ ರವಾನೆ ಮಾಡುವ ದೇಶಗಳಲ್ಲಿ ಅಮೆರಿಕಾ ಪ್ರಥಮ ಸ್ಥಾನದಲ್ಲಿದೆ ಮತ್ತು ನಂತರದ ಸ್ಥಾನದಲ್ಲಿ ಚೀನಾ ದೇಶ ಕಾಣಿಸಿಕೊಂಡಿದೆ.

- ಸೊಫೋಸ್ ಲ್ಯಾಬ್ (Sophos lab) ನಡೆಸಿದ ಈ ಸಮೀಕ್ಷೆಯಲ್ಲಿ ಏಷ್ಯಾ ಖಂಡ ಮೊದಲ ಸ್ಥಾನದಲ್ಲಿದೆ. ಜಾಗತಿಕ ಮಟ್ಟದಲ್ಲಿ ರವಾನಿಸಲಾಗುವ ಸ್ಪಾಮ್ ಮೇಲ್ ಗಳಲ್ಲಿ ಶೇ.36.3 ರಷ್ಟು ಏಷ್ಯಾ ಖಂಡದ ದೇಶಗಳಿಂದ ರವಾನೆಯಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.
- ದೇಶಗಳ ಪೈಕಿ ಅಗ್ರಸ್ಥಾನದಲ್ಲಿರುವ ಅಮೆರಿಕಾ ಒಂದರಲ್ಲೇ ಶೇ.18.3 ರಷ್ಟು ಸ್ಪಾಮ್ ಅಥವಾ ಜಂಕ್ ಮೇಲ್ ಗಳನ್ನು ಕಳುಹಿಸಲಾಗುತ್ತಿದೆ. ಶೇ.8.2 ರಿಂದ ಚೀನಾ ಎರಡನೇ ಸ್ಥಾನದಲ್ಲಿದ್ದರೆ, ಭಾರತ ಶೇ.4.2 ರಷ್ಟು ಸ್ಪಾಮ್ ಮೇಲ್ ಗಳನ್ನು ಕಳುಹಿಸುವ ಮೂಲಕ ಮೂರನೇ ಸ್ಥಾನದಲ್ಲಿದೆ.
- ಪಟ್ಟಿಯಲ್ಲಿ ಪೆರು, ಫ್ರಾನ್ಸ್, ದಕ್ಷಿಣಾ ಕೊರಿಯಾ ಮತ್ತು ಇಟಲಿ ದೇಶಗಳು ನಂತರದ ಸ್ಥಾನಗಳಲ್ಲಿವೆ.

## ಕಾಲಮಿತಿ ಸೇವಾ ಮಸೂದೆಗೆ ಕೇಂದ್ರ ಸಚಿವ ಸಂಪುಟ

ದೇಶದ ನಾಗರಿಕರಿಗೆ ವಿವಿಧ ಸೇವೆಗಳನ್ನು ಕಾಲಮಿತಿಯೊಳಗೆ ನೀಡಲು ಅವಕಾಶ ಕಲ್ಪಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈಗಾಗಲೇ ಅನೇಕ ರಾಜ್ಯಗಳು ನಾಗರಿಕ ಸೇವಾ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿದ್ದರು ಕೇಂದ್ರ ಸರ್ಕಾರ ದೇಶ ವ್ಯಾಪ್ತಿ ಅನ್ವಯವಾಗುವ ಈ ಮಸೂದೆಗೆ ಒಪ್ಪಿಗೆ ಸೂಚಿಸಿದೆ.

ಮಸೂದೆಯ ಕೆಲವು ಪ್ರಮುಖ ಅಂಶಗಳು:

- ಪಿಂಚಣಿ, ಪಾಸ್ ಪೋರ್ಟ್, ರೇಷನ್ ಕಾರ್ಡ್ ಜಾತಿ ಪ್ರಮಾಣ ಪತ್ರ ಮತ್ತು ಮರಣ ಪತ್ರ ಸೇರಿದಂತೆ ವಿವಿಧ ಸೇವೆಗಳನ್ನು ನಿರ್ಧಿಷ್ಟ ಸಮಯದಲ್ಲಿ ಒದಗಿಸಬೇಕಾಗಿದೆ. ಒಂದು ವೇಳೆ ನಿಗದಿತ ಸಮಯದೊಳಗೆ ಸೇವೆಯನ್ನು

ಒದಗಿಸಲು ವಿಫಲವಾಗುವ ಸಂಸ್ಥೆ/ಅಧಿಕಾರಿ (ಸರ್ಕಾರಿ)ಗೆ ದಿನಕ್ಕೆ ಕನಿಷ್ಠ ರೂ.250 ರಿಂದು ಗರಿಷ್ಠ 50,000 ರೂಪಾಯಿಗಳ ವರಗೆ ದಂಡ ವಿಧಿಸಬಹುದಾಗಿದೆ.

- ನಾಗರಿಕರಿಗೆ ಉತ್ತಮ ಸೇವೆಯನ್ನು ನೀಡುವ ಸಲುವಾಗಿ ಕಾಲ್ ಸೆಂಟರ್, ಗ್ರಾಹಕ ದೂರು ಕೇಂದ್ರ, ಸಹಾಯ ವೇದಿಕೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ.
- ಅನಿವಾಸಿ ಭಾರತೀಯರಿಗೆ ಈ ಮಸೂದೆಯಡಿ ಸೇವೆಯನ್ನು ಒದಗಿಸಲು ಸದ್ಯ ಹೊರಗಿಡಲಾಗಿದೆ. ಆದರೆ ವೈಯುಕ್ತಿಕ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿ ಹಾಗೂ ಕಾನೂನು ಸಚಿವಾಲಯದಡಿ NRI ಗಳಿಗೆ ಸೇವೆಯನ್ನು ಒದಗಿಸಲಾಗುವುದು.
- ಈ ಉದ್ದೇಶಿತ ಮಸೂದೆಯಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ನಾಗರಿಕ ಕುಂದು ಕೊರತೆ ನಿವಾರಣ ಆಯೋಗವನ್ನು ಸ್ಥಾಪಿಸುವಂತೆ ಪ್ರಸ್ತಾಪಿಸಲಾಗಿದೆ. ಈ ಆಯೋಗದ ತೀರ್ಪಿನಿಂದ ಅಸಮಾಧಾನಗೊಂಡ ವ್ಯಕ್ತಿಯು ಲೋಕಪಾಲರಿಗೆ ತಮ್ಮ ಆಕ್ಷೇಪಣೆಯನ್ನು(ಕೇಂದ್ರ ಮಟ್ಟದಲ್ಲಿ ಕೇಂದ್ರ, ರಾಜ್ಯ ಮಟ್ಟದಲ್ಲಿ ರಾಜ್ಯ ಲೋಕಪಾಲ) ಸಲ್ಲಿಸಬಹುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುತ್ತಿರುವ ಎಲ್ಲಾ ಸೇವೆಗಳನ್ನು ಈ ಮಸೂದೆಯಡಿ ತರಲಾಗುವುದು ಮತ್ತು ನಿಗಧಿತ ಸಮಯದೊಳಗೆ ಸೇವೆಯನ್ನು ನೀಡುವುದು ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯ ಹೆಗಲ ಮೇಲಿರಲಿದೆ.

ಈ ಮಸೂದೆಯಿಂದ ಭಷ್ಟಚಾರದ ಬೇರನ್ನು ಸಂಪೂರ್ಣವಾಗಿ ನಾಶ ಮಾಡುಬಹುದೆಂದು ನಂಬಲಾಗಿದೆ. ಅಣ್ಣಾ ಹಜಾರೆಯವರ ಹೋರಾಟ ಸಮಯದಲ್ಲಿ ಅಂದರೆ ಜುಲೈ 2011 ರಲ್ಲಿ ಇದನ್ನು ಮಂಡಿಸಲಾಗಿತ್ತು ಆದರೆ ಅನೇಕ ತಿದ್ದುಪಡಿಗಳನ್ನು ತರುವ ಮೂಲಕ ಈ ಮಸೂದೆಗೆ ಕೇಂದ್ರ ಸರ್ಕಾರ ಈಗ ಒಪ್ಪಿಗೆ ಸೂಚಿಸಿದೆ.

## ರಾಷ್ಟ್ರೀಯ ಮಹಿಳಾ ಸಬಲೀಕರಣ ಅಭಿಯಾನ

ಮಹಿಳೆಯ ಸರ್ವತೋಮುಖ ಏಳಿಗೆಯನ್ನು ಬಯಸಿ ಭಾರತ ಸರ್ಕಾರ ರಾಷ್ಟ್ರೀಯ ಮಹಿಳಾ ಸಬಲೀಕರಣ ಅಭಿಯಾನವನ್ನು (National Mission for Empowerment of Women) ಆರಂಭಿಸಿದೆ. ವಿವಿಧ ಸಚಿವಾಲಯ ಮತ್ತು ಇಲಾಖೆಗಳ ಸಹಭಾಗಿತ್ವದೊಂದಿಗೆ ಮಹಿಳೆಯರ ಹಿತಾಸಕ್ತಿಯನ್ನು ಕಾಯುವುದು ಈ ಅಭಿಯಾನದ ಉದ್ದೇಶ. ಈ ಅಭಿಯಾನದ ಗುರಿ

- ಮಹಿಳೆಯರ ಆರ್ಥಿಕ ಪರಿಸ್ಥಿತಿಯನ್ನು ಸಧೃಡಗೊಳಿಸುವುದು.
- ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡುವುದು.
- ಮಹಿಳೆಯರಿಗೆ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯವನ್ನು ನೀಡುವ ಮೂಲಕ ಸಾಮಾಜಿಕವಾಗಿ ಉತ್ತಮಗೊಳಿಸುವುದು.
- ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ವಿವಿಧ ಸಚಿವಾಲಯ ಮತ್ತು ಇಲಾಖೆಯಡಿ ಕಾರ್ಯಕ್ರಮಗಳನ್ನು ಯೋಜಿಸುವುದು.
- ಆಡಳಿತ ವಿವಿಧ ಮಟ್ಟಗಳಲ್ಲಿ ಮಹಿಳೆಯರಿಗೆಂದೆ ರೂಪಿಸಲಾಗಿರುವ ಯೋಜನೆಗಳು ಮತ್ತು ಅವುಗಳ ಉಪಯೋಗಗಳನ್ನು ಸಾರುವುದು.

ಈ ಅಭಿಯಾನ ಅನುಷ್ಟಾನ ಪ್ರಾಧಿಕಾರ ಕ್ಕೆ ಪ್ರಧಾನ ಮಂತ್ರಿಯವರು ನೇತೃತ್ವ ವಹಿಸಿದ್ದು, ಇತರೆ ಸುಮಾರು 20 ಸಚಿವಾಲಯದ ಸಚಿವರು ಸದಸ್ಯರಾಗಿರುತ್ತಾರೆ.

**ದೇಶದ ಮೊದಲ ಮಹಿಳಾ ಬ್ಯಾಂಕ್ ಗೆ ನೀಲಿನಕ್ಷೆ ತಯಾರಿಸಲು ಸಮಿತಿ**

ದೇಶದಲ್ಲಿ ಇದೇ ಮೊದಲ ಬಾರಿಗೆ ಸ್ಥಾಪಿಸಲು ಉದ್ದೇಶಿಸಿರುವ ಮಹಿಳಾ ಬ್ಯಾಂಕ್ ಗೆ ರೂಪುರೇಷೆಗಳನ್ನು ತಯಾರಿಸುವ ಸಲುವಾಗಿ ಆರ್ಥಿಕ ಸಚಿವಾಲಯ ಸಮಿತಿಯೊಂದನ್ನು ರಚಿಸಿದೆ. 2013-14 ನೇ ಸಾಲಿನ ಬಜೆಟ್ ನಲ್ಲಿ ಹಣಕಾಸು ಸಚಿವ ಚಿದಂಬರಂ ರವರು ಮಹಿಳಾ ಬ್ಯಾಂಕ್ ಸ್ಥಾಪನೆ ಬಗ್ಗೆ ಪ್ರಸ್ತಾಪಿಸಿದ್ದರು. ಅಲ್ಲದೇ ರೂ. 1000 ಕೋಟಿ ಬಂಡವಾಳವನ್ನು ಬಜೆಟ್ ನಲ್ಲಿ ಇದಕ್ಕಾಗಿ ಮೀಸಲಿಡಲಾಗಿದೆ.

ಸಮಿತಿಯ ವಿವರ:

- ಶ್ರೀ.ಎಂ.ಬಿ.ಎನ್. ರಾವ್, ಕೆನರಾ ಬ್ಯಾಂಕ್ ನ ಮಾಜಿ CMD ರವರು ಸಮಿತಿಯ ಅಧ್ಯಕ್ಷರಾಗಿದ್ದಾರೆ.
- ಶ್ರೀ.ಎಂ.ಡಿ. ಮಲ್ಯ, ಬ್ಯಾಂಕ್ ಆಫ್ ಬರೋಡದ ಮಾಜಿ CMD, ಸದಸ್ಯರು.
- ಶ್ರೀ. ಜಯಶ್ರೀ ವ್ಯಾಸ್, SEWA ಸಂಸ್ಥೆಯ MD, ಸದಸ್ಯರು.
- ಶ್ರೀ. ಅರುಂಧತಿ ಭಟ್ಟಚಾರ್ಯ, ಎಂ.ಡಿ & ಸಿಇಒ, SBI cap, ಸದಸ್ಯರು.
- ಶ್ರೀ ಉಷಾ ಅನಂತ ಸುಬ್ರಮಣ್ಯಂ, ಪಂಜಾಬ್ ನ್ಯಾಷನಲ್ ಬ್ಯಾಂಕ್ ನ ED
- ಡಾ.ಕೆ. ರಾಮಕೃಷ್ಣನ್, CEO, ಬ್ಯಾಂಕರ್ಸ್ ಅಸೋಸಿಯೇಷನ್ ಈ ಸಮಿತಯ ಸದಸ್ಯರಾಗಿದ್ದಾರೆ.

ಸಮಿತಿಗೆ ಏಪ್ರಿಲ್ 30, 2013 ರ ಒಳಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಉದ್ದೇಶಿತ ಬ್ಯಾಂಕ್ ಈ ವರ್ಷದ ನವೆಂಬರ್ ನಿಂದ ಕಾರ್ಯಾರಂಭ ಮಾಡುವುದಾಗಿ ಹೇಳಲಾಗಿದೆ.

**ಸಹಿರ್ ಲೂದಿಯಾನ್ವಿ (Sahir Ludhianvi) ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ**

ಸಹಿರ್ ಲೂದಿಯಾನ್ವಿ ರವರ ಜನ್ಮ ದಿನದ ಪ್ರಯುಕ್ತ ಅವರ ಸ್ಮರಣಾರ್ಥ ಅಂಚೆ ಚೀಟಿಯನ್ನು ರಾಷ್ಟ್ರಪತಿ ಶ್ರೀ ಪ್ರಣಭ್ ಮುಖರ್ಜಿಯವರು ಮಾರ್ಚ್ 8 ರಂದು ಬಿಡುಗಡೆಗೊಳಿಸಿದರು. ಈ ಸಮಾರಂಭದಲ್ಲಿ ರಾಷ್ಟ್ರಪತಿಗಳು ಸೇರಿದಂತೆ ಇತರೆ ಸಚಿವಾಲಯದ ಗಣ್ಯರು ಸಹ ಹಾಜರಿದ್ದರು.

ಸಹಿರ್ ಲೂದಿಯಾನ್ವಿ:

- ಸಹಿರ್ ಲೂದಿಯಾನ್ವಿ ರವರು ಒಬ್ಬ ಪ್ರಸಿದ್ಧ ಉರ್ದು ಕವಿ. ಉರ್ದು ಸಾಹಿತ್ಯವನ್ನು ಮೆರಗುಗೊಳಿಸಲು ಅವರು ಸಾಕಷ್ಟು ಶ್ರಮಿಸಿದ್ದರು. ಉರ್ದು ಕವಿತೆಗಳನ್ನು ಸಿನಿಮಾ ಹಾಡುಗಳಾಗಿ ಪರಿವರ್ತಿಸಲು ಸಹ ಅವರು ಸಾಕಷ್ಟು ಶ್ರಮಿಸಿದ್ದರು. ಅಕ್ಟೋಬರ್ 25, 1980 ರಲ್ಲಿ ನಿಧನ ಅವರು ನಿಧನ ಹೊಂದಿದರು ಉರ್ದು ಸಾಹಿತ್ಯ ಲೋಕದಲ್ಲಿ ಅವರ ಹೆಸರು ಚಿರಂತನ.

**ವಿದ್ಯುನ್ಮಾನ ಮೂಲಕ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸುವ ವ್ಯವಸ್ಥೆಗೆ ಚಾಲನೆ**

ವಿದ್ಯುನ್ಮಾನ ಮೂಲಕ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸುವ ವ್ಯವಸ್ಥೆಗೆ (Electronic Project Proposal System) ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಇತ್ತೀಚೆಗೆ ಚಾಲನೆ ನೀಡಿದೆ. ಸಿ-ಡಾಕ್ ನೆರವಿನಿಂದ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಇದನ್ನು ಅಭಿವೃದ್ಧಿಪಡಿಸಿದೆ.

- ಇದೊಂದು ಅಂತರ್ಜಾಲ ಆಧಾರಿತ ವ್ಯವಸ್ಥೆಯಾಗಿದ್ದು, ಸಂಶೋಧನೆ ಮತ್ತು ಅಭಿವೃದ್ಧಿ ಸಂಬಂಧಿಸಿದ ಪ್ರಾಜೆಕ್ಟಗಳಿಗೆ ಇನ್ನು ಮುಂದೆ ಆನ್ ಲೈನ್ ನಲ್ಲೇ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ. ಪ್ರಾಜೆಕ್ಟ್ ಗೆ ಧನ ಸಹಾಯ, ನಿರ್ವಹಣೆ ಮತ್ತು ಮುಕ್ತಾಯದ ವರೆಗೂ ಆನ್ ಲೈನ್ ನಲ್ಲೇ ಸಾಧ್ಯವಾಗಲಿದೆ.
- ಈ ನೂತನ ವ್ಯವಸ್ಥೆಯಿಂದ ಇದೂವರೆಗೂ ಚಾಲ್ತಿಯಲ್ಲಿದ ಕಾಗದದ ಮೂಲಕ ಪ್ರಸ್ತಾವನೆ ಸಲ್ಲಿಸುವ ವ್ಯವಸ್ಥೆ ಕೊನೆಗಾಣಲಿದೆ. ಮತ್ತು ಪ್ರಸ್ತಾವನೆಯ ಅನುಮೋದನೆಯಲ್ಲಿ ಆಗುತ್ತಿದ ವಿಳಂಬ ಸಹ ದೂರವಾಗಲಿದೆ.

**ದೇಶದ ಮೊದಲ ಮಹಿಳಾ ಅಂಚೆ ಕಚೇರಿ ಪ್ರಾರಂಭ**

ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ದೆಹಲಿಯಲ್ಲಿ ದೇಶದ ಮೊದಲ ಮಹಿಳಾ ಅಂಚೆ ಕಚೇರಿಯ ಶಾಖೆಯನ್ನು ಆರಂಭಿಸಲಾಗಿದೆ. ಈ ಶಾಖೆಯಲ್ಲಿ ಎಲ್ಲಾ ಸಿಬ್ಬಂದಿಗಳು ಮಹಿಳೇಯರೆ ಆಗಿರಲಿದ್ದಾರೆ.

- ಮೊದಲ ಹಂತದಲ್ಲಿ ದೆಹಲಿಯಲ್ಲಿ ಇಂತಹ ಶಾಖೆಯನ್ನು ಆರಂಭಿಸಿದ್ದು, ಮುಂದಿನ ದಿನಗಳಲ್ಲಿ ಬೆಂಗಳೂರು ಮುತಾಂದ ಮಹಾನಗರಗಳಲ್ಲಿ ಆರಂಭವಾಗಲಿದೆ.
- ಇತರೆ ಶಾಖೆಗಳಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳು ಈ ಶಾಖೆಯಲ್ಲಿ ಲಭ್ಯವಿರಲಿವೆ ಎಂದು ಕಪಿಲ್ ಸಿಬಲ್ ತಿಳಿಸಿದ್ದಾರೆ.

ಟಾಟಾ ಟೀ ಯಿಂದ "ಜಾಗೋ ರೇ"

- ಮಹಿಳೆಯರ ಪರವಾಗಿ ಟಾಟಾ ಟೀ ಸಂಸ್ಥೆಯು "ಜಾಗೋ ರೇ" ಎಂಬ ಸಾಮಾಜಿಕ ಚಳುವಳಿಯನ್ನು ಆರಂಭಿಸಲಿದೆ. ಈ ಕಾರ್ಯಕ್ರಮದಲ್ಲಿ ಬಾಲಿವುಡ್ ಕಿಂಗ್ ಖಾನ್ "ಶಾರೂಖ್ ಖಾನ್" ರವರು ಭಾಗವಹಿಸಲಿದ್ದಾರೆ.

**ಅರ್ಧ ಆಸ್ತಿಯನ್ನು ಚಾರಿಟಿಗೆ ದಾನ ಮಾಡಲಿರುವ ಶೋಭಾ ಡೆವೆಲಪರ್ಸ**

ಬೆಂಗಳೂರು ಮೂಲದ ರಿಯಲ್ ಎಸ್ಟೇಟ್ ಸಂಸ್ಥೆ ಶೋಭಾ ಡೆವಲಪರ್ಸ್ನ ಸ್ಥಾಪಕ P N C ಮೆನನ್ ರವರು ತಮ್ಮ ಆಸ್ತಿಯ ಅರ್ಧ ಪಾಲನ್ನು ಚಾರಿಟಿಗಳಿಗೆ ದಾನ ಮಾಡುವುದಾಗಿ ತಿಳಿಸಿದ್ದಾರೆ. ಒಂದು ಅಂದಾಜಿನ ಪ್ರಕಾರ ಮೆನನ್ ರವರು 600 ಮಿಲಿಯನ್ ಡಾಲರ್ ಗಳಷ್ಟು ಮೌಲ್ಯದ ಆಸ್ತಿಯನ್ನು ಹೊಂದಿದ್ದಾರೆ.

- ಕೇರಳದ ಪಾಲಕ್ಕಡ್ ಜಿಲ್ಲೆಯಾವರದ ಮೆನನ್ ರವರು ಕಾಲೇಜಿನಿಂದ ಹೊರಗುಳಿದ ಬಳಿಕ ಗೃಹಲಂಕಾರ ವೃತ್ತಿಯನ್ನು ಆರಿಸಿಕೊಂಡರು. ನಂತರ ಸ್ನೇಹಿತನ ಮೇರೆಗೆ ದುಬೈ ಗೆ ತೆರಳಿದ ಅವರು ಗೃಹಲಂಕಾರ ಸೇರಿದಂತೆ ರಿಯಲ್ ಎಸ್ಟೇಟ್, ವ್ಯಾಪರ ಮತ್ತಿತರ ಉದ್ಯಮಗಳಲ್ಲೂ ತೊಡಗಿಸಿಕೊಂಡು ಯಶಸ್ವಿಯಾಗಿದ್ದಾರೆ.
- 1995 ರಲ್ಲಿ ಸ್ಥಾಪನೆಗೊಂಡ ಅವರ ಶೋಭಾ ಡೆವಲಪರ್ಸ್ ಸಂಸ್ಥೆ ಇಂದು ದಕ್ಷಿಣ ಭಾರತದಲ್ಲಿ ಹೆಮ್ಮರವಾಗಿ ಬೆಳದಿದೆ.
- ಉದ್ಯಮದ ಹೊರತಾಗಿ ಕೇರಳದಲ್ಲಿ ಗ್ರಾಮ ಶೋಭಾ, ಶೋಭಾ ಅಕಾಡೆಮಿ, ಶೋಭಾ ಹೆಲ್ತ್ ಕೇರ್, ಶೋಭಾ ಹರ್ಮಿಟೇಜ್ ಮೂಲಕ ಪರೋಪಕಾರಿ ಸೇವೆಗಳನ್ನು ಮಾಡುವ ಮೂಲಕ ಗ್ರಾಮೀಣ ಭಾಗದ ಬಡಜನರಿಗೆ ಆಶಾಕಿರಣವಾಗಿದ್ದಾರೆ.
- 2009 ರಲ್ಲಿ ಮೆನನ್ ರವರಿಗೆ ಪ್ರವಾಸಿ ಭಾರತೀಐ ಸಮ್ಮಾನ್ ಪುರಸ್ಕಾರವನ್ನು ಸಹ ನೀಡಲಾಗಿದೆ.

- ಇತ್ತೀಚೆಗೆ ಅರಬ್ ಬ್ಯುಸಿನೆಸ್ ಬಿಡುಗಡೆಗೊಳಿಸಿರುವ ವರದಿಯ ಪ್ರಕಾರ ಮೆನನ್ ರವರು ಗಲ್ಫ್ ಕಾರ್ಪೋರೇಷನ್ ಕೌನ್ಸಿಲ್ ನಲ್ಲಿರುವ ಭಾರತದ ಶ್ರೀಮಂತರ ಪಟ್ಟಿಯಲ್ಲಿ 21 ನೇ ಸ್ಥಾನದಲ್ಲಿದ್ದಾರೆ.

**ವಿವಿಧ ರಾಜ್ಯಗಳಿಗೆ ರಾಜ್ಯಪಾಲರ ನೇಮಕ**

ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಮೂವರು ರಾಜ್ಯಗಳಿಗೆ ರಾಜ್ಯಪಾಲರ ವರ್ಗಾವಣೆ ಸೇರಿದಂತೆ ಎರಡೂ ರಾಜ್ಯಗಳಿಗೆ ಹೊಸ ರಾಜ್ಯಪಾಲರ ನೇಮಕಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

- ಮಾಜಿ ಸಿಬಿಐ ನಿರ್ದೇಶಕ ಅಶ್ವಿನ್ ಕುಮಾರ್ -ನಾಗಾಲ್ಯಾಂಡ್
- ಎಸ್.ಸಿ.ಜಮೀರ್ - ಒಡಿಶಾ
- ಡಿ.ವೈ.ಪಾಟೀಲ್ - ಬಿಹಾರ್
- ದೇವಾನಂದ್ ಕೊನ್ವಾರ್ - ತ್ರಿಪುರ
- ನಿಖಿಲ್ ಕುಮಾರ್ - ಕೇರಳ

**ನಾಗಪುರ್: ವಾಸಿಸಲು ಯೋಗ್ಯವಾದ ನಗರ**

ಇತ್ತೀಚೆಗೆ ದೆಹಲಿಯಲ್ಲಿ ನಡೆದ ABP News-IPSOS ನ ಅತ್ಯುತ್ತಮ ನಗರಗಳ ಸಮೀಕ್ಷೆ ಮತ್ತು ಪ್ರಶಸ್ತಿ ಸಮಾರಂಭದಲ್ಲಿ ವಾಸಿಸಲು ಯೋಗ್ಯವಾದ ಭಾರತದ ನಗರವೆಂಬ ಕೀರ್ತಿಗೆ ನಾಗಪುರ್ ಪಾತ್ರವಾಗುವ ಮೂಲಕ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

- ಉತ್ತಮ ಆರೋಗ್ಯ ಸೇವೆ, ಉತ್ತಮ ಸಾರಿಗೆ ವ್ಯವಸ್ಥೆ ಜತೆಗೆ ಪರಿಸರ ಕಾಳಜಿ ಹೊಂದಿರುವ ಕಾರಣಗಳಿಂದ ನಾಗಪುರ ಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ರಸ್ತೆ ಮತ್ತು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ದೆಹಲಿ ಉತ್ತಮ ನಗರವಾಗಿದೆ.
- ರಾಜ್ ಕೋಟ್ ನಗರ ಉತ್ತಮ ಕಾನೂನು ಮತ್ತು ಸುವ್ಯವಸ್ಥೆ ಹೊಂದಿರುವ ನಗರವಾಗಿ ಹೊರಹೊಮ್ಮಿದೆ. ಅಲ್ಲದೇ ಸ್ವಚ್ಛತೆ, ನೈರ್ಮಲೀಕರಣ ಮತ್ತು ಮಹಿಳೆಯರ ಸುರಕ್ಷತೆಯಲ್ಲು ರಾಜ್ ಕೋಟ್ ಉತ್ತಮ ನಗರವಾಗಿದೆ.
- ಉತ್ತಮ ಟ್ರಾಫಿಕ್ ನಿರ್ವಹಣೆ ನಗರವಾಗಿ ಪುಣೆ ಮತ್ತು ಕೈಗೆಟಕುವ ವಸತಿ ಸೌಲಭ್ಯವನ್ನು ಹೊಂದಿರುವ ನಗರವಾಗಿ ಮಧುರೈ ಆಯ್ಕೆಯಾಗಿವೆ.
- ಅತ್ಯುತ್ತಮ ಪ್ರವಾಸಿ ಸ್ನೇಹಿ ನಗರವಾಗಿ ನಾಸಿಕ್ ಮತ್ತು ಉತ್ತಮ ವಿದ್ಯುತ್ ಸೌಲಭ್ಯ ಹೊಂದಿರುವ ನಗರವಾಗಿ ಮುಂಬೈ ಆಯ್ಕೆಯಾಗಿದೆ.

ABP News-IPSOS ನ ಸಮೀಕ್ಷೆ ಮತ್ತು ಪ್ರಶಸ್ತಿ:

- ಇದೇ ಮೊದಲ ಬಾರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. 10 ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ನಗರಗಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿದೆ. ಒಟ್ಟು 13 ಮಾನದಂಡಗಳನ್ನು ಇಟ್ಟುಕೊಂಡು ಸಮೀಕ್ಷೆ ನಡೆಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಗೋವಾದಲ್ಲಿ ಮೊಬೈಲ್ ವೀಸಾ ಅರ್ಜಿ ಸೌಲಭ್ಯವನ್ನು ಆರಂಭಗೊಳಿಸಿದ ಯು.ಕೆ**

ಯುನೈಟೆಡ್ ಕಿಂಗ್ ಡಮ್ (ಯು.ಕೆ) ಸರ್ಕಾರ ತನ್ನ ಮೊದಲ ಮೊಬೈಲ್ ಬಯೋಮೆಟ್ರಿಕ್ ಕ್ಲಿನಿಕ್ ಸೌಲಭ್ಯವನ್ನು ಗೋವಾದಲ್ಲಿ ಇತ್ತೀಚೆಗೆ ಪ್ರಾರಂಭಿಸಿದೆ. ಈ ಸೌಲಭ್ಯದಿಂದ ಯು.ಕೆ ದೇಶಕ್ಕೆ ಪ್ರಯಾಣ ಮಾಡಲು ಉದ್ದೇಶಿಸುವ ಪ್ರಯಾಣಿಕರು ವೀಸಾ ಅರ್ಜಿ ಸಲ್ಲಿಸಲು ಮುಂಬೈಗೆ ಹೋಗಬೇಕಿಲ್ಲ. ಯು.ಕೆ ಬಾರ್ಡರ್ ಏಜೆನ್ಸಿ (U.K Boarder Agency) ಪರಿಕಲ್ಪನೆಯಿಂದ ಮೂಡಿ ಬಂದಿರುವ ಈ ಸೌಲಭ್ಯದಿಂದ ಗೋವಾ ಜನರಿಗೆ ಸಮಯದ ಉಳಿತಾಯ ಸಹ ಆಗಲಿದೆ.

ಈ ಸೌಲಭ್ಯದ ಬಗ್ಗೆ:

- ಮೊಬೈಲ್ ಬಯೋಮೆಟ್ರಿಕ್ ಸೌಲಭ್ಯದಿಂದ ಇನ್ನು ಮುಂದೆ ಯು.ಕೆ ಪ್ರಯಾಣ ಬೆಳಸಲು ಉದ್ದೇಶಿಸುವ ಗೋವಾದ ಜನರು ವೀಸಾಗಾಗಿ ಮೊಬೈಲ್ ಮೂಲಕವೇ ಅರ್ಜಿ ಸಲ್ಲಿಸಬಹುದಾಗಿದೆ. ಈ ಮುಂಚೆ ಅರ್ಜಿ ಸಲ್ಲಿಸಲು ಮುಂಬೈಗೆ ಹೋಗಬೇಕಿತ್ತು.
- ಯು.ಕೆ ಬಾರ್ಡರ್ ಏಜೆನ್ಸಿ ಅಭಿವೃದ್ಧಿ ಪಡಿಸಿರುವ ನೊಂದಣಿ ವ್ಯವಸ್ಥೆ ಮೂಲಕ ಅರ್ಜಿದಾರರ ಬೆರಳಚ್ಚು ಮತ್ತು ಡಿಜಿಟಲ್ ಭಾವಚಿತ್ರಗಳನ್ನು ತೆಗೆಯಲಾಗುತ್ತದೆ. ಒಟ್ಟಿನಲ್ಲಿ ಇದೊಂದು ವಿನೂತನ ವ್ಯವಸ್ಥೆಯಾಗಿದ್ದು ಸಮಯದ ಅಭಾವ ಇರುವವರಿಗೆ ವರದಾನವಾಗಿದೆ.

**ಪಶ್ಮೀನಾ ಮೇಕೆ (Pashmina Goat) ರಕ್ಷಣೆಗೆ 41 ಕೋಟಿ ಆರ್ಥಿಕ ಸಹಾಯ ಘೋಷಿಸಿದ ಕೇಂದ್ರ ಸರ್ಕಾರ**

ಹವಾಮಾನ ವೈಪರೀತ್ಯದಿಂದ ಸುಮಾರು 2000 ಕ್ಕೂ ಹೆಚ್ಚು ಪಶ್ಮೀನಾ ಮೇಕೆಗಳು ಸಾವನ್ನಪ್ಪಿದ ಬೆನ್ನಲ್ಲೇ ಕೇಂದ್ರ ಸರ್ಕಾರ ಪಶ್ಮೀನಾ ಮೇಕೆಗಳ ರಕ್ಷಣೆಗೆ ರೂ. 41.21 ಕೋಟಿ ಆರ್ಥಿಕ ಸಹಾಯದ ಪ್ಯಾಕೇಜ್ ನ್ನು ಘೋಷಿಸಿದೆ. ಈ ಅನುದಾನದ ಜತೆಗೆ ಹೊಸ "ಉಣ್ಣೆ ಅಭಿವೃದ್ಧಿ ಯೋಜನೆ (Wool Development Scheme)" ಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

ಯೋಜನೆಯ ಮುಖ್ಯ ಉದ್ದೇಶ:

- ಪಶ್ಮೀನಾ ಮೇಕೆಗಳ ತಳಿ ಅಭಿವೃದ್ಧಿಗೆ ಸೂಕ್ತ ಸ್ಥಳಾವಕಾಶ ನಿರ್ಮಿಸಲು ಸಹಾಯ ಧನ ನೀಡುವುದು.
- ಮೇವಿನ ಕೊರತೆ ನೀಗಿಸುವುದರ ಜತೆಗೆ ಆರೋಗ್ಯ ವಿಮೆಯನ್ನು ಕಲ್ಪಿಸುವುದು.
- ಪಶ್ಮೀನಾ ಮೇಕೆಗಳ ತಳಿ ಅಭಿವೃದ್ಧಿ ಮತ್ತು ಸಂಶೋಧನೆ ಕೈಗೊಳ್ಳಲು ಆರ್ಥಿಕ ನೆರವು ನೀಡುವುದು ಮುಖ್ಯ ಗುರಿಯಾಗಿದೆ.

ಪಶ್ಮೀನಾ ಮೇಕೆ:

- ಚಂಗ್ ತಾಂಗಿ ಅಥವಾ ಪಶ್ಮೀನಾ ಎಂಬುದು ಮೇಕೆಯ ಪ್ರಸಿದ್ಧ ತಳಿ. ಲಡಕ್ ಮತ್ತು ಟಿಬೆಟ್ ನ ಅಸುಪಾಸಿನ ಪ್ರದೇಶಗಳಲ್ಲಿ ಈ ತಳಿಯ ಮೇಕೆಗಳನ್ನು ಅತಿ ಹೆಚ್ಚಾಗಿ ಸಾಕಲಾಗುತ್ತದೆ. ಅತಿ ಕಡಿಮೆ (-20°C) ಉಷ್ಣತೆಯಲ್ಲೂ ಜೀವಿಸಲು ಸಾಮರ್ಥ್ಯ ಹೊಂದಿರುವ ಈ ಮೇಕೆಗಳನ್ನು ಮಾಂಸ ಮತ್ತು ಉಣ್ಣೆಗಳಿಗೊಸ್ಕರ ಸಾಕಲಾಗುತ್ತಿದೆ. ಪಶ್ಮೀನಾ ಮೇಕೆಗಳ ಉಣ್ಣೆ ಅತ್ಯುನ್ನತ್ತ ದರ್ಜೆಯ ಗುಣಮಟ್ಟದಿಂದ ಕೂಡಿದ್ದು ವಿಶ್ವ ವ್ಯಾಪ್ತಿ ಇದಕ್ಕೆ ಭಾರಿ ಬೇಡಿಕೆ ಇದೆ. ಈ ಉಣ್ಣೆಯಿಂದ ತಯಾರಿಸಲಾಗುವು ಪಶ್ಮೀನಾ ಶಾಲ್ (Pashmina Shawl) ನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

ನಿಮಗಿದು ತಿಳಿದಿರಲಿ ನೂರಿ: ವಿಶ್ವದ ಮೊದಲ ಕ್ಲೋನಿಂಗ್ ಪಶ್ಮೀನಾ ಮೇಕೆ.

**ವಿಶ್ವದ ಐದು ಅತ್ಯುತ್ತಮ ವಿಮಾನ ನಿಲ್ದಾಣಗಳಲ್ಲಿ ದೆಹಲಿ ವಿಮಾನ ನಿಲ್ದಾಣಕ್ಕೆ ಎರಡನೇ ಸ್ಥಾನ**

ದೆಹಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣ ಈಗ ಮತ್ತೊಂದು ಹಿರಿಮೆಗೆ ಪಾತ್ರವಾಗಿದೆ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕೌನ್ಸಿಲ್ (International Airport Council) ನಡೆಸಿರುವ ಸಮೀಕ್ಷೆ ಪ್ರಕಾರ ವಾರ್ಷಿಕವಾಗಿ 25 ರಿಂದ 40 ಮಿಲಿಯನ್ ಪ್ರಯಾಣಿಕರನ್ನು ನಿಭಾಯಿಸುವ ವಿಶ್ವದ ವಿಮಾನ ನಿಲ್ದಾಣಗಳ ಪೈಕಿ ದೆಹಲಿ ವಿಮಾನ ನಿಲ್ದಾಣ ಎರಡನೇ ಅತ್ಯುತ್ತಮ ವಿಮಾನ ನಿಲ್ದಾಣವಾಗಿ ಹೊರಹೊಮ್ಮಿದೆ.

- ಈ ವಿಭಾಗದಲ್ಲಿ ಸಿಯೋಲ್ ನ ಇನ್ ಚೆಯಾನ್ (Incheon) ವಿಮಾನ ನಿಲ್ದಾಣ ಪ್ರಥಮ ಸ್ಥಾನದಲ್ಲಿದೆ. ಇದೇ ವಿಭಾಗದಲ್ಲಿ ಮುಂಬೈ ಛತ್ರಪತಿ ವಿಮಾನ ನಿಲ್ದಾಣಕ್ಕೆ ಮೂರನೇ ಸ್ಥಾನ ದೊರೆತಿದೆ.
- ಸೇವೆಯ ಗುಣಮಟ್ಟದಲ್ಲಿ ವಾರ್ಷಿಕವಾಗಿ 5 ರಿಂದ 15 ಮಿಲಿಯನ್ ಪ್ರಯಾಣಿಕರನ್ನು ನಿಭಾಯಿಸುವ ವಿಮಾನ ನಿಲ್ದಾಣಗಳ ಪೈಕಿ ಹೈದ್ರಾಬಾದ್ ನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಎರಡನೇ ಸ್ಥಾನವನ್ನು ಗಳಿಸಿದೆ. ಜಪಾನ್ ನ "ನಗೋಯ" ವಿಮಾನ ನಿಲ್ದಾಣ ಪ್ರಥಮ ಸ್ಥಾನದಲ್ಲಿದೆ.

ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕೌನ್ಸಿಲ್:

- ಇದೊಂದು ಸ್ವಾಯತ್ತತೆ ಮಂಡಳಿಯಾಗಿದ್ದು,ಜಾಗತಿಕ ಮಟ್ಟದಲ್ಲಿ ವಿಮಾನ ಪ್ರಯಾಣಿಕರಿಗೆ ಒದಗಿಸುತ್ತಿರುವ ಸೇವೆಯ ಗುಣಮಟ್ಟವನ್ನು ಗ್ರಾಹಕರಿಂದ ಅನಿಸಿಕೆಗಳನ್ನು ಪಡೆಯುವ ಮೂಲಕ ವಿಮಾನ ನಿಲ್ದಾಣಗಳಿಗೆ ಶ್ರೇಣಿಯನ್ನು ನೀಡುತ್ತದೆ.

**ರಸ್ತೆ ಸುರಕ್ಷತೆಯಲ್ಲಿ ಭಾರತ ಮತ್ತೊಮ್ಮೆ ಕಳಪೆ ಸಾಧನೆ**

ರಸ್ತೆ ಸುರಕ್ಷತೆಯಲ್ಲಿ ಭಾರತ ಕಳಪೆ ಸಾಧನೆ ಮಾಡುವ ಮೂಲಕ ಅತ್ಯಂತ ಹಿಂದೆ ಬಿದ್ದಿರುವುದಾಗಿ ಜಾಗತಿಕ ಮಟ್ಟದ ಸಮೀಕ್ಷೆಯೊಂದು ತಿಳಿಸಿದೆ. ರಸ್ತೆ ಅಪಘಾತದಲ್ಲಿ ಪ್ರಾಣ ಕಳೆದುಕೊಳ್ಳುವ ಪ್ರಕರಣಗಳ ಸಂಖ್ಯೆ ಭಾರತದಲ್ಲಿ ಅತ್ಯಧಿಕವಾಗಿದೆ ಎಂದು ವರದಿಯಲ್ಲಿ ಬಹಿರಂಗಪಡಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಕೈಗೊಂಡಿರುವ ಈ ಸಮೀಕ್ಷೆಯಲ್ಲಿ, 2008 ಮತ್ತು 2011 ರ ನಡುವೆ 88 ದೇಶಗಳಲ್ಲಿ ಅಪಘಾತ ಪ್ರಮಾಣ ತಗ್ಗಿದ್ದರೆ ಭಾರತದಲ್ಲಿ ಮಾತ್ರ ಅಪಘಾತ ಪ್ರಕರಣಗಳಿಗೆ ಮಿತಿಯಿಲ್ಲ.

ಸಮೀಕ್ಷೆಯ ಮುಖ್ಯಾಂಶಗಳು:

- ಜಾಗತಿಕವಾಗಿ ಸುಮಾರು 1.24 ಮಿಲಿಯನ್ ಅಪಘಾತ ಪ್ರಕರಣಗಳು ವರ್ಷದಲ್ಲಿ ನಡೆಯುತ್ತಿವೆ. ಇದಲ್ಲದೇ 20 ರಿಂದ 50 ಮಿಲಿಯನ್ ಅಪಘಾತ ಪ್ರಕರಣಗಳಲ್ಲಿ ಗಂಭೀರ ಗಾಯಗಳಾಗಿವೆ ಆದರೆ ಸಾವು ಸಂಭವಿಸಿಲ್ಲ.
- 2011 ರಲ್ಲಿ ಭಾರತದಲ್ಲಿ 1.43 ಜನರು ಅಪಘಾತದಿಂದ ಮರಣಹೊಂದಿದ್ದಾರೆ. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಈ ಪ್ರಮಾಣ ಅತ್ಯಧಿಕ.
- ಭಾರತದ ನಂತರ ಸ್ಥಾನದಲ್ಲಿ ಚೀನಾ ಕಾಣಿಸಿಕೊಂಡಿದೆ. 2010 ರಲ್ಲಿ ಚೀನಾದ 70,134 ಜನರು ಅಪಘಾತದಲ್ಲಿ ಜೀವ ಕಳೆದುಕೊಂಡಿದ್ದಾರೆ.
- 36,499 ಸಾವಿನ ಪ್ರಕರಣಗಳ ಮೂಲಕ ಬ್ರೆಜಿಲ್ ಮೂರನೇ ಸ್ಥಾನದಲ್ಲಿದೆ.

ಭಾರತದಲ್ಲಿ ರಸ್ತೆ ಅಪಘಾತ ಹೆಚ್ಚಾಗಲು ಕಾರಣ:

- ರಸ್ತೆ ಸುರಕ್ಷತೆ ಯ ಬಗ್ಗೆ ಭಾರತದಲ್ಲಿ ಹಲವು ನಿಯಮಗಳನ್ನು ರೂಪಿಸಿದ್ದರು ಅವುಗಳ ಪಾಲನೆಯಲ್ಲಿ ಜನರು ತೋರುತ್ತಿರುವ ನಿರ್ಲಕ್ಷ್ಯಯೇ ಮುಖ್ಯ ಕಾರಣವಾಗಿದೆ. ಕುಡಿದು ವಾಹನ ಚಾಲನೆ ಮಾಡುವುದು, ಹೆಲ್ಮೆಟ್ ರಹಿತ ಚಾಲನೆ, ವೇಗ ಮಿತಿ ಉಲ್ಲಂಘನೆ ಹಾಗೂ ಸೀಟ್ ಬೆಲ್ಟ್ ಗಳ ಬಳಕೆ ನಿರಾಕರಣೆ ಅಪಘಾತ ಪ್ರಕರಣಗಳು ಹೆಚ್ಚಾಗಲು ಪೂರಕವಾಗಿವೆ ಎಂದು ಸಮೀಕ್ಷೆ ಹೇಳಿದೆ.
- ಶೇ 60 ರಿಂದ 70 ರಷ್ಟು ದ್ವಿಚಕ್ರ ವಾಹನಗಳನ್ನು ಹೊಂದಿರುವ ಭಾರತದಲ್ಲಿ ಹೆಲ್ಮೆಟ್ ಧರಿಸುವವರ ಸಂಖ್ಯೆ ತೀರಾ ವಿರಳ ಮತ್ತು ಶೇ.27 ರಷ್ಟು ಜನರು ಮಾತ್ರ ವಾಹನ ಚಾಲನೆ ವೇಳೆ ಸೀಟ್ ಬೆಲ್ಟ್ ನ್ನು ಧರಿಸುತ್ತಾರೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

**ತೈಲ ಶುದ್ಧೀಕರಣ ಘಟಕ: ರಾಜಸ್ತಾನ ಸರ್ಕಾರ ಮತ್ತು HPCL ನಡುವೆ ಒಡಂಬಡಿಕೆಗೆ ಸಹಿ**

ರಾಜಸ್ತಾನದ ಬರ್ಮೇರ್ ನಲ್ಲಿ ತೈಲ ಶುದ್ಧೀಕರಣ ಘಟಕವನ್ನು ಸ್ಥಾಪಿಸುವ ಸಲುವಾಗಿ ರಾಜಸ್ತಾನ ಸರ್ಕಾರ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್ ಒಡಂಬಡಿಕೆಗೆ (HPCL) ಸಹಿ ಹಾಕಿವೆ. ಈ ಯೋಜನೆಯನ್ನು HPCL ಮತ್ತು ರಾಜಸ್ತಾನ ಸರ್ಕಾರ ಜಂಟಿಯಾಗಿ ಕಾರ್ಯನಿರ್ವಹಿಸಲಿವೆ.

ಈ ಯೋಜನೆಯ ಬಗ್ಗೆ:

- ಈ ತೈಲ ಶುದ್ಧೀಕರಣ ಘಟಕವನ್ನು ರಾಜಸ್ಥಾನದ ಬರ್ಮೇರ್ ನಲ್ಲಿ ರೂ.37230 ಕೋಟಿ ಬಂಡವಾಳ ಹೂಡಿಕೆಯ ಮೂಲಕ ಸ್ಥಾಪಿಸಲಾಗುತ್ತಿದೆ.
- ಮುಂದಿನ ನಾಲ್ಕು ವರ್ಷಗಳಲ್ಲಿ ಈ ಯೋಜನೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
- ಈ ತೈಲ ಘಟಕವೂ 9 MMTPA ತೈಲವನ್ನು ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಿರಲಿದೆ. ಅತ್ಯುನ್ನತ ಪರಿಸರ ಸ್ನೇಹಿ ಗುಣಮಟ್ಟವನ್ನು ಹೊಂದಿರುವ ಮೋಟಾರ್ ಇಂಧನವನ್ನು ಸಂಸ್ಕರಿಸುವುದು ಈ ಘಟಕದ ಮುಖ್ಯ ಕಾರ್ಯವಾಗಿದೆ.

**ಬಿಲಿಯನೇರ್ ಸಂಖ್ಯೆ ಭಾರತಕ್ಕೆ ಐದನೇ ಸ್ಥಾನ**

150 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಆಸ್ತಿಯನ್ನು ಹೊಂದಿರುವ ಬಿಲಿಯನೇರ್ ಪಟ್ಟಿಯಲ್ಲಿ ಭಾರತ ವಿಶ್ವದಲ್ಲೇ 5 ನೇ ಸ್ಥಾನದಲ್ಲಿದೆ. ಜಾಗತಿಕ ಆಸ್ತಿ ಸಮೀಕ್ಷೆ ಸಂಸ್ಥೆ ನೈಟ್ ಫ್ರಾಂಕ್ ಶ್ರೀಮಂತರ ವರದಿ (Knight Frank Wealth Report)-2013 ರಲ್ಲಿ ಭಾರತಕ್ಕೇ ಐದನೇ ಸ್ಥಾನ ಲಭಿಸಿದೆ.

- ಈ ವರದಿಯ ಪ್ರಕಾರ 2012 ರಲ್ಲಿ ಭಾರತದಲ್ಲಿ 122 ಬಿಲಿಯನೇರ್ ಗಳಿದ್ದು, 2022 ರ ಹೊತ್ತಿಗೆ 225 ಕ್ಕೆ ಏರಿಕೆಯಾಗಲಿದೆ ಎಂದು ಹೇಳಲಾಗಿದೆ.

- ಅತಿ ಹೆಚ್ಚು ಬಿಲಿಯನೇರ್ ಗಳನ್ನು ಹೊಂದಿರುವ ವಿಶ್ವದ ಹತ್ತು ರಾಷ್ಟ್ರಗಳ ಪೈಕಿ ಆಮೆರಿಕಾ ಮೊದಲ ಸ್ಥಾನದಲ್ಲಿದೆ. ಆಮೆರಿಕಾ 543 ಕೋಟ್ಯಾಧೀಶರನ್ನು ಹೊಂದಿದೆ. 154 ಬಿಲಿಯನೇರ್ ಗಳನ್ನು ಹೊಂದಿರುವ ಚೀನಾ ಎರಡನೇ ಸ್ಥಾನದಲ್ಲಿದೆ.
- ದೇಶದಲ್ಲಿ ಆರ್ಥಿಕ ಹಿಂಜರಿತ ಇದ್ದರೂ ಭಾರತದಲ್ಲಿ ಶ್ರೀಮಂತರ ಸಂಖ್ಯೆ ಹೆಚ್ಚಳಗೊಳ್ಳಲಿದೆ. ಮುಂಬೈನಲ್ಲಿ ಇಂತಹ ಶ್ರೀಮಂತರ ಸಂಖ್ಯೆ ಶೇ.137 ರಷ್ಟು ಹೆಚ್ಚಳಗೊಳ್ಳಲಿದ್ದರೆ, ದೆಹಲಿಯಲ್ಲಿ ಶೇ.120 ರಷ್ಟು ಏರಿಕೆಯಾಗಲಿದೆ ಎಂದು ವರದಿಯಲ್ಲಿ ಅಂದಾಜಿಸಲಾಗಿದೆ.
- ಅತಿ ಹೆಚ್ಚು ಶ್ರೀಮಂತರರನ್ನು ಹೊಂದಿರುವ ವಿಶ್ವದ 30 ನಗರಗಳ ಪೈಕಿ ಮುಂಬೈಗೆ 9 ನೇ ಸ್ಥಾನ ದೊರತಿದೆ. ರಾಷ್ಟ್ರದ ರಾಜಧಾನಿ ದೆಹಲಿಗೆ 11 ನೇ ಸ್ಥಾನ ಲಭಿಸಿದೆ.

ನೈಟ್ ಫ್ರಾಂಕ್ ಶ್ರೀಮಂತರ ವರದಿಯಲ್ಲಿರುವ ಟಾಪ್ 10 ದೇಶಗಳು:

- ಆಮೆರಿಕಾ, ಚೀನಾ, ಜರ್ಮನಿ, ಬ್ರಿಟನ್, ಭಾರತ, ಬ್ರೆಜಿಲ್, ರಷ್ಯಾ, ಹಾಂಕಾಂಗ್, ಇಂಡೋನೇಷಿಯಾ ಮತ್ತು ಸ್ವಿಟ್ಜರ್ಲ್ಯಾಂಡ್.

**<u>ಲಿಂಗ ಅಸಮಾನತೆ ಸೂಚ್ಯಂಕ (Gender Inequality Index): ಭಾರತಕ್ಕೆ 132 ನೇ ಸ್ಥಾನ</u>**

"ಯುನೈಟೆಡ್ ನೇಷಸ್ ಡೆವಲಪ್ ಮೆಂಟ್ ಪ್ರೋಗ್ರಾಮ್ (United Nation Development Programme)" ಹೊರತರುವ ಮಾನವ ಅಭಿವೃದ್ಧಿ ವರದಿಯನ್ನು ಬಿಡುಗಡೆಗೊಳಿಸಲಾಗಿದ್ದು, ಲಿಂಗ ಅಸಮಾನತೆಯಲ್ಲಿ ಭಾರತ ಮತ್ತೊಮ್ಮೆ ತಲೆ ತಗ್ಗಿಸುವತಾಂಗಿದೆ. ಮಾನವ ಅಭಿವೃದ್ಧಿ ವರದಿ-2013 ರಂತೆ 187 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 132 ನೇ ಸ್ಥಾನ ಲಭಿಸಿದೆ. ವಿಪರ್ಯಾಸವೆಂದರೆ ಪಾಕಿಸ್ತಾನ 123 ನೇ ಸ್ಥಾನಗಳಿಸಿ ಭಾರತಕ್ಕಿಂತ ಮೇಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ 136 ನೇ ಸ್ಥಾನದಲ್ಲಿದೆ.

- ದಕ್ಷಿಣ ಏಷ್ಯಾ ದೇಶಗಳ ಪೈಕಿ ಆಪ್ಘಾನಿಸ್ತಾನವನ್ನು (147 ನೇ ಸ್ಥಾನ) ಹೊರತುಪಡಿಸಿ ಉಳಿದೆಲ್ಲಾ ದೇಶಗಳು ಭಾರತಕ್ಕಿಂತ ಉತ್ತಮ ಸಾಧನೆ ಮಾಡಿವೆ. ಭಾರತದ ನೆರೆಯ ದೇಶಗಳಾದ ಶ್ರೀಲಂಕಾ (75), ನೇಪಾಳ (102) ಮತ್ತು ಬಾಂಗ್ಲದೇಶ (111 ನೇ) ಸ್ಥಾನದಲ್ಲಿವೆ.
- ಆಮೆರಿಕಾ 42 ನೇ ಸ್ಥಾನ ಮತ್ತು ಚೀನಾ 35 ನೇ ಸ್ಥಾನದಲ್ಲಿವೆ.

ಲಿಂಗ ಅಸಮಾನತೆ ಸೂಚ್ಯಂಕ:

- ಲಿಂಗ ಅಸಮಾನತೆ ಸೂಚ್ಯಂಕವನ್ನು ಪ್ರಮುಖವಾಗಿ ಮೂರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ತಯಾರಿಸಲಾಗುತ್ತದೆ. ಮಹಿಳೆಯರ ಆರೋಗ್ಯ, ಮಹಿಳಾ ಸಬಲೀಕರಣ ಮತ್ತು ಕಾರ್ಮಿಕ ವಲಯದಲ್ಲಿ ಮಹಿಳೆಯರ ಪಾಲು ಇವೇ ಮೂರು ಪ್ರಮುಖ ಅಂಶಗಳು.

ಭಾರತದಲ್ಲಿ ಅಧಿಕ ಲಿಂಗ ಅಸಮಾನತೆಗೆ ಕಾರಣಗಳು:

- ಲಿಂಗ ಅನುಪಾತ (Sex Ratio): ಹೆಣ್ಣು ಭ್ರೂಣ ಹತ್ಯೆಯಂತ ಹೀನಾ ಕೃತ್ಯದಿಂದಾಗಿ ಭಾರತದ ಲಿಂಗ ಅನುಪಾತ ಶೋಚನಿಯ ಸ್ಥಿತಿಯಲ್ಲಿದೆ. 2011 ರ ಜನಗಣತಿ ಪ್ರಕಾರ ದೇಶದ ಲಿಂಗ ಅನುಪಾತ 940.

- ಸಂಸತ್ತಿನಲ್ಲಿ ಮಹಿಳೆಯರ ಪಾಲು: ಭಾರತದ ಸಂಸತ್ತಿನಲ್ಲಿ ಮಹಿಳೆಯರ ಪಾಲು ಶೇ.10.9 ಮಾತ್ರ. ಆದರೆ ಪಾಕಿಸ್ತಾನದಲ್ಲಿ ಈ ಪ್ರಮಾಣ ಶೇ.21.1 ರಷ್ಟಿದ್ದರೆ, ನೇಪಾಳದಲ್ಲಿ ಶೇ.33.3 ರಷ್ಟಿದೆ.
- ಕಾರ್ಮಿಕ ವಲಯ: ದೇಶದ ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ 15 ಅಥವಾ ಅದಕ್ಕಿಂತ ಮೇಲ್ಪಟ್ಟ ಮಹಿಳೆಯರ ಪಾಲು ಶೇ.29 ರಷ್ಟು ಮಾತ್ರ.
- ಶೈಕ್ಷಣಿಕ ಮಟ್ಟ: 25 ವರ್ಷ ಮೇಲ್ಪಟ್ಟ ಮಹಿಳೆಯರ ಪೈಕಿ ಶೇ.26.6 ರಷ್ಟು ಮಹಿಳೆಯರು ಮಾತ್ರ ಮಾಧ್ಯಮಿಕ ಶಿಕ್ಷಣವನ್ನು ಪಡೆಯಲು ಯಶಸ್ವಿಯಾಗಿದ್ದಾರೆ. ಈ ಪ್ರಮಾಣ ಆಮೆರಿಕಾದಲ್ಲಿ ಶೇ.94.7 ರಷ್ಟು ಮತ್ತು ಚೀನಾದಲ್ಲಿ ಶೇ.54.8 ರಷ್ಟಿದೆ.
- ತಾಯಂದಿರ ಮರಣ ಪ್ರಮಾಣ: ಭಾರತದಲ್ಲಿ ತಾಯಂದಿರ ಮರಣ ಪ್ರಮಾಣ 200 ಇದೆ (ಪ್ರತಿ ಲಕ್ಷ ಮಕ್ಕಳು ಜನನಕ್ಕೆ). ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಇದು ಅತ್ಯಧಿಕವಾಗಿದೆ.

**ಗೋವಾ ವಿಧಾನ ಸಭೆಗೆ 50 ವರ್ಷ:**

- ಗೋವಾ ವಿಧಾನ ಸಭೆಗೆ 50 ವರ್ಷ ತುಂಬಲಿರುವ ಕಾರಣ ಈ ವರ್ಷ ಕಾಲ ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ. ಗೋವಾ ವಿಧಾನ ಸಭೆ ಸ್ಪೀಕರ್ ರಾಜೇಂದ್ರ ಅರ್ಲೇಕರ್ ಈ ವಿಷಯವನ್ನು ಖಚಿತಪಡಿಸಿದ್ದಾರೆ. ಸಾಂಪ್ರದಾಯಿಕ ಜ್ಯೋತಿ ಬೆಳಗುವ ಮೂಲಕ ಪಣಜಿ ಯಲ್ಲಿ ಈ ಸಂಭ್ರಮಕ್ಕೆ ಚಾಲನೆ ನೀಡಲಾಗುವುದು.
- 1961 ರಲ್ಲಿ ಪೋರ್ಚಗೀಸರಿಂದ ಗೋವಾ ವಿಮೋಚನೆ ಹೊಂದಿದ ನಂತರ ಜನವರಿ 9, 1964 ರಲ್ಲಿ ಮೊದಲ ಬಾರಿಗೆ ವಿಧಾನ ಸಭೆ ಸೇರಿತ್ತು. 1961 ರಲ್ಲಿ ಪೋರ್ಚಗೀಸರಿಂದ ಮುಕ್ತಿ ಹೊಂದಿದ ಮೇಲೆ ಲೆಪ್ಟಿನೆಂಟ್ ಜನರಲ್ ಕಾಂಡೆತ್ ರವರ ನೇತೃತ್ವದಲ್ಲಿ ಮಿಲಿಟರಿ ಆಡಳಿತಕ್ಕೆ ಒಳಪಡಿಸಲಾಗಿತ್ತು.
- ಆದರೆ ಜೂನ್ 8, 1962 ರಲ್ಲಿ ಮಿಲಿಟರಿ ಆಡಳಿತವನ್ನು ಕೈಬಿಟ್ಟು ನಾಗರಿಕ ಸರ್ಕಾರವನ್ನು ಸ್ಥಾಪಿಸಲಾಗಿತು. ಇದಕ್ಕಾಗಿ ಲೆಪ್ಟಿನೆಂಟ್ ಜನರಲ್ ರವರು Informal Consultative Committee ಯನ್ನು ರಚಿಸಿ ಆಡಳಿತ ಸಹಾಯಕ್ಕಾಗಿ 29 ಜನ ಸದಸ್ಯರನ್ನು ನೇಮಕಮಾಡಿದರು.
- 1987 ರಲ್ಲಿ ಕೇಂದ್ರಾಡಳಿತ ಪ್ರದೇಶವಾದ ಗೋವಾ ರಾಜ್ಯವಾಗಿ ಉದಯಿಸಿದಾಗ ಸದಸ್ಯರ ಸಂಖ್ಯೆನ್ನು 40 ಕ್ಕೆ ಹೆಚ್ಚಿಸಲಾಯಿತು.

**ಇಂಧನ ಭದ್ರತೆ ನೀತಿ ರೂಪಿಸಲು: ಕೇಳ್ಕರ್ ಸಮಿತಿ ನೇಮಕ**

ಇಂಧನ ಭದ್ರತೆ ನೀತಿಯನ್ನು (Energy Security Policy) ರೂಪಿಸುವ ಸಲುವಾಗಿ ಸಲಹೆಗಳನ್ನು ಶಿಫಾರಸ್ಸು ಮಾಡಲು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆರ್ಥಿಕ ತಜ್ಞ ವಿಜಯ್ ಕೇಳ್ಕರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದೆ. ಸಮಿತಿಯು ಕೆಳಕಂಡ ಅಂಶಗಳ ಬಗ್ಗೆ ವರದಿಯನ್ನು ಸಲ್ಲಿಸಲಿದೆ.

- ಇಂಧನ ಭದ್ರತೆಯನ್ನು ಸಾಧಿಸುವ ಸಲುವಾಗಿ ರಾಷ್ಟ್ರೀಯ ನೀತಿಯನ್ನು ರೂಪಿಸುವುದು ಮತ್ತು ದೇಶದಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ 2030 ರ ವೇಳೆಗೆ ತೈಲ ಮತ್ತು ಅನಿಲ ಆಮದುವನ್ನು ಕಡಿಮೆಗೊಳಿಸಲು ಮಾರ್ಗಸೂಚಿ ತಯಾರಿಸುವುದು.
- ತೈಲ ಉದ್ಯಮ ಅಭಿವೃದ್ಧಿ ಮಂಡಳಿ (Oil Industry Development Board) ನ ಸೆಸ್ ಬಳಕೆ ಸೇರಿದಂತೆ ದೇಶಿಯ ತೈಲ ಕೈಗಾರಿಕೆ ಮತ್ತು ಸೇವಾ ವಲಯನ್ನು ಉತ್ತೇಜಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಶಿಫಾರಸ್ಸು ಮಾಡುವುದು.
- ವಿದೇಶದಲ್ಲಿ ತೈಲ ಮತ್ತು ಅನಿಲ ಸಂಪನ್ಮೂಲಗಳ ಸ್ವಾಧೀನಪಡಿಸಿಕೊಳ್ಳಲು ಮತ್ತು ನೆರೆಯ ರಾಷ್ಟ್ರಗಳಿಂದ ಕೊಳವೆ ಮಾರ್ಗ ಮೂಲಕ ಅನಿಲವನ್ನು ಆಮದು ಮಾಡಿಕೊಳ್ಳಲು ರಾಜತಾಂತ್ರಿಕ ನೀತಿಯನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು ಸಮಿತಿಗೆ ನೀಡಲಾಗಿದೆ.
- ಸಮಿತಿಯು ತನ್ನ ಶಿಫಾರಸ್ಸನ್ನು ಮುಂದಿನ 6 ತಿಂಗಳೊಳಗೆ ಸಲ್ಲಿಸಲು ಸೂಚಿಸಲಾಗಿದೆ.

**ಬಡತನ ಸುಧಾರಣೆಯಲ್ಲಿ ಭಾರತ: ಆಕ್ಸ್ ಫರ್ಡ್ ವಿ.ವಿ ಸಂಶೋಧನೆ**

ಭಾರತವೂ 1999-2006 ರ ಅವಧಿಯಲ್ಲಿ ಬಡತನವನ್ನು ನಿವಾರಿಸುವಲ್ಲಿ ಸಾಕಷ್ಟು ಯಶಸ್ಸು ಕಂಡಿದೆ ಎಂದು ಆಕ್ಸ್ ಫರ್ಡ್ ವಿಶ್ವ ವಿದ್ಯಾಲಯ ನಡೆಸಿರುವ ಸಂಶೋಧನೆಯಿಂದ ತಿಳಿದು ಬಂದಿದೆ. ಆದರೆ ಬಡತನ ನಿರ್ಮೂಲನ ವೇಗ ನೆರೆಯ ರಾಷ್ಟ್ರಗಳಾದ ನೇಪಾಳ ಮತ್ತು ಬಾಂಗ್ಲಾದೇಶಗಳಿಗೆ ಹೋಲಿಸಿದರೆ ಒಂದನೇ ಮೂರರಷ್ಟು ಕಡಿಮೆ ಇದೆ ಎಂದು ಹೇಳಲಾಗಿದೆ.

ಸಂಶೋಧನೆಯ ಪ್ರಮುಖ ಅಂಶಗಳು:

- ಆಕ್ಸ್ ಫರ್ಡ್ ವಿವಿಯ " ಆಕ್ಸ್ ಫರ್ಡ್ ಪಾವರ್ಟಿ ಆಂಡ್ ಹ್ಯೂಮನ್ ಡೆವಲಪ್ ಮೆಂಟ್ ಇನಿಶಿಯೆಟಿವ್" ಸಂಸ್ಥೆ ನಡೆಸಿದ ಅಧ್ಯಯನದಂತೆ ಭಾರತದ ನೆರೆಯ ನೇಪಾಳ ಮತ್ತು ಬಾಂಗ್ಲದೇಶ ಬಡತನ ತೊಳೆದು ಹಾಕುವಲ್ಲಿ ಮುಂಚೂಣಿಯಲ್ಲಿವೆ.
- ಬಡತನ ಹೋಗಲಾಡಿಸುವ ಭಾರತದ ವೇಗದ ಪ್ರಮಾಣ 1.2 ರಷ್ಟಿದ್ದರೆ, ನೇಪಾಳದಲ್ಲಿ ಈ ಪ್ರಮಾಣ ಶೇ.4.1 ರಷ್ಟು ಮತ್ತು ಬಾಂಗ್ಲಾದಲ್ಲಿ ಶೇ.3.2 ರಷ್ಟಿದೆ.
- ನೇಪಾಳ ಮತ್ತು ಬಾಂಗ್ಲಾ ವಾಸ್ತವದಲ್ಲಿ ಆರ್ಥಿಕ ಮುಗ್ಗಟ್ಟು ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ ಸಾಮಾಜಿಕ ಸಬಲೀಕರಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಮೂಲಕ ಪ್ರಗತಿ ಸಾಧಿಸಿವೆ.
- ಭಾರತದಲ್ಲಿ ಬಡತನವನ್ನು ಹೋಗಲಾಡಿಸುವ ಪ್ರಯತ್ನದಲ್ಲಿ ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳು ಮುಂಚೂಣಿಯಲ್ಲಿವೆ. ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ರಾಜಸ್ತಾನ ಮತ್ತು ಬಿಹಾರ್ ರಾಜ್ಯಗಳಲ್ಲಿ ಬಡತನ ನಿವಾರಣೆ ಪ್ರಗತಿ ತೃಪ್ತಿಕರವಾಗಿಲ್ಲ. ಅಲ್ಲದೇ ಮಹಿಳಾ ಪ್ರಧಾನ ಕುಟುಂಬ, ಪರಿಶಿಷ್ಟ ಪಂಗಡ ಮತ್ತು ಮುಸ್ಲಿಂ ಜನಾಂಗಗಳಲ್ಲೂ ಬಡತನ ಅಳಿಯದೇ ಉಳಿದಿದೆ.

ಸಂಶೋಧನೆ ಹೇಗೆ?

- ಬಡತನವನ್ನು ಹೋಗಲಾಡಿಸಲು ಕೈಗೊಂಡಿರುವ ಉಪಕ್ರಮ ಮತ್ತು ಅದರ ವೇಗವನ್ನು ಅಳೆಯಲು ಜಾಗತಿಕವಾಗಿ ಬಳಕೆ ಮಾಡುವಂತಹ "ಬಹು ಬಗೆಯ ಬಡತನ ಸೂಚಿ (Multidimensional Poverty Index)ನ್ನು ಬಳಸಲಾಗಿದೆ.

- ಈ ವಿಧಾನದಲ್ಲಿ ಶಿಕ್ಷಣ, ಅಪೌಷ್ಠಿಕತೆ, ಶೌಚಾಲಯ ಮುಂತಾದ ಅಂಶಗಳ ಆಧಾರದ ಮೇಲೆ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತದೆ.
- ಈ ವಿಧಾನದ ಸಮೀಕ್ಷೆಯನ್ನು ಒಟ್ಟು 22 ದೇಶಗಳಲ್ಲಿ ನಡೆಸಲಾಗಿದೆ.

**ಅಪರಾಧ ಕಾನೂನು (ತಿದ್ದುಪಡಿ) ಮಸೂದೆ-2013 ಗೆ ಲೋಕಸಭೆ ಅಂಗೀಕಾರ**

ಅತ್ಯಚಾರಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುವ ಅಥವಾ ಕಠಿಣ ಶಿಕ್ಷೆಗೆ ಒಳಪಡಿಸುವ ಅಪರಾಧ ಕಾನೂನು (ತಿದ್ದುಪಡಿ) ಮಸೂದೆ-2013 ನ್ನು ಲೋಕಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗಿದೆ. ಶೀಘ್ರವೇ ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆಯುವ ವಿಶ್ವಾಸ ವ್ಯಕ್ತವಾಗಿದೆ. ಈ ಮಸೂದೆಯು ಫೆಬ್ರವರಿ 3 ರಂದು ಕೇಂದ್ರ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆಯ ಬದಲಿಗೆ ಜಾರಿಗೆ ಬರಲಿದೆ. ಸುಗ್ರೀವಾಜ್ಞೆಯ ಅವಧಿ ಏ.4 ಕ್ಕೆ ಅಂತ್ಯಗೊಳ್ಳಲಿದ್ದು, ಈ ವೇಳೆಯ ಒಳಗೆ ಸುಗ್ರೀವಾಜ್ಞೆ ಕಾನೂನು ರೂಪ ಪಡೆಯಲು ಸಂಸತ್ತಿನ ಎರಡೂ ಸದನಗಳ ಅನುಮೋದನೆ ಅಗತ್ಯವಿದೆ.

ಮಸೂದೆಯಲ್ಲಿ ಏನಿದೆ?

- ಈ ಮಸೂದೆಯಲ್ಲಿ ಭಾರತ ದಂಡ ಸಂಹಿತೆ, ಅಪರಾಧಿ ನಿಯಮ ಸಂಹಿತೆ, ಭಾರತೀಯ ಸಾಕ್ಷ್ಯ ಕಾನೂನು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾನೂನಿನಲ್ಲಿ ತಿದ್ದುಪಡಿ ತರಲಾಗುವುದು.
- ಚರ್ಚೆ ಮತ್ತು ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ ಸಮ್ಮತಿಯ ಲೈಂಗಿಕ ಕ್ರಿಯೆಯ ವಯೋಮಿತಿಯನ್ನು 18 ವರ್ಷಕ್ಕೆ ನಿಗದಿಪಡಿಸಲಾಗಿದೆ. 16 ವರ್ಷಕ್ಕೆ ಇಳಿಸುವ ಕ್ರಮಕ್ಕೆ ಭಾರಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.
- ಅತ್ಯಾಚಾರ ಪ್ರಕರಣದಲ್ಲಿ ಸಾಬೀತಾಗುವ ಅಪರಾಧಿಗಳಿಗೆ ಕನಿಷ್ಠ 20 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಶಿಕ್ಷೆ ಮತ್ತು ಗಂಭೀರ ಪ್ರಕರಣಗಳಲ್ಲಿ ಗಲ್ಲು ಶಿಕ್ಷೆ ವಿಧಿಸುವ ಅವಕಾಶ.
- ಮಹಿಳೆಯರನ್ನು ಚುಡಾಯಿಸುವುದು, ಅಸಭ್ಯವಾಗಿ ವರ್ತಿಸುವುದು, ಅಶ್ಲೀಲ ಪದಗಳಿಂದ ನಿಂದಿಸುವುದು, ಲೈಂಗಿಕ ಕ್ರಿಯೆಯನ್ನು ಕದ್ದುನೋಡುವ ಮೊದಲ ಅಪರಾಧಕ್ಕೆ ಜಾಮೀನು ಮತ್ತು ಅಪರಾಧ ಪುನರಾವರ್ತನೆಯಾದರೆ ಜಾಮೀನು ರಹಿತ ಅಪರಾಧವೆಂದು ಪರಿಗಣನೆ.
- ಆಸಿಡ್ ದಾಳಿಗೆ ಅಪರಾಧಿಗೆ 10 ವರ್ಷ ಜೈಲು.
- ಅತ್ಯಾಚಾರ ಮತ್ತು ಆಸಿಡ್ ದಾಳಿಗೆ ಒಳಗಾದ ಮಹಿಳೆಗೆ ಯಾವುದೇ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಮತ್ತು ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ನೀಡುವುದು. ಇದನ್ನು ನಿರಾಕರಿಸಿದ ವೈದ್ಯ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಮತ್ತು 1 ವರ್ಷ ಜೈಲು ಶಿಕ್ಷೆ.
- ಆಸಿಡ್ ದಾಳಿ ಪ್ರಯತ್ನದಲ್ಲಿ ಮಹಿಳೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಎಲ್ಲಾ ರೀತಿಯ ಕಾನೂನು ಅವಕಾಶ.

**ಭಾರತ ಮತ್ತು ಈಜಿಪ್ಟ್ ನಡುವೆ ಏಳು ಒಪ್ಪಂದಕ್ಕೆ ಸಹಿ**

ಆರ್ಥಿಕ ಮತ್ತು ಸೇನಾ ವಿಭಾಗದಲ್ಲಿ ಪರಸ್ಪರ ದ್ವಿಪಕ್ಷೀಯ ಸಂಬಂಧ ಸುದಾರಣೆ, ಸೈಬರ್ ಭದ್ರತೆ ಸೇರಿದಂತೆ ಭಾರತ ಮತ್ತು ಈಜಿಪ್ಟ್ ಒಟ್ಟು ಏಳು ಪ್ರಮುಖವಾದ ಒಪ್ಪಂದಗಳಿಗೆ ಸಹಿ ಹಾಕಿವೆ. ಭಾರತದ ಅಧಿಕೃತ ಪ್ರವಾಸ ಕೈಗೊಂಡಿರುವ ಈಜಿಪ್ಟ್ ನ ಅಧ್ಯಕ್ಷ ಮೊಹಮ್ಮದ್ ಮೊರ್ಸಿ ಮತ್ತು ಭಾರತದ ಪ್ರಧಾನ ಮಂತ್ರಿಗಳಾದ ಮನ ಮೋಹನ್ ಸಿಂಗ್ ಅವರು ನವದೆಹಲಿಯಲ್ಲಿ ಈ ಒಪ್ಪಂದಗಳಿಗೆ ಸಹಿ ಹಾಕಿದರು.

ಒಪ್ಪಂದಗಳ ಬಗ್ಗೆ:

- ಈಜಿಪ್ಟ್ ನ ಮಹತ್ವಾಕಾಂಕ್ಷೆ ಸೂಯೆಜ್ ಕಾಲುವೆ ವ್ಯಾಪಾರ ಮತ್ತು ಮುಕ್ತ ವಲಯ ನಿರ್ಮಾಣ ಯೋಜನೆಯಲ್ಲಿ ಭಾರತದ ಬಂಡವಾಳ ಹೂಡಿಕೆ ಅವಕಾಶ ಕಲ್ಪಿಸುವುದು.
- ಸೈಬರ್ ಭದ್ರತೆ ಸೇರಿದಂತೆ ಅತ್ಯುನ್ನತ ಮಾಹಿತಿ ತಂತ್ರಜ್ಞಾನ ಕೇಂದ್ರವನ್ನು ಈಜಿಪ್ಟ್ ನ ಅಲ್ ಅಜರ್ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವುದು.
- ರಕ್ಷಣಾ ಕ್ಷೇತ್ರದಲ್ಲಿ ವಿನಿಮಯ ಮತ್ತು ಪರಸ್ಪರ ಸಹಕಾರ, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಾನಿಕ್ ಹಾಗೂ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ಸೇರಿದಂತೆ ಒಪ್ಪಂದಕ್ಕೆ ಸಹಿಹಾಕಲಾಗಿದೆ.

**ಆಹಾರ ಭದ್ರತಾ ಕರಡು ಮಸೂದೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ**

ದೇಶದ ಶೇ.70 ರಷ್ಟು ಜನರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವ ಯುಪಿಎ ಸರ್ಕಾರದ ಮಹತ್ವದ ಯೋಜನೆಯಾದ "ಆಹಾರ ಭದ್ರತಾ ಕರಡು ಮಸೂದೆ (Food Security Draft Bill) ಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಪ್ರಧಾನಿ ಮನ ಮೋಹನ್ ಸಿಂಗ್ ರವರು ಅಧ್ಯಕ್ಷತೆ ವಹಿಸಿದ್ದ ಸಚಿವ ಸಂಪುಟ ಇದಕ್ಕೆ ಅನುಮೋದನೆ ನೀಡಿದ್ದು, ಸಂಸತ್ತಿನಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗುವುದು ಎಂದು ಕೇಂದ್ರ ಆಹಾರ ಖಾತೆ ಸಚಿವ ಕೆ.ವಿ.ಥಾಮಸ್ ಹೇಳಿದ್ದಾರೆ.

ಯೋಜನೆಯ ಮಹತ್ವ:

- ಆಹಾರ ಭದ್ರತಾ ಮಸೂದೆಯ ಅನ್ವಯ ಅಕ್ಕಿ, ಗೋಧಿ ಮತ್ತು ಧಾನ್ಯಗಳನ್ನು ಪಡಿತರ ವ್ಯವಸ್ಥೆ ಮೂಲಕ ತಲಾ 3 ರೂಪಾಯಿ, 2 ರೂಪಾಯಿ ಮತ್ತು 1 ರೂಪಾಯಿಯಂತೆ ವಿತರಿಸಲಾಗುವುದು.
- ಪ್ರತಿ ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ತಲಾ 5 ಕೆ.ಜಿ ಯಂತೆ ಆಹಾರ ಧಾನ್ಯಗಳನ್ನು ನೀಡಲಾಗುವುದು. ಮುಂದಿನ ಮೂರು ವರ್ಷಗಳ ತನಕ ಈ ಆಹಾರ ಧಾನ್ಯಗಳ ಬೆಲೆಯಲ್ಲಿ ಯಾವುದೇ ಏರಿಕೆ ಇರುವುದಿಲ್ಲ.
- ಫಲಾನುಭವಿಗಳನ್ನು ಆದ್ಯತಾ ಮತ್ತು ಸಾಮಾನ್ಯವೆಂಬ ಗುಂಪುಗಳನ್ನು ಕೈಬಿಟ್ಟು ಕುಟುಂಬದ ಪ್ರತಿ ಸದಸ್ಯರಿಗೆ ತಲಾ 5 ಕೆ.ಜಿ ಯಂತೆ ವಿತರಿಸಲಾಗುವುದು.
- ಈ ಯೋಜನೆಯಿಂದ ಸರ್ಕಾರದ ಮೇಲೆ ರೂ. 24000 ಕೋಟಿ ಅಧಿಕ ಹೊರೆ ಬೀಳಲಿದೆ. ಜೊತೆಗೆ ಈ ಯೋಜನೆಯ ಅನುಷ್ಠಾನಕ್ಕೆ 61.23 ದಶ ಲಕ್ಷ ಟನ್ ಆಹಾರ ಧಾನ್ಯಗಳ ಅವಶ್ಯಕತೆ ಉಂಟಾಗಲಿದೆ.

**1993 ಮುಂಬೈ ಸರಣಿ ಸ್ಫೋಟ ಯಾಕೂಬ್ ಮೆನನ್ ಗೆ ಗಲ್ಲು, ಸಂಜಯ್ ದತ್ ಗೆ ಐದು ವರ್ಷ ಜೈಲು**

1993 ರಂದು ಮುಂಬೈನಲ್ಲಿ ಸಂಭವಿಸಿದ ಸರಣಿ ಸ್ಫೋಟದ ಹಿನ್ನಲೆಯಲ್ಲಿ ಬಂಧಿತನಾಗಿರುವ ಆರೋಪಿ ಯಾಕೂಬ್ ಮೆನನ್ ಗೆ ಸುಪ್ರೀಂ ಕೋರ್ಟ್ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿದೆ. ಈ ಭೀಕರ ಸರಣಿ ಸ್ಫೋಟದ ಹಿಂದೆ ಯಾಕೂಬ್ ಕೈವಾಡವಿರುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಕೋರ್ಟ್ ತಿಳಿಸಿದೆ.

- ಟಾಡಾ (Terrorist and Disruptive Activities Act) ಕೋರ್ಟ್ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದ ಆದೇಶವನ್ನು ಯಾಕೂಬ್ ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಆದರೆ ಸುಪ್ರೀಂ ಕೋರ್ಟ್ ಟಾಡಾ ಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ.
- ಇದೇ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಹತ್ತು ಅಪರಾಧಿಗಳ ಮರಣದಂಡನೆ ಶಿಕ್ಷೆಯನ್ನು ಕೋರ್ಟ್ ಜೀವಾವಧಿ ಶಿಕ್ಷೆಗೆ ಇಳಿಕೆ ಮಾಡಿದೆ.
- 1993 ರ ಮಾರ್ಚನಲ್ಲಿ ಮುಂಬೈನಲ್ಲಿ ನಡೆದ ಈ ಘೋರ ಕೃತ್ಯದಲ್ಲಿ 13 ಸ್ಥಳಗಳಲ್ಲಿ ಸ್ಫೋಟ ಸಂಭವಿಸಿತ್ತು. ಈ ಸರಣಿ ಸ್ಫೋಟದಲ್ಲಿ 257 ಮಂದಿ ಮೃತಪಟ್ಟರೆ, 713 ಜನ ಗಾಯಗೊಂಡಿದ್ದರು.

**ಸಂಜಯ್ ದತ್ ಗೆ ಐದು ವರ್ಷ ಜೈಲು ಸಜೆ**

- ಇದೇ ವೇಳೆ ಮುಂಬೈ ಸರಣಿ ಸ್ಫೋಟಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟ ಸಂಜಯ್ ದತ್ ಗೆ ಐದು ವರ್ಷಗಳ ಜೈಲು ಶಿಕ್ಷೆಯನ್ನು ಸುಪ್ರೀಂ ಕೋರ್ಟ ವಿಧಿಸಿದೆ. ನ್ಯಾಯಾಧೀಶರಾದ ಪಿ.ಎಸ್. ಸದಾಶಿವಂ ಮತ್ತು ಬಿ.ಎಸ್.ಚೌಹಣ್ ರವರನ್ನೊಳಗೊಂಡ ಪೀಠ ಈ ತೀರ್ಪನ್ನು ನೀಡಿದೆ. 53 ವರ್ಷದ ಸಂಜಯ್ ದತ್ ರವರು ಅಕ್ರಮವಾಗಿ ೯ಎಂಎಂ ಪಿಸ್ತೂಲ್ ಹಾಗೂ ಎಕೆ 56 ರೈಫಲ್ ನ್ನು ಹೊಂದಿದ್ದ ಆರೋಪ ಸಾಬೀತಾದ ಹಿನ್ನಲೆಯಲ್ಲಿ ಟಾಡಾ ಕೋರ್ಟ ಆದೇಶದ ಅನ್ವಯ ಅವರನ್ನು ಬಂಧಿಸಲಾಗಿತ್ತು. 2007 ರಲ್ಲಿ ಟಾಡಾ ಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಂಜಯ್ ದತ್ ರವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು ಅಲ್ಲದೇ ಜಾಮೀನು ಸಹ ಪಡೆದುಕೊಂಡಿದ್ದರು.
- ಈಗಾಗಲೇ 18 ತಿಂಗಳು ಸೆರೆಮನೆ ವಾಸ ಅನುಭವಿಸಿರುವ ಸಂಜಯ್ ದತ್ ರವರು ಇನ್ನೂ ಮೂರು ವರ್ಷ 6 ತಿಂಗಳ ಕಾಲ ಜೈಲು ಶಿಕ್ಷೆ ಅನಿಭವಿಸಬೇಕಿದೆ.

**ಭಾರತದಲ್ಲಿ 68 ಮಿಲಿಯನ್ ಕೊಳಚೆ ನಿವಾಸಿಗಳು**

ಇತ್ತೀಚೆಗೆ ಬಿಡುಗಡೆ ಮಾಡಿರುವ ಜನಗಣತಿ ಅಂಕಿ ಅಂಶಗಳ ಪ್ರಕಾರ 2011 ರಲ್ಲಿ ಭಾರತದ ನಗರಗಳಲ್ಲಿ ಪ್ರತಿ ಆರು ಜನರಲ್ಲಿ ಒಬ್ಬರು ಕೊಳಚೆ ವಾಸಿಗಳಾಗಿದ್ದಾರೆ. ಅಂದರೆ ದೇಶದ ಸುಮಾರು 68 ದಶಲಕ್ಷ ಜನರು ಕೊಳಚೆ ಪ್ರದೇಶದಲ್ಲಿ ಜೀವನ ನಡೆಸುತ್ತಿದ್ದಾರೆ. ಖುಷಿಯ ವಿಚಾರವೆಂದರೆ 2011ರ ವೇಳೆಗೆ ಭಾರತದ ಒಟ್ಟು ನಗರ ಜನಸಂಖ್ಯೆಯಲ್ಲಿ ಶೇ.27.5 ರಷ್ಟು ಜನಸಂಖ್ಯೆ ಕೊಳಚೆಗೇರಿಯಲ್ಲಿ ವಾಸಿಸಲಿರುವರು ಎಂದು ಅಂದಾಜಿಸಲಾಗಿತ್ತು, ಆದರೆ ಜನಗಣತಿ ಅಂಕಿ ಅಂಶಗಳ ಪ್ರಕಾರ ಶೇ.17.4 ರಷ್ಟು ಮಾತ್ರ ಕೊಳಚೆ ವಾಸಿಗಳಾಗಿದ್ದಾರೆ.

ಅಂಕಿ ಅಂಶಗಳಲ್ಲೇನಿದೆ?

- ದೇಶದ ಸುಮಾರು 4,041 ನಗರಗಳ್ಳಲಿ ನಡೆಸಿರುವ ಈ ಜನಗಣತಿಯಲ್ಲಿ ಒರೋಬ್ಬರಿ 1.37 ಕೋಟಿ ಕುಟುಂಬಗಳು ಅಥವಾ ದೇಶದ ಒಟ್ಟು ನಗರ ಜನಸಂಖ್ಯೆಯಲ್ಲಿ ಶೇ.17.4 ರಷ್ಟು ಜನ ಸ್ಲಂನಲ್ಲಿ ವಾಸಿಸುತ್ತಿದ್ದಾರೆ.
- ಅಂಕಿ ಅಂಶಗಳ ಪ್ರಕಾರ ಆಂಧ್ರಪ್ರದೇಶ, ಚತ್ತೀಸ್ ಗರ್, ಮಧ್ಯಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರ ರಾಜ್ಯಗಳ ನಗರಗಳಲ್ಲಿ ಪ್ರತಿ ಐದು ಕುಟುಂಬಗಳಲ್ಲಿ ಒಂದು ಕುಟುಂಬ ಕೊಳಚೆ ಪ್ರದೇಶದಲ್ಲಿದೆ.
- ಭಾರತದ ರಾಜ್ಯಗಳ ಪೈಕಿ ಮಹಾರಾಷ್ಟ್ರ ಅತಿ ಹೆಚ್ಚು ಕೊಳಚೆ ನಿವಾಸಿ ಪ್ರದೇಶಗಳನ್ನು ಹೊಂದಿದೆ. ಕರ್ನಾಟಕ 3.7 ಮಿಲಿಯನ್ ಜನರಷ್ಟು ಕೊಳಚೆ ನಿವಾಸಿಗಳನ್ನು ಹೊಂದಿದೆ.
- ಅತಿ ಹೆಚ್ಚು ಕೊಳಚೆ ನಿವಾಸಿಗಳನ್ನು ಹೊಂದಿರುವ ನಗರಗಳ ಪೈಕಿ ಮುಂಬೈ ಅಗ್ರಸ್ಥಾನದಲ್ಲಿದೆ. ಮುಂಬೈನ ಜನಸಂಖ್ಯೆಯಲ್ಲಿ ಶೇ.41.3 ರಷ್ಟು ಕೊಳಚೆ ವಾಸಿಗಳು. ಶೇ. 30 ರಷ್ಟು ಕೊಳಚೆ ನಿವಾಸಿಗಳನ್ನು ಹೊಂದಿರುವ ಕೊಲ್ಕತ್ತಾ ಎರಡನೇ ಸ್ಥಾನದಲ್ಲಿದೆ. ಚೆನ್ನೈ, ದೆಹಲಿ ಮತ್ತು ಬೆಂಗಳೂರು ಕ್ರಮವಾಗಿ 3,4 ಮತ್ತು 5 ನೇ ಸ್ಥಾನದಲ್ಲಿವೆ.
- ಕೊಳೆಗೇರಿಯಲ್ಲಿ ಬದುಕುವ ಶೇ. 90 ಮಂದಿ ವಿದ್ಯುತ್ ಸಂಪರ್ಕ ಹೊಂದಿದ್ದಾರೆ. ಶೇ.70 ಮಂದಿ ಟೆಲಿವಿಷನ್ ಬಳಸುತ್ತಿದ್ದಾರೆ. ಶೇ.72.7 ಮಂದಿ ಟೆಲಿಫೋನ್ ಸೌಲಭ್ಯ ಹೊಂದಿದ್ದಾರೆ. ಶೇ.10.4 ಮಂದಿ ಕಂಪ್ಯೂಟರ್ ಮತ್ತು ಲ್ಯಾಪ್ ಟಾಪ್ ಬಳಸುತ್ತಿದ್ದಾರೆ.

ರಾಜೀವ್ ಆವಾಸ್ ಯೋಜನೆ:

- ದೇಶದ ನಗರಗಳಲ್ಲಿ ವಾಸಿಸುತ್ತಿರುವ ಕೊಳಚೆ ನಿವಾಸಿಗಳು ಮತ್ತು ನಗರ ಬಡವರ ಕಲ್ಯಾಣಕ್ಕಾಗಿಯೇ ಭಾರತ ಸರ್ಕಾರ 2009 ರಲ್ಲಿ "ರಾಜೀವ್ ಆವಾಸ್ ಯೋಜನೆ"ಯನ್ನು ಜಾರಿಗೊಳಿಸಿದೆ. ನಗರ ಪ್ರದೇಶಗಳನ್ನು ಕೊಳೆಗೇರಿ ಮುಕ್ತವನ್ನಾಗಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಸಚಿವಾಲಯ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಮಾರ್ಗಸೂಚಿಗಳನ್ನು ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಈಗಾಗಲೇ ರವಾನಿಸಿದೆ.

ರಾಜೀವ್ ಆವಾಸ್ ಯೋಜನೆಯ ಗುರಿ:

- ಭಾರತವನ್ನು "ಕೊಳಚೆ ಪ್ರದೇಶ ಮುಕ್ತ" (Slum Free India)ವನ್ನಾಗಿಸುವುದು ಈ ಯೋಜನೆಯ ಮುಖ್ಯ ಗುರಿ.
- ನಗರ ಪ್ರದೇಶದಲ್ಲಿ ಕಂಡು ಬರುವ ಕೊಳಚೆ ನಿವಾಸಿಗಳ ಜೀವನ ಮಟ್ಟವನ್ನು ಇತರೆ ಜನರ ಜೀವನ ಮಟ್ಟಕ್ಕೆ ಸರಿದೂಗಿಸಲು ಕ್ರಮವಹಿಸುವುದು.
- ವ್ಯಕ್ತಿ ವಾಸಿಸಲು ಬೇಕಾಗಿರುವ ಕನಿಷ್ಠ ನಾಗರಿಕ, ಸಾಮಾಜಿಕ ಸೇವೆ ಮತ್ತು ವಸತಿ ಸೇವೆಯನ್ನು ಒದಗಿಸುವುದು.
- ಕೊಳಚೆ ಪ್ರದೇಶ ನಿರ್ಮಾಣವಾಗಲು ಪೂರಕವಾಗಿರುವ ಅಂಶಗಳನ್ನು ಗುರುತಿಸಿ ಸರಿಪಡಿಸುವುದು ಮತ್ತು ನಗರ ಪ್ರದೇಶಗಳಲ್ಲಿ ವಸತಿ ನಿರ್ಮಾಣಕ್ಕೆ ಕಂಡುಬರುವ ಜಾಗದ ಸಮಸ್ಯೆಗೆ ಪರಿಹಾರ ಹುಡುಕಿಕೊಳ್ಳುವುದು.

ಯೋಜನೆ ಅನುಷ್ಠಾನ ಹೇಗೆ?

- ಈ ಯೋಜನೆಯನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ರಾಜ್ಯ ಸರ್ಕಾರಗಳು ತಮಗೆ ಅಗತ್ಯವೆನಿಸಿದ ನಗರಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆಯ್ಕೆಮಾಡಿಕೊಳ್ಳಬಹುದಾಗಿದೆ. ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ 250 ನಗರಗಳಲ್ಲಿ ಈ ಯೋಜನೆಯನ್ನು

ಜಾರಿಗೆ ತರಲು ನಿರ್ಧರಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಸರ್ಕಾರ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಿದೆ.

**ತ್ರಿಪುರ, ಮೇಘಾಲಯ ಮತ್ತು ಮಣಿಪುರದಲ್ಲಿ ಹೈಕೋರ್ಟ್ ಕಾರ್ಯಾರಂಭ**

ಈಶಾನ್ಯ ರಾಜ್ಯಗಳಾದ ತ್ರಿಪುರ, ಮಣಿಪುರ ಮತ್ತು ಮೇಘಾಲಯದಲ್ಲಿ ನೂತನವಾಗಿ ನಿರ್ಮಿಸಲಾದ ಹೈಕೋರ್ಟ್ ಗಳು ಕಾರ್ಯಾರಂಭ ಮಾಡಿದವು. ಈ ಮೂಲಕ ಈಶಾನ್ಯ ರಾಜ್ಯಗಳು ಸ್ವಂತ ಹೈಕೋರ್ಟ್ ನ್ನು ಹೊಂದುವ ಕನಸು ನನಸಾಗಿದೆ.

- ಚತ್ತೀಸ್ ಗರ್ ನ ನ್ಯಾಯಾಧೀಶರಾಗಿದ್ದ ಅಭಯ್ ಮನೋಹರ್ ಸಪ್ರೆ ರವರು ಮಣಿಪುರ ಹೈಕೋರ್ಟ‌ನ ಪ್ರಥಮ ಮುಖ್ಯ ನ್ಯಾಯಮೂರ್ತಿಗಳಾಗಿ ಅಧಿಕಾರವನ್ನು ಸ್ವೀಕಾರ ಮಾಡಿದರು.
- ತ್ರಿಪುರ ಹೈಕೋರ್ಟ‌ನ ಮುಖ್ಯ ನ್ಯಾಯಾಧೀಶರಾಗಿ ನ್ಯಾಯಮೂರ್ತಿ ದೀಪಕ್ ಗುಪ್ತಾರವರು ನೇಮಕಗೊಂಡರೆ, ಬಿಹಾರ್ ಹೈಕೋರ್ಟ್ನ ನ್ಯಾಯಾಧೀಶರಾಗಿರುವ ಆಂಧ್ರಪ್ರದೇಶ ಮೂಲದ ಟಿ.ಮೀನಾ ಕುಮಾರಿರವರನ್ನು ಮೇಘಾಲಯ ಹೈಕೋರ್ಟ್ ನ ಮುಖ್ಯ ನ್ಯಾಯಾಧೀಶರಾಗಿ ನೇಮಿಸಿಲಾಗಿದೆ.
- ಸದ್ಯ ದೇಶದಲ್ಲಿ ಒಟ್ಟು 21 ಹೈಕೋರ್ಟ್ ಗಳು ಅಸ್ತಿತ್ವದಲ್ಲಿದ್ದವು. ಈ ಮೂರು ನ್ಯಾಯಾಲಯಗಳ ಸ್ಥಾಪನೆಯಿಂದಾಗಿ ದೇಶದಲ್ಲಿರುವ ಹೈಕೋರ್ಟ‌ಗಳ ಸಂಖ್ಯೆ 24 ಕ್ಕೆ ಏರಿದೆ.
- ಅಧಿಕೃತ ಮೂಲಗಳ ಪ್ರಕಾರ ತ್ರಿಪುರ ಹೈಕೋರ್ಟ್ ನಲ್ಲಿ ನ್ಯಾಯಾಧೀಶರ ಸಂಖ್ಯೆ ಮುಖ್ಯ ನ್ಯಾಯಾಧೀಶರನ್ನು ಸೇರಿ ನಾಲ್ಕು ಇರಲಿದೆ. ಮಣಿಪುರ ಮತ್ತು ಮೇಘಾಲಯಗಳಲ್ಲಿ ನ್ಯಾಯಾಧೀಶರ ಸಂಖ್ಯೆ ಮೂರು ಇರಲಿದೆ.
- ಈಶಾನ್ಯ ಪ್ರದೇಶಗಳ (ಮರು ಸಂಘಟನೆ) ಮತ್ತು ಸಂಬಂಧಿತ ಕಾನೂನು ತಿದ್ದುಪಡಿ ಮಸೂದೆ-2012 ಅನ್ವಯ ಈ ಮೂರು ಹೈಕೋರ್ಟ್ ಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿತ್ತು. ಈಶಾನ್ಯ ಪ್ರದೇಶಗಳ (ಮರು ಸಂಘಟನೆ) ಆಕ್ಟ್-1971 ರ ಅಡಿಯಲ್ಲಿ ಮಣಿಪುರ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳು ಸ್ವತಂತ್ರ ರಾಜ್ಯಗಳಾಗಿ ಉದಯಿಸಿದ್ದವು.
- ಇಲ್ಲಿ ತನಕ ಈಶಾನ್ಯ ರಾಜ್ಯಗಳಾದ ಅಸ್ಸಾಂ,ಮಣಿಪುರ, ತ್ರಿಪುರ, ನಾಗಲ್ಯಾಂಡ್, ಮೀಜೋರಾಂ ಮತ್ತು ಮೇಘಾಲಯಾ ರಾಜ್ಯಗಳು ಗುವಾಹಟಿ ಹೈಕೋರ್ಟ್ ವ್ಯಾಪ್ತಿಗೆ ಒಳಪಟ್ಟಿದ್ದವು. ಸಿಕ್ಕಿಂ ರಾಜ್ಯ ತನ್ನದೇ ಆದ ಪ್ರತ್ಯೇಕ ಹೈಕೋರ್ಟ‌ನ್ನು ಹೊಂದಿದೆ.

**ಪಶ್ಚಿಮ ಬಂಗಾಳದಲ್ಲಿ ಹಿರಿಯ ಲೇಖಕರು ಮತ್ತು ಸಾಹಿತಿಗಳಿಗೆ ಮಾಸಿಕ ಭತ್ಯೆ ಜಾರಿ**

ಹಿರಿಯ ಲೇಖಕರು ಮತ್ತು ಸಾಹಿತಿಗಳ ಆರ್ಥಿಕ ನೆರವಿಗೆ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಹೊಸ ಯೋಜನೆಯನ್ನು ಜಾರಿಗೊಳಿಸಿದೆ. ಹಿರಿಯ ಲೇಖಕರು ಮತ್ತು ಸಾಹಿತಿಗಳಿಗೆ ಮಾಸಿಕ ಭತ್ಯೆಯನ್ನು ನೀಡಲು ಸರ್ಕಾರ ನಿರ್ಧರಿಸಿರುವುದಾಗಿ ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಬ್ರಾತ್ಯ ಬಸು ಹೇಳಿದ್ದಾರೆ.

- ಮೊದಲ ಹಂತವನ್ನು ಏಪ್ರಿಲ್ 1 ರಿಂದ ಜಾರಿಗೊಳಿಸಲ್ಲಿದ್ದು, ಸುಮಾರು 170 ಹಿರಿಯ ಲೇಖಕ ಮತ್ತು ಸಾಹಿತಿಗಳಿಗೆ ಮಾಸಿಕ ಭತ್ಯೆ ರೂ.1500 ಗಳನ್ನು ನೀಡಲಾಗುವುದು.
- ರಾಜ್ಯದ 100 ರಂಗಭೂಮಿ ಸಂಘಗಳಿಗೆ ವಾರ್ಷಿಕ ಸಹಾಯ ಧನವಾಗಿ ರೂ.3500 ಕೊಡಲು ತಿರ್ಮಾನಿಸಲಾಗಿದೆ.

- 120 ಜಾತ್ರೆ ಕಲೆಗಾರರು ಸೇರಿದಂತೆ 215 ಜಾನಪದ ಕಲಾವಿದರಿಗೂ ವಾರ್ಷಿಕ ರೂ.7000 ಸಹಾಯ ಧನವನ್ನು ನೀಡಲಾಗುವುದೆಂದು ಹೇಳಿದ್ದಾರೆ.

**eIPO: ಮಾಹಿತಿ ಹಕ್ಕು ಕಾಯ್ದೆಯಲ್ಲಿ ಮತ್ತೊಂದು ಕ್ರಾಂತಿ**

ಆಡಳಿತ ಪಾರದರ್ಶಕತೆ ಮತ್ತು ಭ್ರಷ್ಟಚಾರ ನಿವಾರಣೆಗೆ ಬ್ರಹ್ಮಾಸ್ತ್ರವಾಗಿರುವ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಲು ಇನ್ನು ಅನಿವಾಸಿ ಭಾರತೀಯರಿಗೆ ಸುಲಭವಾಗಲಿದೆ. ಮಾಹಿತಿ ಹಕ್ಕಿನಡಿ ಅನಿವಾಸಿ ಭಾರತೀಯರು ಮಾಹಿತಿ ಪಡೆಯಲು ಅರ್ಜಿ ಸಲ್ಲಿಸುವ ವಿಧಾನವನ್ನು ಸುಲಭಗೊಳಿಸಲು ಸರ್ಕಾರ eIPO ಎಂಬ ಹೊಸ ವಿಧಾನವನ್ನು ಅಳವಡಿಸಿಕೊಳ್ಳಲು ಹಸಿರು ನಿಶಾನೆ ತೋರಿದೆ.

ಏನಿದು eIPO?

- eIPO ಎಂದರೇ Electronic Indian Postal Order. ಈ ವಿಧಾನದಲ್ಲಿ ಅನಿವಾಸಿ ಭಾರತೀಯರು ಆನ್ ಲೈನ್ ಮೂಲಕ ಹಣಪಾವತಿಸಿ ಇಂಡಿಯನ್ ಪೋಸ್ಟಲ್ ಆರ್ಡರ್ ನ್ನು ಪಡೆಯಬಹುದಾಗಿದೆ. ವಿದೇಶದಲ್ಲಿ ನೆಲೆಸಿರುವ ಭಾರತೀಯ ಪ್ರಜೆಗಳು ಮಾಹಿತಿ ಹಕ್ಕಿನಡಿ ಮಾಹಿತಿಯನ್ನು ಪಡೆಯಲು ಅನುಕೂಲವಾಗಲೆಂದು ಇದನ್ನು ಕಾರ್ಯಗತ ಮಾಡಲಾಗಿದೆ. ಈ ವಿಧಾನದಲ್ಲಿ Visa/Master ಆಧಾರಿತ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡಗಳ ಮೂಲಕವು ಹಣ ಪಾವತಿಸಬಹುದಾಗಿದೆ.
- ಮಾಹಿತಿ ಬಯಸುವ ವ್ಯಕ್ತಿಯು ಮೊದಲು ಅಂತರ್ಜಾಲದಲ್ಲಿ ನೋಂದಣಿಯಾಗಬೇಕು. ನಂತರ ಯಾವ ಸಚಿವಾಲಯಾದಡಿ ಮಾಹಿತಿಯನ್ನು ಇಚ್ಚಿಸುವನೋ ಆ ಸಚಿವಾಲಯವನ್ನು ಆಯ್ಕೆಮಾಡಿಕೊಳ್ಳಬೇಕು. ಇದಾದ ಮೇಲೆ eIPO ಜನರೇಟ್ ಆಗುವುದು ಇದನ್ನು ಪ್ರಿಂಟ್ ತೆಗೆದು RTI ಅರ್ಜಿಯೊಂದಿಗೆ ಕಳುಹಿಸಬೇಕು.
- ಈ ಯೋಜನೆಯಿಂದ ಇನ್ನು ಮುಂದೆ ಅನಿವಾಸಿ ಭಾರತೀಯರು ಮಾಹಿತಿಯನ್ನು ಸುಲಭವಾಗಿ ಪಡೆಯಬಹುದಾಗಿದೆ.

**ವಿಮಾನದಂತ ಸೌಲಭ್ಯಗಳನ್ನು ಹೊಂದಲಿರುವ "ಅನುಭೂತಿ" ಭೋಗಿಗಳು**

ಈ ಬಾರಿಯ ರೈಲ್ವೆ ಬಜೆಟ್ ನಲ್ಲಿ ರೈಲ್ವೇ ಸಚಿವ ಪವಾನ್ ಬನ್ಸಾಲ್ ರವರು ವಿಶೇಷ ಸೌಲಭ್ಯವನ್ನು ಹೊಂದಿರುವ "ಅನುಭೂತಿ" ಹೆಸರಿನ ಭೋಗಿಗಳನ್ನು ಓಡಿಸುವುದಾಗಿ ಹೇಳಿದ್ದರು. ಶತಾಬ್ದಿ ಮತ್ತು ರಾಜಧಾನಿ ಎಕ್ಸ್ ಪ್ರೆಸ್ ರೈಲುಗಳಲ್ಲಿ ಈ ವೈಭವ ಪೂರಿತ ಭೋಗಿಗಳನ್ನು ಅಳವಡಿಸಲಾಗುವುದೆಂದು ಹೇಳಲಾಗಿತ್ತು. ಸದ್ಯದ ಮಾಹಿತಿ ಪ್ರಕಾರ ಈ ಭೋಗಿಗಳು ವಿಮಾನದಲ್ಲಿರುವ ಸೌಲಭ್ಯವನ್ನು ಒಳಗೊಂಡಿರಲಿವೆ ಎಂದು ಹೇಳಲಾಗಿದೆ.

ಅನುಭೂತಿ ವಿಶೇಷತೆಗಳೇನು?

- ಕಪುರ್ತುಲಾದ ರೈಲ್ವೆ ಕೋಚ್ ಪ್ಯಾಕ್ಟರಿಯಲ್ಲಿ ವಿನ್ಯಾಸಗೊಳಿಸಲಾಗುತ್ತಿರುವ ಈ ಭೋಗಿಗಳಲ್ಲಿ ವಿಮಾನದಲ್ಲಿರುವಂತೆಯೇ LCD ಪರದೆ ಮತ್ತು ಮನರಂಜನಾ ವ್ಯವಸ್ಥೆಯನ್ನು ಹೊಂದಿರಲಿವೆ.
- ಮೋಟಾರ್ ಚಾಲಿತ ಬಾಗಿಲುಗಳು ಸೌಲಭ್ಯವನ್ನು ಇವುಗಳು ಹೊಂದಿರಲಿದ್ದು, ಕೇವಲ ಬಟನ್ ಒತ್ತಿದರೆ ಸಾಕು ಬಾಗಿಲುಗಳು ಕಾರ್ಯನಿರ್ವಹಸಲಿವೆ.

- ರಬ್ಬರ್ ರೂಪಿತ ನೆಲಹಾಸುಗಳನ್ನು ಮತ್ತು ರಿ ಇನ್ಫೋರ್ಸಡ್ ಪ್ಲಾಸ್ಟಿಕ್ ಬಳಕೆಯಿಂದ ಭೋಗಿಗಳ ಪ್ಯಾನೆಲ್ ನ್ನು ತಯಾರಿಸಲಾಗಿದೆ.
- ಜೈವಿಕ ಶೌಚಾಲಯ ಮತ್ತು ವೈ-ಪೈ ಸೌಲಭ್ಯಗಳನ್ನು ಅನುಭೂತಿ ಭೋಗಿಗಳಲ್ಲಿ ಕಲ್ಪಿಸಲಾಗಿದೆ.

ಇವೆಲ್ಲದರ ಜತೆಗೆ ಆಸನಗಳನ್ನು ಸಂಖ್ಯೆಯನ್ನು ಕಡಿಮೆಗೊಳಿಸಿ ಸುಖಕರ ಪ್ರಯಾಣಕ್ಕೆ ಅನುವು ಮಾಡಿಕೊಡಲಾಗಿದೆ.

**ರಸ್ತೆ ಅಪಘಾತ ಪ್ರಕರಣಗಳಿಗೆ ಉಚಿತ ಚಿಕಿತ್ಸಾ ಸೇವೆ ಪ್ರಾತ್ಯಕ್ಷಿಕ ಯೋಜನೆ: ಕೇಂದ್ರ ಸರ್ಕಾರ**

ರಸ್ತೆ ಅಪಘಾತಗಳಲ್ಲಿ ಮರಣ ಹೊಂದುವ ಪ್ರಕರಣಗಳನ್ನು ತಗ್ಗಿಸುವ ಸಲುವಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮಹತ್ವದ ನಿರ್ಣಯ ಒಂದನ್ನು ಕೈಗೊಂಡಿದೆ. ರಸ್ತೆ ಅಪಘಾತ ಪ್ರಕರಣಗಳಲ್ಲಿ ಬಾಧಿತರಾಗುವವರಿಗೆ ಸೂಕ್ತ ಚಿಕಿತ್ಸೆ ಕಲ್ಪಿಸುವ ಮತ್ತು ಚಿಕಿತ್ಸೆ ವೆಚ್ಚವನ್ನು ಭರಿಸುವ ಸಲುವಾಗಿ ಸರ್ಕಾರ ಚಿಂತನ ನಡೆಸಿದ್ದು, ಈ ಸಂಬಂಧ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ಸಿ.ಪಿ.ಜೋಶಿರವರು ಐಸಿಐಸಿಐ ಲಾಂಬಾರ್ಡ್ (ICICI Lombard) ಜತೆ ಒಡಂಬಡಿಕೆಗೆ ಸಹಿ ಹಾಕಿದರು.

ಪ್ರಾತ್ಯಕ್ಷಿಕ ಯೋಜನೆ ಎಲ್ಲಿ?

- ಮೊದಲ ಹಂತದಲ್ಲಿ ಈ ಯೋಜನೆಯನ್ನು ರಾಷ್ಟ್ರೀಯ ಹೆದ್ದಾರಿ-8 (NH-8), ಗುರಂಗಾವ್ ಮತ್ತು ಜೈಪುರ ಮಾರ್ಗದ ಮಧ್ಯೆ ಮುಂದಿನ ದಿನಗಳಲ್ಲಿ ಅನುಷ್ಟಾನಗೊಳಿಸಲಾಗುವುದು. ಇಂತಹ ಯೋಜನೆ ದೇಶದಲ್ಲಿ ಇದೇ ಮೊದಲ ಬಾರಿಗೆ ತರಲಾಗುತ್ತಿದ್ದು, ಫಲಿತಾಂಶದ ಆಧಾರದ ಮೇಲೆ ಹಂತ ಹಂತವಾಗಿ ಬೇರೆ ಹೆದ್ದಾರಿಗಳಲ್ಲೂ ಜಾರಿಗೊಳಿಸಲಾಗುವುದು.

ರಾಷ್ಟ್ರೀಯ ಹೆದ್ದಾರಿ-8 ಏಕೆ?

- ಭಾರತದ ರಾಜಧಾನಿ ನವದೆಹಲಿ ಮತ್ತು ವಾಣಿಜ್ಯ ನಗರಿ ಮುಂಬೈನ್ನು ಸಂಪರ್ಕಿಸುವ ಈ ಹೆದ್ದಾರಿ ದೇಶದಲ್ಲೇ ಅತಿ ಹೆಚ್ಚು ವಾಹನ ದಟ್ಟನೆಯಿಂದ ಕೂಡಿದೆ. ಅಲ್ಲದೇ ಅತ್ಯಂತ ಅಪಾಯಕಾರಿ ಮಾರ್ಗ ಎನಿಸಿರುವ ಈ ರಸ್ತೆಯಲ್ಲಿ ಸಂಭವಿಸುವ ಅಪಘಾತ ಪ್ರಕರಣಗಳಿಂದ ಜೀವ ಕಳೆದುಕೊಳ್ಳವವರ ಸಂಖ್ಯೆ ಸಹ ಅತ್ಯಧಿಕ.

ಯೋಜನೆಯಲ್ಲಿ ಏನಿದೆ?

- ಇದೊಂದು ವಿನೂತನ ಯೋಜನೆ. ದೇಶದಲ್ಲಿ ಪ್ರತಿ ವರ್ಷ 1.4 ಲಕ್ಷ ಮಂದಿ ರಸ್ತೆ ಅಪಘಾತಗಳಿಂದ ಸಾವನ್ನಪ್ಪುತ್ತಿದ್ದಾರೆ. ಆದ್ದರಿಂದ ರಸ್ತೆ ಅಪಘಾತಗಳಿಂದ ಸಂಭವಿಸಬಹುದಾದ ಸಾವಿನ ಪ್ರಕರಣಗಳನ್ನು ತಗ್ಗಿಸುವುದು ಇದರ ಮುಖ್ಯ ಉದ್ದೇಶ.
- ಈ ಯೋಜನೆಯಡಿ ಅಪಘಾತದಲ್ಲಿ ಗಾಯಗೊಂಡವರಿಗೆ ಸರಿಯಾದ ಸಮಯದಲ್ಲಿ, ಸೂಕ್ತ ಚಿಕಿತ್ಸೆಯನ್ನು ನೀಡುವ ಸಲುವಾಗಿ ಸರ್ಕಾರ ರೂ.30 ಕೋಟಿ ನಿಧಿಯನ್ನು ನಿರ್ಮಿಸಿದೆ.
- ಗಾಯಾಳುಗಳಿಗೆ 48 ಗಂಟೆಗಳ ಕಾಲ ಉಚಿತ ಆಸ್ಪತ್ರೆ ಸೇವೆ ಮತ್ತು ರೂ.30,000 ವರೆಗಿನ ಚಿಕಿತ್ಸೆಯನ್ನು ಸರ್ಕಾರವೇ ಭರಿಸಲಿದೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸೌಲಭ್ಯವನ್ನು ಕಲ್ಪಿಸಲಾಗುವುದು.
- ಈ ಯೋಜನೆಯನ್ನು ಯಶಸ್ವಿಗೊಳಿಸಲು ಸ್ವಯಂ ಸೇವಕರನ್ನು ನೊಂದಾಯಿಸಿಕೊಳ್ಳಲಾಗುವುದು. ಪ್ರಥಮ ಚಿಕಿತ್ಸೆ ಬಗ್ಗೆ ಈ ಸ್ವಯಂ ಸೇವಾಕರಿಗೆ ತರಭೇತಿ ಸಹ ನೀಡಲಾಗುತ್ತದೆ. ಅಪಘಾತ ನಡೆದ ನಂತರ ತಕ್ಷಣ ಸ್ಥಳಕ್ಕೆ ಧಾವಿಸಿ ಅಗತ್ಯ ಕ್ರಮವನ್ನು ಕೈಗೊಂಡು, ಕಂಟ್ರೋಲ್ ರೂಂ ಗೆ ಸುದ್ದಿ ಮುಟ್ಟಿಸುವುದು ಇವರ ಪ್ರಮುಖ ಕಾರ್ಯ.

- ಪ್ರತಿ ಕಂಟ್ರೋಲ್ ರೂಂ ಗಳು ಜಿಪಿಎಸ್ ಸೇವೆ ಹೊಂದಿರುವ ಅಂಬುಲೆನ್ಸ್ ವಾಹನಗಳನ್ನು ಹೊಂದಿರಲ್ಲಿದ್ದು, ಸುದ್ದಿ ಮುಟ್ಟಿದ ನಂತರ ಹತ್ತಿರದ ಆಸ್ಪತ್ರೆಗಳಿಗೆ ಗಾಯಾಳುಗಳನ್ನು ಸೇರಿಸುವ ಕೆಲಸ ಮಾಡಲಿವೆ.
- ಇವೆಲ್ಲದರೂ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪ್ರತಿ 500 ಮೀಟರ್ ಅಂತರದಲ್ಲಿ ಅಪಘಾತ ವಲಯದ ಫಲಕಗಳನ್ನು ಅಳವಡಿಸಲಿದೆ. ಮತ್ತು ಸ್ವಯಂಸೇವಕರಿಗೆ ಪ್ರತಿಫಲನ ಹೊಂದುವ ಜಾಕೆಟ್ ಗಳನ್ನು ಒದಗಿಸಲಿದೆ. ಒಟ್ಟಿನಲ್ಲಿ ಅತಿ ಹೆಚ್ಚು ರಸ್ತೆ ಅಪಘಾತ ಪ್ರಕರಣಗಳ ದೇಶಗಳಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ಸರ್ಕಾರದ ಈ ಹೆಜ್ಜೆ ಶ್ಲಾಘನೀಯ.

**ಜಾಗತಿಕ ಆರ್ಥಿಕ ಕೇಂದ್ರಗಳ ಸೂಚ್ಯಂಕ: ಮುಂಬೈಗೆ 66 ನೇ ಸ್ಥಾನ**

ಜಾಗತಿಕ ಆರ್ಥಿಕ ಕೇಂದ್ರಗಳ ಸೂಚ್ಯಂಕ (Global Financial Centres Index) ಪಟ್ಟಿಯಲ್ಲಿ ಭಾರತದ ವಾಣಿಜ್ಯ ನಗರಿ ಮುಂಬೈಗೆ 66 ನೇ ಸ್ಥಾನ ಲಭಿಸಿದೆ. ಕಳೆದ ವರ್ಷ ಮುಂಬೈ 63 ನೇ ಸ್ಥಾನದಲ್ಲಿತ್ತು, ಆದರೆ ಈ ಬಾರಿ ಮೂರು ಸ್ಥಾನಗಳ ಕುಸಿತ ಕಂಡಿದೆ.

- ವಿಶ್ವದ ಪ್ರಮುಖ 69 ಆರ್ಥಿಕ ಕೇಂದ್ರಗಳನ್ನು ಗಣನೆಗೆ ತೆಗೆದುಕೊಂಡು ಸಿದ್ದಪಡಿಸಿರುವ ಈ ಸೂಚ್ಯಂಕದಲ್ಲಿ ಮುಂಬೈನ್ನು ಹೊರತುಪಡಿಸಿ ಭಾರತದ ಬೇರೆ ಯಾವ ನಗರಗಳು ಸ್ಥಾನ ಪಡೆದಿಲ್ಲ. ದೇಶದ ರಾಜಧಾನಿ ದೆಹಲಿಯನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತಾದರೂ ಸ್ಥಾನ ಪಡೆಯುವಲ್ಲಿ ವಿಫಲವಾಗಿದೆ.
- ಜಾಗತಿಕ ಆರ್ಥಿಕ ಕೇಂದ್ರಗಳ ಸೂಚ್ಯಂಕ ಪಟ್ಟಿಯಲ್ಲಿ ಲಂಡನ್ ನಂ.1 ಸ್ಥಾನದಲ್ಲಿದೆ. ನ್ಯೂಯಾರ್ಕ್, ಹಾಂಗ್ ಕಾಂಗ್ ಮತ್ತು ಸಿಂಗಾಪುರ್ ಕ್ರಮವಾಗಿ ಮೊದಲ ನಾಲ್ಕು ಸ್ಥಾನದಲ್ಲಿವೆ. ಉಳಿದಂತೆ ಜುರಿಚ್, ಟೋಕಿಯೊ, ಜಿನೆವಾ, ಬೊಸ್ಟೈನ್, ಸಿಯೊಲ್ ಮತ್ತು ಪ್ರಾಂಕ್ ಪುರ್ಟ್ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಟಾಪ್ ಟೆನ್ ಆರ್ಥಿಕ ಕೇಂದ್ರಗಳು.
- ಒಟ್ಟಾರೆ ಈ ಬಾರಿ 79 ಆರ್ಥಿಕ ಕೇಂದ್ರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಇವುಗಳ ಪೈಕಿ 26 ಕೇಂದ್ರಗಳ ತಮ್ಮ ಸ್ಥಾನವನ್ನು ಕಳೆದ ಬಾರಿಗಿಂತ ಹೆಚ್ಚಿಸಿಕೊಂಡಿವೆ.44 ಕೇಂದ್ರಗಳು ಕಳೆದ ವರ್ಷಕ್ಕಿಂತ ಕುಸಿತ ಕಂಡಿವೆ. ಇನ್ನು ಎರಡು ನಗರಗಳ (ಪನಾಮ ಮತ್ತು ಸಿಪ್ರಸ್) ಸ್ಥಾನದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

**ಗಣಿತಶಾಸ್ತ್ರಜ್ಞ ರಾಮಾನುಜಂ ರವರ ಮನೆಯನ್ನು ಮ್ಯೂಸಿಯಂ ಆಗಿ ಪರಿವರ್ತಿಸಲು ನಿರ್ಧಾರ**

ಖ್ಯಾತ ಗಣಿತಶಾಸ್ತ್ರಜ್ಞ ಶ್ರೀನಿವಾಸನ್ ರಾಮಾನುಜಂ ರವರು ಹುಟ್ಟಿ ಬೆಳೆದ ಮನೆಯನ್ನು ಗಣಿತ ಸಂಗ್ರಹಾಲಯವಾಗಿ ಪರಿವರ್ತಿಸಲು ಎರೋಡ್ ಕಾರ್ಪೊರೇಷನ್ ನಿರ್ಧರಿಸಿದೆ. ಇದಕ್ಕೆ ಸಂಬಂಧಿಸಿದಂತೆ ಎರೋಡ್ ಕಾರ್ಪೋರೇಷನ್ ನಿರ್ಣಯವನ್ನು ಮಂಡಿಸಿದ್ದು, ತಮಿಳುನಾಡು ರಾಜ್ಯ ಸರ್ಕಾರದ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುವುದೆಂದು ಎರೋಡ್ ಕಾರ್ಪೋರೇಷನ್ ಮೇಯರ್ ಹೇಳಿದ್ದಾರೆ.

- ತಮಿಳುನಾಡಿನ ಎರೋಡ್ ನಗರ ರಾಮಾನುಜಂ ರವರ ಜನ್ಮಸ್ಥಳ. ಈ ನಗರದಲ್ಲಿರುವ "ಅಜಾಗಿಯಾ ಸಿಂಗಾರ್ ರಸ್ತೆ"ಯಲ್ಲಿ ರಾಮಾನುಜಂ ರವರ ಮನೆ ಇರುವುದಾಗಿ ನಂಬಲಾಗಿತ್ತು. ವಿಪರ್ಯಾಸವೆಂದರೆ ರಾಮಾನುಜಂ ರವರ ಮನೆ ಯಾವುದೆಂದು ನಿಖರವಾಗಿ ಯಾರಿಗೂ ತಿಳಿದಿರಲಿಲ್ಲ.

- ಇತ್ತೀಚೆಗೆ ಟೋಕಿಯೊ ವಿಶ್ವ ವಿದ್ಯಾಲಯದ ಗಣಿತ ವಿಭಾಗದ ಪ್ರೋಫೆಸರ್ "ಸುಸುಮು ಸಕುರಾಯ್" ರವರ ತಂಡ ನಡೆಸಿದ ಅಧ್ಯಯನದ ಬಳಿಕ ರಾಮಾನುಜಂ ರವರ ಮನೆಯನ್ನು ಪತ್ತೆಹಚ್ಚಲಾಗಿದೆ.
- ಈ ಮನೆಯನ್ನು ಗಣಿತ ಸಂಗ್ರಹಾಲವಾಗಿ ಪರಿವರ್ತಿಸಿದರೆ ಅಲ್ಲಿನ ಮಕ್ಕಳಲ್ಲಿ ಗಣಿತದ ಬಗ್ಗೆ ಆಸಕ್ತಿ ಹೆಚ್ಚಾಗಲಿದೆ ಎಂಬುದು ಸ್ಥಳೀಯರ ಅಭಿಪ್ರಾಯ.

ಶ್ರೀನಿವಾಸ ರಾಮಾನುಜಂ:

- ರಾಮಾನುಜಂ ರವರು ಭಾರತ ಕಂಡ ಅಪ್ರತಿಮ ಗಣಿತಶಾಸ್ತ್ರ ತಜ್ಞ. ಡಿಸೆಂಬರ್ 22, 1887 ರಲ್ಲಿ ಜನಿಸಿದ ಅವರು ತಮಗಿದ್ದ ಅಪಾರ ಗಣಿತ ಜ್ಞಾನದಿಂದ ವಿಶ್ವದಲ್ಲೆಡೆ ಪ್ರಸಿದ್ದಿಯಾದರು. ರಾಮಾನುಜಂ ರವರ ಅಸಾಮಾನ್ಯ ಗಣಿತ ಜ್ಞಾನವನ್ನು ಮನಗೊಂಡ ಕೇಂಬ್ರಿಡ್ಜ್ ವಿವಿ ಅವರಿಗೆ ಉಪನ್ಯಾಸ ನೀಡಲು ಆಹ್ವಾನ ನೀಡಿತ್ತು. ಅಲ್ಲದೇ ರಾಯಲ್ ಸೊಸೈಟಿಯ ಫೇಲೊ ಸದಸ್ಯ ಸಹ ಆಗಿದ್ದರು. ತಮ್ಮ ಜೀವನದ ಅರ್ಧ ಭಾಗವನ್ನು ಪೂರೈಸಿದೆ ಕೇವಲ 32 ನೇ ವಯಸ್ಸಿಗೆ ಅವರು ಮರಣರಾದದ್ದು ದುರ್ದೈವ.
- ಗಣಿತ ಶಾಸ್ತ್ರಕ್ಕೆ ರಾಮಾನುಜಂ ನೀಡಿರುವ ಗಣನೀಯ ಸೇವೆಯ ಸ್ಮರಣರ್ಥ ಭಾರತ ಸರ್ಕಾರ ಅವರ ಜನ್ಮ ದಿನವಾದ **ಡಿಸೆಂಬರ್ 22** ನ್ನು "ರಾಷ್ಟ್ರೀಯ ಗಣಿತ ದಿನವೆಂದು" ಘೋಷಿಸಿದೆ. ಜತೆಗೆ ಡಿಸೆಂಬರ್ 22, 2012 ರಂದು ರಾಮಾನುಜಂ ರವರ 125 ನೇ ಜನ್ಮ ದಿನವಾದರಿಂದ 2012 ನೇ ವರ್ಷವನ್ನು "ರಾಷ್ಟ್ರೀಯ ಗಣಿತ ವರ್ಷ" ವೆಂದು ಪರಿಗಣಿಸಲಾಗಿತ್ತು.

**ಮೂಲ ಸೌಕರ್ಯ ಅಭಿವೃದ್ಧಿ ಭಾರತಕ್ಕೆ ಜಪಾನ್ ನಿಂದ 232 ಕೋಟಿ ಡಾಲರ್ ನೆರವು**

ಭಾರತದಲ್ಲಿ ಮೂಲ ಸೌಕರ್ಯ ಅಭಿವೃದ್ದಿಗೆ 232 ಕೋಟಿ ಡಾಲರ್ ನೆರವು ನೀಡುವುದಾಗಿ ಜಪಾನ್ ಹೇಳಿದೆ. ಜಪಾನ್ ಪ್ರವಾಸದಲ್ಲಿರುವ ಭಾರತದ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ರವರನ್ನು ಈ ವಿಷಯವನ್ನು ಖಚಿತಪಡಿಸಿದ್ದಾರೆ. ಟೋಕಿಯೊದಲ್ಲಿ ಜಪಾನ್ ವಿದೇಶಾಂಗ ಸಚಿವ ಫ್ಯುಮಿಯೊ ಕಿಷಿದಾ ಮತ್ತು ಸಲ್ಮಾನ್ ಖುರ್ಷಿದ್ ನಡುವೆ ನಡೆದ ಮಾತುಕತೆಯಲ್ಲಿ ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟೂ ಬಿಗಿಗೊಳಿಸಲು ಚರ್ಚಿಸಲಾಗಿದೆ.

- ಮೂಲ ಸೌಕರ್ಯ ಅಭಿವೃದ್ದಿ ನೀಡುವ ನೆರವನ್ನು ಹೊರತುಪಡಿಸಿ, ವಾಣಿಜ್ಯ ನಗರಿ ಮುಂಬೈನಲ್ಲಿ ಸುರಂಗ ಮಾರ್ಗಗಳನ್ನು ನಿರ್ಮಿಸಲು ಜಪಾನ್ ಪ್ರತ್ಯೇಕವಾಗಿ 753.17 ಮಿಲಿಯನ್ ಡಾಲರ್ ಆರ್ಥಿಕ ಸಹಾಯ ನೀಡಲಿದೆ.
- ದೆಹಲಿ ಮತ್ತು ಮುಂಬೈ ನಡುವೆ ಸರಕು ಸಾಗಿಸಲು ರೈಲು ಸಂಪರ್ಕ ಅಭಿವೃದ್ದಿ ಮತ್ತು ಮುಂದಿನ ದಿನಗಳಲ್ಲಿ ಹೈ ಸ್ಪೀಡ್ ರೈಲು ಯೋಜನೆಗಳಿಗೆ ಜಪಾನ್ ಸಹಾಯ ಮಾಡಲಿದೆ.
- ಆರ್ಥಿಕ ಮತ್ತು ಭದ್ರತಾ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಂಬಂಧ ವೃದ್ದಿ ಸೇರಿದಂತೆ, ಅಣು ಇಂಧನ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಮತ್ತು ಮಿಲಿಟರಿ ಸಮರಾಭ್ಯಸ ಮುಂತಾದ ವಿಷಯಗಳ ಬಗ್ಗೆ ಉಭಯ ದೇಶಗಳ ಸಚಿವರು ಚರ್ಚಿಸಿರುವುದಾಗಿ ಖುರ್ಷಿದ್ ಹೇಳಿದ್ದಾರೆ.

**ಸುದ್ದಿ ಸಂಕ್ಷಿಪ್ತ: 5 ನೇ ಬ್ರಿಕ್ಸ್ (BRICS) ಶೃಂಗಸಭೆ**

ಬಿಕ್ಸ್ ದೇಶಗಳ 5 ನೇ ಶೃಂಗ ಸಭೆಯನ್ನು ಮಾರ್ಚ್ 26 ರಿಂದ 27 ರ ವರೆಗೆ ಎರಡು ದಿನಗಳ ಕಾಲ ಆಯೋಜಿಸಲಾಗಿತ್ತು. 5 ನೇ ಶೃಂಗಸಭೆ ಯ ಪ್ರಮುಖ ಅಂಶಗಳು ಇಲ್ಲಿವೆ.

5 ನೇ ಬ್ರಿಕ್ಸ್ ಶೃಂಗಸಭೆ ನಡೆದ ಸ್ಥಳ:

- ಬ್ರಿಕ್ಸ್ ಶೃಂಗಸಭೆಯ ಅತಿಥ್ಯವನ್ನು ಈ ಬಾರಿ ದಕ್ಷಿಣ ಆಫ್ರಿಕಾ ವಹಿಸಿಕೊಂಡಿತ್ತು. ದಕ್ಷಿಣ ಆಫ್ರಿಕಾದ ಡರ್ಬನ್ ನಗರ ಎರಡು ದಿನಗಳ ಕಾಲ ನಡೆದ 5 ನೇ ಶೃಂಗಸಭೆಗೆ ಸಾಕ್ಷಿಯಾಗಿತ್ತು.

ಭಾಗವಹಿಸಿದ ಗಣ್ಯರು:

- ಬ್ರಿಕ್ಸ್ (BRICS) ಎಂದರೆ ಪ್ರವರ್ಧಮಾನಕ್ಕೆ ಬರುತ್ತಿರುವ ಐದು ಆರ್ಥಿಕ ದೇಶಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾಗಳ ಸಮೂಹ. ಬ್ರೆಜಿಲ್ ನ ಅಧ್ಯಕ್ಷೆ ದಿಲ್ಮಾ ರೂಸೆಫ್, ರಷ್ಯಾ ಅಧ್ಯಕ್ಷ ವಾದಿಮಿರ್ ಪುಟಿನ್, ಭಾರತದ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್, ಚೀನಾದ ನೂತನ ಅಧ್ಯಕ್ಷರಾದ ಕ್ಸಿ ಜಿನ್ ಪಿಂಗ್ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜಾಕೋಬ್ ಜೂಮಾ ರವರು ಭಾಗವಹಿಸಿದ್ದ ಪ್ರಮುಖ ಗಣ್ಯರು. ಚೀನಾದ ಕ್ಸಿ ಜಿನ್ ಪಿಂಗ್ ರವರಿಗೆ ಇದು ಪ್ರಥಮ ಶೃಂಗಸಭೆ. 5 ನೇ ಶೃಂಗಸಭೆಯ ಅಧ್ಯಕ್ಷತೆಯನ್ನು ದಕ್ಷಿಣಾ ಆಫ್ರಿಕಾದ ಅಧ್ಯಕ್ಷ ಜಾಕೋಬ್ ಜೂಮರವರು ವಹಿಸಿದ್ದರು.

ಈ ಶೃಂಗಸಭೆಯ ಥೀಮ್:

- ಬಿಕ್ಸ್ ಮತ್ತು ಆಫ್ರಿಕಾ: ಅಭಿವೃದ್ಧಿ, ಸಂಯೋಜನೆ ಮತ್ತು ಕೈಗಾರೀಕರಣದಲ್ಲಿ ಪಾಲುಗಾರಿಕೆ (BRICS and Africa: Partnership for development,Integration and industrialisation).

5 ನೇ ಶೃಂಗಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:

- ಆಫ್ರಿಕಾ ಖಂಡದಲ್ಲಿ ಮೂಲ ಸೌಕರ್ಯ ಮತ್ತು ಕೈಗಾರೀಕರಣವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಅಗತ್ಯವಿರುವ ಸಹಕಾರವನ್ನು ನೀಡುವುದಾಗಿ ಬ್ರಿಕ್ಸ್ ದೇಶಗಳು ಒಮ್ಮತದಿಂದ ಘೋಷಿಸಿದವು.
- ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಜಾಗತಿಕ ಆರ್ಥಿಕ ಸಂಕಷ್ಟವನ್ನು ಸಮರ್ಥವಾಗಿ ಎದುರಿಸುವ ಸಲುವಾಗಿ ಬ್ರೆಜಿಲ್ ಮತ್ತು ಚೀನಾ 30 ಬಿಲಿಯನ್ ಡಾಲರ್ ಕರೆನ್ಸಿ ಸ್ವಾಪಿಂಗ್ ಒಪ್ಪಂದಕ್ಕೆ ಸಹಿಹಾಕಿದವು.
- ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಮಧ್ಯೆ ಪರಸ್ಪರ ಹೂಡಿಕೆ ಮತ್ತು ವ್ಯವಹಾರವನ್ನು ಉತ್ತೇಜಿಸುವ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಕಾಯ್ದುಕೊಳ್ಳುವ ಸಲುವಾಗಿ ಬ್ರಿಕ್ಸ್ ವ್ಯವಹಾರ ಪರಿಷತ್ (Brics Business Council) ಸ್ಥಾಪಿಸಲು ನಿರ್ಧರಿಸಲಾಯಿತು.
- ಜಾಗತಿಕ ಹಣಕಾಸು ವ್ಯವಸ್ಥೆಯನ್ನು ಬಲಗೊಳಿಸುವ ಉದ್ದೇಶದಿಂದ ಬ್ರಿಕ್ಸ್ ದೇಶಗಳು ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಗೆ ಪರ್ಯಾಯವಾದಿ ಬ್ರಿಕ್ಸ್ ಅಭಿವೃದ್ಧಿ ಬ್ಯಾಂಕ್ ನ್ನು ಸ್ಥಾಪಿಸಲು ಸಮ್ಮತಿ ಸೂಚಿಸಿದವು. ಕಳೆದ ಬಾರಿ ನವದೆಹಲಿಯಲ್ಲಿ ನಡೆದ 4ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಅಭಿವೃದ್ಧಿ ಬ್ಯಾಂಕ್ ಸ್ಥಾಪಿಸುವ ಪ್ರಸ್ತಾವನೆಯನ್ನು ಭಾರತ ಸಲ್ಲಿಸಿತ್ತು. ಭಾರತದ ಪ್ರಸ್ತಾವನೆಗೆ ಈ ಶೃಂಗಸಭೆಯಲ್ಲಿ ಹಸಿರು ನಿಶಾನೆ ತೋರಿದ ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಮೂಲ ಸೌಕರ್ಯ ಯೋಜನೆಗಳಿಗೆ ಹಣಕಾಸು ನೆರವು ನೀಡುವ ಉದ್ದೇಶದಿಂದ ಅಭಿವೃದ್ಧಿ ಬ್ಯಾಂಕ್

ನಿರ್ಮಾಣದ ತೀರ್ಮಾನವನ್ನು ಅಂತಿಮಗೊಳಿಸಿದವು. ತುರ್ತು ಸಂದರ್ಭಗಳಿಗೆ ಬ್ಯಾಂಕ್ ನಲ್ಲಿ ಹತ್ತು ಸಾವಿರ ಕೋಟಿ ಅಮೆರಿಕಾ ಡಾಲರ್ ಗಳಷ್ಟು ನಿಧಿಯನ್ನು ಮೀಸಲಿಡಲು ನಿರ್ಧರಿಸಲಾಗಿದೆ. ಬ್ಯಾಂಕ್ ನಿಧಿಗೆ ಹೂಡಿಕೆ, ನಿಯಮಗಳನ್ನು ರೂಪಿಸುವ ಜವಾಬ್ದಾರಿಯನ್ನು ಆಯಾ ದೇಶಗಳ ವಿತ್ತ ಸಚಿವರಿಗೆ ವಹಿಸಲಾಗಿದೆ.

ಮನಮೋಹನ್ ಸಿಂಗ್ ಮತ್ತು ಕ್ಸಿ ಜಿನ್ ಪಿಂಗ್ ಬೇಟಿ:

- 5 ನೇ ಶೃಂಗಸಭೆಯೂ ಭಾರತ ತನ್ನ ಹಲವಾರು ಸಮಸ್ಯೆಗಳನ್ನು ಚರ್ಚಿಸಲು ವೇದಿಕೆಯಾಯಿತು. ಚೀನಾದ ಅಧ್ಯಕ್ಷರಾಗಿ ಆಯ್ಕೆಯಾದ ಕ್ಸಿ ಜಿನ್ ಪಿಂಗ್ ರವರು ಮೊದಲ ಬಾರಿಗೆ ಭಾರತದ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ರವರನ್ನು ಮುಖಾಮುಖಿ ಬೇಟಿಯಾದರು.
- ಬ್ರಹ್ಮ ಪುತ್ರ ನದಿಯ ಮೇಲೆ ಚೀನಾ ನಿರ್ಮಿಸುತ್ತಿರುವ ಅಣೆಕಟ್ಟುಗಳ ಬಗ್ಗೆ ಭಾರತ ಪ್ರಧಾನ ಮಂತ್ರಗಳು ಕಳವಳ ವ್ಯಕ್ತಪಡಿಸಿದರು. ಅಣೆಕಟ್ಟು ನಿರ್ಮಾಣದಿಂದ ಭಾರತಕ್ಕೆ ನೀರಿನ ಹರಿವು ಕಡಿಮೆ ಆಗಲಿರುವುದಾಗಿ ಸಿಂಗ್ ರವರು ಚೀನಾ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಟ್ಟರು.
- ಉಭಯ ದೇಶಗಳು ಬಳಿಕ ಗಡಿ ಸಮಸ್ಯೆ ಸೇರಿದಂತೆ ದ್ವಿಪಕ್ಷೀಯ ಸಹಕಾರದ ಬಗ್ಗೆ ಮಾತುಕತೆ ನಡೆಸಿದರು.

ಬ್ರಿಕ್ಸ್ ಶೃಂಗಸಭೆ:

- ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಬ್ರಿಕ್ಸ್ ಶೃಂಗಸಭೆಯನ್ನು ವಾರ್ಷಿಕವಾಗಿ ಆಯೋಜಿಸುತ್ತಿವೆ. 2009 ರಲ್ಲಿ ಮೊದಲ ಶೃಂಗಸಭೆಯ ಅತಿಥ್ಯವನ್ನು ರಷ್ಯಾ ವಹಿಸಿಕೊಂಡಿತ್ತು. ಜೂನ್ 16, 2009ರಲ್ಲಿ ರಷ್ಯಾದ ಯಾಕಟೆರಿಂಬರ್ಗ್ ನಲ್ಲಿ ಡಿಮಿಡ್ರಿ ಮೆಡ್ವಿಡೇವ್ ರವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಎರಡನೇ ಶೃಂಗಸಭೆ 2010 ರಲ್ಲಿ ಬ್ರೆಜಿಲ್ ನ ಬ್ರಸಿಲಿಯಾದಲ್ಲಿ ಲೂಲ ಡಿ ಸಿಲ್ವಾ ರವರ ಅಧ್ಯಕ್ಷತೆಯಲ್ಲಿ ಜರುಗಿತ್ತು. ಮೂರನೇ ಶೃಂಗಸಭೆ 2011 ರಲ್ಲಿ ಚೀನಾದ ಸನ್ಯಾದಲ್ಲಿ ನೇರವೇರಿತು. ಚೀನಾದ ಅಂದಿನ ಅಧ್ಯಕ್ಷ ಹೂ ಜಿಂಟೊ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. 2012 ರಲ್ಲಿ ಭಾರತದ ನವದೆಹಲಿಯಲ್ಲಿ ನಾಲ್ಕನೇ ಶೃಂಗಸಭೆಯನ್ನು ಮನಮೋಹನ್ ಸಿಂಗ್ ರವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

**<u>ಭಾರತ-ಮಂಗೋಲಿಯಾ ಸಹಕಾರ ಮೇಲಿನ ನಾಲ್ಕನೇ ಜಂಟಿ ಸಮಿತಿ ಸಭೆ</u>**

ಭಾರತ-ಮಂಗೋಲಿಯಾ ಸಹಕಾರ ಮೇಲಿನ ನಾಲ್ಕನೇ ಜಂಟಿ ಸಮಿತಿ ಸಭೆ ಮಾರ್ಚ್ 21 ರಂದು ನವದೆಹಲಿಯಲ್ಲಿ ನಡೆಯಿತು. ಭಾರತದ ಪರವಾಗಿ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಇ.ಅಹಮ್ಮದ್ ಮತ್ತು ಮಂಗೋಲಿಯಾದ ಪ್ರತಿನಿಧಿಯಾಗಿ ಮಂಗೋಲಿಯಾದ ಶಿಕ್ಷಣ ಮತ್ತು ವಿಜ್ಞಾನ ಸಚಿವ ಲುವಸನ್ಯಂ ಗಂಟುಮರ್ (Luvasannyam Gantumur) ರವರು ಭಾಗವಹಿಸಿದ್ದರು. ಉಭಯ ದೇಶಗಳ ನಡುವಿನ ಸಂಬಂಧದ ಪ್ರಗತಿಯನ್ನು ಸಬೆಯಲ್ಲಿ ಪುನರ್ ವಿಮರ್ಶಿಸಲಾಯಿತು.

ಸಭೆಯ ಮುಖ್ಯಾಂಶಗಳು:

- ಭಾರತದ ಕಂಪನಿಗಳು ಮಂಗೋಲಿಯಾದಲ್ಲಿ ಗಣಿಗಾರಿಕೆಯಲ್ಲಿ ಪಾಲ್ಗೊಳ್ಳಲು ಆಸಕ್ತರಾಗಿದ್ದು, ಹಾದಿಯನ್ನು ಸುಗಮಗೊಳಿಸಲು ಅಗತ್ಯ ಸಹಕಾರವನ್ನು ಮಂಗೋಲಿಯಾ ನೀಡಬೇಕಾಗಿ ಸಭೆಯಲ್ಲಿ ಚರ್ಚಿಸಲಾಯಿತು.

- ಭಾರತ ಮತ್ತು ಮಂಗೋಲಿಯಾ ಜಂಟಿಯಾಗಿ ಮಂಗೋಲಿಯಾದ ಉಲಾನ್ ಬಾತರ್ ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಾಹಿತಿ ತಂತ್ರಜ್ಞಾನ ಶಿಕ್ಷಣ ಕೇಂದ್ರದ ನಿರ್ಮಾಣಕ್ಕೆ ಭಾರತ 20 ಮಿಲಿಯನ್ ಯು.ಎಸ್ ಡಾಲರ್ ಧನ ಸಹಾಯವನ್ನು ಮಾಡುವುದಾಗಿ ಹೇಳಿತು.
- ಮಂಗೋಲಿಯಾದಲ್ಲಿ ಹಾಲು ಸಂಸ್ಕರಣ ಕೇಂದ್ರವನ್ನು ಸ್ಥಾಪಿಸುವ ಆಶಯವನ್ನು ಭಾರತ ಸಭೆಯಲ್ಲಿ ವ್ಯಕ್ತಪಡಿಸಿತು.
- ಉಭಯ ದೇಶಗಳ ನಡುವೆ ಸೇನಾ ಸಮರಾಭ್ಯಾಸ, ವಿಮಾನ ಯಾನ ಸೇವೆ ಆರಂಭ ವಿಷಯಗಳ ಬಗ್ಗೆ ಚರ್ಚಿಸಲಾಯಿತು.
- ಭಾರತ-ಮಂಗೋಲಿಯಾ ಸಹಕಾರ ಮೇಲಿನ 5 ನೇ ಜಂಟಿ ಸಮಿತಿ ಸಭೆ 2014 ರಲ್ಲಿ ಮಂಗೋಲಿಯಾದಲ್ಲಿ ನಡೆಯಲಿದೆ.

**ಗುಜರಾತ್ ನ ವಿವಾದತ್ಮಕ ಮಸೂದೆಗೆ ರಾಜ್ಯಪಾಲರ ಅಂಕಿತ**

ಗುಜರಾತ್ ಸರ್ಕಾರ ಮಂಡಿಸಿದ್ದ ವಿವಾದತ್ಮಕ ನೀರಾವರಿ ಮತ್ತು ಕಾಲುವೆ ಮಸೂದೆ-2013 ಕ್ಕೆ ರಾಜ್ಯಪಾಲರಾದ ಕಮಲ ಬೆನಿವಾಲ್ ರವರು ಸಹಿ ಹಾಕಿದ್ದರೆ. ಈ ಮಸೂದೆ ಇನ್ನು ಕಾಯಿದೆಯಾಗಿ ಜಾರಿಗೊಳ್ಳಲಿದೆ. ರಾಜ್ಯದ ರೈತರ ಹಿತಾಸಕ್ತಿಗೆ ಈ ಮಸೂದೆ ದಕ್ಕೆ ಉಂಟು ಮಾಡಲಿದೆ ಎಂದು ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಕೇಶುಬಾಯಿ ಪಾಟೇಲ್ ನೇತೃತ್ವದ ಗುಜರಾತ್ ಪರಿವರ್ತನ್ ಪಕ್ಷ ವ್ಯಾಪಕವಾಗಿ ಖಂಡಿಸಿದ್ದವು.

ಮಸೂದೆಯಲ್ಲಿ ಏನಿದೆ?

- ಕೃಷಿ ಭೂಮಿಯಲ್ಲಿ ಕೊಳವೆ ಬಾವಿ ಕೊರೆಸುವುದು ಮತ್ತು ಆದರಿಂದ ನೀರನ್ನು ಹೊರತೆಗೆಯುವುದರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಇನ್ನು ಮುಂದೆ ರೈತರು ಕೊಳವೆ ಬಾವಿ ಕೊರೆಸುವ ಮುಂಚೆ ಸರ್ಕಾರದಿಂದ ಅನುಮತಿ ಪಡೆಯುವುದು ಕಡ್ಡಾಯ.
- ಈ ಮಸೂದೆ ಜಾರಿಗೆ ಬರುವ ಮೂಲಕ ಗುಜರಾತ್ ನಲ್ಲಿ 134 ವರ್ಷಗಳಿಂದ ಇದುವರೆಗೂ ಅಸ್ತಿತ್ವದಲ್ಲಿದ್ದ "ಗುಜರಾತ್ ನೀರಾವರಿ ಕಾಯಿದೆ-1879 ರದ್ದಾಗಲಿದೆ".
- ಸಂಬಂಧಪಟ್ಟ ಅಧಿಕಾರಿಗಳು ರೈತರ ಜಮೀನಿನಿಗೆ ತೆರಳಿ ನಿಯಮಗಳ ಉಲ್ಲಂಘನೆಯನ್ನು ಪರಿಶೀಲಿಸಬಹುದಾಗಿದೆ. ಒಂದು ವೇಳೆ ನಿಯಮಗಳನ್ನು ಉಲ್ಲಂಘಿಸಿದರೆ 6 ತಿಂಗಳ ಕಾಲ ಸೆರೆಮನೆ ಸಜೆ ಮತ್ತು ರೂ.10000 ದಂಡ ವಿಧಿಸುವ ಅವಕಾಶವನ್ನು ಕಾಯ್ದೆಯಡಿ ಕಲ್ಪಿಸಲಾಗಿದೆ.

ವಿರೋಧ ಏಕೆ?

- ಗುಜರಾತ್ ನ 24 ಜಿಲ್ಲೆಗಳ ಪೈಕಿ 17 ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿವೆ. ಮಳೆ ಆಧಾರಿತ ಕೃಷಿ ನಡೆಸಿ ಜೀವನ ನಡೆಸುವ ದುಸ್ಥರವಾಗಿರುವ ಕಾರಣ ರೈತರು ಕೊಳವೆ ಬಾವಿ ಮೊರೆ ಹೋಗದೆ ಬೇರೆ ವಿಧಿ ಇಲ್ಲ. ರಾಜ್ಯ ಸರ್ಕಾರ ಜಾರಿಗೊಳಿಸಿರುವ ಈ ಮಸೂದೆಯಿಂದ ರೈತರ ಜೀವನ ಸಂಕಷ್ಟದಲ್ಲಿ ಸಿಲುಕಲಿದೆ ಎಂಬುದು ವಿರೋಧ ಪಕ್ಷಗಳ ವಾದ.

**ಪೋಲವರಂ ಯೋಜನೆ ವಿವಾದ: ಶೀಘ್ರವೇ ಅಧಿಕಾರಗಳ ಸಭೆ ಕೇಂದ್ರ ಸರ್ಕಾರ**

ಪೋಲವರಂ (Polavarm) ನೀರಾವರಿ ಯೋಜನೆಯ ವಿವಾದ ಬಗ್ಗೆ ಚರ್ಚಿಸಲು ಶೀಘ್ರವೇ ಆಂಧ್ರ ಮತ್ತು ಒಡಿಶಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳ ಮಟ್ಟದ ಸಭೆಯನ್ನು ಕರೆಯಲಾಗುವುದೆಂದು ಕೇಂದ್ರ ಜಲ ಸಂಪನ್ಮೂಲ ಸಚಿವ ಹರೀಶ್ ರಾವತ್ ಹೇಳಿದ್ದಾರೆ. ಪೋಲವರಂ ಕಾಮಗಾರಿ ಪ್ರಾರಂಭಿಸಲು ಆಂಧ್ರ ಪ್ರದೇಶ ಸರ್ಕಾರ ಮತ್ತೆ ತಯಾರಿ ನಡೆಸಿದ್ದು, ಕೇಂದ್ರ ಮಧ್ಯ ಪ್ರವೇಶಿಸಬೇಕಾಗಿ ಒಡಿಶಾ ಮುಖ್ಯಮಂತ್ರಿಗಳಾದ ನವೀನ್ ಪಟ್ನಾಯಕ್ ರವರು ಬೇಟಿ ನೀಡಿದ ವೇಳೆ ರಾವತ್ ರವರು ಸಭೆ ಕರೆಯುವುದಾಗಿ ಭರವಸೆ ನೀಡಿದ್ದಾರೆ.

<u>ಪೋಲವರಂ ಯೋಜನೆ</u>:

- ಪೋಲವರಂ ಯೋಜನೆಯನ್ನು ಆಂಧ್ರ ಪ್ರದೇಶ ಸರ್ಕಾರ ಗೋದಾವರಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿದೆ. ವಿವಿಧೋದ್ದೇಶ ನೀರಾವರಿ ಯೋಜನೆಯಾಗಿರುವ ಇದು ಇತ್ತೀಚಿನದಲ್ಲ. 1980 ರ ದಶಕದಲ್ಲಿ ಅಂದಿನ ಆಂಧ್ರ ಪ್ರದೇಶ ಮುಖ್ಯಮಂತ್ರಿಗಳಾದ ಟಿ.ಅಂಜಯ್ಯ ರವರು ಈ ಯೋಜನೆಗೆ ಶಂಕು ಸ್ಥಾಪನೆ ನೆರವೇರಿಸಿದ್ದರು. ಆದರೆ ಹಲವಾರು ವರ್ಷಗಳ ತನಕ ಯೋಜನೆ ಪ್ರಗತಿ ಕಾಣದೇ ನೆನೆಗುದಿಗೆ ಬಿದ್ದಿತ್ತು. 2004 ರಲ್ಲಿ ಆಂಧ್ರ ಪ್ರದೇಶ ಮುಖ್ಯ ಮಂತ್ರಿಗಳಾಗಿ ಆಯ್ಕೆಯಾದ ವೈ.ಎಸ್. ರಾಜಶೇಖರ್ ರೆಡ್ಡಿಯವರು ಈ ಯೋಜನೆಗೆ ಮತ್ತೆ ಚಾಲನೆ ನೀಡಿದ್ದರು.

<u>ಪೋಲವರಂ ಯೋಜನೆ ತಾಂತ್ರಿಕ ಅಂಶಗಳು</u>:

- ಈ ಯೋಜನೆಗೆ ನಿರ್ಮಿಸಿರುವ ಅಣೆಕಟ್ಟಿನ ಉದ್ದ 2,310 ಅಡಿಗಳು. 75.2 tmcft ಯಷ್ಟು ನೀರಿನ ಶೇಖರಣೆಯ ಸಾಮರ್ಥ್ಯವನ್ನು ಹೊಂದಿದೆ. ಯೋಜನೆಯ ವೆಚ್ಚ ರೂ.1,353 ಕೋಟಿ (2004 ರಲ್ಲಿ).
- ಆಂಧ್ರ ಪ್ರದೇಶದ ಕೃಷ್ಣ, ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ವಿಶಾಖ ಪಟ್ಟಣಂ ಮತ್ತು ಶ್ರಿಕಾಕುಲಂ ಜಿಲ್ಲೆಯ ಸುಮಾರು 2,32,000 ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಕನಸನ್ನು ಈ ಯೋಜನೆ ಹೊಂದಿದೆ.

<u>ವಿರೋಧ ಏಕೆ?</u>

- ಪೋಲವರಂ ನೀರಾವರಿ ಯೋಜನೆ ಪ್ರಾರಂಭವಾದ ದಿನದಿಂದಲೂ ಒಂದಲ್ಲ ಒಂದು ವಿವಾದಕ್ಕೆ ಸಿಲುಕಿ ಸುದ್ದಿಯಲ್ಲಿದೆ. ಅಪಾರ ಅರಣ್ಯ ಸಂಪತ್ತಿನ ನಾಶ, ಅನೇಕ ಪುರಾತತ್ವ ಸ್ಥಳಗಳ ಮುಳಗಡೆ ಸೇರಿದಂತೆ ವನ್ಯ ಜೀವಿಗಳಿಗೂ ಈ ಯೋಜನೆಯಿಂದ ಅಪಾಯ ಎದುರಾಗಲಿದೆ ಎಂಬುದು ಪರಿಸರ ಹೋರಾಟಗಾರ್ತಿ ಮೇಧಾ ಪಾಟ್ಕರ್ ರವರ ವಾದ.
- ಇನ್ನೊಂದೆಡೆ ಸಮೀಕ್ಷೆಗಳ ಪ್ರಕಾರ ಆಂಧ್ರಪ್ರದೇಶದ 276 ಹಳ್ಳಿಗಳ ಸುಮಾರು 44,754 ಕುಟುಂಬಗಳು ಈ ಯೋಜನೆಗೆ ಮುಳುಗಡೆ ಆಗಲಿದೆ ಎಂದು ಮಾನವ ಹಕ್ಕು ಹೋರಾಟಗಾರರು ಎಚ್ಚರಿಸಿದ್ದಾರೆ. ದುರಾದೃಷ್ಟವೆಂದರೆ ಇದರಲ್ಲಿ ಶೇ.50 ರಷ್ಟು ಕುಟುಂಬಗಳು ಬುಡಕಟ್ಟು ಜನಾಂಗಕ್ಕೆ ಸೇರಿರುವುದು.

<u>ಒಡಿಶಾ ರಾಜ್ಯದ ತಕರಾರು ಏಕೆ?</u>

- ಈ ಯೋಜನೆಯಿಂದ ಒಡಿಶಾ ರಾಜ್ಯದ ಗಡಿ ಭಾಗದಲ್ಲಿರುವ ಕೆಲವು ಬುಡಕಟ್ಟು ಪ್ರದೇಶಗಳು ಮುಳುಗಡೆ ಆಗಲಿವೆ ಎಂದು ಒಡಿಶಾ ಸರ್ಕಾರ ಕಳವಳ ವ್ಯಕ್ತಪಡಿಸಿದೆ. ಚತ್ತೀಸ್ ಗರ್ ಸಹ ಇದನ್ನೆ ಹೇಳುತ್ತಿದೆ. ಆದರೆ ಇದನ್ನು ಅಂದಿನ ಆಂಧ್ರಪ್ರದೇಶ ಮುಖ್ಯ ಮಂತ್ರಿಗಳಾದ ವೈ.ಎಸ್.ರಾಜಶೇಖರ್ ರೆಡ್ಡಿಯವರು ಅಲ್ಲಗಳೆದಿದ್ದರು. ವಿವಾದ ತಣ್ಣಗಾಗದ ಕಾರಣ ಒಡಿಶಾ ಮತ್ತು ಚತ್ತೀಸ್ ಗರ್ ರಾಜ್ಯಗಳು ಸುಪ್ರೀಂಕೋರ್ಟ ಮೆಟ್ಟಿಲೇರಿದ್ದವು. ಪ್ರಕರಣ ಇತ್ಯರ್ಥವಾಗದೇ ಬಾಕಿ

ಇರುವಾಗ ಆಂಧ್ರ ಪ್ರದೇಶ ಸರ್ಕಾರ ಈಗ ಕಾಮಗಾರಿಗೆ ಹೊಸ ಟೆಂಡರ್ ಕರೆದಿರುವ ಕಾರಣ ಮತ್ತೆ ವಿವಾದದ ಹೊಗೆ ಹಬ್ಬಲು ಶುರುವಾಗಿದೆ.

**"ಮಣಿಪುರ ಪೀಪಲ್ ಪಾರ್ಟಿ" (MPP) ಪಕ್ಷದ ಮಾನ್ಯತೆ ರದ್ದು ಮಾಡಿದ ಚುನಾವಣಾ ಆಯೋಗ**

ಮಣಿಪುರ ರಾಜ್ಯದ ಪ್ರಮುಖ ರಾಜಕೀಯ ಪಕ್ಷವಾದ "ಮಣಿಪುರ ಪೀಪಲ್ ಪಾರ್ಟಿ" ಪಕ್ಷದ ಮಾನ್ಯತೆಯನ್ನು ರದ್ದುಪಡಿಸಿ ಭಾರತ ಚುನಾವಣ ಆಯೋಗ ಆದೇಶವನ್ನು ಹೊರಡಿಸಿದೆ. ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿರುವುದೇ ಮಾನ್ಯತೆ ರದ್ದಾಗಲು ಪ್ರಮುಖ ಕಾರಣ.

- "ಮಣಿಪುರ ಪೀಪಲ್ ಪಾರ್ಟಿ" ಹಿಂದೆ ಎರಡು ಬಾರಿ ಮಣಿಪುರ ರಾಜ್ಯದ ಅಧಿಕಾರ ಗದ್ದುಗೆಯನ್ನು ಏರಲು ಶಕ್ತವಾಗಿತ್ತು. ಆದರೆ 2009 ರಲ್ಲಿ ನಡೆದ ಲೋಕಸಭಾ ಚುನಾವಣೆ ಮತ್ತು 2012 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಕನಿಷ್ಠ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಪಕ್ಷ ವಿಫಲವಾಗಿದೆ. ಆಗಾಗಿ ಪಕ್ಷದ ಮಾನ್ಯತೆಯನ್ನು ಚುನಾವಣಾ ಆಯೋಗ ರದ್ದುಗೊಳಿಸಿದೆ.

ಮಣಿಪುರ ಪೀಪಲ್ ಪಾರ್ಟಿ"

- ಭಾರತ ರಾಷ್ಟ್ರೀಯ ಕಾಂಗ್ರೆಸ್ ನಿಂದ ಹೊರಬಂದ ಕೆಲ ನಾಯಕರು ಡಿಸೆಂಬರ್ 26, 1968 ರಲ್ಲಿ ಈ ಪಕ್ಷವನ್ನು ಸ್ಥಾಪಿಸಿದ್ದರು. ಮಣಿಪುರದ ಸಮತೋಲನ ಅಭಿವೃದ್ಧಿ ಪಕ್ಷ ದುಡಿಯುವುದಾಗಿ ಹೇಳಿಲಾಗಿತ್ತು.
- 4 ಮಾರ್ಚ್ 1974 ರಿಂದ 9 ಜುಲೈ 1974 ಮತ್ತು 23 ಫೆಬ್ರವರಿ 1990 ರಿಂದ 6 ಜನವರಿ 1992 ರವರೆಗೆ ಎರಡು ಬಾರಿ ಮಣಿಪುರ ರಾಜ್ಯವನ್ನು MPP ಮುನ್ನಡೆಸಿತ್ತು.
- 2007 ರಲ್ಲಿ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಒಟ್ಟು 60 ಕ್ಷೇತ್ರಗಳಲ್ಲಿ ಕೇವಲ 5 ಕ್ಷೇತ್ರಗಳಲ್ಲಿ ಮಾತ್ರ ಪಕ್ಷ ಗೆಲುವನ್ನು ಕಂಡಿತ್ತು.

ಕರುನಾಡು ಎಗ್ಸಾಮ್ಸ್

## ಅಂತರರಾಷ್ಟ್ರೀಯ

**ದೆಲವರ್ ಹುಸೇನ್ ಗೆ ಗಲ್ಲು: ಬಾಂಗ್ಲದಲ್ಲಿ ಭುಗಿಲೆದ್ದ ಹಿಂಸಾಚಾರ**

ಬಾಂಗ್ಲದೇಶದ "ಜಮತ್-ಎ-ಇಸ್ಲಾಮಿ" ಪಕ್ಷದ ಉಪಾಧ್ಯಕ್ಷರಾದ ದೆಲವರ್ ಹುಸೇನ್ ರವರಿಗೆ ಗಲ್ಲು ಶಿಕ್ಷೆ ವಿಧಿಸಿರುವ ಕಾರಣ "ಜಮತ್-ಎ-ಇಸ್ಲಾಮಿ" ಪಕ್ಷದ ಕಾರ್ಯಕರ್ತರು ನಡೆಸುತ್ತಿರುವ ಹಿಂಸಾಚಾರ ಬಾಂಗ್ಲದಲ್ಲಿ ಶಾಂತಿ ಕದಡಿಸಿದೆ. ಈ ಹಿನ್ನೆಲೆಯಲ್ಲಿ ನಡೆದ ಹಿಂಸಾಚಾರದಲ್ಲಿ ಬಾಂಗ್ಲದ ಮೂರು ಪೋಲಿಸರು ಸೇರಿದಂತೆ ಒಟ್ಟು 36 ಜನರು ಮರಣಹೊಂದಿದ್ದಾರೆ.

ವಿವಾದ ಏನು?

- 1971 ರಲ್ಲಿ ನಡೆದ ಬಾಂಗ್ಲ ವಿಮೋಚನ ಚಳುವಳಿಯ ಸಂಧರ್ಭದಲ್ಲಿ ಯುದ್ದಾಪರಾಧ ನಡೆಸಿರುವುದಾಗಿ ಹುಸೇನ್ ರವರನ್ನು ಆರೋಪಿಸಲಾಗಿತ್ತು. ವಿಮೋವನ ಚಳುವಳಿಯ ವೇಳೆ ನಡೆದ ಯುದ್ದಾಪರಾಧ ತನಿಖೆಗೆಂದೇ ಬಾಂಗ್ಲದೇಶ ಅಂತರಾಷ್ಟ್ರೀಯ ಅಪರಾಧಿ ವಿಚಾರಣಾ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದೆ. ವಿಚಾರಣೆ ವೇಳೆ ಹುಸೇನ್ ರವರು ಮಾಡಿರುವ ಕೃತ್ಯ ಸಾಬೀತಾದ ಕಾರಣ ನ್ಯಾಯಾಲವು ಅವರಿಗೆ ಗಲ್ಲು ಶಿಕ್ಷೆ ವಿಧಿಸಿದೆ.

**ಮಾರ್ಚ್ 8: ಅಂತರ ರಾಷ್ಟ್ರೀಯ ಮಹಿಳೆಯರ ದಿನ**

ಪ್ರತಿ ವರ್ಷ ಮಾರ್ಚ್ 8 ನ್ನು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನದಂದು ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಾಧನೆಗಳನ್ನು ಸ್ಮರಿಸಲಾಗುವುದರ ಜೊತೆಗೆ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಲಾಗುವುದು. ಮೊದಲ ಬಾರಿ ಫೆಬ್ರವರಿ 28, 1909 ರಂದು ಅಮೆರಿಕಾದಲ್ಲಿ ಮಹಿಳಾ ದಿನವನ್ನು ಆಚರಿಸಲಾಗಿತ್ತು. ಆದರೆ 1977 ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಮಂಡಳಿಯು ಮಾರ್ಚ್ 8 ನ್ನು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲು ತನ್ನ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿತು. ಅಂದಿನಿಂದ ಮಾರ್ಚ್ 8 ನ್ನು ಮಹಿಳೆಯರ ದಿನವನ್ನಾಗಿ ಆಚರಿಸಲಾಗುತ್ತಿದೆ.

- "A Promise is a promise: Time for Action to end violence against Women" ಇದು ಈ ವರ್ಷದ ಮಹಿಳಾ ದಿನದ ಥೀಮ್

ನಟಿಯರಿಗೆ ಆದ್ಯತೆ: ಶಾರುಖ್

- ಚಲನ ಚಿತ್ರಗಳಲ್ಲಿ ತಾರಾಗಣದ ಹೆಸರನ್ನು ತೋರಿಸುವಾಗ ಚಿತ್ರದ ಪ್ರಧಾನ ಪಾತ್ರದಲ್ಲಿರುವ ನಟಿಯರ ಹೆಸರನ್ನು ಮೊದಲು ಪ್ರದರ್ಶಿಸುವಂತೆ ನಿರ್ಮಾಪಕರಲ್ಲಿ ಶಾರುಖ್ ಖಾನ್ ಮನವಿ ಮಾಡಿದ್ದಾರೆ. ಅಲ್ಲದೇ ಈ ಪದ್ದತಿಯನ್ನು ತಮ್ಮ ಮುಂದಿನ ಚಿತ್ರ "ಚೆನ್ನೈ ಎಕ್ಸ್ ಪ್ರೆಸ್" ನಿಂದಲೇ ಶುರು ಮಾಡುವುದಾಗಿ ಹೇಳಿದ್ದಾರೆ. ಇದರಿಂದ ಭಾರಿ ಬದಲಾವಣೆ ಆಗದಿದ್ದರೂ ಮಹಿಳೆಯರ ಕುರಿತಾದ ಮನೋಭಾವ ಬದಲಾಗಲಿದೆ ಎಂಬುದು ಅವರ ಅನಿಸಿಕೆ.

**ಉತ್ತರ ಕೊರಿಯಾ ಮೇಲೆ ನಿರ್ಬಂಧ ಹೇರಿದ ವಿಶ್ವ ಸಂಸ್ಥೆ ಭದ್ರತಾ ಮಂಡಳಿ**

ಆಮೆರಿಕಾ ಸೇರಿದಂತೆ ವಿಶ್ವದ ಬಲಿಷ್ಠ ರಾಷ್ಟ್ರಗಳ ಎಚ್ಚರಿಕೆಯನ್ನು ಬದಿಗೊತ್ತಿ ಅಣ್ವಸ್ತ್ರ ಪರೀಕ್ಷೆ ನಡೆಸಿದೆ ಉತ್ತರ ಕೊರಿಯಾ ದೇಶದ ಮೇಲೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಸರ್ವಾನುಮತದಿಂದ ನಿರ್ಬಂಧ ಹೇರಿದೆ. ಉತ್ತರ ಕೊರಿಯಾದ ನಡೆಸಿರುವ ಖಂಡಾಂತರ ಕ್ಷಿಪಣಿ ಪರೀಕ್ಷೆ ಮತ್ತು ಅಣ್ವಸ್ತ್ರ ಪರೀಕ್ಷೆಯಿಂದಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಸಂಬಂಧ ಚೀನಾ ದೇಶ ಆಮೆರಿಕಾದೊಂದಿಗೆ ಬೆಂಬಲಕ್ಕೆ ನಿಂತು 15-0 ರ ನಿರ್ಣಯಕ್ಕೆ ಸಹಿ ಹಾಕಿವೆ.

- ವಿವಿಧ ದೇಶಗಳ ವ್ಯಾಪಕ ವಿರೋಧದ ನಡುವೆಯೂ ಇತ್ತೀಚೆಗೆ ಅಷ್ಟೇ ಉತ್ತರ ಕೊರಿಯಾ ಭೂಮಿಯ ಅಂತರಾಳದಲ್ಲಿ ತನ್ನ ಮೂರನೇ ಅಣ್ವಸ್ತ್ರ ಪರೀಕ್ಷೆಯನ್ನು ನಡೆಸಿತ್ತು.
- ಇದೇ ವೇಳೆ ಆಮೆರಿಕಾ ಮತ್ತು ಉತ್ತರ ಕೊರಿಯಾ ನಡುವೆ ಸಂಘರ್ಷ ತಾರಕಕ್ಕೇರಿದೆ. ತನ್ನ ವಿರುದ್ಧ ವಿನಾ ಕಾರಣ ಗುಡಿಗಿದರೆ ಆಮೆರಿಕಾಗೆ ತಕ್ಕ ಪಾಠ ಕಲಿಸುವುದಾಗಿ ಉತ್ತರ ಕೊರಿಯಾ ಎಚ್ಚರಿಸಿದೆ.

**ಉಹುರು ಕೆನ್ಯಾಟ್ಟಾ (Uhuru Kenyatta) ಕೀನ್ಯಾದ ನೂತನ ರಾಷ್ಟ್ರಧ್ಯಕ್ಷ**

ಕೀನ್ಯಾದ ರಾಷ್ಟ್ರಪತಿ ಸ್ಥಾನಕ್ಕೆ ಇತ್ತೀಚೆಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಮಾನವೀಯತೆಯ ವಿರುದ್ಧ ಆಪಾದಿತ ಅಪರಾಧಗಳನ್ನು ಎದುರಿಸುತ್ತಿರುವ ಕೀನ್ಯಾದ ಉಪಪ್ರಧಾನಿ ಉಹುರು ಕೆನ್ಯಾಟ್ಟಾ ರವರು ಈ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಕೀನ್ಯಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

- ತೀವ್ರ ಪೈಪೋಟಿಯಿದ್ದ ಈ ಚುನಾವಣೆಯಲ್ಲಿ ಕೆನ್ಯಾಟ್ಟಾ ರವರು ತಮ್ಮ ಪ್ರತಿಸ್ಪರ್ಧಿ ಮತ್ತು ಕೀನ್ಯಾದ ಹಾಲಿ ಪ್ರಧಾನಿ ರೈಲ ಒಡಿಂಗಾ ರವರನ್ನು ಕೆಲವೇ ಕೆಲವು ಮತಗಳ ಅಂತರದಿಂದ ಸೋಲಿಸಿದ್ದಾರೆ. ಶೇ 50 ಕ್ಕೂ ಹೆಚ್ಚು ಮತಗಳ ಪಡೆಯಬೇಕಿದ್ದ ಈ ಚುನಾವಣೆಯಲ್ಲಿ ಕೆನ್ಯಾಟ್ಟಾ ಶೇ.50.07 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದ್ದಾರೆ.

ಉಹುರು ಕೆನ್ಯಾಟ್ಟಾ:

- ಕೀನ್ಯಾದ ನಾಲ್ಕನೇ ಅಧ್ಯಕ್ಷರಾಗಲಿರುವ ಕೆನ್ಯಾಟ್ಟಾ ರವರ ವಿರುದ್'ದ ಈಗಾಗಲೇ ಅಂತರ ರಾಷ್ಟ್ರೀಯ ಅಪರಾಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದೆ. 2007-08 ರಲ್ಲಿ ನಡೆದ ಚುನಾವಣೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಸೂಡಾನ್ ದೇಶದ ನಂತರ ಅಂತರ ರಾಷ್ಟ್ರೀಯ ಅಪರಾಧ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿರುವ ಅಧ್ಯಕ್ಷರನ್ನು ಹೊಂದಿರುವ ಎರಡನೇ ದೇಶ ಕೀನ್ಯಾ ಆಗಿದೆ.

**ವೆನಿಜುವೆಲಾದ ಹಂಗಾಮಿ ಅಧ್ಯಕ್ಷರಾಗಿ ನಿಕೊಲಾಸ್ ಮಡುರೊ**

ವೆನುಜುವೆಲಾದ ಉಪಾಧ್ಯಕ್ಷರಾದ ನಿಕೊಲಾಸ್ ಮಡುರೊ(Nicolas Mudoro) ರವರು ವಿರೋಧ ಪಕ್ಷಗಳ ತೀವ್ರ ವಿರೋಧದ ನಡುವೆಯೂ ವೆನುಜುವೆಲಾದ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇತ್ತೀಚೆಗೆ ಕ್ಯಾನ್ಸರ್ ರೋಗದಿಂದ ವೆನುಜುವೆಲಾದ ಅಧ್ಯಕ್ಷ ಹ್ಯೂಗೊ ಷಾವೇಜ್ ಮರಣ ಹೊಂದಿದ ಕಾರಣ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ವಿರೋಧ ಏಕೆ?

- ವೆನುಜುವೆಲಾದ ಸಂವಿಧಾನದ ಪ್ರಕಾರ ಸೇವೆಯಲ್ಲಿದ್ದ ಅಧ್ಯಕ್ಷರು ಮರಣ ಹೊಂದಿದರೆ ಅಥವಾ ಆಡಳಿತ ನಡೆಸಲು ಅಸಾಮರ್ಥ್ಯರಾದರೆ ನ್ಯಾಷನಲ್ ಅಸೆಂಬ್ಲಿ ಯ ಸ್ಪೀಕರ್ ಹಂಗಾಮಿ ಅಧ್ಯಕ್ಷರಾಗಿ ಆಡಳಿತ ನಡೆಸಬೇಕು. ಹಾಗೂ ಅಧ್ಯಕ್ಷ ಸ್ಥಾನ ತೆರವುಗೊಂಡ 30 ದಿನದೊಳಗೆ ಚುನಾವಣೆಯನ್ನು ನಡೆಸಬೇಕು.
- ಸಂವಿಧಾನದ ಉಲ್ಲಂಘನೆಯನ್ನು ತೀವ್ರವಾಗಿ ಖಂಡಿಸಿರುವ ವಿರೋಧ ಪಕ್ಷದ ನಾಯಕ ಏಂಜೆಲ್ ಮದೀನಾ (Angel Medina) ರವರು ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಗೈರುಹಾಜರಾಗುವ ಮೂಲಕ ಈ ಕ್ರಮವನ್ನು ವಿರೋಧಿಸಿದ್ದಾರೆ.
- ಈ ಹಿಂದೆ ವೆನುಜುವೆಲಾದ ಮಾಜಿ ಅಧ್ಯಕ್ಷರಾದ “ಕಾರ್ಲೋಸ್ ಅಂಡ್ರೆಸ್ ಪೆರೆಜ್” ರವರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಿದಾಗ “ರಾಮೊನ್ ಜೊಸ್ ವೆಲಸ್ಕೆಜ್” ರವರು ಹಂಗಾಮಿ ಅಧ್ಯಕ್ಷರಾಗಿ ಆಡಳಿತ ನಡೆಸಿದ್ದರು.

**ಮಯನ್ಮಾರ್ ವಿರೋಧ ಪಕ್ಷದ ನಾಯಕಿಯಾಗಿ ಸೂಕಿ ಪುನರ್ ಆಯ್ಕೆ**

ನೊಬೆಲ್ ಪುರಸ್ಕೃತೆ ಆಂಗ್ ಸನ್ ಸೂಕಿ ರವರು ಮಯನ್ಮಾರ್ (ಬರ್ಮಾ) ನ ವಿರೋಧ ಪಕ್ಷದ ನಾಯಕಿಯಾಗಿ ಮರು ಆಯ್ಕೆಗೊಂಡಿದ್ದಾರೆ. ಇತ್ತೀಚೆಗೆ ನಡೆದ ಗೌಪ್ಯ ಮತದಾನದಲ್ಲಿ ಮಯನ್ಮಾರ್ ನ ವಿರೋಧ ಪಕ್ಷವಾದ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಪಕ್ಷದ ನಾಯಾಕಿಯಾಗಿ ಸೂಕಿಯವರನ್ನು ಮರು ಆಯ್ಕೆಮಾಡಲಾಗಿದೆ. ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಸಹ ಬದಲಾವಣೆ ಮಾಡಲಾಗಿದ್ದು, 7 ಸದಸ್ಯರನ್ನು ಹೊಂದಿದ್ದ ಈ ಸಮಿತಿಯ ಸಂಖ್ಯೆಯನ್ನು 15 ಕ್ಕೆ ಹೆಚ್ಚಿಸಲಾಗಿದೆ. 2015 ರಲ್ಲಿ ನಡೆಯಲಿರುವ ಚುನಾವಣೆಗೆ ಪಕ್ಷವನ್ನು ಬಲಗೊಳಿಸಿ ಮುನ್ನಡೆಸುವ ಕೆಲಸವನ್ನು ಸೂಕಿ ನಿಭಾಯಿಸಬೇಕಿದೆ.

- ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಪಕ್ಷವನ್ನು ಸೆಪ್ಟೆಂಬರ್ 27, 1988 ರಲ್ಲಿ ಸ್ಥಾಪಿಸಲಾಗಿದೆ. 1999 ರಲ್ಲಿ ನಡೆದ ಸಾರ್ವತಿಕ ಚುನಾವಣೆಯಲ್ಲಿ NDL ಜಯಗಳಿಸಿದರು ಸಹ ಜುಂಟಾಗಳ ದಬ್ಬಾಳಿಕೆಯಿಂದ ಅಧಿಕಾರ ಪಡೆಯುವಲ್ಲಿ ವಿಫಲವಾಯಿತು. 2012 ರಲ್ಲಿ ನಡೆದ ಉಪಚುನಾವಣೆಯಲ್ಲಿ 44 ಸೀಟುಗಳಲ್ಲಿ 43 ಸೀಟುಗಳನ್ನು ಗೆಲ್ಲುವ ಮೂಲಕ ಸೂಕಿ ಸಂಸತ್ತನ್ನು ಪ್ರವೇಶಿಸಿದ್ದಾರೆ.

ಆಂಗ್ ಸನ್ ಸೂಕಿ:

- ಮಯನ್ಮಾರ್ ನ ಪ್ರಭಾವಿ ಮಹಿಳೆಯಾಗಿರುವ ಸೂಕಿರವರನ್ನು ಜುಂಟಾಗಳು 1989 ರಿಂದ 2010 ರ ವರೆಗೆ ಗೃಹ ಬಂಧನದಲ್ಲಿ ಇರಿಸಿದ್ದರು. 2010 ರಲ್ಲಿ ಬಿಡುಗಡೆಗೊಂಡ ಬಳಿಕ ರಾಜಕೀಯದಲ್ಲಿ ಸೂಕಿಯವರು ಸಕ್ರಿಯರಾಗಿದ್ದಾರೆ. ಸೂಕಿಯವರ ಧೈರ್ಯ ಮತ್ತು ಹೋರಾಟದ ಗುಣವನ್ನು ಗುರುತಿಸಿ ಸಾಕಷ್ಟು ಪ್ರಶಸ್ತಿಗಳನ್ನು ನೀಡಲಾಗಿದೆ. 1991 ರಲ್ಲಿ ಅವರಿಗೆ ನೊಬೆಲ್ ಪ್ರಶಸ್ತಿ ಸಹ ನೀಡಿ ಗೌರವಿಸಲಾಗಿದೆ. ಭಾರತದ ಜವಹಾರ್ ಲಾಲ್ ನೆಹರೂ ಪ್ರಶಸ್ತಿ ಸೇರಿದಂತೆ ಅಮೆರಿಕಾದ ಅತ್ಯುನ್ನತ ಪ್ರಶಸ್ತಿಗಳನ್ನು ಸೂಕಿ ಪಡೆದಿದ್ದಾರೆ.

**ಸರ್ಕಾರ ಪುನರ್ ರಚನೆ ಯೋಜನೆಯನ್ನು ಸಿದ್ದಪಡಿಸಿರುವ ಚೀನಾ**

ಚೀನಾದಲ್ಲಿ ಕ್ಸಿ ಜಿನ್ ಪಿಂಗ್ ನೇತೃತ್ವದ ಸರ್ಕಾರ ಅಧಿಕಾರವಹಿಸಿಕೊಳ್ಳಲ್ಲು ಕ್ಷಣಗಣನೆ ಪ್ರಾರಂಭವಾಗಿರುವ ಬೆನ್ನಲ್ಲೇ ಸರ್ಕಾರದ ವ್ಯವಸ್ಥೆಗೆ ಬದಲಾವಣೆ ತರುವ ಸಲುವಾಗಿ ಮರು ರಚನೆ ಮಾಡಲು ಯೋಜನೆಯನ್ನು ರೂಪಿಸಿದೆ. ಯೋಜನೆಯ ಪ್ರಕಾರ ಚೀನಾದ ರೈಲ್ವೆ ಸಚಿವಾಲಯ ಸೇರಿದಂತೆ ಇತರೆ ಪ್ರಮುಖ ಸಚಿವಾಲಯಗಳನ್ನು ಕೈಬಿಡಲು ನಿರ್ಧರಿಸಲಾಗಿದೆ.

ಯೋಜನೆಯ ಪ್ರಮುಖ ಅಂಶಗಳು:

- ರೈಲ್ವೆ ಸಚಿವಾಲಯವನ್ನು ತೆಗೆದುಹಾಕಲು ನಿರ್ಧರಿಸಲಾಗಿದೆ. ಇದರ ವಾಣಿಜ್ಯ ಭಾಗದ ಉಸ್ತುವಾರಿಯನ್ನು ಇನ್ನು ಮುಂದೆ ಚೀನಾ ರೈಲ್ವೆ ಕಾರ್ಪೋರೇಶನ್ ವಹಿಸಿಕೊಳ್ಳಲಿದೆ. ಮತ್ತು ರೈಲ್ವೆ ಅಭಿವೃದ್ಧಿ ಮತ್ತು ಯೋಜನೆಯ ಜವಬ್ದಾರಿಯನ್ನು ಸಾರಿಗೆ ಸಚಿವಾಲಯ ನೋಡಿಕೊಳ್ಳಲಿದೆ.
- ರಾಷ್ಟ್ರೀಯ ಕುಟುಂಬ ಯೋಜನೆ ಆಯೋಗವನ್ನು ಆರೋಗ್ಯ ಸಚಿವಾಲಯದಡಿ ತರಲು ಯೋಚಿಸಿದೆ. ಚೀನಾ ಒಂದೇ ಮಗು ನಿಯಮವನ್ನು ರಾಷ್ಟ್ರೀಯ ಕುಟುಂಬ ಯೋಜನೆ ಆಯೋಗ ಇಲ್ಲಿಯವರಗೆ ಅನುಷ್ಟಾನಗೊಳಿಸಿತ್ತಿತ್ತು.
- ಆಹಾರ ಮತ್ತು ಔಷಧಿಗಳಿಗೆ ಪುನರ್ ರಚನೆಯಲ್ಲಿ ಬಹಳಷ್ಟು ಒತ್ತು ನೀಡಲಿದೆ. ಈ ಸಂಬಂಧ ವಿವಿಧ ಏಜೆನ್ಸಿಗಳನ್ನು ಒಂದುಗೂಡಿಸಲ್ಲಿದ್ದು, ಆಹಾರ ಮತ್ತು ಔಷಧಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ.
- ಸ್ಟೇಟ್ ಎಲೆಕ್ಟ್ರಿಸಿಟಿ ರೆಗ್ಯೂಲೆಟರಿ ಕಮೀಷನ್ ನ್ನು ಅನೂರ್ಜಿತಗೊಳಿಸಿ ಇದರ ಹೊಣೆಗಾರಿಕೆಯನ್ನು ನ್ಯಾಷನಲ್ ಎನರ್ಜಿ ಅಡ್ಮಿನಿಸ್ಟ್ರೇಷನ್ ಗೆ ವಹಿಸಲಾಗುವುದು.
- ಇದರ ಜತೆಗೆ ಸ್ಟೇಟ್ ರೇಡಿಯೋ, ಫಿಲ್ಮಂ ಮತ್ತು ಟೆಲಿವಿಷನ್ ಹಾಗೂ ಜನರಲ್ ಅಡ್ಮಿನಿಸ್ಟ್ರೇಷನ್ ಆಫ್ ಪ್ರೆಸ್ ಅಂಡ್ ಪಬ್ಲಿಕೇಷನ್ ನನ್ನು ಒಂದುಗೂಡಿಸಲಾಗುವುದು.

**ಇರಾನ್ – ಪಾಕಿಸ್ತಾನ ನಡುವೆ ಅನಿಲ ಕೊಳವೆ ಯೋಜನೆಗೆ ಚಾಲನೆ**

ಇರಾನ್ ಮತ್ತು ಪಾಕಿಸ್ತಾನ ನಡುವೆ ಕೊಳವೆ ಮೂಲಕ ಅನಿಲವನ್ನು ಸಾಗಿಸುವ ಯೋಜನೆಗೆ ಇತ್ತೀಚೆಗೆ ಚಾಲನೆ ನೀಡಲಾಯಿತು. ಆಮೆರಿಕಾದ ವಿರೋಧದ ನಡುವೆಯು ಇರಾನ್ ನ ಅಧ್ಯಕ್ಷ ಮಹಮ್ಮದ್ ಅಹಮದಿನೇಜ್ ಮತ್ತು ಪಾಕಿಸ್ತಾನದ ಅಧ್ಯಕ್ಷರಾದ ಆಸಿಫ್ ಅಲಿ ಜರ್ದಾರಿ ರವರು ಈ ಯೋಜನೆಯ ಕಾಮಗಾರಿಗೆ ಚಾಲನೆ ನೀಡಿದರು. ಇರಾನ್ ನ ಚಬಹಾರ್ (Chabahar) ನಗರದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಉಭಯ ದೇಶಗಳ ಕೆಲವು ಸಚಿವರು ಮತ್ತು ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ಯೋಜನೆ ಬಗ್ಗೆ:

- 2,775 ಕಿ.ಮೀ ಉದ್ದದ ಕೊಳವೆ ಮಾರ್ಗ ಇದಾಗಿದ್ದು, 900 ಕಿ.ಮೀ ಉದ್ದವನ್ನು ಇರಾನ್ ತನ್ನ ನೆಲದಲ್ಲಿ ಪೂರ್ಣಗೊಳಿಸಲಿದೆ. ಯೋಜನೆಯ ಉಳಿದ ಮಾರ್ಗವನ್ನು ಪಾಕಿಸ್ತಾನದ ನೆಲದಲ್ಲಿ ಉಭಯ ದೇಶಗಳು ಜಂಟಿಯಾಗಿ ಕೈಗೊಳ್ಳಲಿವೆ. ಈ ಯೋಜನೆಗೆ ತಗುಲಿರುವ ವೆಚ್ಚ 7.5 ಬಿಲಿಯನ್ ಡಾಲರ್.
- ಈ ಯೋಜನೆಯು 2014 ರ ಮಧ್ಯಂತರಕ್ಕೆ ಪೂರ್ಣಗೊಳ್ಳಲಿದ್ದು, ಇರಾನ್ ನಿಂದ ಪ್ರತಿದಿನ 21.1 ಮಿಲಿಯನ್ ಕ್ಯೂಬಿಕ್ ಮೀಟರ್ ನೈಸರ್ಗಿಕ ಅನಿಲವನ್ನು ಪಾಕಿಸ್ತಾನಕ್ಕೆ ರವಾನೆ ಮಾಡಲಾಗುವುದು. ಇದರಿಂದ ಪಾಕಿಸ್ತಾನದ ಶೇ.40 ರಷ್ಟು ಇಂಧನ ಕೊರತೆ ನೀಗಲಿದೆ ಎಂದು ಅಂದಾಜಿಸಲಾಗಿದೆ.

ಆಮೆರಿಕಾ ವಿರೋಧ ಏಕೆ?

- ಕೊಳವೆ ಮೂಲಕ ಅನಿಲ ಸರಬರಾಜು ಮಾಡುವ ನೆಪದಲ್ಲಿ ಇರಾನ್ ಅಣು ಪರೀಕ್ಷೆಗಳಂತ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ ಎಂಬುದು ಆಮೆರಿಕಾದ ವಾದ. ಈ ಯೋಜನೆಯನ್ನು ಕೈಬಿಟ್ಟು ಬೇರೆ ಯಾವುದಾದರೂ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಆಮೆರಿಕಾ ಪಾಕಿಸ್ತಾನಕ್ಕೆ ಸೂಚಿಸಿದೆ. ಒಂದು ವೇಳೆ ಈ ಯೋಜನೆ ಆರಂಭವಾದರೆ ಪಾಕ್ ಮೇಲೆ ಆರ್ಥಿಕ ದಿಗ್ಬಂದನವನ್ನು ಹೇರಲು ತಾನು ಸಿದ್ಧ ಎಂದು ಆಮೆರಿಕಾ ಎಚ್ಚರಿಸಿದೆ.

**45 ನೇ ಮಾರಿಷಸ್ ಸ್ವಾತಂತ್ರ್ಯ ದಿನದ ಅತಿಥಿಯಾಗಿ ಪ್ರಣಭ್ ಮುಖರ್ಜಿ**

ಮಾರ್ಚ್ 12, 2013 ರಂದು ಮಾರಿಷಸ್ ತನ್ನ 45 ನೇ ಸ್ವಾತಂತ್ರ್ಯ ದಿನವನ್ನು ಆಚರಿಸಿಕೊಂಡಿತು. ಈ ಬಾರಿಯ ವಿಶೇಷವೆಂದರೆ ಭಾರತದ ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿಯವರು ಈ ಕಾರ್ಯಕ್ರಮದ ಅತಿಥಿಗಳಾಗಿ ಭಾಗವಹಿಸಿದ್ದರು. ವಿಜ್ಞಾನ-ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ, ಶಿಕ್ಷಣ ಕ್ಷೇತ್ರಗಳಲ್ಲಿ ಭಾರತ ಮತ್ತು ಮಾರಿಷಸ್ ಒಂದೇ ತರನಾದ ಆಸಕ್ತಿಯನ್ನು ವಹಿಸಿವೆ ಎಂದು ಪ್ರಣಭ್ ಹೇಳಿದ್ದಾರೆ.

- ಇದೇ ವೇಳೆ ರಾಷ್ಟ್ರಪತಿಗಳು ವಿಶ್ವ ಪಾರಂಪರಿಕ ತಾಣವಾದ ಆಪ್ರವಸಿ ಘಾಟ್ (Aapravasi Ghat) ಗೆ ಭೇಟಿ ನೀಡಿದ್ದರು. ಇದೇ ಸ್ಥಳದಲ್ಲಿ ಭಾರತದಿಂದ ಮಾರಿಷಸ್ ಗೆ ವಲಸೆ ಹೋದ ಕಾರ್ಮಿಕರು ಮೊದಲು ಹೆಜ್ಜೆಯನ್ನು ಇಟ್ಟಿದ್ದು.

ಮಾರಿಷಸ್ ಸ್ವಾತಂತ್ರ್ಯ ದಿನ:

- 1638 ರಲ್ಲಿ ಮಾರಿಷಸ್ ಮೊದಲ ಬಾರಿಗೆ ಡಚ್ ಆಳ್ವಿಕೆ ಒಳಪಟ್ಟಿತು. ತದ ನಂತರ 1715 ರಲ್ಲಿ ಫ್ರೆಂಚ್ ರು ನಂತರ ಬ್ರಿಟಿಷರು ಮಾರಿಷಸ್ ನ್ನು ವಶಪಡಿಸಿಕೊಂಡರು. ಕಟ್ಟ ಕಡೆಯದಾಗಿ ಮಾರಿಷಸ್ ಮಾರ್ಚ್ 12, 1968 ರಲ್ಲಿ ಸ್ವಾತಂತ್ರ್ಯ ದೇಶವಾಗಿ ಉದಯಿಸಿತು. ಆಗಾಗಿ ಮಾರ್ಚ್ 12 ನ್ನು ಮಾರಿಷಸ್ ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಗುತ್ತದೆ.

ನಿಮಿಗಿದು ತಿಳಿದಿರಲಿ

- ಮಾರಿಷಸ್ ನ ಅಧ್ಯಕ್ಷರಾದ ರಾಜಕೇಶ್ವರ್ ಪುರ್ ಯಾಗ್ ರವರು ಕೊಚ್ಚಿಯಲ್ಲಿ ನಡೆದ 11 ನೇ ಭಾರತೀಯ ಪ್ರವಾಸಿ ದಿವಸ್ (2013) ನ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
- ನವೀನ್ ರಾಮಗೂಲಮ್ ರವರು ಮಾರಿಷಸ್ ನ ಪ್ರಧಾನ ಮಂತ್ರಿಗಳಾಗಿದ್ದಾರೆ.

**ಫಿನ್ ಲ್ಯಾಂಡ್ ನಲ್ಲಿ ವಿಶ್ವದ ಅತಿ ದೊಡ್ಡ "ಜೈವಿಕ ಅನಿಲ ಘಟಕ(Biogas Plant)"**

ಫಿನ್ ಲ್ಯಾಂಡ್ ನ ಪಶ್ಚಿಮ ತೀರದಲ್ಲಿ ವಿಶ್ವದ ಅತಿ ದೊಡ್ಡ ಜೈವಿಕ ಅನಿಲ ಸ್ಥಾವರಕ್ಕೆ ಇತ್ತೀಚೆಗೆ ಚಾಲನೆ ನೀಡಲಾಗಿದೆ. ವಿದೇಶಿ ಕಲ್ಲಿದ್ದಲ ಬಳಕೆಯನ್ನು ತಗ್ಗಿಸುವ ಸಲುವಾಗಿ ಈ ಸ್ಥಾವರವನ್ನು ಆರಂಭಿಸಿಲಾಗಿದೆ.

- 140 ಮೆಗಾ ವ್ಯಾಟ್ ಜೈವಿಕ ಅನಿಲ ಸಾಮರ್ಥ್ಯವುಳ್ಳ ಈ ಘಟಕವನ್ನು ಫಿನ್ ಲ್ಯಾಂಡ್ ನ ಕಲ್ಲಿದ್ದಲು ಆಧಾರಿತ ವಿದ್ಯುತ್ ಘಟಕವಾದ "ವಾಸಾ" ಬಳಿ ಸ್ಥಾಪಿಸಲಾಗಿದೆ. ಈ ಘಟಕದಿಂದ ಶೇ.40 ರಷ್ಟು ಕಲ್ಲಿದ್ದಲ ಬಳಕೆಯನ್ನು ತಗ್ಗಿಸಬಹುದಾಗಿದೆ.

- ಸುಮಾರು 61,000 ಕುಟುಂಬಗಳಿಗೆ ವಿದ್ಯುತ್ ನ್ನು ಪೂರೈಸಿಲಿರುವ ಈ ಘಟಕವೂ ಫಿನ್ ಲ್ಯಾಂಡ್ ನಲ್ಲಿ ಹೇರಳವಾಗಿರುವ ಅರಣ್ಯಗಳ ಉಳಿಕೆಯಿಂದ ಅನಿಲವನ್ನು ಉತ್ಪಾದಿಸಲಿದೆ.
- ಈ ಯೋಜನೆಯಿಂದ ವಾರ್ಷಿಕವಾಗಿ 2,30,000 ಟನ್ ಗಳಷ್ಟು "ಕಾರ್ಬನ್ ಡೈ ಆಕ್ಸೈಡ್" ಹೊರಸೂಸುವಿಕೆಯನ್ನು ತಡೆಯಬಹುದಾಗಿದೆ.

**ನ್ಯೂಜಿಲ್ಯಾಂಡ್ ನ ನಾರ್ತ್ ಐಲ್ಯಾಂಡ್ ನಲ್ಲಿ ಬರಗಾಲ ಘೋಷಿಸಿದ ಸರ್ಕಾರ**

ಮೂವತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ನ್ಯೂಜಿಲ್ಯಾಂಡ್ ನ ಉತ್ತರ ದ್ವೀಪ ಪ್ರದೇಶ ತೀವ್ರ ಬರಗಾಲಕ್ಕೆ ತುತ್ತಾಗಿದ್ದು ಸರ್ಕಾರ ಬರಗಾಲ ಘೋಷಣೆ ಮಾಡಿದೆ. ಬರಗಾಲದಿಂದ ಅಲ್ಲಿನ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿ ವಲಯದ ಮೇಲೆ ಬರಗಾಲ ಬೀರಿರುವ ವ್ಯತಿರಿಕ್ತ ಪರಿಣಾಮದಿಂದ ನ್ಯೂಜಿಲ್ಯಾಂಡ್ ನ ಆರ್ಥಿಕ ಬೆಳವಣಿಗೆಯಲ್ಲಿ ಭಾರಿ ಹಿನ್ನಡೆ ಉಂಟಾಗಿದೆ.

- ನ್ಯೂಜಿಲ್ಯಾಂಡ್ ಆರ್ಥಿಕತೆ ಬೆನ್ನಲುಬು ಆಗಿರುವ ರೈತ ವರ್ಗಕ್ಕೆ ಉಂಟಾಗಿರುವ ನಷ್ಟದಿಂದ ಈಗಾಗಲೇ 1 ಬಿಲಿಯನ್ ನ್ಯೂಜಿಲ್ಯಾಂಡ್ ಡಾಲರ್ ನಷ್ಟ ಉಂಟಾಗಿದೆ ಎಂದು ಹೇಳಲಾಗಿದೆ.
- ದೇಶದ ರಾಜಧಾನಿಯಾದ ವೆಲ್ಲಿಂಗ್ ಟನ್ ನಲ್ಲೂ ಸಹ ಬರಗಾಲ ಗಂಭೀರ ಸ್ವರೂಪ ತಾಳಿದ್ದು, ಕೇವಲ 18 ದಿನಗಳಿಗೆ ಬಳಕೆಮಾಡಬಹುದಾದ ನೀರು ಮಾತ್ರ ಉಳಿದಿದೆ.
- ವಿಜ್ಞಾನಿಗಳ ಪ್ರಕಾರ ಜಾಗತಿಕ ತಾಪಮಾನದಿಂದ ಆಗುತ್ತಿರುವ ಹವಾಮಾನ ವೈಪರೀತ್ಯವೇ ಬರಗಾಲಕ್ಕೆ ಮೂಲ ಕಾರಣವಾಗಿದೆ.

**ಆರ್ಥಿಕ ದಿವಾಳಿಯಲ್ಲಿ ಸಿಪ್ರಸ್: ಯುರೋ ವಲಯ ಮತ್ತು IMF ನಿಂದ ಆರ್ಥಿಕ ಸಹಾಯ**

ಆರ್ಥಿಕ ಬೆಳವಣಿಗೆಯ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಸಿಪ್ರಸ್ (Cyprus) ದೇಶಕ್ಕೆ ಆರ್ಥಿಕ ಸಹಾಯ ನೀಡಲು ಯುರೋ ವಲಯದ ಆರ್ಥಿಕ ಸಚಿವರು ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ (IMF) ಬ್ರಸೆಲ್ ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಒಪ್ಪಂದದ ಪ್ರಕಾರ ಸಿಪ್ರಸ್ 10 ಬಿಲಿಯನ್ ಯುರೋಸ್ ಸಹಾಯ ಧನವನ್ನು ಪಡೆಯಲಿದೆ. 2010 ರಲ್ಲಿ ಉದ್ಭವಿಸಿದ ಸಾಲದ ಬಿಕ್ಕಟ್ಟಿನಿಂದ ಆರ್ಥಿಕ ಸಹಾಯಕ್ಕಾಗಿ IMF ಮೊರೆ ಹೋಗಿರುವ ಐದನೇ ದೇಶ ಸಿಪ್ರಸ್ ಆಗಿದೆ.

- ಈ ಹಿಂದೆ ಗ್ರೀಸ್, ಐರ್ಲ್ಯಾಂಡ್, ಪೋರ್ಚುಗಲ್ ಮತ್ತು ಸ್ಪೇನ್ ಸಾಲದ ಹೊರೆಯಿಂದ ಹೊರ ಬರುವ ಸಲುವಾಗಿ ಅಂತರ ರಾಷ್ಟ್ರೀಯ ಹಣಕಾಸು ನಿಧಿ ಯಿಂದ ಆರ್ಥಿಕ ಸಹಾಯ ಪಡೆದಿದ್ದವು. 2012 ರಲ್ಲಿ ಸಿಪ್ರಸ್ 17 ಬಿಲಿಯನ್ ಯುರೋಸ್ ನ್ನು ನೀಡುವಂತೆ ಕೋರಿತ್ತು. ಆದರೆ ಯುರೋ ವಲಯ 10 ಬಿಲಿಯನ್ ಯುರೋಸ್ ನೀಡಲು ಸಮ್ಮತಿಸಿದೆ.
- ಒಪ್ಪಂದ ಪ್ರಕಾರ ಸಿಪ್ರಸ್ ಕಾರ್ಪೋರೇಟ್ ತೆರಿಗೆಯನ್ನು 12.5% ಗೆ ಹೆಚ್ಚಿಸಲು ಒಪ್ಪಿದೆ. ಇದರಿಂದ ಕಾರ್ಪೋರೇಟ್ ತೆರಿಗೆ ಯಲ್ಲಿ ಶೇ.2.5 ರಷ್ಟು ಹೆಚ್ಚಳವಾಗಲಿದೆ.
- 1000000 ಯುರೋಸ್ ಗಿಂತ ಅಧಿಕವಾಗಿ ಹಣವನ್ನು ಹೊಂದಿರುವ ಸಿಪ್ರಸ್ ಬ್ಯಾಂಕ್ ಖಾತೆಗಳ ಮೇಲೆ ಶೇ.9.9 ರಷ್ಟು ತೆರಿಗೆಯನ್ನು ಒಂದು ಬಾರಿ ಹೇರಲು ಸೂಚಿಸಲಾಗಿದೆ.ತೆರಿಗೆಯನ್ನು ಹೆಚ್ಚಿಸುವ ಮೂಲಕ ಸರ್ಕಾರಕ್ಕೆ ಬರ ಆದಾಯದಲ್ಲಿ ಏರಿಕೆಯಾಗಲಿದೆ ಮತ್ತು ಯುರೋ ವಲಯಗಳ ಮೇಲೆ ಆರ್ಥಿಕ ಸಹಾಯಕ್ಕೆ ಅವಲಂಬನೆಯಾಗುವುದು ತಪ್ಪಲಿದೆ.

**ಫೇಸ್ ಬುಕ್ ನ ಮಾರ್ಕ್ ಜುಕರ್ಬರ್ಗ್ ನಂ.1 ಸಿಇಒ**

ಸಿಇಒ ಗಳ ಕಾರ್ಯವೈಖರಿ ಮತ್ತು ಸಂಸ್ಥೆಯ ನಿರ್ವಹಣೆ ಬಗ್ಗೆ ನಡೆಸಲಾದ ಸಮೀಕ್ಷೆಯಲ್ಲಿ ಫೇಸ್ ಬುಕ್ ಸ್ಥಾಪಕ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿರುವ ಮಾರ್ಕ್ ಜುಕರ್ಬರ್ಗ್ ರವರು ನಂ.1 ಸ್ಥಾನಗಳಿಸಿದ್ದಾರೆ. ಆನ್ ಲೈನ್ ತಾಣ ಗ್ಲಾಸ್ ಡೋರ್ (Glass Door) ನಡೆಸಿರುವ ಸಮೀಕ್ಷಯಲ್ಲಿ ಶೇ.99 ರಷ್ಟು ನಾಯಕತ್ವ ಗುಣಗಳನ್ನು ಹೊಂದಿರುವ ಸಿಇಒ ಎಂದು ಜುಕರ್ಬರ್ಗ್ ರವರನ್ನು ಬಣ್ಣಿಸಲಾಗಿದೆ.

- SAP ನ ಸಹ ಮುಖ್ಯಸ್ಥರಾದ ಬಿಲ್ ಡರ್ಮೊಟ್ (Bill McDermott) ಮತ್ತು ಜಿಮ್ ಹಗೆಮನ್ ಸ್ನಬ್ ರವರು ಜುಕರ್ಬರ್ಗ್ ರವರ ನಂತರದ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.
- ಗೂಗಲ್ ಸಂಸ್ಥಾಪಕ ಲಾರಿ ಫೇಜ್ ರವರು 11 ಸ್ಥಾನದಲ್ಲಿದ್ದರೆ, ಅಮೆಜಾನ್.ಕಾಮ್ ನ ಮುಖ್ಯಸ್ಥ ಜೆಫ್ ಬೆಝುಸ್ ಮತ್ತು ಆಪಲ್ ಸಂಸ್ಥೆಯ ಸಿಇಒ ಟಿಮ್ ಕುಕ್ ರವರು ಕ್ರಮವಾಗಿ 16 ಮತ್ತು 18 ನೇ ಸ್ಥಾನದಲ್ಲಿದ್ದಾರೆ.

ಸಮೀಕ್ಷೆ ಹೇಗೆ?

- ತಮ್ಮ ಕಂಪನಿಯ ಸಿಇಒ ರವರ ನಾಯಕತ್ವದ ಗುಣ ಮತ್ತು ಸಂಸ್ಥೆ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಹಾಲಿ ಮತ್ತು ಮಾಜಿ ಕಾರ್ಮಿಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಈ ಅಭಿಪ್ರಾಯಗಳ ಮೇಲೆ ಸಂಬಂಧಪಟ್ಟ ಸಿಇಒ ಗಳಿಗೆ ರೇಟಿಂಗ್ ನೀಡಲಾಗಿದ್ದು, ಈ ರೇಟಿಂಗ್ ನಲ್ಲಿ ಜುಕರ್ಬರ್ಗ್ ಅಗ್ರಸ್ಥಾನದಲ್ಲಿದ್ದಾರೆ.

**ಶಸ್ತ್ರಾಸ್ತ್ರ ರಫ್ತು: ಚೀನಾ ಐದನೇ ಅತಿ ದೊಡ್ಡ ರಫ್ತು ದೇಶ**

ಸ್ವೀಡಿಶ್ ಮೂಲದ "ಸ್ಟಾಕ್ ಹೋಮ್ ಅಂತರರಾಷ್ಟ್ರೀಯ ಶಾಂತಿ ಸಂಶೋಧನ ಸಂಸ್ಥೆ (Stockholm International Peace Research Institute)" ಮಂಡಿಸಿರುವ ವರದಿಯ ಪ್ರಕಾರ ಚೀನಾ ವಿಶ್ವದ ಐದನೇ ಅತಿ ದೊಡ್ಡ ಶಸ್ತ್ರಾಸ್ತ್ರ ರಫ್ತು ಮಾಡುವ ದೇಶವಾಗಿದೆ. 2008-2012 ಈ ಐದು ವರ್ಷಗಳ ಅವಧಿಯಲ್ಲಿ ಚೀನಾದ ರಫ್ತಿನಲ್ಲಿ ಶೇ.162 ರಷ್ಟು ಹೆಚ್ಚಳವಾಗಿರುವುದರಿಂದ ಚೀನಾ ಐದನೇ ಸ್ಥಾನಕ್ಕೆ ಏರಿದೆ. ಕಳೆದ ಬಾರಿ ಚೀನಾ 8 ನೇ ಸ್ಥಾನದಲ್ಲಿತ್ತು.

- ವರದಿಯ ಪ್ರಕಾರ ಚೀನಾದಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವ ರಾಷ್ಟ್ರಗಳ ಪಟ್ಟಿಯಲ್ಲಿ ಪಾಕಿಸ್ತಾನ ಮುಂಚೂಣಿಯಲ್ಲಿದೆ. ಚೀನಾದಿಂದ ಶಸ್ತ್ರಾಸ್ತ್ರ ಖರೀದಿಸುವಲ್ಲಿ ಪಾಕ್ ನ ಪಾಲು ಶೇ.55 ರಷ್ಟಿದೆ. ಮಯನ್ಮಾರ್ (ಶೇ.8) ಮತ್ತು ಬಾಂಗ್ಲಾದೇಶ (ಶೇ.7) ನಂತರದ ಸ್ಥಾನದಲ್ಲಿವೆ.
- ಇತ್ತೀಚೆಗೆ ಚೀನಾ ಅನೇಕ ದೇಶಗಳೊಂದಿಗೆ ಶಸ್ತ್ರಾಸ್ತ್ರ ಪೂರೈಸುವ ಸಲುವಾಗಿ ಒಪ್ಪಂದವನ್ನು ಮಾಡಿಕೊಂಡಿದೆ ಎಂದು ಹೇಳಲಾಗಿದೆ. ಮೊರಾಕೊ ಗೆ 54 ಯುದ್ಧ ಟ್ಯಾಂಕರ್, ವೆನುಜುವೆಲಾ ಗೆ 8 ಸರಕು ಸಾಗಣೆ ವಿಮಾನ ಪೂರೈಕೆ ಇವುಗಳಲ್ಲಿ ಪ್ರಮುಖವಾದವು.
- ಇನ್ನು ಜಾಗತಿಕ ರಫ್ತು ವಲಯದಲ್ಲಿ ಶೇ.30 ರಷ್ಟು ಪಾಲನ್ನು ಹೊಂದಿರುವ ಆಮೆರಿಕಾ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಎಂದಿನಂತೆ ಕಾಯ್ದುಕೊಂಡಿದೆ. ರಷ್ಯಾ (ಶೇ.26) ಎರಡನೇ ಸ್ಥಾನ, ಜರ್ಮನಿ (ಶೇ.7) ಮೂರು ಮತ್ತು ಫ್ರಾನ್ಸ್ (ಶೇ.6) ನಾಲ್ಕನೇ ಸ್ಥಾನದಲ್ಲಿವೆ.

- ಅಚ್ಚರಿಯ ವಿಷಯವೆಂದರೆ ಶಸ್ತ್ರಾಸ್ತ್ರಗಳನ್ನು ಅತಿ ಹೆಚ್ಚಾಗಿ ಆಮದು ಮಾಡಿಕೊಳ್ಳುವಲ್ಲಿ ಏಷ್ಯಾ ಅಗ್ರ ಸ್ಥಾನದಲ್ಲಿದೆ. ವಿಶೇಷವೆಂದರೆ ಅತಿ ಹೆಚ್ಚಾಗಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವ ಐದು ದೇಶಗಳು ಏಷ್ಯಾಕ್ಕೆ ಸೇರಿದಾಗಿವೆ.

2008-12 ರಲ್ಲಿ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಂಡ ಐದು ದೇಶಗಳು:

- ಭಾರತ (ಶೇ.12), ಚೀನಾ (ಶೇ.6), ಪಾಕಿಸ್ತಾನ (ಶೇ.5), ದಕ್ಷಿಣ ಕೊರಿಯಾ (ಶೇ.5) ಮತ್ತು ಸಿಂಗಾಪುರ (ಶೇ.4).

**ಯುನೈಟೆಡ್ ಅರಬ್ ಎಮಿರೇಟ್ಸ್ ನಲ್ಲಿ ವಿಶ್ವದ ಅತಿ ದೊಡ್ಡ ಸೌರ ವಿದ್ಯುತ್ ಘಟಕ ಉದ್ಘಾಟನೆ**

ತೈಲ ಭರಿತ ಯುನೈಟೆಡ್ ಅರಬ್ ಎಮಿರೇಟ್ಸ್ (UAE) ನಲ್ಲಿ ವಿಶ್ವದ ಅತಿ ದೊಡ್ಡ ಸೌರ ವಿದ್ಯುತ್ ಘಟಕವನ್ನು ಮಾರ್ಚ್ 17, 2013 ರಂದು ಉದ್ಘಾಟಿಸಲಾಯಿತು. 600 ಮಿಲಿಯನ್ ಡಾಲರ್ ವೆಚ್ಚದಲ್ಲಿ ನಿರ್ಮಿಸಿರುವ ಈ ಸೌರ ಘಟಕವು 20000 ಮನೆಗಳನ್ನು ಬೆಳಗಲಿದೆ.

- ಶಾಮ್ಸ್-1 (Sham-1) ಎಂದು ಹೆಸರಿಡಲಾಗಿರುವ ಈ ಘಟಕವನ್ನು ಅಂತರ ರಾಷ್ಟ್ರೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗಿದೆ. UAE ನ ಮಸ್ದರ್ (Masdar) ಈ ಯೋಜನೆಯಲ್ಲಿ ಶೇ.60 ರಷ್ಟು ಪಾಲನ್ನು ಹೊಂದಿದ್ದರೆ, ಫ್ರಾನ್ಸ್ ನ ಟೋಟಲ್ (Total) ಶೇ.20 ರಷ್ಟು ಹಾಗೂ ಸ್ಪೇನ್ ನ ಅಬೆನ್ಗೋ (Abengo) ಶೇ.20 ರಷ್ಟು ಪಾಲುಗಳನ್ನು ಹೊಂದಿವೆ.
- ಒಟ್ಟು 2.5 ಚದರ ಕೀ,ಮೀ ವಿಸ್ತೀರ್ಣದಲ್ಲಿ ಈ ಘಟಕವನ್ನು ಸ್ಥಾಪಿಸಲಾಗಿದೆ. 768 ಪ್ಯಾನೆಲ್ ಗಳನ್ನು ಹೊಂದಿರುವ ಈ ಸ್ಥಾವರದಿಂದ 100 ಮೆಗಾ ವ್ಯಾಟ್ ವಿದ್ಯುತ್ ನ್ನು ಉತ್ಪಾದಿಸುವ ಗುರಿ ಹೊಂದಿದೆ.
- ಈ ಸ್ಥಾವರದಿಂದ ಮಸ್ದರ್ ವಿಶ್ವದ ನವೀಕರಿಸಬಹುದಾದ ಇಂಧನದಲ್ಲಿ ಶೇ.10 ರಷ್ಟನ್ನು ಉತ್ಪಾದಿಸಲಿದೆ.

**ಶ್ರೀಲಂಕಾದ ಎರಡನೇ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭ**

ಶ್ರೀಲಂಕಾದ ಅಧ್ಯಕ್ಷರಾದ ಮಹೀಂದ್ರ ರಾಜಪಕ್ಷೆರವರು ದೇಶದ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಲೋಕಾಕ್ಕೆ ಅರ್ಪಿಸಿದರು. ರಾಜಪಕ್ಷೆ ರವರ ತವರು ಜಿಲ್ಲೆಯಾದ ಹಂಬಾನಟೊಟ (Hambantota) ದಲ್ಲಿ ನಿರ್ಮಿಸಲಾಗಿರುವ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆರ್ಥಿಕ ಮತ್ತು ಭೌತಿಕ ಅಭಿವೃದ್ಧಿಯಲ್ಲಿ ಹಿನ್ನಡೆ ಸಾಧಿಸಿರುವ ಹಂಬಾನಟೊಟ ಜಿಲ್ಲೆ ವಾಣಿಜ್ಯ ಕೇಂದ್ರವಾಗಿ ಉದಯವಾಗಲಿದೆ ಎಂದು ಊಹಿಸಲಾಗಿದೆ.

ವಿಮಾನ ನಿಲ್ದಾಣದ ಬಗ್ಗೆ:

- "ಮತ್ತಲ ರಾಜಪಕ್ಷೆ ವಿಮಾನ ನಿಲ್ದಾಣ" ಎಂದು ಹೆಸರಿಡಲಾಗಿರುವ ಈ ವಿಮಾನ ನಿಲ್ದಾಣಕ್ಕೆ ಶ್ರೀಲಂಕಾ ಅಧ್ಯಕ್ಷರ ಹೆಸರನ್ನೇ ಇಟ್ಟಿರುವುದು ಗಮನಾರ್ಹ.
- ಈ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಚೀನಾ ದೇಶದ ಆರ್ಥಿಕ ನೆರವಿನೊಂದಿಗೆ ಸ್ಥಾಪಿಸಲಾಗಿದೆ. ಈ ಯೋಜನೆಗೆ ತಗುಲಿರುವ ವೆಚ್ಚ 209 ಮಿಲಿಯನ್ ಡಾಲರ್.

- ಈ ನಿಲ್ದಾಣವು ವಾರ್ಷಿಕವಾಗಿ 1 ಮಿಲಿಯನ್ ಪ್ರಯಾಣಿಕರನ್ನು ಮತ್ತು 45000 ಟನ್ ಕಾರ್ಗೋವನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದೆ. 2015 ರ ವೇಳೆಗೆ ಇದರ ಸಾಮರ್ಥ್ಯವನ್ನು ವಾರ್ಷಿಕವಾಗಿ 5 ಮಿಲಿಯನ್ ಪ್ರಯಾಣಿಕರಿಗೆ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆ.
- ಶ್ರೀಲಂಕಾದ ರಾಜಧಾನಿ ಕೊಲಂಬೊದಿಂದ 200 ಕೀ.ಮೀ ದೂರದಲ್ಲಿರುವ ಈ ವಿಮಾನ ನಿಲ್ದಾಣದಿಂದ ಪ್ರವಾಸೋದ್ಯಮಕ್ಕೆ ಹೊಸ ರಂಗು ಬರಲಿದೆ ಎಂದು ಹೇಳಲಾಗಿದೆ.
- ಸದ್ಯ ಕಾರ್ಯನಿರ್ವಹಿಸುತ್ತಿರುವ "ಬಂಡಾರನಾಯಕೆ ವಿಮಾನ ನಿಲ್ದಾಣ" ಶ್ರೀಲಂಕಾದ ಏಕೈಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿತ್ತು.

**<u>ಹೊಸ ಸಂವಿಧಾನವನ್ನು ಅಳವಡಿಸಿಕೊಂಡ ಜಿಂಬಾಬ್ವೆ</u>**

ಜಿಂಬಾಬ್ವೆಯಲ್ಲಿ ಹೊಸ ಸಂವಿಧಾನ ಜಾರಿಗೆ ಬಂದಿರುವುದಾಗಿ ಅಲ್ಲಿನ ಮುಖ್ಯ ಚುನಾವಣಾಧಿಕಾರಿಗಳು ಹೇಳಿದ್ದಾರೆ. ಕಳೆದ ವಾರಾಂತ್ಯದಲ್ಲಿ ನಡೆದ ಜನಮತ ಸಂಗ್ರಹದಲ್ಲಿ ಹೊಸ ಸಂವಿಧಾನ ಪರವಾಗಿ 3 ಮಿಲಿಯನ್ ಜನರು ಮತ ಚಲಾಯಿಸಿದರೆ, ಸುಮಾರು 179,000 ಜನರು ತಮ್ಮ ಮತಗಳ ಮೂಲಕ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬಹು ಸಂಖ್ಯೆಯಲ್ಲಿ ಜನ ಹೊಸ ಸಂವಿಧಾನವನ್ನು ಬೆಂಬಲಿಸಿರುವುದರಿಂದ ಅಳವಡಿಸಿಕೊಳ್ಳಲಾಗಿದೆ.

ಹೊಸ ಸಂವಿಧಾನದ ವಿಶೇಷವೇನು?

- ಸುಮಾರು 4 ವರ್ಷಗಳಿಂದ ಈ ಸಂವಿಧಾನದ ರಚಸಿಲಾಗಿದೆ. ಇದರ ರಚನೆಗೆ 50 ಮಿಲಿಯನ್ ಡಾಲರ್ ನ್ನು ವ್ಯಯಿಸಲಾಗಿದೆ.
- ಹೊಸ ಸಂವಿಧಾನದಲ್ಲಿ ಜಿಂಬಾಬ್ವೆ ಅಧ್ಯಕ್ಷರ ಪುನರ್ ಆಯ್ಕೆಗೆ ಮಿತಿಯನ್ನು ನಿಗದಿಪಡಿಸಲಾಗಿದೆ. ಆದರೆ ಹಾಲಿ ಅಧ್ಯಕ್ಷರಾಗಿರುವ ರಾಬರ್ಟ್ ಮುಗಾಬೆ ರವರ ಪುನರ್ ಆಯ್ಕೆಗೆ ಇದು ಅಡ್ಡಿಯಾಗುವುದಿಲ್ಲ. ಮುಗಾಬೆರವರು 1980 ರಿಂದ ಜಿಂಬಾಬ್ವೆಯನ್ನು ಮುನ್ನಡೆಸುತ್ತಿದ್ದಾರೆ.
- ಹೊಸ ಸಂವಿಧಾನದಲ್ಲಿ ಸಂಸತ್ತಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ ಹಾಗೂ ಮಹಿಳೆಯರ ಹಕ್ಕನ್ನು ಸಹ ವಿಸ್ತರಿಸಲಾಗಿದೆ.

**<u>ಮಾರ್ಚ್ 20: "ಅಂತರರಾಷ್ಟ್ರೀಯ ಸಂತೋಷ ದಿನ"ವನ್ನಾಗಿ ಆಚರಿಸಲು ವಿಶ್ವ ಸಂಸ್ಥೆ ನಿರ್ಣಯ</u>**

ಪ್ರತಿ ವರ್ಷ ಮಾರ್ಚ್ 20 ನ್ನು ಇನ್ನು "ಮುಂದೆ ಅಂತರರಾಷ್ಟ್ರೀಯ ಸಂತೋಷ" ದಿನ (International Day of Happiness) ವೆಂದು ಆಚರಿಸಲು ವಿಶ್ವ ಸಂಸ್ಥೆ ನಿರ್ಧರಿಸಿದೆ. ಇದೇ ಮೊದಲ ಬಾರಿಗೆ ಮಾರ್ಚ್ 20, 2013 ನ್ನು ಅಂತರರಾಷ್ಟ್ರೀಯ ಸಂತೋಷ ದಿನವೆಂದು ಆಚರಿಸಲಾಗುತ್ತಿದೆ.

- ವಿಶ್ವ ಸಂಸ್ಥೆಯ ಈ ನಿರ್ಣಯಕ್ಕೆ ಎಲ್ಲಾ 193 ಸದಸ್ಯ ರಾಷ್ಟ್ರಗಳು ಒಮ್ಮತದಿಂದ ಸಹಿ ಹಾಕಿವೆ.

- ಆರ್ಥಿಕ ಬೆಳವಣಿಗೆ ಮಾತ್ರವಲ್ಲದೇ ವಿಶ್ವದ ಎಲ್ಲಾ ರಾಷ್ಟ್ರದ ಪ್ರಜೆಗಳ ಹಿತಾಸಕ್ತಿ ಕಾಯುವ ಜತೆಗೆ ಸಂತೋಷವನ್ನು ಕಾಪಾಡುವುದು ಈ ದಿನದ ಉದ್ದೇಶವಾಗಿದೆ.

ಅಂತರರಾಷ್ಟ್ರೀಯ ಸಂತೋಷ ದಿನದ ಹಿನ್ನಲೆ:

- ಅಂತರರಾಷ್ಟ್ರೀಯ ಸಂತೋಷ ದಿನದ ಕಲ್ಪನೆ ಭೂತಾನ್ ದೇಶದಿಂದ ಪ್ರೇರೆಪಿತವಾಗಿದೆ. ಭೂತಾನ್ ದೇಶದ ನಾಲ್ಕನೇ ರಾಜ "ಜಿಗ್ಮೆ ಸಿಂಗ್ಯೆ ವಾಂಗ್ ಚುಕ್" ರವರು ತಮ್ಮ ದೇಶದ ಪ್ರಜೆಗಳ ಯೋಗಕ್ಷೇಮವನ್ನು ಅರಿಯಲು "ಒಟ್ಟು ರಾಷ್ಟ್ರೀಯ ಉತ್ಪನ್ನ" ಹೊರತುಪಡಿಸಿ "ಒಟ್ಟು ರಾಷ್ಟ್ರೀಯ ಸಂತೋಷ ಸೂಚ್ಯಂಕ (Gross National Happiness Index)"ವನ್ನು ಜಾರಿಗೆ ತಂದಿದ್ದಾರೆ. ಭೂತಾನ್ ರಾಜರ ಈ ನಿರ್ಣಯವನ್ನು ಸ್ಪೂರ್ತಿಯಾಗಿ ಪಡೆದ ವಿಶ್ವಸಂಸ್ಥೆ ಮಾರ್ಚ್ 20 ನ್ನು ಅಂತರರಾಷ್ಟ್ರೀಯ ಸಂತೋಷ ದಿನವೆಂದು ಆಚರಿಸಲು ತಿರ್ಮಾನಿಸಿದೆ.

**ಶಾಂತಿ ಪ್ರಯಾಸ್ -2 ಜಂಟಿ ಸಮರಭ್ಯಾಸ ನಡೆಸಲಿರುವ ನೇಪಾಳ ಮತ್ತು ಆಮೆರಿಕಾ**

ನೇಪಾಳ ಮತ್ತು ಆಮೆರಿಕಾ ಸೇನೆಗಳು ಜಂಟಿಯಾಗಿ ಸಮರಭ್ಯಾಸವನ್ನು ಈ ತಿಂಗಳ ಕೊನೆಯಲ್ಲಿ ನಡೆಸಲಿದ್ದು, ಈ ಸಮರಭ್ಯಾಸಕ್ಕೆ ಶಾಂತಿ ಪ್ರಯಾಸ್-2 ಎಂದು ಹೆಸರಿಡಲಾಗಿದೆ. ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ಈ ಜಂಟಿ ಸಮರಭ್ಯಾಸದಲ್ಲಿ ಪಾಲ್ಗೊಳ್ಳಲಿವೆ. ನೇಪಾಳದ ರಾಜಧಾನಿ ಕಠ್ಮಂಡುವಿನಿಂದ 50 ಕಿ.ಮೀ ದೂರದಲ್ಲಿರುವ ಪಂಚ್ಕಾಲ್ ನಲ್ಲಿ ಈ ಸಮರಭ್ಯಾಸವನ್ನು ನಡೆಸಲಾಗುವುದು.

- ಏಷ್ಯಾ-ಫೆಸಿಪಿಕ್ ವಲಯದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವ ಸಾಮರ್ಥ್ಯವನ್ನು ಹೆಚ್ಚಿಸಕೊಳ್ಳುವು ಸಲುವಾಗಿ ಸಮರಭ್ಯಾಸವನ್ನು ಕೈಗೊಳ್ಳಲಾಗುವುದು. ಜೊತೆಗೆ ""ಗ್ಲೋಬಲ್ ಪೀಸ್ ಕೀಪಿಂಗ್ ಇನಷಿಯೇಟಿವ್ (GPKI)" ಅಭಿಯಾನದಲ್ಲಿ ರಾಷ್ಟ್ರಗಳು ಪಾಲ್ಗೊಳ್ಳಲು ಈ ಸಮರಭ್ಯಾಸ ಸಹಕಾರಿಯಾಗಲಿದೆ.

GPKI:

- ಇದೊಂದು G8 ರಾಷ್ಟ್ರಗಳ ಅಭಿಯಾನವಾಗಿದ್ದು, ವಿಶ್ವ ವ್ಯಾಪ್ತಿ ಶಾಂತಿ ಸುವ್ಯವಸ್ಥೆಯನ್ನು ಬೆಂಬಲಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

**2016 ರ ವೇಳೆಗೆ ವಿಶ್ವದ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಚೀನಾ: OECD ಸಮೀಕ್ಷೆ**

"ಆರ್ಗನೈಸೇಶನ್ ಫಾರ್ ಎಕಾನಿಕ್ ಕೋಆಪರೇಟಿವ್ ಅಂಡ್ ಡೆವಲೆಪ್ ಮೆಂಟ್" (OECD) ನಡೆಸಿರುವ ಸಮೀಕ್ಷೆ ಪ್ರಕಾರ 2016 ರ ವೇಳೆಗೆ ಚೀನಾ ವಿಶ್ವದ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಉದಯಿಸಲಿದೆ. ದೂರದೃಷ್ಟಿ ಯೋಜನೆಗಳನ್ನು ಹೊಂದಿರುವ ಚೀನಾ ಈಗಾಗಲೇ ಯುರೋ ವಲಯವನ್ನು ಹಿಂದಿಕ್ಕಿದ್ದು 2016 ಕ್ಕೆ ಅಗ್ರಸ್ಥಾನವನ್ನು ಅಲಂಕರಿಸುವುದು ಖಚಿತ ಎಂದು ವರದಿಯಲ್ಲಿ ಹೇಳಲಾಗಿದೆ.

ಸಮೀಕ್ಷೆಯ ಇತರೆ ಅಂಶಗಳು:

- ಚೀನಾದ 12 ನೇ ಪಂಚ ವಾರ್ಷಿಕ ಯೋಜನೆ (2011-15) ನಲ್ಲಿ ತಿಳಿಸಿರುವ ಕೆಲವು ಸುಧಾರಣೆ ಕ್ರಮಗಳನ್ನು ಅಳವಡಿಸಿಕೊಂಡಲ್ಲಿ ಜನರ ಜೀವನ ಮಟ್ಟ ತ್ವರಿತ ಗತಿಯಲ್ಲಿ ಉತ್ತಮಗೊಳ್ಳಲಿದೆ.
- ಸದ್ಯ 8.3 ಟ್ರಿಲಿಯನ್ ಡಾಲರ್ ಗಳನ್ನು ಹೊಂದರುವ ಚೀನಾ ವಿಶ್ವದ ಎರಡನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವೆನಿಸಿದೆ. 15.7 ಟ್ರಿಲಿಯನ್ ಡಾಲರ್ ನೊಂದಿಗೆ ಅಮೆರಿಕಾ ವಿಶ್ವದ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿದೆ.
- OECD ಮುನ್ನೋಟದಂತೆ ಈ ವರ್ಷದಲ್ಲಿ ಚೀನಾದ ಜಿಡಿಪಿ ಶೇ. 8.5 ರಷ್ಟು ಬೆಳವಣಿಗೆಯನ್ನು ಕಾಣಲಿದೆ. ಕಳೆದ ವರ್ಷ ಜಿಡಿಪಿ ಬೆಳವಣಿಗೆ ಶೇ.7.5 ರಷ್ಟು ಮಾತ್ರ ದಾಖಲಾಗಿತ್ತು. ಆದರೆ ಈ ವರ್ಷ ಚೀನಾದ ಆರ್ಥಿಕ ಬೆಳವಣಿಗೆ ಪ್ರಗತಿ ಹಾದಿಯಲ್ಲಿ ಸಾಗಲಿರುವುದಾಗಿ ಹೇಳಿದೆ.

**ಮಲಾಲ ಕುರಿತಾದ ಪುಸ್ತಕ "Iam Malala" ಪ್ರಕಟಣೆಗೆ ಸಿದ್ಧ**

ಪಾಕಿಸ್ತಾನದ ಸ್ವಾತ್ ಕಣಿವೆಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೋರಾಟ ನಡೆಸಿ, ಉಗ್ರರ ಗುಂಡೇಟು ತಿಂದು ಚೇತರಿಸಿಕೊಂಡಿರುವ ಪಾಕಿಸ್ತಾನ ಯುವತಿ ಮಲಾಲ ಯೂಸಪ್ಝೈ ಜೀವನದ ನೆನಪುಗಳು ಪುಸ್ತಕವಾಗಿ ಪ್ರಕಟಗೊಳ್ಳಲಿವೆ. ಇದಕ್ಕೆ ಸಂಬಂಧಿಸಿದಂತೆ ಪ್ರಕಾಶಕರ ಜೊತೆ ಮಲಾಲ ರವರು 2 ಮಿಲಿಯನ್ ಪೌಂಡ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ ಎನ್ನಲಾಗಿದೆ.

- "I am Malala" ಎಂಬ ಶೀರ್ಷಿಕೆಯಡಿ ಹೊರತರಲಾಗುವ ಪುಸ್ತಕ ಇಂಗ್ಲೀಷ್ ಭಾಷೆಯಲ್ಲಿರಲಿದ್ದು, ಈ ವರ್ಷದ ಕೊನೆಯಲ್ಲಿ ಬಿಡುಗಡೆಮಾಡಲಾಗಲಿದೆ.
- ವೈಟೀನ್ ಫೀಲ್ಡ್ ಮತ್ತು ನಿಕೋಲಸನ್ ಸಂಸ್ಥೆ ಪ್ರಕಟಿಸುತ್ತಿರುವ ಈ ಪುಸ್ತಕವನ್ನು ಯು.ಕೆ ಮತ್ತು ಇಂಗ್ಲೆಂಡ್ ನಲ್ಲಿ ಪ್ರಕಟಿಸಲಿದೆ.
- ಗುಂಡೇಟು ತಿಂದ ಬಳಿಕ ಮಲಾಲ ರವರ ಜೀವನ, ಕುಟುಂಬದ ಬೆಂಬಲ ಮುಂತಾದ ವಿಷಯಗಳನ್ನು ಈ ಪುಸ್ತಕ ಒಳಗೊಂಡಿರಲಿದೆ. ಮಲಾಲ ಪ್ರಕಾರ ಇದೊಂದು ಪ್ರತಿ ಹೆಣ್ಣು ಮತ್ತು ಗಂಡು ಮಕ್ಕಳ ಶಿಕ್ಷಣದ ಹಕ್ಕಿನ ಪರವಾಗಿ ಆಂದೋಲನವಾಗಿದೆ.
- 2009 ರಲ್ಲಿ ಮಲಾಲ ರವರು ಬಿಬಿಸಿ ಸುದ್ದಿ ಸಂಸ್ಥೆಗೆ ಸ್ವಾತ್ ಕಣಿವೆಯಲ್ಲಿನ ಪರಿಸ್ಥಿತಿ ಬಗ್ಗೆ ಉರ್ದು ಭಾಷೆಯಲ್ಲಿ ಅಂಕಣ ಬರೆಯುತ್ತಿದ್ದ ಕಾರಣ ಉಗ್ರರ ಕೆಂಗಣ್ಣಿಗೆ ಗುರಿಯಾಗಿದ್ದರು.
- ಪಾಕಿಸ್ತಾನ ಮತ್ತು ಅಂತರ ರಾಷ್ಟ್ರೀಯ ಮಾಧ್ಯಮಗಳ ಕೇಂದ್ರ ಬಿಂದುವಾಗಿದ್ದ ಮಲಾಲ ರವರರನ್ನು ಅರ್ಚ್ ಬಿಷಾಪ್ ಡೆಸ್ಮಂಡ್ ಟುಟು ರವರು 2011 ರಲ್ಲಿ ಅಂತರರಾಷ್ಟ್ರೀಯ ಮಕ್ಕಳ ಶಾಂತಿ ಪ್ರಶಸ್ತಿಗೆ ನಾಮಕರಣ ಮಾಡಿದರು. 2011 ರಲ್ಲಿ ಪಾಕಿಸ್ತಾನ ಕೂಡ ದೇಶದ ಮೊದಲ ರಾಷ್ಟ್ರೀಯ ಯುವ ಶಾಂತಿ ಪ್ರಶಸ್ತಿಯನ್ನು ಮಲಾಲಗೆ ನೀಡಿದೆ.

## ವ್ಯವಹಾರ

**L & T ಗೆ ಆರು ತಿಂಗಳ ಕಾಲ ನಿಷೇಧ ಹೇರಿದ ವಿಶ್ವ ಬ್ಯಾಂಕ್**

ಲಾರ್ಸನ್ ಅಂಡ್ ಟರ್ಬೊ ಸಂಸ್ಥೆಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ಮಾಡಿರುವ ವಂಚನೆಯಿಂದ ವಿಶ್ವ ಬ್ಯಾಂಕ್ ಈ ಕಂಪನಿಯ ಮೇಲೆ ನಿಷೇಧ ಹೇರಿದೆ. ನಿಷೇಧದ ಅನ್ವಯ ವಿಶ್ವ ಬ್ಯಾಂಕ್ ಜೊತೆಗಿನ ಕಂಪನಿಯ ಎಲ್ಲಾ ವಹಿವಾಟುಗಳನ್ನು ಸ್ಥಗಿತಗೊಳ್ಳಲಿದೆ. ಅಲ್ಲದೇ ವಿವಿಧ ಯೋಜನೆಗಳಿಗೆ ವಿಶ್ವ ಬ್ಯಾಂಕ್ ನೀಡಿರುವ ಸಾಲವನ್ನು ಆರು ತಿಂಗಳ ಕಾಲ ತಡೆಹಿಡಿಯಲಿದೆ.

- ಈ ನಿಷೇಧವು ಆರು ತಿಂಗಳ ಕಾಲಾವಧಿ ತನಕ ಅಂದರೆ ಸೆಪ್ಟೆಂಬರ್ 6, 2013 ರ ತನಕ ಜಾರಿಯಲ್ಲಿ ಇರಲಿದೆ.
- ನಿಷೇಧ ಹೇರಿರುವ ಕಾರಣ L & T ಅಥವಾ ಅದರ ಅಂಗ ಸಂಸ್ಥೆಗಳು ವಿಶ್ವ ಬ್ಯಾಂಕ್ ನಿಂದ ಧನ ಸಹಾಯ ಪಡೆದಿರುವ ಯಾವುದೇ ಯೋಜನೆಗಳಿಗೆ ಕಂಟ್ರಾಕ್ಟರ್, ಸಪ್ಲೆಯರ್ ಮತ್ತು ಕನ್ಸಲ್ ಟೆಂಟಗಳನ್ನು ನೇಮಿಸುವಂತಿಲ್ಲ.

ವಿವಾದ ಏನು?

- ಸೆಪ್ಟೆಂಬರ್ 2008 ರಲ್ಲಿ ಲಾರ್ಸನ್ ಅಂಡ್ ಟರ್ಬೊ ಕಂಪನಿಯು ತಮಿಳುನಾಡಿನಲ್ಲಿರುವ ತನ್ನ ವೈದ್ಯಕೀಯ ಸಲಕರಣೆ ಮತ್ತು ಸಿಸ್ಟಮ್ಸ್ ಘಟಕದ ಮೂಲಕ ವಿಶ್ವ ಬ್ಯಾಂಕ್ ನಿಂದ ಆರ್ಥಿಕ ಸಲಹೆಯನ್ನು ಪಡೆಯಲು ಸಲ್ಲಿಸಿದ್ದ ಬಿಡ್ ನಲ್ಲಿ ಕಂಡುಬಂದಿರುವ ವಂಚನೆಯಿಂದ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

**ಕೃಷಿ ಉತ್ಪನ್ನ ರಫ್ತು: ಅಕ್ಕಿ ಮತ್ತು ಹತ್ತಿಯನ್ನು ಹಿಂದಿಕ್ಕಿದ ಗಾರ್ ಗಮ್ (Guar Gum)**

ಪ್ರಸ್ತಕ ಸಾಲಿನಲ್ಲಿ ರಫ್ತು ಮಾಡಿರುವ ಕೃಷಿ ಉತ್ಪನ್ನಗಳ ಪೈಕಿ ಗಾರ್ ಗಮ್ ನ ಪಾಲು ಅಗ್ರ ಸ್ಥಾನದಲ್ಲಿದೆ. ಅಮೆರಿಕಾದಲ್ಲಿ ಗಾರ್ ಗಮ್ ಗೆ ಭಾರಿ ಬೇಡಿಕೆ ಇರುವ ಕಾರಣ ರಫ್ತಿನಲ್ಲಿ ಅಧಿಕ ಏರಿಕೆಯಾಗಿದೆ. ವಿಪರ್ಯಾಸವೆಂದರೆ ಅಕ್ಕಿ ಮತ್ತು ಹತ್ತಿ ರಫ್ತನ್ನು ಮೀರಿಸಿರುವುದು.

- ಸರ್ಕಾರದ ಅಂಕಿ ಅಂಶಗಳ ಪ್ರಕಾರ ಏಪ್ರಲ್ ನಿಂದ ಜನವರಿ ಅವಧಿಯಲ್ಲಿ ಗಾರ್ ಗಮ್ ರಫ್ತಿನಲ್ಲಿ ಶೇ.139 ರಷ್ಟು ಹೆಚ್ಚಳ ಕಂಡು ಬಂದಿದೆ. ಇದರಿಂದ ಆಗಿರುವ ವಹಿವಾಟು 4.9 ಬಿಲಿಯನ್ ಡಾಲರ್.
- ಇದೇ ಅವಧಿಯಲ್ಲಿ 2.7 ಬಿಲಿಯನ್ ಡಾಲರ್ ಬೆಲೆಯಷ್ಟು ಬಾಸುಮತಿ ಅಕ್ಕಿ ಮತ್ತು 2.6 ಬಿಲಿಯನ್ ಡಾಲರ್ ಬೆಲೆಯಷ್ಟು ಕಚ್ಚಾ ಹತ್ತಿಯನ್ನು ರಫ್ತು ಮಾಡಲಾಗಿದೆ.

ಗಾರ್ ಗಮ್ ಬಗ್ಗೆ:

- ಗಾರ್ ಗಮ್ ಒಂದು ಪ್ರಮುಖ ಕೃಷಿ ಬೆಳೆಯಾಗಿದ್ದು, ಅನೇಕ ಉಪಯೋಗಗಳನ್ನು ಹೊಂದಿದೆ. ಇದರಿಂದ ಉತ್ಪಾದನೆಯಾಗುವ ಉರುಳಿಯಂತಹ ಬೀಜವನ್ನು ಸಿಪ್ಪೆ ತೆಗೆದು ಗಿರಿಣಿಗೆ ಹಾಕಿದರೆ ದೊರೆಯುವ ಬಿಳಿ ಪೌಡರ್ ನಂತಹ ಪದಾರ್ಥವೇ ಗಾರ್ ಗಮ್.

ಗಾರ್ ಗಮ್ ಉತ್ಪಾದನೆ ಎಲ್ಲೆಲ್ಲಿ?

- ಭಾರತ ಮತ್ತು ಆಸ್ಟ್ರೇಲಿಯಾ ಗಾರ್ ಗಮ್ ಬೆಳೆಯುವ ಪ್ರಮುಖ ರಾಷ್ಟ್ರಗಳು. ಉಳಿದಂತೆ ಆಮೆರಿಕಾ, ಚೀನಾ ಮತ್ತು ಆಫ್ರಿಕಾದಲ್ಲಿ ಸಣ್ಣ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

ಭಾರತದಲ್ಲಿ ಗಾರ್ ಉತ್ಪಾದನೆ:

- ಪ್ರಪಂಚದ ಶೇ.80 ರಷ್ಟು ಗಾರ್ ಗಮ್ ನ್ನು ಬೆಳೆಯುವ ದೇಶ ಭಾರತ. ವಾರ್ಷಿಕವಾಗಿ ಭಾರತದಲ್ಲಿ ಸರಿಸುಮಾರು 1.25 ಮಿಲಿಯನ್ ಟನ್ ಗಳಷ್ಟು ಗಾರ್ ಗಮ್ ನ್ನು ಉತ್ಪಾದಿಸಲಾಗುತ್ತಿದೆ. ಭಾರತದ ರಾಜಸ್ತಾನ ಮತ್ತು ಹರಿಯಾಣ ಜಿಲ್ಲೆಗಳಲ್ಲಿ ಇದನ್ನು ಅಧಿಕವಾಗಿ ಬೆಳೆಯುತ್ತಾರೆ. ರಾಜಸ್ತಾನದ ಜೋದ್ ಪುರ ಗಾರ್ ಗಮ್ ನ ಪ್ರಮುಖ ವ್ಯಾಪಾರ ಕೇಂದ್ರ.

ಗಾರ್ ಉಪಯೋಗಗಳು:

- ಕಾಗದ ತಯಾರಿಕ, ಜವಳಿ ಕಾರ್ಖಾನೆ, ಕಾಸ್ಮೆಟಿಕ್ಸ್, ಸ್ಫೋಟಕ ವಸ್ತುಗಳ ತಯಾರಿಕೆ ಮತ್ತು ಶೇಲ್ ಅನಿಲ ಹೊರತೆಗೆಯುವಿಕೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಗಾರ್ ಗಮ್ ನ್ನು ಬಳಸಲಾಗುತ್ತಿದೆ.

ಆಮೆರಿಕಾದಲ್ಲಿ ಬೇಡಿಕೆ ಏಕೆ?

- ಇತ್ತೀಚಿನ ದಿನಗಳಲ್ಲಿ ಆಮೆರಿಕಾದಲ್ಲಿ ಶೇಲ್ ಅನಿಲ (ಒಂದು ತರನಾದ ನೈಸರ್ಗಿಕ ಅನಿಲ) ಬಳಕೆಯನ್ನು ಉತ್ತೇಜಿಸಲಾಗುತ್ತಿದೆ. ವಿಶ್ವದಲ್ಲೇ ಆಮೆರಿಕಾ ಶೇಲ್ ಅನಿಲ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಶೇಲ್ ಅನಿಲವನ್ನು ಹೈಡ್ರೋಲಿಕ್ ಪ್ರಾಕ್ಚರಿಂಗ್ (Hydraulic Fracturing) ವಿಧಾನದ ಮೂಲಕ ಹೊರತೆಗೆಯಲಾಗುತ್ತದೆ. ಈ ವಿಧಾನದಲ್ಲಿ ಗಾರ್ ಗಮ್ ನ್ನು ಹೆಚ್ಚಾಗಿ ಬಳಸಲಾಗುತ್ತಿರು ಕಾರಣ ಆಮೆರಿಕಾದಲ್ಲಿ ಗಾರ್ ಗಮ್ ಗೆ ಅಧಿಕ ಬೇಡಿಕೆ ಇದೆ.

**2013-14 ನೇ ಸಾಲಿನಲ್ಲಿ ಭಾರತದ ಆರ್ಥಿಕ ಪ್ರಗತಿ ದರ ಶೇ.6 ರಷ್ಟು ಇರಲಿದೆ: ವಿಶ್ವ ಬ್ಯಾಂಕ್ ಅಧ್ಯಕ್ಷ**

ಪ್ರಸ್ತಕ ಸಾಲಿನಲ್ಲಿ ಭಾರತದ ಆರ್ಥಿಕ ಪ್ರಗತಿ ಕುಂಠಿತವಾಗಿದ್ದರು, ಮುಂದಿನ ಆರ್ಥಿಕ ವರ್ಷದಲ್ಲಿ ಭಾರತದ ಆರ್ಥಿಕ ಪ್ರಗತಿ ದರ ಶೇ.6.1 ರಿಂದ ಶೇ.6.7 ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಧ್ಯಕ್ಷ ಹೇಳಿದ್ದಾರೆ. ಇದೇ ಮೊದಲ ಬಾರಿ ಭಾರತಕ್ಕೆ ಮೂರು ದಿನಗಳ ಅಧಿಕೃತ ಪ್ರವಾಸ ಕೈಗೊಂಡಿರುವ ವಿಶ್ವ ಬ್ಯಾಂಕ್ ಅಧ್ಯಕ್ಷ ಜಿಮ್ ಯಾಂಗ್ ಕಿಮ್ (Jim Yang Kim) ಈ ವಿಷಯವನ್ನು ಬಿಚ್ಚಿಟ್ಟಿದ್ದಾರೆ.

- ಪ್ರಸ್ತಕ 2012-13 ನೇ ಸಾಲಿನಲ್ಲಿ ಭಾರತದ ಆರ್ಥಿಕ ಪ್ರಗತಿ ದರ ಶೇ.5 ರಷ್ಟು ಇರಲಿದೆ. 2013-14 ನೇ ಸಾಲಿನಲ್ಲಿ ಭಾರತದ ಆರ್ಥಿಕ ಸ್ಥಿತಿ ಚೇತರಿಸಿಕೊಳ್ಳಲಿದ್ದು, ಆರ್ಥಿಕ ಪ್ರಗತಿ ದರ ಶೇ.6.1 ರಿಂದ ಶೇ.6.7 ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ತನ್ನ ಮುನ್ನೋಟದಲ್ಲಿ ತಿಳಿಸಿದೆ.
- ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಸಾಗಿದ್ದು, ಭಾರತದಲ್ಲಿ ಸಹ ಇದೇ ಸ್ಥಿತಿ ಮುಂದುವರೆದಿದೆ. ಆದರೆ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪಾಲು ಕಳೆದ ಐದು ವರ್ಷಗಳು ದ್ವಿಗುಣಗೊಂಡಿರುವುದು ಸಂತಸದ ವಿಷಯ ಎಂದು ಕಿಮ್ ಹೇಳಿದ್ದಾರೆ.

**ಶೀಘ್ರವೇ ಹತ್ತು ರೂ ಮುಖಬೆಲೆಯ ಪ್ಲಾಸ್ಟಿಕ್ ನೋಟುಗಳ ಚಲಾವಣೆ: ಕೇಂದ್ರ ಸರ್ಕಾರ**

ಹತ್ತು ರೂ ಮುಖಬೆಲೆಯ ಪ್ಲಾಸ್ಟಿಕ್ ನೋಟುಗಳನ್ನು ದೇಶದ ಐದು ನಗರಗಳಲ್ಲಿ ಪ್ರಾಯೋಗಿಕವಾಗಿ ಚಲಾವಣೆ ಮಾಡಲು ಕೇಂದ್ರ ಸರ್ಕಾರ ಮತ್ತು RBI ನಿರ್ಧರಿಸಿವೆ. ಈ ನಿರ್ಣಯವನ್ನು ಹಣಕಾಸು ರಾಜ್ಯ ಸಚಿವರಾದ ನಮೋ ನಾರಾಯಣ್ ಮೀನಾ ರವರು ರಾಜ್ಯ ಸಭೆಯಲ್ಲಿ ತಿಳಿಸಿದ್ದಾರೆ.

- ಪಾಲಿಮರ್ ಅಥವಾ ಪ್ಲಾಸ್ಟಿಕ್ ನಿಂದ ಮಾಡಲಾದ ನೋಟುಗಳನ್ನು ಪ್ರಥಮ ಹಂತದಲ್ಲಿ ಪರಿಚಯಿಸಲಾಗುವುದು.
- ವಿಶಿಷ್ಟ ಭೌಗೋಳಿಕ ಮತ್ತು ಹವಾಗುಣ ಹೊಂದಿರುವ ದೇಶದ ಐದು ನಗರಗಳಾದ ಕೊಚ್ಚಿ, ಮೈಸೂರು, ಜೈಪುರ್, ಭುಬನೇಶ್ವರ್ ಮತ್ತು ಶಿಮ್ಲಾದಲ್ಲಿ ಈ ನೋಟುಗಳನ್ನು ಪ್ರಾಯೋಗಿಕವಾಗಿ ಚಲಾವಣೆ ಮಾಡಲಾಗುವುದು.
- ಧೀರ್ಘಕಾಲ ಬಾಳಿಕೆ ಬರುವಂತೆ ಮತ್ತು ಅಕ್ರಮ ನೋಟುಗಳ ಚಲಾವಣೆಯನ್ನು ಈ ವ್ಯವಸ್ಥೆಯಿಂದ ತಪ್ಪಿಸಬಹುದು ಎಂಬುದು RBI ಅಭಿಪ್ರಾಯವಾಗಿದೆ.

**ಮಾರ್ಚ್ 15- ವಿಶ್ವ ಗ್ರಾಹಕರ ದಿನ**

ವಿಶ್ವ ಗ್ರಾಹಕರ ದಿನವನ್ನು ಪ್ರತಿ ವರ್ಷ ಮಾರ್ಚ್ 15 ರಂದು ಆಚರಿಸಲಾಗುತ್ತದೆ. ಗ್ರಾಹಕರ ರಕ್ಷಣೆ ಮತ್ತು ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಗ್ರಾಹಕರ ದಿನದ ಉದ್ದೇಶವಾಗಿದೆ.

- ಈ ವರ್ಷ ಗ್ರಾಹಕರ ದಿನದ ಥೀಮ್: "Consumer Justice Now"
- ವಿಶ್ವ ಗ್ರಾಹಕರ ದಿನವನ್ನು ಮೊದಲ ಬಾರಿ ಮಾರ್ಚ್ 15, 1983 ರಲ್ಲಿ ಆಚರಿಸಲಾಗಿತ್ತು.
- ಭಾರತದಲ್ಲಿ ಗ್ರಾಹಕರ ಸುರಕ್ಷತೆಗೊಸ್ಕರ ಗ್ರಾಹಕ ರಕ್ಷಣಾ ಕಾಯ್ದೆ-1986 ನ್ನು ಜಾರಿಗೊಳಿಸಲಾಗಿದೆ. ಈ ಕಾಯ್ದೆಯಡಿ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ತ್ವರಿತ ಪರಿಹಾರ ನೀಡುವ ಸಲುವಾಗಿ ಗ್ರಾಹಕ ಮಂಡಳಿಗಳನ್ನು ಸ್ಥಾಪಿಸಲಾಗಿದೆ.

ಗ್ರಾಹಕರಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಗ್ರಾಹಕ ವ್ಯವಹಾರಗಳ ಇಲಾಖೆ "ಜಾಗೋ ಗ್ರಾಹಕ ಜಾಗೋ" ಎಂಬ ಶೀರ್ಷಿಕೆಯಡಿ ಜಾಹಿರಾತನ್ನು ಬಿತ್ತರಿಸುತ್ತಿದೆ.

**2013-14 ನೇ ಸಾಲಿನಲ್ಲಿ SBI ನಿಂದ 1200 ಹೊಸ ಶಾಖೆಗಳು**

ದೇಶದ ಅತಿ ದೊಡ್ಡ ಸಾರ್ವಜನಿಕ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2013-14 ನೇ ಸಾಲಿನಲ್ಲಿ ಹೊಸದಾಗಿ 1200 ಶಾಖೆಗಳನ್ನು ಮತ್ತು ಎಂಟು ಸಾಗರೋತ್ತರ ಶಾಖೆಗಳನ್ನು ತೆರೆಯಲು ನಿರ್ಧರಿಸಿದೆ.

- ಉತ್ತರ ಪ್ರದೇಶ, ತಮಿಳುನಾಡು, ಆಂದ್ರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರಗಳಲ್ಲಿ ತಲಾ 100 ಶಾಖೆಗಳನ್ನು ತನ್ನ ಸ್ಥಳೀಯ ವಿಸ್ತರಣಾ ಯೋಜನೆಯಲ್ಲಿ ತೆರೆಯಲು SBI ತಿರ್ಮಾನಿಸಿದೆ.
- ವಿದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಎಂಟು ಶಾಖೆಗಳಲ್ಲಿ ಯು.ಕೆ ಮತ್ತು ಬಾಂಗ್ಲದಲ್ಲಿ ಎರಡೆರೆಡು ಶಾಖೆ ಸೇರಿದಂತೆ ದಕ್ಷಿಣ ಕೊರಿಯಾ, ಶ್ರೀಲಂಕ, ಚೀನಾ ಮತ್ತು ನೆದರ್ ಲ್ಯಾಂಡ್ ನಲ್ಲಿ ತಲಾ ಒಂದೊಂದು ಶಾಖೆಯನ್ನು ತೆರೆಯಲಾಗುವುದು. ಈಗಾಗಲೇ ಚೀನಾ ಮತ್ತು ದಕ್ಷಿಣ ಕೊರಿಯಾದಲ್ಲಿ SBI ತನ್ನ ಶಾಖೆಯನ್ನು ಹೊಂದಿದೆ.

- ಸದ್ಯ ದೇಶದ ಅತಿ ದೊಡ್ಡ ಬ್ಯಾಂಕ್ ಎನಿಸಿರುವ SBI ರಾಷ್ಟ್ರವ್ಯಾಪ್ತಿ 14467 ಶಾಖೆಗಳನ್ನು ಹೊಂದಿದೆ.

**ಮಹೀಂದ್ರಾ ಅಂಡ್ ಮಹೀಂದ್ರಾದಿಂದ e2o ವಿದ್ಯುತ್ ಕಾರು**

ಆಟೋಮೊಬೈಲ್ ಕ್ಷೇತ್ರದ ದಿಗ್ಗಜ ಮಹೀಂದ್ರಾ ಅಂಡ್ ಮಹೀಂದ್ರಾ ಕಂಪನಿ ತನ್ನ ಮೊದಲ ವಿದ್ಯುತ್ ಚಾಲಿತ e2o ಕಾರನ್ನು ಇತ್ತೀಚೆಗೆ ಅನಾವರಣಗೊಳಿಸಿತು. ಈ ಮೂಲಕ ಮಹೀಂದ್ರಾ ಕಂಪನಿ ಮತ್ತೊಂದು ಮೈಲುಗಲ್ಲನ್ನು ಸಾಧಿಸಿದಂತಾಗಿದೆ. ಬೆಂಗಳೂರು ಮೂಲದ ವಿದ್ಯುತ್ ಚಾಲಿತ ಕಾರು ತಯಾರಿಕಾ ಕಂಪನಿ ರೇವಾವನ್ನು ಮಹೀಂದ್ರಾ ಮೂರು ವರ್ಷಗಳ ಹಿಂದೆ ಖರೀದಿಸಿತ್ತು. ಮುಂದಿನ ದಿನಗಳಲ್ಲಿ ಪರಿಸರ ಸ್ನೇಹಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳನ್ನು ತಯಾರಿಸುವ ಆಸೆಯನ್ನು ಕಂಪನಿ ಹೊಂದಿರುವುದಾಗಿ ಆನಂದ್ ಮಹೀಂದ್ರಾ ಹೇಳಿದ್ದಾರೆ.

ಕಾರಿನ ವಿಶೇಷ:

- ಎರಡು ಬಾಗಿಲು, ನಾಲ್ಕು ಆಸನಗಳನ್ನು ಹೊಂದಿರುವ ಈ ಕಾರಿನಲ್ಲಿ ಲಿಥೀಯಂ-ಐಯಾನ್ ಬ್ಯಾಟರಿ ಮತ್ತು ತ್ರಿ ಫೇಸ್ ಮೋಟಾರ್ ನ್ನು ಅಳವಡಿಸಲಾಗಿದೆ.
- ಪ್ರತಿ ಚಾರ್ಜಿಂಗ್ ನಂತರ ಸುಮಾರು 100 ಕೀ.ಮೀ ದೂರವನ್ನು ಕ್ರಮಿಸುವ ಸಾಮರ್ಥ್ಯವನ್ನು ಈ ಕಾರು ಹೊಂದಿದೆ. ಒಮ್ಮೆ ಚಾರ್ಜ್ ಮಾಡಲು 5 ಗಂಟೆಗಳ ಸಮಯ ಬೇಕಾಗುತ್ತದೆ.
- ನಗರ ಪ್ರದೇಶಗಳಿಗೆಂದೇ ತಯಾರಿಸಲಾಗಿರುವ ಈ ಪರಿಸರ ಸ್ನೇಹಿ ಕಾರಿನಲ್ಲಿ ಜಿಪಿಎಸ್ ಸೇವೆ, ಸ್ಟಾರ್ಟ್/ಸ್ಟಾಪ್ ಬಟನ್, ವಿನೂತನ ಬ್ರೇಕಿಂಗ್ ವ್ಯವಸ್ಥೆಯನ್ನು ಒದಗಿಸಲಾಗಿದೆ. ಈ ಕಾರಿನ ಬೆಲೆ 5.92 ಲಕ್ಷ.

**ವಿದೇಶಿ ಸಾಂಸ್ಥಿಕ ಹೂಡಿಕೆ ಮಿತಿಯಲ್ಲಿ ಸಡಿಲ: ಚಿದಂಬರಂ**

ಚಾಲ್ತಿ ಕೊರತೆ ತಗ್ಗಿಸಲು ಹರಸಾಹಸ ಪಡುತ್ತಿರುವ ಸರ್ಕಾರ ಈಗ ಎಫ್‌ಐಐ ಉದಾರೀಕರಣದ ಮೂಲಕ ಸರಿದೂಗಿಸಲು ಮುಂದಾಗಿದೆ. ಸರ್ಕಾರಿ ಸಾಲ ಪತ್ರ ಮತ್ತು ಕಾರ್ಪೊರೇಟ್ ಬಾಂಡ್ ಗಳಲ್ಲಿ ಹೂಡಿಕೆ ಮಾಡಲು ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ) ದಾರರಿಗೆ ಇದ್ದ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದ್ದು, ಉಪಮಿತಿಗಳನ್ನು ತೆಗೆದುಹಾಕಲಾಗಿದೆ ಎಂದು ಕೇಂದ್ರ ಹಣಕಾಸು ಪಿ.ಚಿದಂಬರಂ ಹೇಳಿದ್ದಾರೆ.

- ಸರ್ಕಾರಿ ಸಾಲ ಪತ್ರ ಮತ್ತು ಕಾರ್ಪೊರೇಟ್ ಬಾಂಡ್ ಗಳಲ್ಲಿ ಹೂಡಿಕೆ ಮಾಡಲು ಸಾಂಸ್ಥಿಕ ಹೂಡಿಕೆದಾರರಿಗೆ ಇದ್ದ ಮಿತಿಯನ್ನು ರೂ.2.7 ಲಕ್ಷಕೋಟಿಗೆ ಏರಿಸಲಾಗಿದೆ.
- ಈ ಸಡಿಲಿಕರಣದಿಂದಾಗಿ ಇನ್ನು ಮುಂದೆ ವಿದೇಶಿ ಹೂಡಿಕೆದಾರರು ಸರ್ಕಾರಿ ಸಾಲ ಪತ್ರಗಳಲ್ಲಿ ಗರಿಷ್ಠ ರೂ.13.50 ಲಕ್ಷ ಕೋಟಿ ಹೂಡಿಕೆ ಮಾಡಬಹುದಾಗಿದೆ. ಕಾರ್ಪೊರೇಟ್ ಬಾಂಡ್ ಗಳಲ್ಲಿ ರೂ.27.54 ಲಕ್ಷಗಳ ವರೆಗೆ ಹೂಡಿಕೆ ಮಾಡಬಹುದು.
- ಸಾಲ ನಿರ್ವಹಣೆ ಕಚೇರಿ (Debt Management Office) ಸ್ಥಾಪನೆಗೆ ಸಂಬಂಧಿಸಿದಂತೆ ಟಿಪ್ಪಣಿಯನ್ನುರಚಿಸಿಕೊಳ್ಳಲಾಗಿದೆ. ಡಿ.ಎಂ.ಓ ಇನ್ನು ಮುಂದೆ ಸರ್ಕಾರ ಮಾರುಕಟ್ಟೆ ಪಡೆಯುವ ಸಾಲ ಮತ್ತು ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ನೋಡಿಕೊಳ್ಳಲಿದೆ. ಇದುವರೆಗೂ ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೋಡಿಕೊಳ್ಳುತ್ತಿತ್ತು.

## ಪರಿಸರ

**ಪರಿಸರ ನಿರ್ವಹಣಾ ಸೂಚ್ಯಂಕ (Envoirnment Performance Index): ದೆಹಲಿ ಸ್ಥಿತಿ ಶೋಚನೀಯ**

ಪರಿಸರ ನಿರ್ವಹಣೆ ಸೂಚ್ಯಂಕ ಹೊರಬಿದಿದ್ದು ರಾಷ್ಟ್ರ ರಾಜಧಾನಿ ದೆಹಲಿ ಅತ್ಯಂತ ಕಳಪೆ ಸಾಧನೆ ತೋರಿದೆ. ಯೋಜನಾ ಮಂಡಳಿ ಹೊರತಂದಿರುವ ಈ ಸೂಚ್ಯಂಕದಲ್ಲಿ ದೆಹಲಿಗೆ 32 ನೇ ಸ್ಥಾನ ದೊರೆತಿದೆ. ಕಳೆದ ಬಾರಿ ದೆಹಲಿ 26 ನೇ ಸ್ಥಾನವನ್ನು ಪಡೆದಿತ್ತು.

- ಆಂಧ್ರ ಪ್ರದೇಶ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದೆ. ಒಟ್ಟಾರೆಯಾಗಿ 0.7696 ಅಂಕಗಳನ್ನು ಗಳಿಸುವ ಮೂಲಕ ಆಂಧ್ರ ಈ ಸಾಧನೆಯನ್ನು ಮಾಡಿದೆ. ಇದಕ್ಕೆ ಹೋಲಿಸಿದರೆ ದೆಹಲಿಯ ಒಟ್ಟಾರೆ ಅಂಕ ಕೇವಲ 0.4246 ಮಾತ್ರ.
- ಪ್ರಥಮ ಸ್ಥಾನಗಳಿಸುವ ರಾಜ್ಯವು ಪರಿಸರ ನಿರ್ವಹಣೆಗೆ ಸಂಬಂಧಿಸಿದ ತಂತ್ರಜ್ಞಾನ ಅಳವಡಿಕೆ, ಪರಿಸರ ನಿರ್ವಹಣೆಗೆ ನಿಯಮಗಳ ಕಡ್ಡಾಯ ಪಾಲನೆ, ಪರಿಸರ ಮಾನದಂಡಗಳ ಪರಿಪೂರ್ಣ ಪಾಲನೆಗಳಲ್ಲಿ ಮುಂದಿರುತ್ತದೆ.

ಪರಿಸರ ನಿರ್ವಹಣೆ ಸೂಚ್ಯಂಕ:

- ಪರಿಸರ ನಿರ್ವಹಣೆ ಸೂಚ್ಯಂಕವನ್ನು ಕಳೆದ ಮೂರು ವರ್ಷಗಳ ಹಿಂದೆ ಆರಂಭಿಸಲಾಯಿತು. ಆದರೆ ಇದೇ ಮೊದಲ ಬಾರಿ ದೇಶದ 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಮಾಹಿತಿಯನ್ನು ಕಲೆ ಹಾಕಿ ಸೂಚ್ಯಂಕವನ್ನು ಹೊರತರಲಾಗಿದೆ.
- ಒಂದು ರಾಜ್ಯದ ಪರಿಸರ ಗುಣಮಟ್ಟವನ್ನು ತೋರಿಸುವ ಈ ಸೂಚ್ಯಂಕವನ್ನು ನೀರಿನ ಗುಣಮಟ್ಟ, ವಾಯುವಿನ ಗುಣಮಟ್ಟ, ಕಸ ನಿರ್ವಹಣೆ, ಪರಿಸರ ಬದಲಾವಣೆಗೆ ಹೊಂದಿಕೊಳ್ಳಲು ಕೈಗೊಳ್ಳಲಾದ ಕ್ರಮ ಮತ್ತು ಅರಣ್ಯಗಳ ಆಧಾರದ ಮೇಲೆ ಸಿದ್ಧಪಡಿಸಲಾಗುತ್ತದೆ.
- ಪಟ್ಟಿಯಲ್ಲಿ ಮೊದಲ ಐದು ಸ್ಥಾನದಲ್ಲಿರುವ ರಾಜ್ಯಗಳು: ಆಂಧ್ರ ಪ್ರದೇಶ (0.7696), ಸಿಕ್ಕಿಂ (0.7478), ಹಿಮಾಚಲ ಪ್ರದೇಶ (0.7414), ಮಧ್ಯಪ್ರದೇಶ (0.7334) ಮತ್ತು ಮಹಾರಾಷ್ಟ್ರ (0.7176).

**ಓಕ್ಲಾ ಕಾಂಪೋಸ್ಟಿಂಗ್ (ಗೊಬ್ಬರ) ಘಟಕಕ್ಕೆ ಕಾರ್ಬನ್ ಕ್ರೆಡಿಟ್**

ದಕ್ಷಿಣ ದೆಹಲಿಯ ಮುನ್ಸಿಪಾಲ್ ಕಾರ್ಪೋರೇಷನ್ ನ ಓಕ್ಲಾ ಕಾಂಪೋಸ್ಟಿಂಗ್ ಘಟಕ (Composting Unit) ದೇಶದಲ್ಲೇ ಪ್ರಥಮ ಬಾರಿಗೆ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತಾದ ಸಂಸ್ಥೆ (United Nation Framework Convention on Climate Change) ನಿಂದ ಕಾರ್ಬನ್ ಕ್ರೆಡಿಟ್ ಪಡೆದ ಹೆಗ್ಗಳಿಕೆ ಪಾತ್ರವಾಗಿದೆ. ಈಗಾಗಲೇ ಕಾರ್ಬನ್ ಹೊರಸೂಸುವಿಕೆಯನ್ನು ತಗ್ಗಿಸು ಸಲುವಾಗಿ ಮುಂಗಡ ರೂ.25 ಲಕ್ಷಗಳನ್ನು ಈ ಘಟಕಕ್ಕೇ ನೀಡಲಾಗಿದೆ.

- 2008 ರಲ್ಲಿ ಕಾರ್ಯಾರಂಭ ಮಾಡಿದ ಓಕ್ಲಾ ಘಟಕ ಸುಮಾರು ಎರಡು ಲಕ್ಷ ಟನ್ ಗಳಷ್ಟು ಕಸವನ್ನು ಈಗಾಗಲೇ ಗೊಬ್ಬರವನ್ನಾಗಿ ಪರಿವರ್ತಿಸಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣ ಇನ್ನು ಅಧಿಕವಾಗಲಿದೇ ಎಂದು ಅಂದಾಜಿಸಲಾಗಿದೆ.

ಕಾರ್ಬನ್ ಕ್ರೆಡಿಟ್ ಎಂದರೇನು?

- ಕಾರ್ಬನ್ ಕ್ರೆಡಿಟ್ ಮತ್ತು ಕಾರ್ಬನ್ ಮಾರ್ಕೆಟ್ ಎಂದರೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹಸಿರು ಮನೆ ಪರಿಣಾಮಕಾರಿ ಅನಿಲಗಳನ್ನು ತಗ್ಗಿಸುವ ಸಲುವಾಗಿ ರೂಪುಗೊಂಡಿರುವ ಯೋಜನೆಗಳು.
- ಒಂದು ಕಾರ್ಬನ್ ಕ್ರೆಡಿಟ್ ಎಂದರೆ ಒಂದು ಲಕ್ಷ ಟನ್ ಗಳಷ್ಟು ಕಾರ್ಬನ್ ಡೈ ಆಕ್ಸೆಡ್ ಅಥವಾ ಅದಕ್ಕೆ ಸಮನಾದ ಇತರೆ ಹಸಿರು ಮನೆ ಪರಿಣಾಮಿಕಾರಿ ಅನಿಲಗಳನ್ನು ಹೊರಸೂಸುವಿಕೆಗೆ ನೀಡಲಾದ ಅನುಮತಿ ಪತ್ರ.

**ಅಕ್ರಮ ಹುಲಿ ಮಾರಾಟ ದಂಧೆ: ದೆಹಲಿ ನಂ.1**

ಹುಲಿ ಚರ್ಮ ಮತ್ತು ಹುಲಿಯ ಇತರೆ ಭಾಗಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ದಂಧೆಯೂ ದೇಶದ ರಾಜಧಾನಿಯಲ್ಲಿ ವ್ಯಾಪಕವಾಗಿ ಹಬ್ಬಿದ್ದು ದೆಹಲಿ ಅಗ್ರಸ್ಥಾನದಲ್ಲಿದೆ ಎಂಬ ಆಘಾತಕಾರಿ ಅಂಶವನ್ನು ಸಮೀಕ್ಷೆಯೊಂದು ಬಹಿರಂಗಪಡಿಸಿದೆ. ಗ್ಲೋಬಲ್ ವೈಲ್ಡ್ ಲೈಫ್ ಟ್ರೇಡ್ ಮಾನಿಟರಿಂಗ್ ಟ್ರಾಫಿಕ್ (Global Wildlife Trade Monitoring TRAFFIC) ಮತ್ತು ವರ್ಲ್ಡ್ ವೈಲ್ಡ್ ಲೈಫ್ ಫಂಡ್ (WWF) ಸಹಭಾಗಿತ್ವದಲ್ಲಿ "Reduced Skin and Bone Revised" ಎಂಬ ಶಿರ್ಷಿಕೆಯಡಿ ಹೊರತಂದಿರುವ ಈ ಸಮೀಕ್ಷೆಯಲ್ಲಿ ಈ ಅಂಶಗಳು ಬೆಳಕಿಗೆ ಬಂದಿವೆ.

ಸಮೀಕ್ಷೆಯಲ್ಲಿರುವ ಪ್ರಮುಖ ಮಾಹಿತಿಗಳು:

- ಅಕ್ರಮವಾಗಿ ಹುಲಿ ಬೇಟೆ ಮತ್ತು ಹುಲಿಯ ಭಾಗಗಳನ್ನು ಮಾರಾಟ ಮಾಡುತ್ತಿರುವ ಈ ದಂಧೆ ಭಾರತ ಸೇರಿದಂತೆ ಹುಲಿಗಳು ಹೆಚ್ಚಾಗಿ ಕಂಡು ಬರುವ ಚೀನಾ, ಇಂಡೋನೇಷಿಯಾ ಮತ್ತು ಥಾಯ್ಲೆಂಡ್ ನಂತಹ ವಿಶ್ವದ 13 ದೇಶಗಳಲ್ಲಿ ವ್ಯಾಪಕವಾಗಿ ನಡೆದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.
- ಭಾರತದಲ್ಲಿ ದೆಹಲಿ, ಸುಂದರ್ ಬನ್ಸ್ ಮತ್ತು ಪಶ್ಚಿಮ ಘಟ್ಟಗಳು ಈ ದಂಧೆಯ ಪ್ರಮುಖ ತಾಣಗಳಾಗಿವೆ. ಆಶ್ಚರ್ಯವೆಂದರೇ ದೆಹಲಿ ಯಾವುದೇ ರಾಷ್ಟ್ರೀಯ ಉದ್ಯಾನವನ ಅಥವಾ ವನ್ಯಮೃಗಾಲಯಗಳಿಗೆ ಹೊಂದಿಕೊಳ್ಳದಿದ್ದರು ಈ ದಂಧೆ ಆಳವಾಗಿ ಬೇರೂರಿದೆ.
- ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ ಸಮೀಪವಿರುವ ಉತ್ತರ ಪ್ರದೇಶದ ರಾಮನಗರ ಪ್ರದೇಶ, ಪೆಂಚ್ ರಾಷ್ಟ್ರೀಯ ಉದ್ಯಾನವನ ಸಮೀಪವಿರುವ ಮಧ್ಯ ಪ್ರದೇಶದ ಜಬಲ್ ಪುರ ಮತ್ತು ಬಲಘಾಟ್ ಹಾಗೂ ಸುಂದರ್ ಬನ್ಸ್ ನ ಸುತ್ತ ಮುತ್ತಲಿನ ಪ್ರದೇಶಗಳಾದ ಕೊಲ್ಕತ್ತಾ ದಲ್ಲೂ ಸಹ ಈ ದಂಧೆ ವ್ಯಾಪಕವಾಗಿ ಹಬ್ಬಿದೆ.
- ವಿಶ್ವದೆಲ್ಲಡೆ ವಶಪಡಿಸಿಕೊಳ್ಳಲಾದ ಹುಲಿಯ ಭಾಗಗಳಲ್ಲಿ ದೆಹಲಿಯ ಪಾಲು ಶೇ.26 ರಷ್ಟಿದೆ.
- ಸುಂದರ್ ಬನ್ಸ್ ಹುಲಿ ಸಂರಕ್ಷಣಾ ತಾಣದಲ್ಲಿ ಈ ದಂಧೆ ಭಾರತದ ಕಡೆಗಿಂತ ಬಾಂಗ್ಲಾ ದೇಶದ ಕಡೆ ಅತಿ ಹೆಚ್ಚಾಗಿದೆ ಎಂದು ಹೇಳಲಾಗಿದೆ. 2011 ರಲ್ಲಿ ಈ ಭಾಗದಲ್ಲಿ ಮೂರು ಹುಲಿ ತಲೆ, ನಾಲ್ಕು ಹುಲಿಯ ಚರ್ಮ ಸೇರಿದಂತೆ 24 ಕೆ.ಜಿ ಹುಲಿಯ ಮೂಳೆಗಳನ್ನು ವಶಪಡಿಸಕೊಳ್ಳಲಾಗಿದೆ.
- ಸಮೀಕ್ಷೆಯ ಪ್ರಕಾರ ಕಾರ್ಬೆಟ್ ಮತ್ತು ರಾಮನಗರ ಪ್ರದೇಶಗಳಲ್ಲಿ ಹುಲಿಗಳು ಹೇರಳವಾಗಿದ್ದು, ಈ ಭಾಗ ಬೇಟೆಗಾರರಿಗೆ ಪ್ರಿಯವಾಗಿದೆ ಎಂದು ಹೇಳಲಾಗಿದೆ.
- 2000 ದಿಂದ 2012 ರ ವರೆಗೆ ಸುಮಾರು 1425 ಹುಲಿಗಳನ್ನು ಕೊಲ್ಲಲಾಗಿದೆ. 13 ದೇಶಗಳಲ್ಲಿ ಕಾಂಬೋಡಿಯಾ ಹೊರತು ಪಡಿಸಿ ಬೇರೆ ಎಲ್ಲಾ ದೇಶಗಳಲ್ಲೂ ಹುಲಿ ಬೇಟೆ ಎಗ್ಗಿಲ್ಲದೇ ನಡೆದಿದೆ ಎಂದು ಸಮೀಕ್ಷೆಯ ವರದಿಯಲ್ಲಿ ತಿಳಿಸಲಾಗಿದೆ.

**ಮಾರ್ಚ್ 22: ವಿಶ್ವ ಅರಣ್ಯ ದಿನ**

ಪ್ರತಿ ವರ್ಷ ಮಾರ್ಚ್ 22 ನ್ನು ವಿಶ್ವ ಅರಣ್ಯ ದಿನವನ್ನಾಗಿ ಪ್ರಪಂಚದಲ್ಲೆಡೆ ಆಚರಿಸಲಾಗುತ್ತಿದೆ. ದೈನಂದಿನ ಜೀವನದಲ್ಲಿ ಅರಣ್ಯ ಸಂಪನ್ಮೂಲದ ಪಾತ್ರ ಮತ್ತು ಅದರ ವಿನಾಶದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಈ ದಿನವನ್ನು ಅರಣ್ಯ ದಿನವನ್ನಾಗಿ ಆಚರಿಸಲಾಗುವುದು. ಜಾಗತಿಕ ಮಟ್ಟದಲ್ಲಿ ಇಂದು ಮಾನವನ ಅತಿ ಆಸೆಯಿಂದ ಅರಣ್ಯ ಸಂಪನ್ಮೂಲ ಬರಿದಾಗುತ್ತಿರುವುದು ನೋವಿನ ಸಂಗತಿ.

- ಜಾಗತಿಕ ಮಟ್ಟದಲ್ಲಿ ಅರಣ್ಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಈ ದಿನದಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.
- 2011 ರ ಅರಣ್ಯ ವರದಿಯ ಪ್ರಕಾರ ಭಾರತ 78.29 ಮಿಲಿಯನ್ ಹೆಕ್ಟೇರ್ ನಷ್ಟು ಅರಣ್ಯವನ್ನು ಹೊಂದಿದೆ. ದೇಶದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಪ್ರದೇಶದ ಪಾಲು ಶೇ.23.81 ರಷ್ಟಿದೆ.
- ಭಾರತದ ರಾಜ್ಯಗಳ ಪೈಕಿ ಮಧ್ಯ ಪ್ರದೇಶ 77700 ಚದರ ಕೀ.ಮೀ ಅರಣ್ಯ ಪ್ರದೇಶವನ್ನು ಹೊಂದುವ ಮೂಲಕ ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಮಧ್ಯಪ್ರದೇಶದ ನಂತರ ಅರುಣಾಚಲ ಪ್ರದೇಶ ಎರಡನೇ ಸ್ಥಾನದಲ್ಲಿದೆ. ಅರುಣಾಚಲ ಪ್ರದೇಶದಲ್ಲಿ 67410 ಚದರ ಕೀ.ಮೀ ವಿಸ್ತೀರ್ಣ ಅರಣ್ಯದಿಂದ ಕೂಡಿದೆ.
- ಇತ್ತೀಚೆಗೆ ರಾಜ್ಯದ ಅಧಿವೇಶನದಲ್ಲಿ ಮಂಡಿಸಲಾದ ವರದಿಯ ಪ್ರಕಾರ 2001 ರಿಂದ 2011 ರ ಅವಧಿಯಲ್ಲಿ 797 ಚದರ ಕೀ.ಮೀ ಅರಣ್ಯ ಪ್ರದೇಶ ಕರ್ನಾಟಕದಲ್ಲಿ ಇಳಿಕೆಯಾಗಿದೆ ಎಂದು ಹೇಳಲಾಗಿದೆ. ರಾಜ್ಯದ ಸುಮಾರು 67,096 ಹೆಕ್ಟೇರ್ ಅರಣ್ಯ ಪ್ರದೇಶ ಅಕ್ರಮವಾಗಿ ಒತ್ತುವರಿಯಾಗಿದ್ದು, ತೆರವುಗೊಳಿಸಲು ರಾಜ್ಯ ಸರ್ಕಾರ ವಿಫಲವಾಗಿರುವುದಾಗಿ ವರದಿಯಲ್ಲಿ ಹೇಳಲಾಗಿತ್ತು. ರಾಜ್ಯ ಸರ್ಕಾರ ಅರಣ್ಯ ನೀತಿಯನ್ನು ಜಾರಿಗೊಳಿಸುವಲ್ಲಿ ತೋರುತ್ತಿರುವ ಅಸಡ್ಡೆ ಮತ್ತು ಅಕ್ರಮ ಗಣಿಗಾರಿಕೆ ರಾಜ್ಯದ ಅರಣ್ಯ ಲೂಟಿಯಾಗಲು ಪೂರಕವಾದ ಪ್ರಮುಖ ಅಂಶಗಳು.

**ಸತ್ಯಮಂಗಲಂ ಅರಣ್ಯ ವಲಯವಿನ್ನು ಹುಲಿ ಸಂರಕ್ಷಣಾ ಮೀಸಲು ತಾಣ**

ದಂತ ಚೋರ ವೀರಪ್ಪನ್ ಹತ್ಯೆಯಾದ 9 ವರ್ಷಗಳ ಬಳಿಕ ಅವನ ಅಡಗು ತಾಣವಾದ ಸತ್ಯಮಂಗಲಂ ಅರಣ್ಯ ಪ್ರದೇಶವನ್ನು ತಮಿಳುನಾಡು ಸರ್ಕಾರ ಹುಲಿ ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಘೋಷಿಸಿ ಮಾರ್ಚ್ 15 ರಂದು ಆದೇಶ ಹೊರಡಿಸಿದೆ. 2011 ರಲ್ಲಿ ಈ ಪ್ರದೇಶವನ್ನು ವನ್ಯಜೀವಿ ಅಭಯಾರಣ್ಯವೆಂದು ಘೋಷಿಸಲಾಗಿತ್ತು.

- ಈ ಆದೇಶದಿಂದ ತಮಿಳುನಾಡಿನಲ್ಲಿರುವ ಹುಲಿ ಸಂರಕ್ಷಣಾ ಮೀಸಲು ತಾಣಗಳ ಸಂಖ್ಯೆ ನಾಲ್ಕಕ್ಕೇರಲಿದೆ. ಮಧುಮಲೈ, ಕಲಕ್ಕಡ್ ಮುಂಡನ್ ತುರೈ ಮತ್ತು ಅನ್ನಮಲೈ ತಮಿಳುನಾಡಿನಲ್ಲಿ ಈ ಮುಂಚೆ ಇದ್ದ ಮೂರು ಹುಲಿ ಸಂರಕ್ಷಣಾ ಮೀಸಲು ಪ್ರದೇಶಗಳು.
- 1408.04 ಚದರ ಕೀ.ಮೀ ವಿಸ್ತೀರ್ಣವನ್ನು ಹೊಂದಿರುವ ಸತ್ಯಮಂಗಲಂ ಅರಣ್ಯ ಪ್ರದೇಶವೂ 25 ಹುಲಿ ಮತ್ತು 1200 ಆನೆಗಳನ್ನು ಹೊಂದಿರುವುದಾಗಿ ಅಂದಾಜಿಸಲಾಗಿದೆ.

- ಸರ್ಕಾರದ ಈ ಕ್ರಮದಿಂದ ಅರಣ್ಯ ಸಂರಕ್ಷಣೆಗೆ ಮತ್ತಷ್ಟು ಬಲ ಬರಲಿದೆ. ಅಲ್ಲದೇ ಅರಣ್ಯ ಭಾಗದಲ್ಲಿ ಅಕ್ರಮ ಗಣಿಗಾರಿಕೆ ಸೇರಿದಂತೆ ಟಿಂಬರ್ ಮಾಫಿಯಾ ಸಹ ನಿಲ್ಲಲಿದೆ. ವೀರಪ್ಪನ್ ಹತ್ಯೆಯ ನಂತರ ಈ ಭಾಗದಲ್ಲಿ ಅಕ್ರಮ ಒತ್ತುವರಿ ಕಾಯಕ ವ್ಯಾಪಕವಾಗಿ ನಡೆದಿತ್ತು.

ಅರಣ್ಯವಾಸಿಗಳ ವಿರೋಧ:

- ತಮಿಳುನಾಡು ಸರ್ಕಾರ ಸತ್ಯಮಂಗಲಂ ಅರಣ್ಯವನ್ನು ಹುಲಿ ಸಂರಕ್ಷಿಣಾ ಮೀಸಲು ಪ್ರದೇಶವನ್ನಾಗಿ ಘೋಷಿಸಿರುವುದಕ್ಕೆ ಈ ಪ್ರದೇಶದ ಅರಣ್ಯವಾಸಿಗಳು ವ್ಯಾಪಕ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಅರಣ್ಯ ಹಕ್ಕು ಕಾಯ್ದೆ-2006 ರ ಪ್ರಕಾರ ರಾಜ್ಯ ಸರ್ಕಾರ ಈ ಕ್ರಮವನ್ನು ಕೈಗೊಳ್ಳುವ ಮುಂಚೆ ಈ ಜನರ ಅಭಿಪ್ರಾಯವನ್ನು ಪಡೆದಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಹುಲಿ ಸಂರಕ್ಷಣಾ ಮೀಸಲು ಪ್ರದೇಶಗಳಲ್ಲಿ ಮಾನವನ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದರಿಂದ ಕಾಡನ್ನೇ ನಂಬಿ ಜೀವನ ನಡೆಸುತ್ತಿರುವ ಇವರ ಸ್ಥಿತಿ ಚಿಂತಾಜನಕವಾಗಲಿದೆ.

**ಮಾರ್ಚ್ 23: ವಿಶ್ವ ಜಲ ದಿನ**

ಪ್ರತಿ ವರ್ಷ ಮಾರ್ಚ್ 23 ನ್ನು ವಿಶ್ವ ಜಲ ದಿನ (World Water Day)ವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವ ಜಲ ದಿನವನ್ನು ಮೊದಲ ಬಾರಿಗೆ 1993 ರಲ್ಲಿ ಆಚರಿಸಲಾಗಿತ್ತು. ವಿಶ್ವ ಸಂಸ್ಥೆಯಿಂದ ಆರಂಭಗೊಂಡಿರುವ ಈ ದಿನದಂದು ನೀರಿನ ಮೌಲ್ಯದ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ಹೊಂದಿದೆ.

- ಈ ವರ್ಷ ವಿಶ್ವ ಜಲ ದಿನದ ಥೀಮ್: ಜಲ ಸಹಕಾರ (Water Cooperation)
- ವಿಶ್ವ ಜಲ ದಿನವನ್ನು ಪ್ರಪಂಚದಲ್ಲೆಡೆ ಆಚರಿಸಲಾಗುವುದು. ನೀರಿನ ಮೌಲ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು.

ಕಲುಷಿತ ನೀರು ಸೇವನೆಯಿಂದ ಪ್ರತಿದಿನ 1800 ಮಕ್ಕಳ ಸಾವು:

- ವಿಶ್ವಸಂಸ್ಥೆಯ ಮಕ್ಕಳ ನಿಧಿಯ (ಯುನಿಸೆಫ್) ಪ್ರಕಾರ ಪ್ರತಿ ದಿನ ಐದು ವರ್ಷದೊಳಗಿನ 2000 ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಅವರಲ್ಲಿ 1,800 ಮಕ್ಕಳ ಸಾವಿಗೆ ಅಶುದ್ಧ ಕುಡಿಯುವ ನೀರು ಮತ್ತು ಸ್ವಚ್ಚತೆ ಕೊರತೆ ಕಾರಣ ಎಂದು ಹೇಳಲಾಗಿದೆ.

**ಮಾರ್ಚ್ 23 ರಂದು "ಅರ್ಥ್ ಅವರ್" ಆಚರಣೆ**

ಜಾಗತಿಕ ತಾಪಮಾನ ಮತ್ತು ಅದರಿಂದಾಗುವ ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿಮ"ಅರ್ಥ್ ಅವರ್" ನ್ನು ಮಾರ್ಚ್ 23 ರಂದು ಆಚರಿಸಲಾಗುತ್ತದೆ. "ಅರ್ಥ್ ಅವರ್" ದಿನದಂದು ಸ್ಥಳೀಯ ಕಾಲಮಾನದಂತೆ ರಾತ್ರಿ 8.30 ರಿಂದ 9.30 ರ ಅವಧಿಯಲ್ಲಿ ಒಂದು ತಾಸು ವಿದ್ಯುತನ್ನು ಕಡಿತಗೊಳಿಸುವುದು ಅಥವಾ ಸ್ವಪ್ರೇರಣೆಯಿಂದ ವಿದ್ಯುತ್ ಬಳಕೆಯನ್ನು ಒಂದು ತಾಸು ಸ್ಥಗಿತಗೊಳಿಸುವ ಮೂಲಕ ಆಚರಿಸಲಾಗುವುದು. ಜಾಗತಿಕ ತಾಪಮಾನ ಏರುನಿಕೆಯಲ್ಲಿ ಪ್ರಮುಖ ಪಾತ್ರವಹಿಸುವ ಇಂಗಾಲದ ಆಮ್ಲ ಹೊರಸುಸುವಿಕೆಯನ್ನು ತಗ್ಗಿಸುವುದು ಸಹ ಈ ಅಭಿಯಾನದ ಅಂಶವಾಗಿದೆ.

"ಅರ್ಥ್ ಅವರ್" ಬಗ್ಗೆ:

- "ಪರಿಸರಕ್ಕಾಗಿ ವಿಶ್ವ ವನ್ಯಜೀವಿ ನಿಧಿ" (World Wide Fund for Nature) ಈ ಅಭಿಯಾನವನ್ನು ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಆಯೋಜಿಸಲಾಗುತ್ತಿದೆ. 2007 ರಲ್ಲಿ ಪ್ರಥಮ ಬಾರಿಗೆ ಆಸ್ಟ್ರೇಲಿಯಾದ ಸಿಡ್ನಿ ನಗರದಲ್ಲಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.
- 2008 ರಲ್ಲಿ ವಿಶ್ವದ ಪ್ರಮುಖ ನಗರಗಳು ಮತ್ತು ಉದ್ದಿಮೆ ಸಂಸ್ಥೆಗಳು ಈ ಅಭಿಯಾನದೊಂದಿಗೆ ಕೈಜೋಡಿಸುವ ಮೂಲಕ ಅದ್ಭುತ ಯಶಸ್ಸನ್ನು ಗಳಿಸಿತು.
- ಈ ವರ್ಷ ಜಾಗತಿಕವಾಗಿ 7000 ನಗರಗಳು ಮತ್ತು 200 ಕೋಟಿ ಜನರು ಈ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪರಿಸರಕ್ಕಾಗಿ ವಿಶ್ವ ವನ್ಯಜೀವಿ ನಿಧಿಯ ಸಿಇಓ ಆ್ಯಂಡಿ ರಿಡ್ಲಿ ಹೇಳಿದ್ದಾರೆ.
- ಭಾರತದ 150 ಕ್ಕೂ ಹೆಚ್ಚು ನಗರಗಳು ಈ ವರ್ಷದ "ಅರ್ಥ್ ಅವರ್" ಅಭಿಯಾನದಲ್ಲಿ ಭಾಗವಹಿಸಲಿವೆ.

ಅರ್ಥ್ ಅವರ್ ಪಾರೆಸ್ಟ್ (Earth Hour Forest):

- 2013 ರಲ್ಲಿ ವಿಶ್ವದಲ್ಲೇ ಪ್ರಥಮ ಬಾರಿಗೆ ಉಗಾಂಡ ದಲ್ಲಿ "ಅರ್ಥ್ ಆವರ್ ಫಾರೆಸ್ಟ್" ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿ ತಿಂಗಳು ಉಗಾಂಡದಲ್ಲಿ ಸುಮಾರು 6000 ಹೆಕ್ಟೇರ್ ನಷ್ಟು ಅರಣ್ಯ ನಾಶವಾಗುತ್ತಿರುವುದರ ವಿರುದ್ಧ ಹೋರಾಟ ಮಾಡುವ ಸಲುವಾಗಿ ಈ ಅಭಿಯಾನವನ್ನು ಆಯೋಜಿಸಲಾಗಿತ್ತು. I Will If U will ಎಂಬ ಶೀರ್ಷಿಕೆಯಡಿ ಆರಂಭವಾಗಿರುವ ಈ ಅಭಿಯಾನದಲ್ಲಿ WWF ಮತ್ತು ಉಗಾಂಡ ಜನತೆ ಜಂಟಿಯಾಗಿ 5,00,000 ಮರಗಳನ್ನು ವರ್ಷದಲ್ಲಿ ನೆಡಲು ನಿರ್ಧರಿಸಿವೆ. ಉಗಾಂಡದ ಚಾರ್ಟೆಡ್ ಅಕೌಂಟ್ ಬ್ಯಾಂಕ್ ಸಹ ಇದರ ಸಹಾಯಕ್ಕೆ ಧಾವಿಸಿದೆ.

**ಕಾಜೀರಂಗ ರಾಷ್ಟ್ರೀಯ ಉದ್ಯಾನದಲ್ಲಿ "ಘೇಂಡಾಮೃಗ (Rhenoceros)" ಗಳ ಸಂಖ್ಯೆ ಹೆಚ್ಚಳ**

ಅಸ್ಸಾಂನ ಕಾಜೀರಂಗ ರಾಷ್ಟ್ರೀಯ ಉದ್ಯಾನದಲ್ಲಿ ಇತ್ತೀಚೆಗೆ ನಡೆಸಲಾದ "ಘೇಂಡಾಮೃಗ" ಗಣತಿಯ ಅಂಕಿ ಅಂಶಗಳ ಪ್ರಕಾರ ಘೇಂಡಾಮೃಗಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಗೊಂಡಿರುವ ಕಾಜೀರಂಗ ರಾಷ್ಟ್ರೀಯ ಉದ್ಯಾನದಲ್ಲಿ ಇತ್ತೀಚೆಗೆ ಘೇಂಡಾಮೃಗಗಳನ್ನು ಅಕ್ರಮವಾಗಿ ಕೊಲ್ಲಲಾಗುತ್ತಿತ್ತು.

- ಕಳೆದ ಗಣತಿಯ ಮಾಹಿತಿಗಿಂತ ಈ ಬಾರಿ 39 ಘೇಂಡಾಮೃಗಗಳು ಹೆಚ್ಚಾಗಿ ದಾಖಲಾಗಿವೆ. ಒಟ್ಟಾರೆಯಾಗಿ ಕಾಜೀರಂಗದಲ್ಲಿ 2,290 ಘೇಂಡಾಮೃಗಳು ಈ ಸಲದ ಗಣತಿಯಲ್ಲಿ ದಾಖಲಾಗಿವೆ. 1999 ರಲ್ಲಿ 1,672 ರಷ್ಟಿದ್ದ ಘೇಂಡಾಮೃಗಗಳ ಸಂಖ್ಯೆ, 2009 ರಲ್ಲಿ 2048 ಕ್ಕೆ ಏರಿತ್ತು.
- ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಸಲಾಗುವ ಗಣತಿಯಲ್ಲಿ ಈ ಬಾರಿ 250 ಸಿಬ್ಬಂದಿ ಮತ್ತು 50 ಆನೆಗಳನ್ನು ಬಳಸಿ 81 ಬ್ಲಾಕ್ ಗಳಲ್ಲಿ ಗಣತಿಯನ್ನು ಕೈಗೊಳ್ಳಲಾಗಿತ್ತು.
- ಇತ್ತೀಚಿನ ದಿನಗಳಲ್ಲಿ ಘೇಂಡಾಮೃಗಗಳ ಅಕ್ರಮ ಮಾರಾಟ ದಂಧೆ ವ್ಯಾಪಕವಾಗಿ ಹರಡಿದೆ. ಈ ದಂಧೆಯಿಂಧ ಕಳೆದ ವರ್ಷ 20 ಮತ್ತು ಈ ವರ್ಷ 14 ಘೇಂಡಾಮೃಗಗಳನ್ನು ಕೊಂದುಹಾಕಲಾಗಿದೆ.

**ಚೆನ್ನೈ ಮತ್ತು ಬೆಂಗಳೂರಲ್ಲಿ ಗುಬ್ಬಿ ಸಂಖ್ಯೆ ಇಳಿಮುಖ**

"ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ" ನಡೆಸಿರುವ ಸಮೀಕ್ಷೆಯ ಅನ್ವಯ ಬೆಂಗಳೂರು ಮತ್ತು ಚೆನ್ನೈ ನಗರಗಳಲ್ಲಿ ಗುಬ್ಬಿಗಳು ಕಾಣುವುದೇ ಅಪರೂಪ. ದೇಶದ ಪ್ರಮುಖ ನಗರಗಳಲ್ಲಿ ನಡೆಸಲಾದ ಈ ಅಧ್ಯಯನದಲ್ಲಿ ಮುಂಬೈನಲ್ಲಿ ಹೆಚ್ಚಾಗಿ ಗುಬ್ಬಿಗಳನ್ನು ಕಾಣಬಹುದಾಗಿದೆ. ಆದ್ದರಿಂದ ಮುಂಬೈಗೆ ಮೊದಲ ಸ್ಥಾನ ಸಿಕ್ಕಿದೆ.

ಏನಿದು ಸಮೀಕ್ಷೆ?

- ಪಕ್ಷಿಗಳು ಪರಿಸರ ಮಾಲಿನ್ಯದ ಮಟ್ಟವನ್ನು ಸೂಚಿಸುತ್ತವೆ ಎಂಬುದು ತಜ್ಞರ ಅಭಿಪ್ರಾಯ. ಹವಾಮಾನ ವೈಪರೀತ್ಯದಿಂದ ತೀರಾ ಸಾಮಾನ್ಯವಾಗಿ ಕಂಡು ಬರುವ ಹಕ್ಕಿಗಳು ಕೂಡ ಕೆಲವೊಮ್ಮೆ ಹುಡುಕಿದರು ಕಾಣಸಿಗದ ಸ್ಥಿತಿಗೆ ತಲುಪುವುದು ನಿಜ. ಅಂತಹ ಹಕ್ಕಿಗೆ ಉದಾಹರಣೆ ಗುಬ್ಬಿ. ಕೆಲವು ವರ್ಷಗಳ ಹಿಂದೆ ಗುಬ್ಬಿಯನ್ನು ಎಲ್ಲೆಂದರಲ್ಲಿ ನೋಡಬಹುದಾಗಿತ್ತು. ಆದರೆ ಇಂದಿನ ಚಿತ್ರಣವೇ ಬೇರೆ ಆಗಿದೆ.
- ಗುಬ್ಬಿಗಳ ಸಂತತಿ ಬಗ್ಗೆ ತಿಳಿಯಲು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ನೆರವಿನೊಂದಿಗೆ "ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ"ಯು ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸ್" ಮತ್ತು "ನೇಚರ್ ಕನ್ಸರ್ವೇಷನ್ ಫೋರಂ" ಸಹಭಾಗಿತ್ವದಲ್ಲಿ "ಸಿಟಿಜನ್ ಸ್ಪಾರೋ" (Citizen Sparrow)" ಎಂಬ ಸಮೀಕ್ಷೆಯನ್ನು ಕೈಗೊಂಡಿತ್ತು.

ಸಮೀಕ್ಷೆ ಹೇಗೆ?

- ಇದೊಂದು ಆನ್ ಲೈನ್ ಸಮೀಕ್ಷೆಯಾಗಿತ್ತು. ಗುಬ್ಬಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕಲೆಹಾಕಲು ಎಂಟು ಭಾಷೆಯಲ್ಲಿ ಪ್ರಶ್ನಾವಳಿಯನ್ನು ತಯಾರಿಸಿ ಆನ್ ಲೈನ್ ಮೂಲಕ ಮಾಹಿತಿಯನ್ನು ಪಡೆಯುವುದು ಸಮೀಕ್ಷೆಯ ಗುರಿ. ಈ ಸಮೀಕ್ಷೆಯಲ್ಲಿ ದೇಶದ ಎಲ್ಲಾ ಭಾಗಗಳಿಂದ ಸುಮಾರು 5,736 ಜನರು ಭಾಗವಹಿಸಿದ್ದರು. ಇವರಲ್ಲಿ ಶೇ.25 ರಷ್ಟು ಜನ ಗ್ರಾಮೀಣ ಭಾಗದವರು. ಈಗೇ ಇವರಿಂದ ಪಡೆದ ಮಾಹಿತಿಯ ಮೂಲಕ ಗುಬ್ಬಿ ಸಂಖ್ಯೆ ಎಲ್ಲೆಲ್ಲಿ ಹೆಚ್ಚಾಗಿದೆ ಮತ್ತು ಕ್ಷೀಣಿಸಿದೆ ಎಂಬ ವರದಿಯನ್ನು ಸಿದ್ಧಪಡಿಸಲಾಗಿದೆ.

ವರದಿಯಲ್ಲೇನಿದೆ?

- ವರದಿಯ ಪ್ರಕಾರ ಮುಂಬೈನಲ್ಲಿ ಗುಬ್ಬಿಗಳು ಹೆಚ್ಚಾಗಿ ಕಾಣಬಹುದಾಗಿದೆ. ಮುಂಬೈ ನಂತರ ಹೈದ್ರಾಬಾದ್ ಮತ್ತು ಪುಣೆ ನಂತರದ ಸ್ಥಾನದಲ್ಲಿವೆ.
- ಚೆನ್ನೈ ಮತ್ತು ಬೆಂಗಳೂರಿನಲ್ಲಿ ಗುಬ್ಬಿಗಳು ತೀರಾ ವಿರಳವಾಗಿದೆ.
- ಭಾರತದ ಈಶಾನ್ಯ ರಾಜ್ಯಗಳಲ್ಲಿ ಗುಬ್ಬಿಗಳನ್ನು ಹೇರಳವಾಗಿ ನೋಡಬಹುದಾಗಿದೆ.
- ಮನುಷ್ಯರು ಮನೆ ಕಟ್ಟುವ ವಿಧಾನ, ಆಹಾರ, ಭೂಮಿ ಬಳಕೆ ಮುಂತಾದ ಅಂಶಗಳು ಗುಬ್ಬಿಯ ಸಂತತಿಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ.

ವಿಶ್ವ ಗುಬ್ಬಿ ದಿನ:

- ಹೆಚ್ಚುತ್ತಿರುವ ಪರಿಸರ ಮಾಲಿನ್ಯ ಮತ್ತು ಅದರಿಂದ ಗುಬ್ಬಿಗಳ ಮೇಲಾಗುವ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಮಾರ್ಚ್ 20 ನ್ನು "ವಿಶ್ವ ಗುಬ್ಬಿ ದಿನ" ಎಂದು ಆಚರಿಸಲಾಗುತ್ತದೆ.

## ವಿಜ್ಞಾನ-ತಂತ್ರಜ್ಞಾನ

### ಮಂಗಳ ಗ್ರಹದತ್ತ ಧಾವಿಸುತ್ತಿರುವ ಧೂಮಕೇತು

ಧೂಮಕೇತು ಒಂದು ಮಂಗಳ ಗ್ರಹದತ್ತ ಧಾವಿಸುತ್ತಿದ್ದು, ಇದು 2014 ರ ವೇಳೆಗೆ ಮಂಗಳ ಗ್ರಹಕ್ಕೆ ಅಪ್ಪಳಸಿಲಿದೆ ಎಂಬ ವಿಷಯವನ್ನು ಖಗೋಳ ವಿಜ್ಞಾನಿಗಳು ಖಚಿತ ಪಡಿಸಿದ್ದಾರೆ. ಇಂದೊಮ್ಮೆ ಈ ಧೂಮಕೇತು ಮಂಗಳ ಗ್ರಹಕ್ಕೆ ಅಪ್ಪಳಿಸಿದರೆ ಇದರಿಂದ ಬಾರಿ ಅನಾಹುತ ಆಗಲಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.

- "ಸಿ/2013 ಎ 1" ಎಂದು ಹೆಸರಿಡಲಾಗಿರುವ ಈ ಧೂಮಕೇತು ಮಂಗಳ ಗ್ರಹದಿಂದ ಸುಮಾರು 37,500 ಕಿ.ಮೀ ದೂರದಲ್ಲಿ ಹಾದು ಹೋಗಲಿದೆ ಎಂದು ಮೆಕ್ಸಿಕೊ ಮೂಲದ ಪ್ರಯೋಗಲಾಯ ತಿಳಿಸಿದೆ.
- ಅತಿ ವೇಗದಲ್ಲಿ ಧಾವಿಸುತ್ತಿರುವ ಈ ಧೂಮಕೇತು ಮಂಗಳ ಗ್ರಹಕ್ಕೆ ಅಪ್ಪಳಿಸಿದೆ ಆದರೆ ಎರಡು ಕಿ.ಮೀ ಆಳದ ಮತ್ತು 500 ಕಿ.ಮೀ ಅಗಲದ ಕುಳಿಯನ್ನು ಇದು ಸೃಷ್ಟಿಸಲಿದೆ. ಅಲ್ಲದೇ ಇದರಿಂದ ಬಾರಿ ಪ್ರಮಾಣದ ಬದಲಾವಣೆಗಳು ಮಂಗಳ ಗ್ರಹದಲ್ಲಿ ಕಂಡುಬರಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

### ವಿಶ್ವದ ಅತಿ ದೊಡ್ಡ ಮ್ಯಾಗ್ನೆಟ್ ತಯಾರಿಸುತ್ತಿರುವ BARC

ಬಾಬಾ ಅಣು ಸಂಶೋಧನಾ ಕೇಂದ್ರ (Baba Atomic Research Centre) ವಿಶ್ವದಲ್ಲೇ ಅತ್ಯಂತ ದೊಡ್ಡ ಗಾತ್ರದ ಅಯಸ್ಕಾಂತವನ್ನು ಅಭಿವೃದ್ದಿಪಡಿಸುತ್ತಿರುವುದಾಗಿ ಹೇಳಿದೆ. ಈ ಅಯಸ್ಕಾಂತವು ಬರೊಬ್ಬರಿ 50000 ಟನ್ ತೂಕವನ್ನು ಹೊಂದಿರುವುದಾಗಿ BARC ನ ಮುಖ್ಯಸ್ಥರು ತಿಳಿಸಿದ್ದಾರೆ.

- ಜಿನಿವಾದ CERN ನ ಕಂಪಾಕ್ಟ್ ಮ್ಯೂನ್ ಸೊಲೆನೈಡ್ (Compact Muon Solenoid) ನಲ್ಲಿರುವ ಅಯಸ್ಕಾಂತ ಸದ್ಯ ವಿಶ್ವದ ಅತಿ ದೊಡ್ಡ ಅಯಸ್ಕಾಂತವೆನಿಸಿದೆ. ಇದರ ತೂಕ ಸುಮಾರು 4000 ದಿಂದ 5000 ಟನ್ ಗಳ ಮಾತ್ರ.
- ತಮಿಳುನಾಡಿನ ಮಧುರೈ ಬಳಿ ನಿರ್ಮಿಸಲಾಗುತ್ತಿರುವ ನ್ಯೂಟ್ರೀನೊ ವೀಕ್ಷಣಾಲಯದಲ್ಲಿ ಈ ಅಯಸ್ಕಾಂತವು ಪ್ರಮುಖ ಪಾತ್ರವಹಿಸಲಿದೆ ಎಂದು BARC ನ ಅಧಿಕಾರಿಗಳು ಹೇಳಿದ್ದಾರೆ.
- ಕಬ್ಬಿಣ ಸಹಾಯದಿಂದ ಈ ಅಯಸ್ಕಾಂತವನ್ನು ತಯಾರಿ ಮಾಡಲಾಗುತ್ತಿದ್ದು ಇದರು ತೂಕ 50000 ಟನ್ ಗಳಷ್ಟು ಇರಲಿದೆ.

### ಏಡ್ಸ್ ಚಿಕತ್ಸೆ: ಸಂಶೋಧಕರ ಐತಿಹಾಸಿಕ ಸಾಧನೆ

ಮಾನವ ಜೀವರಾಶಿಯ ಬದುಕಿಗೆ ಸವಾಲಗಿ ಪರಿಣಿಸಿರುವ ಮಾರಣಾಂತಿಕ ಕಾಯಿಲೆ "ಏಡ್ಸ್" ಚಿಕಿತ್ಸೆಯಲ್ಲಿ ಪರಿಣಾಮಕಾರಿ ಸಂಶೋಧನೆಯನ್ನು ಮಾಡಿ ಅಮೆರಿಕಾದ ಮೇರಿಲ್ಯಾಂಡ್ ನ ಜಾನ್ ಹಾಪಕಿನ್ಸ್ ಶಿಶು ಆರೋಗ್ಯ ಕೇಂದ್ರದ ಸಂಶೋಧಕರು ಸಾಧನೆಮಾಡಿದ್ದಾರೆ.

- ಮಿಸ್ಸಿಸಿಪ್ಪಿಯ ತಾಯಿಯೊಬ್ಬಳು ಹೆತ್ತ ಮಗುವಿಗೆ ಇದ್ದ "ಹೆಚ್‌ಐವಿ" ಸೋಂಕನ್ನು ಗುಣಪಡಿಸಿದ್ದು ವಿಜ್ಞಾನ ಲೋಕದಲ್ಲಿ ಒಂದು ಮಹತ್ತರ ಸಾಧನೆಯೆ ಸರಿ. ಅದರಲ್ಲೂ ಈ ಮಗವಿನ ತಾಯಿ ಇದುವರೆಗೂ ತಪಾಸಣೆ ಒಳಗಾಗಿರಲಿಲ್ಲ ಎಂಬುದು ಗಮನಾರ್ಹ.
- ಮಗು ಹುಟ್ಟಿದ 30 ಗಂಟೆಗಳಲ್ಲಿ ಚಿಕಿತ್ಸೆ ಪ್ರಾರಂಭಿಸಿ 18 ತಿಂಗಳ ವರಿಗೂ ಮುಂದುವರೆಸಿದರು. ಐದು ತಿಂಗಳ ಬಳಿಕ ಮತ್ತೆ ಮಗುವನ್ನು ಒಳಪಡಿಸಿದಾಗ ವೈರಾಣುಗಳ ದುರ್ಬಲಗೊಂಡಿರುವುದು ಕಂಡು ಬಂದಿದೆ. ಆದರೆ ಈ ಮಗು ಜನಿಸುವಾಗ ಸೋಂಕು ಇತ್ತೇ ಇಲ್ಲವೇ ಎಂಬುದು ಈಗ ಚರ್ಚೆಗೆ ಗ್ರಾಸವಾಗಿದೆ. ಆದರೂ ಈ ನವೀನ ವಿಧಾನ ಆರೋಗ್ಯ ಕ್ಷೇತ್ರದಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ.

## "ಜಿಬಿಎಎಸ್" ವ್ಯವಸ್ಥೆ ಹೊಂದಲಿರುವ ಚೆನ್ನೈ ವಿಮಾನ ನಿಲ್ದಾಣ

ಹಾರಾಡುತ್ತಿರುವ ವಿಮಾನಗಳನ್ನು ಗುರುತಿಸುವುದು ಮತ್ತು ನಿಲ್ದಾಣದಲ್ಲಿ ವಿಮಾನಗಳ ವಿಮಾನಗಳು ಇಳಿಯುವುದನ್ನು ಮಾರ್ಗದರ್ಶನ ನೀಡಲು ಉಪಗ್ರಹ ಆಧಾರಿತ ವ್ಯವಸ್ಥೆಯನ್ನು ಚೆನ್ನೈ ವಿಮಾನ ನಿಲ್ದಾಣ ಹೊಂದಲಿದೆ. ಆಮೆರಿಕಾ ಮೂಲದ ಹನಿವೆಲ್ ಸ್ಮಾರ್ಟ್ ಪಾತ್ (Honeywell Smartpath) ಚೆನ್ನೈ ವಿಮಾನ ನಿಲ್ದಾಣದಲ್ಲಿ "ಜಿಬಿಎಎಸ್" ಅಳವಡಿಸಲಿದ್ದು, ಈ ಸಂಬಂಧದ ಒಪ್ಪಂದಕ್ಕೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಸಹಿ ಹಾಕಿದೆ.

- Ground Based Augmentation System (GBAS) ನ್ನು ಅಳವಡಿಸಿಕೊಳ್ಳುತ್ತಿರುವ ದೇಶದ ಮೊದಲ ವಿಮಾನ ನಿಲ್ದಾಣವಾಗಿ ಚೆನ್ನೈ ನಿಲ್ದಾಣ ಉದಯಿಸಲಿದೆ.
- ದೇಶದಲ್ಲಿ ಮುಂಬೈ, ದೆಹಲಿ ಹೊರತುಪಡಿಸಿ ಮೂರನೇ ಅತ್ಯಧಿಕ ವಿಮಾನ ದಟ್ಟಣೆ ನಿಲ್ದಾಣವಾಗಿರುವ ಚೆನ್ನೈ ಈ ವ್ಯವಸ್ಥೆಯ ಅಳವಡಿಕೆಯಿಂದ ವಿಮಾನಗಳ ಸುರಕ್ಷಿತ ಟೇಕಾಫ್ ಮತ್ತು ಲ್ಯಾಂಡಿಂಗ್ ನಲ್ಲಿ ಹೆಚ್ಚಿನ ಯಶಸ್ಸು ಸಾಧ್ಯವಾಗಲಿದೆ.

ಜಿಬಿಎಎಸ್:

- Ground Based Augmentation System ಅಥವಾ Ground Based Regional Augmentation ವ್ಯವಸ್ಥೆಯು ಭೂ ಮಟ್ಟದ ರೇಡಿಯೊ ಅಲೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ರೇಡಿಯೊ ಟ್ರಾನ್ಸಮಿಟರ್ ಗಳ ಬಳಕೆಯಿಂದ ಮಾಹಿತಿಯನ್ನು ನಿಖರವಾಗಿ ಬಳಕೆದಾರರಿಗೆ ತಲುಪಿಸಲಾಗುತ್ತದೆ. Ultra High Frequency ಅಥವಾ High frequency ಬ್ಯಾಂಡ್ ಗಳನ್ನು ಬಳಸುವ ಈ ವ್ಯವಸ್ಥೆಯು 20 ಕಿ.ಮಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ.

## ನಿರ್ಭಯ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ವಿಫಲ

ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ನ ಬಹುನಿರೀಕ್ಷಿತ "ನಿರ್ಭಯ" ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ವಿಫಲಗೊಂಡಿದೆ. ಪ್ರಯೋಗ ವಿಫಲವಾಗಿದ್ದರು ಈ ಮಿಷನ್ ನಲ್ಲಿ ನಾವು ಗೆಲುವು ಸಾಧಿಸಿದ್ದೇವೆ ಎಂದು DRDO ನ ಅಧಿಕಾರಿಗಳು ಹೇಳಿದ್ದಾರೆ.

- ಒಡಿಶಾದ ಚಂಡಿಪುರದಲ್ಲಿ ನಡೆದ ಕ್ಷಿಪಣಿಯ ಪ್ರಯೋಗದಲ್ಲಿ "ನಿರ್ಭಯ" ಕ್ಷಿಪಣಿ ನಿಗದಿತ ಗುರಿಯನ್ನು ತಲುಪುವ ಮೊದಲೇ ಕೆಳಗುರಿಳಿದೆ. ಪರೀಕ್ಷೆಗೆ ಮುನ್ನ "ನಿರ್ಭಯ್" 1000 ಕಿ.ಮೀ ದೂರದ ನಿಗದಿತ ಗುರಿಯನ್ನು ತಲುಪಲಿದೆ ಎಂದು ಊಹಿಸಲಾಗಿತ್ತು.

"ನಿರ್ಭಯ್" ಪ್ರಮುಖ ಮಾಹಿತಿ:

- ನಿರ್ಭಯ್ ಎಂದರೆ ಭಯ ರಹಿತ ಎಂದು ಅರ್ಥ. ಇದು ದೇಶದ ಮೊದಲ ಸಬ್ ಸೊನಿಕ್ ಕ್ರೂಸ್ ಕ್ಷಿಪಣಿ (Sub Sonic Cruise Missile). ಇತರೆ ಕ್ಷಿಪಣಿಗಳಿಗೆ ಹೋಲಿಸಿದರೆ "ನಿರ್ಭಯ್" ವಿಂಗ್ ಗಳನ್ನು ಹೊಂದಿರುವುದು ಇದರ ವಿಶೇಷವಾಗಿದೆ.
- ಅಣ್ವಸ್ತ್ರಗಳನ್ನು ಹೊತ್ತಯ್ಯುಬಲ್ಲ ಸಾಮರ್ಥ್ಯವನ್ನು ಹೊಂದಿರುವ "ನಿರ್ಭಯ್" ಕ್ಷಿಪಣಿಯು 750 -1000 ಕಿ.ಮೀ ದೂರದ ಗುರಿಯನ್ನು ನಿಖರವಾಗಿ ತಲುಪುಬಲ್ಲದಾಗಿದೆ.
- ಭೂಮಿ, ವಾಯು ಮತ್ತು ಸಮುದ್ರ ದಿಂದ ಈ ಕ್ಷಿಪಣಿಯನ್ನು ಉಡಾಯಿಸಬಹುದಾಗಿದೆ.
- ನಿರ್ದಿಷ್ಟ ಎತ್ತರದಲ್ಲಿ ಹಾರಾಟ ಮಾಡುವ ಶಕ್ತಿಯನ್ನು ನಿರ್ಭಯ್ ಹೊಂದಿದ್ದು, ಶತ್ರು ಪಡೆಗಳ ರಾಡಾರ್ ನೋಟದಿಂದ ಹೊರಗುಳಿಯಲಿದೆ.
- ಅಮೆರಿಕಾದ ಪ್ರಮುಖ ಕ್ಷಿಪಣಿ ತೋಮಾಹಕ್ಗೆ ಹೋಲಿಸಲಾಗುತ್ತಿದ್ದ ಈ ಕ್ಷಿಪಣಿಯನ್ನು ಬೆಂಗಳೂರು ಮೂಲದ ರಕ್ಷಣಾ ಸಂಶೋಧನಾ ಸಂಸ್ಥೆ ಸಿದ್ದಪಡಿಸಿದೆ.

**ವೆಲ್ ಸ್ಪನ್ ಎನರ್ಜಿ (Welspun Enegy) ಯಿಂದ ಏಷ್ಯಾದ ಅತಿ ದೊಡ್ಡ ಸೌರ ವಿದ್ಯುತ್ ಯೋಜನೆ ರಾಜಸ್ತಾನದಲ್ಲಿ ಆರಂಭ**

ದೇಶದಲ್ಲಿ ಸೌರ ವಿದ್ಯುತ್ ಯೋಜನೆಯಲ್ಲಿ ಮುಂಚೂಣಿಯಲ್ಲಿರುವ ವೆಲ್ ಸ್ಪನ್ ಎನರ್ಜಿ ಕಂಪನಿಯು ಏಷ್ಯಾದ ಅತಿ ದೊಡ್ಡ ಸೌರ ವಿದ್ಯುತ್ ಯೋಜನೆಯನ್ನು ರಾಜಸ್ತಾನದ ಜೋದ್ ಪುರದಲ್ಲಿ ಆರಂಭಿಸಿತು.

- 50 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಹೊಂದಿರುವ ಈ ಯೋಜನೆಯು ವೆಲ್ ಸ್ಪನ್ ಕಂಪನಿ ಇದುವರೆಗೂ ನಿರ್ಮಿಸಿರುವ ಮೊದಲ ದೊಡ್ಡ ಯೋಜನೆಯಾಗಿದೆ. ಅಲ್ಲದೇ ಭಾರತದ ಅತಿ ದೊಡ್ಡ ಫೋಟವೋಲ್ಟಾಯಿಕ್ ವಿದ್ಯುತ್ ಘಟಕ ಸಹ ಆಗಿದೆ.
- ಜವಹಾರ್ ನೆಹರೂ ಸೋಲಾರ್ ನ್ಯಾಷನಲ್ ಮಿಷನ್ ಅಡಿ ಕೈಗೊಂಡಿರುವ ಈ ವಿದ್ಯುತ್ ಘಟಕದ ನಿರ್ಮಾಣವನ್ನು ಅಂದಾಜಿಸಲಾಗಿದ್ದ ಸಮಯಕ್ಕೆ ಮೊದಲೇ ಪೂರ್ಣಗೊಳಿಸಿರುವುದು ವಿಶೇಷ.
- ಈ ಸೌರ ವಿದ್ಯುತ್ ಘಟಕದ ಆರಂಭದಿಂದ ಸುಮಾರು 83220 ಮಿಲಿಯನ್ ಟನ್ ಗಳಷ್ಟು ಕಾರ್ಬನ್ ಡೈ ಆಕ್ಸೈಡ್ ಹೊರಸೂಸುವಿಕೆ ನಿಲ್ಲಲಿದೆ.

**ಅಂಚೆ ಇಲಾಖೆ ಆನ್ ಲೈನ್ ಸೇವೆಗೆ ಇನ್ಫೋಸಿಸ್**

ದೇಶದ 1.30 ಲಕ್ಷ ಅಂಚೆ ಕಚೇರಿಗಳನ್ನು ಸಂಪರ್ಕಿಸುವ ಆನ್ ಲೈನ್ ಸೇವೆಯನ್ನು ಒದಗಿಸುವ ಯೋಜನೆಗೆ ಸಾಫ್ಟ್ ವೇರ್ ದಿಗ್ಗಜ ಇನ್ಫೋಸಿಸ್ ಅಂಚೆ ಇಲಾಖೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ಇದಲ್ಲದೇ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ

ಯೋಜನೆಯಡಿ ಕೂಲಿ ಹಣ ವಿತರಣೆ ಸೇರಿದಂತೆ ಎಲೆಕ್ಟ್ರಾನಿಕ್ ಮನಿ ಆರ್ಡರ್ ಸೇವೆಯನ್ನು ಒದಗಿಸಲು ಬಳಸುವ ಉಪಕರಣಗಳಿಗೂ ಇನ್ಫೋಸಿಸ್ ತಾಂತ್ರಿಕ ನೆರವು ನೀಡಲಿದೆ.

- ಈ ಯೋಜನೆಯಿಂದ ಅಂಚೆ ಸೇವೆಯನ್ನು ತ್ವರಿತವಾಗಿ ಗ್ರಾಮೀಣ ಪ್ರದೇಶದ ಜನರಿಗೆ ತಲುಪಿಸಬಹುದಾಗಿದೆ. ಮತ್ತು ಅಂಚೆ ಇಲಾಖೆಯ ಮೂಲಕ ನೀಡಲಾಗುವ ಆರ್ಥಿಕ ಸೇವೆಯು ಸುಗಮಗೊಳ್ಳಲಿದೆ. ಇನ್ಫೋಸಿಸ್ ನ ಕೋರ್ ಬ್ಯಾಂಕಿಂಗ್ ತಂತ್ರಾಂಶವಾದ ಪಿನಕಲ್ (Finacle) ಮತ್ತು ಮೊಬೈಲ್ ಸೇವೆಯಾದ mConnect ನ್ನು ಈ ಯೋಜನೆಯಲ್ಲಿ ಬಳಸಲಾಗುತ್ತದೆ.
- ಕಳೆದ ವರ್ಷ ಆಗಸ್ಟ್ ನಲ್ಲಿ ಅಂಚೆ ಕಚೇರಿಗಳ ಬ್ಯಾಂಕಿಂಗ್ ಮತ್ತು ಇನ್ ಶೂರೆನ್ಸ್ ಸೇವೆಯನ್ನು ಆಧುನೀಕರಣಗೊಳಿಸುವ ಸಲುವಾಗಿ ಇನ್ಫೋಸಿಸ್ ರೂ.700 ಕೋಟಿ ಒಪ್ಪಂದವನ್ನು ಮಾಡಿಕೊಂಡಿತ್ತು.

**ಜಲಾಂತರ್ಗಾಮಿ ಬ್ರಹ್ಮೋಸ್ ಕ್ಷಿಪಣಿಯ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿ**

ವಿಶ್ವದಲ್ಲೇ ಮೊಟ್ಟ ಮೊದಲ ಬಾರಿಗೆ ಜಲಾಂತರ್ಗಾಮಿಗಳ ಮೂಲಕ ಉಡಾಯಿಸಬಹುದಾದ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿಯ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿಯಾಗಿ ನೇರವೇರಿದೆ. ವಿಶಾಖ ಪಟ್ಟಣದ ಬಳಿ ಬಂಗಾಳ ಕೊಲ್ಲಿಯಲ್ಲಿ ನಡೆಸಲಾದ ಈ ಪರೀಕ್ಷೆಯಲ್ಲಿ ಬ್ರಹ್ಮೋಸ್ ಸೂಪರ್ ಸಾನಿಕ್ ಕ್ಷಿಪಣಿ ತನ್ನ 290 ಕೀ.ಮೀ ವ್ಯಾಪ್ತಿಯನ್ನು ಕ್ರಮಿಸಿ ನಿಖರವಾಗಿ ಗುರಿಯನ್ನು ಛೇದಿಸಿದೆ. ಈ ಮೂಲಕ ಭಾರತ ರಕ್ಷಣಾ ಕ್ಷೇತ್ರದಲ್ಲಿ ಮತ್ತೊಂದು ಮೈಲುಗಲ್ಲನ್ನು ಸಾಧಿಸಿದಂತಾಗಿದೆ.

- ನೌಕೆ ಮತ್ತು ನೆಲದ ಮೇಲಿಂದ ಉಡಾಯಿಸಬಹುದಾದ ಬ್ರಹ್ಮೋಸ್ ಕ್ಷಿಪಣಿ ಮಾದರಿಗಳ ಪರೀಕ್ಷೆಗಳನ್ನು ನಡೆಸಲಾಗಿದ್ದು, ಅವು ಯಶಸ್ವಿಯಾಗಿವೆ ಹಾಗೂ ಸೇನೆಗೆ ಸೇರ್ಪಡೆಗೊಂಡಿವೆ.

ಬ್ರಹ್ಮೋಸ್ ಕ್ಷಿಪಣಿ:

- ಭಾರತ ಈ ಕ್ಷಿಪಣಿಗಳನ್ನು ರಷ್ಯಾ ದೇಶದ ಸಹಕಾರದೊಂದಿಗೆ ನಿರ್ಮಿಸುತ್ತಿದೆ. ಹಡಗು, ನೆಲದ ಮೇಲೆ ಸೇರಿದಂತೆ ಜಲಾಂತರ್ಗಾಮಿ ಮೂಲಕ ಈ ಕ್ಷಿಪಣಿಗಳನ್ನು ಉಡಾಯಿಸಬಹುದಾಗಿದೆ.
- ವಾಯು ಮೂಲಕ ಹಾರಿಸಬಹುದಾದ ಕ್ಷಿಪಣಿ ಮಾದರಿಗಳ ಅಭಿವೃದ್ಧಿ ಚಾಲನೆಯಲ್ಲಿದೆ. ಇದಕ್ಕಾಗಿ ರಷ್ಯಾದ ಸುಕೋಯ್-30 ಮಾದರಿ ವಿಮಾನಗಳ ವಿನ್ಯಾಸವನ್ನು ಬದಲಾವಣೆ ಮಾಡಲಾಗುತ್ತಿದೆ.

**ಪ್ಲುಟೊ ಸುತ್ತ ಇನ್ನಷ್ಟು ಉಪಗ್ರಹ**

ಗ್ರಹ ಸ್ಥಾನಮಾನವನ್ನು ಕಳೆದುಕೊಂಡಿರುವ ಪ್ಲುಟೊ ಕಕ್ಷೆತ ಸುತ್ತ ಸುಮಾರು ಹತ್ತಕ್ಕೂ ಹೆಚ್ಚು ಉಪಗ್ರಹಗಳು ಸುತ್ತುತ್ತಿರುವ ಸಾಧ್ಯತೆ ಇದೆಯೆಂದು ವಿಜ್ಞಾನಿಗಳು ಪತ್ತೆ ಊಹಿಸಿದ್ದಾರೆ. ಸೂರ್ಯನಿಂದ ಬಹಳ ದೂರದಲ್ಲಿರುವ ಪ್ಲುಟೊ ಕಕ್ಷೆಯಲ್ಲಿ ಸುತ್ತುತ್ತಿರುವ ಉಪಗ್ರಹಗಳ ಸುತ್ತಳತೆ ಸುಮಾರು ಒಂದರಿಂದ ಮೂರು ಕಿ.ಮೀ.ನಷ್ಟು ಇರಬಹುದು ಎಂದು ಅಂದಾಜಿಸಲಾಗಿದೆ.

- 2015 ರ ಜುಲೈನಲ್ಲಿ ನಾಸಾ ಕೈಗೊಳ್ಳಲಿರುವ ನ್ಯೂ"ಹೊರೈಜನ್"ಯೋಜನೆಗೆ ಈ ಚಿಕ್ಕ ಗ್ರಹಗಳು ಅಡ್ಡಿ ಉಂಟುಮಾಡುವ ಸಾಧ್ಯತೆಗಳು ಇವೆ. ಆದ್ದರಿಂದ ಈ ಯೋಜನೆಯ ನೀಲನಕ್ಷೆ ಮತ್ತು ಮಾರ್ಗವನ್ನು ಮರು ರೂಪಿಸುವ ಅಗತ್ಯವಿದೆ.
- ಫ್ಲುಟೊ ಕಕ್ಷೆಯಲ್ಲಿರುವ ಈ ಉಪಗ್ರಹಗಳನ್ನು ಭೂಮಿಯಿಂದ ಗೋಚರಿಸುವ ಸಾಧ್ಯತೆ ಕಡಿಮೆ. ಭಾರಿ ಸಾಮರ್ಥ್ಯದ ಆಧುನಿಕ ದೂರದರ್ಶಕದ ಸಹಾಯದಿಂದಲೂ ಇವುಗಳನ್ನು ಪತ್ತೆ ಹಚ್ಚುವುದು ಅಸಾಧ್ಯವೆಂದು ವಿಜ್ಞಾನಿಗಳು ಹೇಳಿದ್ದಾರೆ.
- ಕಳೆದ ವರ್ಷ ಫ್ಲುಟೊದ ಐದನೇ ಉಪಗ್ರಹ P5 n ನ್ನು ಪತ್ತೆಹಚ್ಚಲಾಗಿತ್ತು.

**ಮಾರ್ಚ್ 24: ವಿಶ್ವ ಕ್ಷಯರೋಗ ದಿನ ಒಂದು ನೋಟ**

ಪ್ರತಿ ವರ್ಷ ಮಾರ್ಚ್ 24 ನ್ನು ವಿಶ್ವ ಕ್ಷಯ ರೋಗದಿನವೆಂದು ಆಚರಿಸಲಾಗುತ್ತದೆ. ಮಾರ್ಚ್ 24 ರಂದು ಕ್ಷಯದ ರೋಗಾಣು ಆವಿಷ್ಕಾರವಾದ ದಿನ ಆಗಾಗಿ ಈ ದಿನವನ್ನು ವಿಶ್ವ ಕ್ಷಯರೋಗ ದಿನವನ್ನಾಗಿ ಆಚರಿಸುವ ಮೂಲಕ ಕ್ಷಯರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುವುದು.

ಕ್ಷಯ ರೋಗ ಒಂದು ನೋಟ:

ಕ್ಷಯ ರೋಗ ಅಥವಾ ಟಿ.ಬಿ ಎಂದು ಕರೆಯಲಾಗುವ ಇದೊಂದು ಅಂಟು ರೋಗ. ಮೈಕೋಬ್ಯಾಕ್ಟೀರಿಯಂ ಟ್ಯೂಬರ್ ಕ್ಯುಲೋಸಿಸ್ ಎಂಬ ರೋಗಾಣು ಈ ರೋಗ ಕಂಡುಬರಲು ಪ್ರಮುಖ ಕಾರಣ. ಕ್ಷಯ ರೋಗ ಪ್ರಮುಖವಾಗಿ ಗಾಳಿ ಮಾಧ್ಯಮದಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಸದ್ಯ ಏಡ್ಸ್ ಕಾಯಿಲೆಯ ನಂತರ ಮಾನವನ್ನು ಬಲಿ ತೆಗೆದುಕೊಳ್ಳುತ್ತಿರುವ ಎರಡನೇ ಅಂಟು ಕಾಯಿಲೆಯೆಂದರೆ ಕ್ಷಯ ರೋಗ. ವಿಶ್ವದಲ್ಲಿ ಪ್ರತಿವರ್ಷ ಎರಡು ಲಕ್ಷ ಜನ ಕ್ಷಯರೋಗಕ್ಕೆ ಬಲಿಯಾಗುತ್ತಿದ್ದಾರೆ.

- ಮೊಟ್ಟ ಮೊದಲ ಬಾರಿಗೆ ಕ್ಷಯ ರೋಗದ ರೋಗಾಣುಗಳನ್ನು ಮಾರ್ಚ್ 24, 1882 ರಲ್ಲಿ ಆವಿಷ್ಕಾರ ಮಾಡಲಾಯಿತು. ಕ್ಷಯ ರೋಗಕ್ಕೆ ಲಸಿಕೆಯಾದ ಬಿ.ಸಿ.ಜಿ (Bacillus Calmette Guerin) ಯನ್ನು 1921 ರಲ್ಲಿ ಕಂಡು ಹಿಡಿಯಲಾಯಿತು.

ಬಹು ಔಷಧಿ ಪ್ರತಿರೋಧ ಟಿ.ಬಿ (Multi Drug Resistant TB) ಎಂದರೇನು?

- ಕ್ಷಯ ರೋಗ ವಾಸಿಮಾಡಬಹುದಾದ ಕಾಯಿಲೆ. ಆದರೆ, ರೋಗದ ವಾಸಿ ಔಷಧಿ ಪಾಲನೆ ಮತ್ತು ಬಳಸುವುದರ ಮೇಲೆ ಅವಲಂಭಿತವಾಗಿದೆ. ರೋಗ ವಾಸಿಯಾಗಿದೆಯೆಂದು ಭಾವಿಸಿ ಔಷಧಿ ಸೇವೆಯನ್ನು ನಿಲ್ಲಿಸಿದರೆ ರೋಗದ ಲಕ್ಷಣಗಳು ಮತ್ತೆ ಕಾಣಿಸಿಕೊಳ್ಳುತ್ತವೆ. ಇಂತಹ ಸಮಯದಲ್ಲಿ ಈ ಚಿಕಿತ್ಸೆಗೆ ಬಳಸುವ ಪರಿಣಾಮಕಾರಿ ಔಷಧಗಳು ಸಹ ಫಲಕಾರಿಯಾಗುವುದಿಲ್ಲ. ಈ ಪರಿಸ್ಥಿತಿಯನ್ನು "ಬಹು ಔಷಧಿ ಪ್ರತಿರೋಧ ಕ್ಷಯ ರೋಗ (Multi Drug Resistant TB)ಎನ್ನಲಾಗುವುದು. ವಿಶ್ವಸಂಸ್ಥೆಯ ವರದಿಯ ಪ್ರಕಾರ 2010 ರಲ್ಲಿ ಭಾರತದಲ್ಲಿ 99 ಸಾವಿರ ಜನ ಎಂ.ಡಿ.ಆರ್ ಕ್ಷಯರೋಗಕ್ಕೆ ತುತ್ತಾಗಿದ್ದಾರೆ. ಬಹು ಔಷಧಿ ಪ್ರತಿರೋಧ ಕ್ಷಯರೋಗವನ್ನು ವಾಸಿಮಾಡಲು ಕನಿಷ್ಠ 18 ರಿಂದ 24 ತಿಂಗಳುಗಳ ಕಾಲವಕಾಶ ಅಗತ್ಯ. ಮತ್ತು ಇದರ ಚಿಕಿತ್ಸೆಗೆ ದುಬಾರಿ ಮೊತ್ತವನ್ನು ತೆರಬೇಕಾಗುತ್ತದೆ.
- Extremely Drug Resistant (EDR) ಮತ್ತು Totally Drug Resistant (TDR) TB ಮತ್ತೊಂದು ಬಗೆಯ ಕ್ಷಯರೋಗ. EDR ಕ್ಷಯರೋಗದಲ್ಲಿ ರೋಗಾಣು ಕನಿಷ್ಠ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಔಷಧಗಳಿಗೆ ಪ್ರತಿರೋಧವನ್ನು ಒಡ್ಡುವ

ಸಾಮರ್ಥ್ಯವನ್ನು ಹೊಂದಿರುತ್ತದೆ. TDR ಬಗೆಯ ಕ್ಷಯರೋಗದಲ್ಲಿ ರೋಗಾಣು ಎಲ್ಲಾ ಬಗೆಯ ಔಷಧಗಳಿಗೂ ಪ್ರತಿರೋಧವನ್ನು ತೋರುತ್ತದೆ.

ಭಾರತದಲ್ಲಿ ಕ್ಷಯ ರೋಗ:

ಭಾರತ ಇಂದು ಕ್ಷಯ ರೋಗದ ತವರು ಮನೆ ಎನಿಸಿರುವುದು ಶೋಚನೀಯ. ನೂತನ ಆವಿಷ್ಕಾರಗಳ ನಡುವೆಯೂ ಕ್ಷಯ ಭಾರತದಲ್ಲಿ ಭದ್ರವಾಗಿ ಬೇರೂರಿದೆ. ಭಾರತದಲ್ಲಿ ಇಂದಿಗೂ ಕ್ಷಯ ರೋಗಕ್ಕೆ ಬಲಿಯಾಗುವವರ ಸಂಖ್ಯೆ 5 ಲಕ್ಷ. ಆಮೆರಿಕಾದಲ್ಲಿ ಪ್ರತಿ ಕ್ಷಯ ರೋಗದಿಂದ ಸಾಯುವವರ ಸಂಖ್ಯೆ ಪ್ರತಿ ಲಕ್ಷಕ್ಕೆ ಒಬ್ಬರು. ಆದರೆ ಭಾರತದಲ್ಲಿ ಪ್ರತಿ ಲಕ್ಷ ಜನರಲ್ಲಿ ಕ್ಷಯದಿಂದ ಸಾಯುವವರ ಸಂಖ್ಯೆ 60 ಜನ.

ಕ್ಷಯ ನಿರ್ಮೂಲನೆಗೆ ಭಾರತದಲ್ಲಿ ಕೈಗೊಂಡಿರುವ ಕ್ರಮಗಳು:

- ಕ್ಷಯ ರೋಗವನ್ನು ನಿರ್ಮೂಲನ ಮಾಡುವ ಸಲುವಾಗಿ ಭಾರತ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. 1948 ರ ಅವಧಿಯಲ್ಲಿ BCG ಚುಚ್ಚುಮದ್ದನ್ನು ಪ್ರಾತ್ಯಕ್ಷಿಕ ಯೋಜನೆಯಾಗಿ ಎರಡು ಕೇಂದ್ರಗಳಲ್ಲಿ ತರಲಾಯಿತು. 1949 ರಲ್ಲಿ ದೇಶದ ಎಲ್ಲಾ ರಾಜ್ಯದ ಎಲ್ಲಾ ಶಾಲೆಗಳಿಗೂ BCG ಚುಚ್ಚುಮದ್ದು ಹಾಕಿಸುವ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಕ್ಷಯರೋಗ ಆಂದೋಲನದಡಿಯಲ್ಲಿ ವಿಸ್ತರಿಸಲಾಯಿತು.
- ಕ್ಷಯರೋಗವನ್ನು ಸಂಪೂರ್ಣವಾಗಿ ತೊಳೆದು ಹಾಕಲು 1956 ರಲ್ಲಿ ಕ್ಷಯರೋಗ ಸಂಶೋಧನಾ ಸಂಸ್ಥೆಯನ್ನು ಚೆನ್ನೈನಲ್ಲಿ ಆರಂಭಿಸಲಾಯಿತು.
- 1993 ರಲ್ಲಿ ವಿಶ್ವ ಬ್ಯಾಂಕ್ ಸಹಯೋಗದೊಂದಿಗೆ "ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು" ರಾಷ್ಟ್ರವ್ಯಾಪ್ತಿ ಜಾರಿಗೊಳಿಸಿತು.
- 1998 ರಿಂದ ಡಾಟ್ ಪ್ಲಸ್ (DOT+) ಎಂಬ ಚಿಕಿತ್ಸಾ ವಿಧಾನವನ್ನು ದೇಶದಲ್ಲಿ ಅನುಷ್ಟಾನಗೊಳಿಸಲಾಗಿದೆ.
- ಕಳೆದ ವರ್ಷವಷ್ಟೇ ಕೇಂದ್ರ ಸರ್ಕಾರ ಕ್ಷಯರೋಗವನ್ನು "ಪ್ರಕಟಣಾರ್ಹ ರೋಗ (Notifiable Disease)" ಎಂದು ಘೋಷಿಸಿದೆ. ಇದರಿಂದ ಖಾಸಗಿ ಅಥವಾ ಸರ್ಕಾರಿ ವೈದ್ಯರು ತಮ್ಮ ಆಸ್ಪತ್ರೆಗಳಲ್ಲಿ ಕನಿಷ್ಠ ಒಂದು ಟಿ.ಬಿ ಪ್ರಕರಣ ಕಂಡುಬಂದರೂ ತಪ್ಪದೇ ಸರ್ಕಾರಕ್ಕೆ ವರದಿ ಸಲ್ಲಿಸಬೇಕು.

DOTS (Directly Observed Therapy)?

- ಡಾಟ್ಸ್ ಚಿಕಿತ್ಸೆ ವಿಧಾನವನ್ನು ಡಾ.ಕರೇಲ್ ಸ್ಟೈಬ್ಲೊ (Karel Styblo)ರವರು ತಾಂಜಾನೀಯಾದಲ್ಲಿ ಆವಿಷ್ಕರಿಸಿದರು. ಇಂದು ಕ್ಷಯರೋಗವನ್ನು ನಿಯಂತ್ರಣಕ್ಕೆ ತರುವಲ್ಲಿ ಈ ವಿಧಾನ ಅತ್ಯಂತ ಪರಿಣಾಮಕಾರಿಯಾಗಿದ್ದು, ವಿಶ್ವ ಆರೋಗ್ಯ ಸಂಸ್ಥೆ ಈ ವಿಧಾನವನ್ನು ಅಳವಡಿಸಿಕೊಳ್ಳಲು ದೇಶಗಳಿಗೆ ಕರೆ ನೀಡಿದೆ. ಟಿ.ಬಿ ಸೋಂಕಿನ ಶಂಕಾಸ್ಪದ ಪ್ರಕರಣಗಳು ಕಂಡಾಗ ಅಂತಹ ರೋಗಿಗಳ ಉಗುಳು ಪರೀಕ್ಷೆ ಸೇರಿದಂತೆ, ಉತ್ತಮ ಗುಣಮಟ್ಟದ ಔಷಧಿ ಮತ್ತು ನಿರಂತರ ಔಷಧಿ ಸೌಲಭ್ಯವನ್ನು ಒದಗಿಸುವುದು ಡಾಟ್ಸ್ ಸಂಸ್ಥೆಗಳ ಕಾರ್ಯವಾಗಿದೆ.

ಕ್ಷಯ ರೋಗ ನಿಯಂತ್ರಣಕ್ಕೆ ಬಳಕೆಯಲ್ಲಿರುವ ಔಷಧಗಳು:

- ಕ್ಷಯರೋಗಿಗಳಿಗೆ ರೋಗದ ತೀವ್ರತೆ ಮೇಲೆ ಔಷಧಿಗಳನ್ನು ನೀಡಲಾಗುತ್ತದೆ. ಕೆಲವೊಮ್ಮೆ ಅನೇಕ ಔಷಧಗಳನ್ನು ಒಟ್ಟಾಗಿ ಸಹ ನೀಡಲಾಗುವುದು. ಸದ್ಯ ಅತ್ಯಂತ ಪರಿಣಾಮಕಾರಿ ಔಷಧಿಗಳೆಂದರೆ "ರಿಫಾಂಪಿಸಿನ್ (Rifampicin)" "ಐಸೋನಿಜಿಡ್ (Isoniazid)" "ಪೈರಜಿನಮೈಡ್ (Pyrazinamide)".
- ಬಹು ಔಷಧಿ ಪ್ರತಿರೋಧ ಕ್ಷಯರೋಗಿಗಳಿಗೆ SHREZ ಚಿಕಿತ್ಸೆ ಅತ್ಯಂತ ಉಪಯೋಗಕಾರಿ SHREZ ಎಂದರೆ (Streptomycin+isonicotinyl+Hydrazine+Rifampicin+Ethambutol+pyraZinamide)

**2017 ರೊಳಗೆ "ಐಪಿವಿ 6" ಜಾರಿ: ಕಪಿಲ್ ಸಿಬಲ್**

ಎಲ್ಲಾ ಸರ್ಕಾರ ಸಂಸ್ಥೆಗಳು 2017 ರೊಳಗೆ ಸುಧಾರಿತ, ಸುರಕ್ಷಿತ ಇಂಟರ್ನೆಟ್ ಪ್ರೊಟೊಕಾಲ್ ವಿಳಾಸ "ಐಪಿವಿ6" (Internet Protocol Version) ಗೆ ಬದಲಾಗುವ ಅಗ್ಯತವಿರುವುದರಿಂದ ದೂರ ಸಂಪರ್ಕ ಇಲಾಖೆ ನೀಲನಕ್ಷೆಯನ್ನು ಪ್ರಕಟಿಸಿದೆ. ಸದ್ಯ ದೇಶದಲ್ಲಿ ಈಗ "ಐಪಿವಿ4" ನ್ನು ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ "ಐಪಿವಿ 6" ಗೆ ಬದಲಾಗುವುದು ಅನಿವಾರ್ಯವಾಗಿದೆ. ದೂರವಾಣಿ ಶಿಕ್ಷಣ, ಸ್ಮಾರ್ಟ್ ಗ್ರಿಡ್, ಕ್ಲೌಡ್ ಕಂಪ್ಯೂಟಿಂಗ್ ಸೇವೆಗಳಿಗೆ "ಐಪಿವಿ6" ಕಡ್ಡಾಯ ಎಂದು ಸಿಬಲ್ ಹೇಳಿದ್ದಾರೆ.

ಐಪಿವಿ4 ಬಳಕೆ ತಡೆ ಏಕೆ?

- ಇಂಟರ್ನೆಟ್ ಪೋಟೊಕಾಲ್ ವರ್ಷನ್ 4 ಸದ್ಯ ವಿಶ್ವದಾದ್ಯಂತ ಬಳಸುತ್ತಿರುವ ಅಂತರ್ಜಾಲ ವಿಳಾಸ. ಆದರೆ ಇದು ಬಹಳ ಹಳೆಯದು ಜೊತೆಗೆ ಇದರ ಅಪರಿಮಿತ ಬಳಕೆಯಿಂದಾಗಿ ವಿಳಾಸಗಳ ಕೊರತೆ ಉಂಟಾಗಿದೆ. ಆದ್ದರಿಂದ ಹೊಸ ವಿಳಾಸ "ಐಪಿವಿ6" ಗೆ ಬದಲಾಯಿಸುವುದು ಅನಿವಾರ್ಯವಾಗಿದೆ.

ಇಂಟರ್ನೆಟ್ ವಿಳಾಸವನ್ನು ಅಭಿವೃದ್ಧಿಪಡಿಸುವವರು ಯಾರು?

- ಇಂಟರ್ನೆಟ್ ವಿಳಾಸಗಳನ್ನು "ಇಂಟರ್ನೆಟ್ ಎಂಜನಿಯರಿಂಗ್ ಕಾರ್ಯಪಡೆ (Internet Engineering Task Force)" ಅಭಿವೃದ್ಧಿಪಡಿಸುತ್ತದೆ.

IPV4 ಮತ್ತು IPV6 ಗೆ ಇರುವ ವ್ಯತ್ಯಾಸವೇನು?

- ಯಾವುದೇ ಉಪಕರಣವನ್ನು ಇಂಟರ್ನೆಟ್ ಗೆ ಸಂಪರ್ಕಿಸಲು ಇಂಟರ್ನೆಟ್ ಪೊಟೊಕಾಲ್ ವಿಳಾಸ ಅತಿ ಅಗತ್ಯ. IPV4 ರಲ್ಲಿ 32 ಬಿಟ್ ವಿಳಾಸ ವಿಧಾನವನ್ನು ಬಳಸಲಾಗುತ್ತಿದೆ. ಅಂದರೆ ಸುಮಾರು 4 ಬಿಲಿಯನ್ ವಿಳಾಸಗಳನ್ನು ಮಾತ್ರ ಬಳಸಬಹುದಾಗಿದೆ. ಆದರೆ ಇತ್ತೀಚಿನ ದಿಇನಗಳಲ್ಲಿ ಇಂಟರ್ನೆಟ್ ಬಳಕೆದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಕಂಪ್ಯೂಟರ್ ಅಲ್ಲದೇ ಸ್ಮಾರ್ಟಫೋನ್ ಗಳಲ್ಲಿಯೂ ಸಹ ಇಂಟರ್ನೆಟ್ ಬಳಕೆಯನ್ನು ಮಾಡುತ್ತಿರುವ ಕಾರಣ ಮುಂದಿನ ದಿನಗಳಲ್ಲಿ ಅಗತ್ಯವಿರುವಷ್ಟು ವಿಳಾಸಗಳ ಲಭ್ಯತೆ "ಐಪಿವಿ4" ನಲ್ಲಿ ಸಿಗುವುದಿಲ್ಲ ಆಗಾಗಿ ಐಪಿವಿ6 ಗೆ ಬದಲಾಗಬೇಕಿದೆ. ಐಪಿವಿ4 ವಿಳಾಸ ಉದಾ:1.160.10.240

ಐಪಿವಿ6: ಇಂಟರ್ನೆಟ್ ಪ್ರೊಟೊಕಾಲ್ ವರ್ಷನ್ 6 ಅಥವಾ "ಇಂಟರ್ನೆಟ್ ಪ್ರೊಟೊಕಾಲ್ ನೆಕ್ಸ್ಟ್ ಜನರೇಷನ್" ಒಂದು ಹೊಸ ಮಾದರಿಯ ಇಂಟರ್ನೆಟ್ ಪ್ರೊಟೊಕಾಲ್. ಐಪಿವಿ4 ನ ಮುಂದುವರೆದ ಭಾಗವೇ ಐಪಿವಿ6. ಐಪಿವಿ6 ನಲ್ಲಿ 128 ಬಿಟ್ ಗಳ ವಿಳಾಸವನ್ನು ಬಳಸಲಾಗುತ್ತದೆ. ಅಂದರೆ ಇಲ್ಲಿ ಅಪರಿಮಿತ ವಿಳಾಸಗಳನ್ನು ಬಳಸಬಹುದಾದ ಕಾರಣ ಮುಂದಿನ ಪೀಳಿಗೆಯ

ಇಂಟರ್ನೆಟ್ ಬಳಕಗೆ ಇದು ವರದಾನವಾಗಿದೆ. ಜೊತೆಗೆ ಇದು ಅತ್ಯಂತ ಸುರಕ್ಷಿತ ಕೂಡ. ಐಪಿವಿ6 ವಿಳಾಸ ಉದಾ:3ff3:1900:4545:3:200:f8ff:fe21:67cf.

**ಮಂಗಳಯಾನಕ್ಕೆ ಸಕಲ ಸಿದ್ಧತೆಯಲ್ಲಿರುವ ಇಸ್ರೋ**

"ಭಾರತ ಬಾಹ್ಯಕಾಶ ಸಂಶೋಧನಾ ಸಂಸ್ಥೆ" (ಇಸ್ರೋ) ಮತ್ತೊಂದು ಮೈಲಿಗಲ್ಲು ಸಾಧಿಸುವ ತವಕದಲ್ಲಿದೆ. ಭಾರತದ ಮೊದಲ ಮಂಗಳಯಾನವನ್ನು ಈ ವರ್ಷದ ನವೆಂಬರ್ ಅಂತ್ಯದಲ್ಲಿ ಕೈಗೊಳ್ಳಲಾಗುವುದು ಎಂದು ಇಸ್ರೋ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಇಸ್ರೋ ಕೈಗೆತ್ತಿಕೊಳ್ಳಲಿರುವ "ಮಾರ್ಸ್ ಆರ್ಬಿಟ್ ಮಿಷನ್" (MOM) ಅಥವಾ ಮಂಗಳಯಾನ ರೂ.450 ಕೋಟಿ ಯೋಜನೆಯಾಗಿದ್ದು, ಮಂಗಳ ಗ್ರಹವನ್ನು ಅತಿ ಸಮೀಪದಿಂದ ಅಧ್ಯಯನ ನಡೆಸಲಿದೆ.

ಮಾರ್ಸ್ ಆರ್ಬಿಟ್ ಮಿಷನ್ ಬಗ್ಗೆ:

- "ಮಾರ್ಸ್ ಆರ್ಬಿಟ್ ಮಿಷನ್" ಇಸ್ರೋ ಮಂಗಳ ಗ್ರಹದ ಬಗ್ಗೆ ಅಧ್ಯಯನ ನಡೆಸಲು ಕೈಗೊಳ್ಳುತ್ತಿರುವ ಯೋಜನೆ. ಮಂಗಳನ ಮೇಲೆ ಮಿಥೇನ್ ಅನಿಲ ಇರುವಿಕೆ ಸೇರಿದಂತೆ ಜೀವಿಗಳ ಉಗಮದ ಬಗ್ಗೆ ಇದು ಅಧ್ಯಯನ ನಡೆಸಲಿದೆ.
- 2008 ರ ಚಂದ್ರಯಾನ ನಂತರ ಕೈಗೊಳ್ಳುತ್ತಿರುವ ಮಂಗಳಯಾನ ಇಸ್ರೋದ ಸಾಮರ್ಥ್ಯಕ್ಕೆ ಒಂದು ದೊಡ್ಡ ಸವಾಲು ಎನಿಸಲಿದೆ ಎಂದು ಇಸ್ರೋ ವಿಜ್ಞಾನಿಗಳು ಹೇಳಿದ್ದಾರೆ. ಬಾಹ್ಯಕಾಶ ನೌಕೆ 1,350 ಕೆ.ಜಿ ತೂಕವಿದ್ದು, 5 ಮುಖ್ಯ ಪೆಲೋಡ್ ಗಳನ್ನು ಒತ್ತೊಯ್ಯಲಿದೆ. ಹವಾಗುಣದ ಆಧಾರದ ಮೇಲೆ ಇದೇ ವರ್ಷದ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಅಥವಾ ನವೆಂಬರ್ ತಿಂಗಳ ಪ್ರಾರಂಭದಲ್ಲಿ ಉಡಾಯಿಸಲಾಗುವುದು.
- ಈಗಾಗಲೇ ಹಾಕಿಕೊಂಡಿರುವ ಯೋಜನೆಗಳ ಪ್ರಕಾರ ಉಪಗ್ರಹವು ನವೆಂಬರ್ 26/27 ರ ಹೊತ್ತಿಗೆ ಭೂ ಕಕ್ಷೆಯನ್ನು ದಾಟಿ ಮಂಗಳನಡೆಗೆ ಸುಮಾರು 300 ದಿನಗಳ ಕಾಲ ಸಾಗಲಿದೆ. ನಂತರ ಸೆಪ್ಟೆಂಬರ್ 22, 2014 ರ ಹೊತ್ತಿಗೆ ಉಪಗ್ರಹವನ್ನು ಮಂಗಳನ ಕಕ್ಷೆಗೆ ಸೇರಿಸಲಾಗುವುದು. ಉಪಗ್ರಹವು ಮಂಗಳನ ಸುತ್ತ ಗೋಳಕಾರ ಪಥದಲ್ಲಿ ಪ್ರದಕ್ಷಿಣೆ ಹಾಕಿ ಮಂಗಳನ ಮೇಲ್ಮೈನಲ್ಲಿ ಖನಿಜಾಂಶಗಳ ಮಾಹಿತಿಯನ್ನು ಕಲೆಹಾಕಲಿದೆ.
- ಉಪಗ್ರಹವನ್ನು ಕಕ್ಷೆಗೆ ಸೇರಿಸುವ ಸಲುವಾಗಿ PSLV-XL, C-25 ರಾಕೆಟ್ ನ್ನು ವಿಕ್ರಂ ಸಾರಾಭಾಯಿ ಬಾಹ್ಯಾಕಾಶ ಕೇಂದ್ರದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.

## ಸುದ್ದಿಯಲ್ಲಿರುವ ವ್ಯಕ್ತಿಗಳು/ನೇಮಕ

### ಕರಾವಳಿ ತೀರಾ ಪಡೆ (Coastal Gaurd) ನ ನೂತನ ನಿರ್ದೇಶಕರಾಗಿ ಅನುರಾಗ್ ಜಿ ತಪ್ಲಿಯಾಲ್

ವೈಸ್ ಅಡ್ಮಿರಲ್ ಅನುರಾಗ್ ಜಿ ತಪ್ಲಿಯಾಲ್ ರವರು ಕರಾವಳಿ ತೀರಾ ಪಡೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. ಕರಾವಳಿ ತೀರಾ ಪಡೆಯನ್ನು ಮತ್ತಷ್ಟು ಬಲಗೊಳಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿರುವ ಹೊತ್ತಲ್ಲೆ ಅನುರಾಗ್ ರವರು ಅಧಿಕಾರವಹಿಸಿಕೊಂಡಿರುವುದು ಆಸ್ತಕಿ ಮೂಡಿಸಿದೆ. ಆಮೆರಿಕಾ ನೌಕ ಯುದ್ದ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಅನುರಾಗ್ ರವರು 1977 ರಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು.

- 9/11 ಮುಂಬೈ ದಾಳಿಯ ನಂತರ ಕರಾವಳಿ ತೀರಾ ಪಡೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಸದ್ಯ ತೀರಾ ಪಡೆಯು ಸಿಬ್ಬಂದಿ ಮತ್ತು ತಂತ್ರಜ್ಞಾನದ ಕೊರತೆಯಿಂದ ಬಳಲುತ್ತಿದೆ.
- ಕರಾವಳಿ ಪಡೆಯ ಕಾರ್ಯ ಕ್ಷಮತೆಯನ್ನು ಉತ್ತಮಗೊಳಿಸುವ ಸಲುವಾಗಿ ವಿವಿಧ ವಿಮಾನಗಳು ಮತ್ತು ಸಮುದ್ರ ಕಣ್ಗಾವಲು ನೌಕೆಗಳನ್ನು 2018 ರ ಹೊತ್ತಿಗೆ ಸಾಕಷ್ಟು ಸಂಖ್ಯೆಯಲ್ಲಿ ಪೂರೈಸುವುದಾಗಿ ಸರ್ಕಾರ ಹೇಳಿದೆ.

### ರಾಜೀವ್ ಸಹಾರೆ ಮಾಲ್ಡೀವ್ಸ್ ನ ಭಾರತದ ರಾಯಭಾರಿ

ಮಾಲ್ಡೀವ್ಸ್ ನಲ್ಲಿ ಭಾರತದ ರಾಯಭಾರಿಯಾಗಿ ರಾಜೀವ್ ಸಹಾರೆಯವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ರಾಯಭಾರಿಯಾಗಿದ್ದ ಡಿ.ಎಂ.ಮುಳೆ ರವರ ಉತ್ತರಾಧಿಕಾರಿಯಾಗಿ ಸಹಾರೆ ರವರು ಕಾರ್ಯನಿರ್ವಹಿಸಲಿದ್ದಾರೆ. ಇತ್ತೀಚೆಗೆ ಭಾರತದ ಜಿಎಂಆರ್ (GMR) ಕಂಪನಿಯ ಒಪ್ಪಂದವನ್ನು ಮಾಲ್ಡೀವ್ಸ್ ರದ್ದುಪಡಿಸಿದ ಕಾರಣ ಭಾರತ ಮತ್ತು ಮಾಲ್ಡೀವ್ಸ್ ಸಂಬಂಧ ಹದಗೆಟ್ಟಿದೆ.

- ಸದ್ಯ ಸಹಾರೆ ಯವರು ಭಾರತ ವಿದೇಶಾಂಗ ಸಚಿವಾಲಯದಡಿ ಬರುವ "ವೆಸ್ಟ್ ಏಷ್ಯಾ ನಾರ್ತ್ ಆಫ್ರಿಕಾ" ವಿಭಾಗದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ಡಿ.ಎಂ.ಮುಳೆ ರವರನ್ನು ನ್ಯೂಯಾರ್ಕ್ ನ ಭಾರತದ ಕಾನ್ಸುಲ್ ಜನರಲ್ ಆಗಿ ನೇಮಕ ಮಾಡಲಾಗಿದೆ.

### ಕರ್ನಾಟಕದ ಉಪಲೋಕಾಯುಕ್ತರಾಗಿ ನ್ಯಾಯಮೂರ್ತಿ ಸುಭಾಷ್ ಅಡಿ ನೇಮಕ

ರಾಜ್ಯದ ಎರಡನೇ ಉಪಲೋಕಾಯುಕ್ತರಾಗಿ ನ್ಯಾಯಮೂರ್ತಿ ಸುಭಾಷ್ ಅಡಿ ನೇಮಕಗೊಂಡಿದ್ದಾರೆ. ನ್ಯಾ.ಚಂದ್ರಶೇಖರಯ್ಯ ರವರ ನೇಮಕಾತಿ ಅಸಿಂಧೂ ಅನಿಸಿದ ನಂತರ ಈ ಸ್ಥಾನ ತೆರವಾಗಿತ್ತು.

- ರಾಜಭವನದಲ್ಲಿ ನಡೆದ ಸರಳ ಸನ್ನಿವೇಶನದಲ್ಲಿ ರಾಜ್ಯಪಾಲ ಭಾರದ್ವಜ್ ರವರು ಅಡಿಯವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.
- ಬೆಳಗಾವಿ ಜಿಲ್ಲೆಯಲ್ಲಿ ಆಗಸ್ಟ್ 10, 1951 ರಲ್ಲಿ ಜನಿಸಿದ ಅಡಿಯವರು, 1978 ರಿಂದ ವೃತ್ತಿ ಜೀವನ ಆರಂಭಿಸಿದರು. ಸಿವಿಲ್ ಮತ್ತು ಕ್ರಿಮಿನಲ್ ವಕೀಲರಾಗಿ ಪ್ರಾವೀಣ್ಯತೆ ಪಡೆದಿದ್ದಾರೆ.

- ಎಸ್.ಎಂ..ಕೃಷ್ಣ ರವರ ಕಾಲದಲ್ಲಿ ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸಿರುವ ಅವರು 2006 ರಲ್ಲಿ ರಾಜ್ಯ ಹೈಕೋರ್ಟ್ ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡು, 2007 ರಲ್ಲಿ ಕಾಯಂ ನ್ಯಾಯಮೂರ್ತಿಗಳಾಗಿ ಅಧಿಕಾರ ಸ್ವೀಕರಿಸಿದರು.

**ಹಿರಿಯ ಪತ್ರಕರ್ತ ಎಸ್. ಕೆ. ವರ್ಮಾ ನಿಧನ**

"ಇಂಡಿಯನ್ ಎಕ್ಸ್ ಪ್ರೆಸ್" ನ ಮಾಜಿ ಸುದ್ದಿ ಸಂಪಾದಕ ಎಸ್.ಕೆ.ವರ್ಮಾ ತಮ್ಮ 95 ನೇ ವಯಸ್ಸಿನಲ್ಲಿ ನಿಧನರಾದರು. ತೀವ್ರ ಹೃದಯಘಾತಕ್ಕೆ ಒಳಗಾದ ಕಾರಣ ಅವರು ಕೊನೆಯುಸಿರೆಳೆದರು.

- ಭಾರತ ಬಿಟ್ಟು ತೊಲಗಿ (Quit India Movement) ವೇಳೆ "ಪಾಟ್ನ ಟೈಮ್ಸ್" ಜತೆ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು.
- ಕೆಲವು ಸಮಯದ ಬಳಿಕ "ಇಂಡಿಯನ್ ನೇಷನ್" ಸೇರ್ಪಡೆಗೊಂಡರು. ಬಳಿಕ ಪಂಜಾಬ್ ಮೇಲ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿಯೂ ಸೇವೆ ಸಲ್ಲಿಸಿದರು.
- ದೇಶದ ಮೊದಲ ಪ್ರಧಾನಿ ಮಂತ್ರಿ ಆದ ಜವಹಾರ್ ಲಾಲ್ ನೆಹರೂ ರವರು ಪ್ರಾರಂಭಿಸಿದ "ನ್ಯಾಷನಲ್ ಹೆರಾಲ್ಡ್" ನಲ್ಲಿಯೂ ಸೇವೆ ಸಲ್ಲಿಸಿದ ಕೀರ್ತಿ ಅವರದು.

**ಸತತ ಆರನೇ ವರ್ಷ ಮುಖೇಶ್ ಅಂಬಾನಿ ಭಾರತದ ಶ್ರೀಮಂತರು**

ರಿಲಯನ್ಸ್ ಸಂಸ್ಥೆಯ ದಿಗ್ಗಜ ಮುಖೇಶ್ ಅಂಬಾನಿಯವರು ಸತತ ಆರನೇ ವರ್ಷ ಭಾರತದ ನಂ.1 ಶ್ರೀಮಂತ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಫೋರ್ಬ್ಸ್ ಹೊರತಂದಿರುವ ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಮುಖೇಶ್ ರವರು 21.5 ಬಿಲಿಯನ್ ಡಾಲರ್ ಮೊತ್ತದ ಆಸ್ತಿಯನ್ನು ಹೊಂದುವ ಮೂಲಕ ಅಗ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ವಿಶ್ವದಲ್ಲಿರುವ ಒಟ್ಟಾರೆ ಶ್ರೀಮಂತರುಗಳ ಪೈಕಿ ಮುಖೇಶ್ ರವರಿಗೆ 22 ನೇ ಸ್ಥಾನ ಲಭಿಸಿದೆ.

- ಮೆಕ್ಸಿಕೊದ ಉದ್ಯಮಿ "ಕಾರ್ಲೋಸ್ ಸ್ಲಿಮ್" ರವರು ಸತತ ನಾಲ್ಕನೇ ಬಾರಿ ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಸ್ಲಿಮ್ ರವರ ಒಟ್ಟು ಆಸ್ತಿಯ ಮೊತ್ತ 73. ಬಿಲಿಯನ್ ಯು.ಎಸ್ ಡಾಲರ್.
- ಎರಡನೇ ಸ್ಥಾನದಲ್ಲಿ ಬಿಲ್ ಗೇಟ್ಸ್ (67 ಬಿಲಿಯನ್ ಡಾಲರ್), ಸ್ಪೇನ್ ನ ಅಮಾಸಿಯೊ ಒರ್ಟೆಗ (Amancio Ortega) (57 ಬಿಲಿಯನ್ ಡಾಲರ್), ವಾರೆನ್ ಬಫೆಟ್ (53.5 ಬಿಲಿಯನ್ ಡಾಲರ್) ಮತ್ತು ಲ್ಯಾರಿ ಎಲಿಸನ್ (43 ಬಿಲಿಯನ್ ಡಾಲರ್) ರವರುಗಳು ಪಟ್ಟಿಯಲ್ಲಿ ಮೊದಲ ಐದು ಸ್ಥಾನದಲ್ಲಿದ್ದಾರೆ.
- ಫೋರ್ಬ್ಸ್ ಪ್ರಕಟಿಸಿರುವ ಈ ಪಟ್ಟಿಯಲ್ಲಿ ಒಟ್ಟು 1426 ಬಿಲಿನಿಯರ್ ಗಳಿದ್ದು, ಭಾರತದ 55 ಮಂದಿ ಈ ಪಟ್ಟಿಯಲ್ಲಿ ಸ್ಥಾನಗಳಿಸಿರುವುದು ವಿಶೇಷ.
- ಭಾರತದಲ್ಲಿ ಮುಖೇಶ್ ಅಂಬಾನಿಯ ನಂತರ ಲಕ್ಷ್ಮಿ ಮಿತ್ತಲ್ ರವರು ಎರಡನೇ ಸ್ಥಾನದಲ್ಲಿದ್ದರೆ, ತದ ನಂತರ ವಿಪ್ರೋದ ಅಜೀಂ ಪ್ರೇಮ್ ಜಿ, ದಿಲೀಪ್ ಸಾಂಗ್ವಿ, ಶಶಿ ಮತ್ತು ರವಿ ರೂಯ ರವರು ಸ್ಥಾನ ಪಡೆದಿರುವವರು.

**ವೆನಿಜುವೆಲಾ ಅಧ್ಯಕ್ಷ ಹ್ಯೂಗೋ ಷಾವೇಜ್ ವಿಧಿವಶ**

ವೆನಿಜುವೆಲಾದ ಅಧ್ಯಕ್ಷ ಹ್ಯೂಗೋ ಷಾವೇಜ್ ರವರು ದೀರ್ಘಕಾಲದ ಕ್ಯಾನ್ಸರ್ ರೋಗದಿಂದ ಮರಣ ಹೊಂದಿದರು. ಕಳೆದ ತಿಂಗಳು ಕ್ಯೂಬಾ ದೇಶದಲ್ಲಿ ಚಿಕತ್ಸೆ ಪಡೆದು ತಮ್ಮ ದೇಶಕ್ಕೆ ವಾಪಸ್ಸ್ ಆಗಿದ್ದ ಷಾವೇಜ್ ರವರ ಆರೋಗ್ಯ ಸ್ಥಿತಿ ದಿನದ ದಿನಕ್ಕೆ ಹದಗೆಟ್ಟಿತ್ತು. 58 ವರ್ಷ ವಯಸ್ಸಿನ ಷಾವೇಜ್ ರವರ ಅಕಾಲಿಕ ಮರಣ ಸುದ್ದಿಯನ್ನು ವೆನುಜಿವೆಲಾದ ಉಪಾಧ್ಯಕ್ಷರಾದ ನಿಕೊಲೊಸ್ ಮಡ್ಯುರೊ ರವರು ಖಚಿತ ಪಡಿಸಿದ್ದಾರೆ. ರಾಜಕೀಯ ದೂರದದೃಷ್ಠಿ, ಸಮಗ್ರ ಅಭಿವೃದ್ದಿಯ ನೋಟ ಮತ್ತು ವೈಷಿಷ್ಠ ವ್ಯಕ್ತಿತ್ವದಿಂದ ಷಾವೇಜ್ ರವರು ಇಡೀ ವಿಶ್ವದ ಗಮನ ಸೆಳೆದಿದ್ದರು.

ಹ್ಯೂಗೋ ಷಾವೇಜ್ ಬಗ್ಗೆ:

- ಶಿಕ್ಷಕರ ಮಗನಾಗಿ ಜನಿಸಿದ ಷಾವೇಜ್ ರವರು ಬೇಸ್ ಬಾಲ್ ಎಡಿಗೆ ತಮ್ಮ ಒಲಿವಿದ್ದ ಕಾರಣ ಸೇನೆಯನ್ನು ಸೇರಿದರು. ತದ ನಂತರ ಲಿಫ್ಟಿನೆಂಟ್ ಕೊಲೊನೆಲ್ ಹುದ್ದೆಗೆ ಪದನ್ನೊತಿ ಹೊಂದಿದರು.
- ಎಡಪಂಥೀಯ ಬಂಡಾಯದಲ್ಲಿ ಸಕ್ರಿಯವಾಗಿ ಕಾಣಿಸಕೊಂಡ ಷೇವಾಜ್ ರವರು 1992 ರಲ್ಲಿ ಅಧ್ಯಕ್ಷ ಕಾರ್ಲೋಸ್ ಅಂಡ್ರೆಸ್ ಪೆರೆಝ್ ವಿರುದ್ದ ನಡೆದ ದಂಗೆಯಲ್ಲಿ ಪ್ರಮುಖ ಪಾತ್ರವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ಈ ಮಿಲಿಟರಿ ದಂಗೆ ನಂತರ ಷಾವೇಜ್ ರವರು ದೇಶ ಕುರಿತು ಆಡಿದ ಮಾತುಗಳು ವೆನೆಜುವೆಲಾ ಬಡವರಿಗೆ ಹತ್ತಿರವೆನಿಸಿದವು. ಅಲ್ಲದೇ ಸಹಸ್ರಾರು ಜನ ಅವರು ಬೆಂಬಲಕ್ಕೆ ನಿಂತರು.
- 1994 ರಲ್ಲಿ ವೆನುಜುವೆಲಾದ ಅಧ್ಯಕ್ಷರಾದ "ರಾಫೆಲ್ ಕಾಲ್ಡ್ರೆ" ರವರ ಅನುಕಂಪದಿಂದ ಜೈಲಿನಿಂದ ಹೊರಬಂದ ಮೇಲೆ ಷಾವೇಜ್ ರವರು ಕೆಳಮಟ್ಟದ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬದಲಾವಣೆಯ ಅಲೆಯನ್ನು ಎಬ್ಬಿಸಿದರು. ಅಷ್ಟೇ ಅಲ್ಲ ಮುಂದಿನ ನಾಲ್ಕು ವರ್ಷಗಳಲ್ಲಿ ದೇಶದ ಅಧ್ಯಕ್ಷರಾಗಿ ಚುಕ್ಕಣಿ ಹಿಡಿದರು.
- ಬಡಜನರ ಆಶಾಕಿರಣವೆಂದು ಬಿಂಬಿತವಾಗಿದ್ದ ಷಾವೇಜ್ ರವರು ಕೆಲವೊಮ್ಮೆ ಏಕ ಪಕ್ಷದ ಪ್ರಭುತ್ವ ಸಾಧಿಸಿದ ಕಾರಣ "ಮುಸಲೋನಿ" "ಫೀಡಲ್ ಕ್ಯಾಸ್ಟ್ರೋ" ಗಳಿಗೆ ಹೋಲಿಸುವ ಮೂಲಕ ಟೀಕೆಗೂ ಒಳಗಾಗಿದ್ದರು.
- 1999 ರಲ್ಲಿ ಅಧ್ಯಕ್ಷ ಗಾದಿಗೆ ಏರಿದ ಷಾವೇಜ್ ರವರು 14 ವರ್ಷಗಳ ಕಾಲ ತೈಲ ಸಮೃದ್ದಿ ದೇಶವಾದ ವೆನುಜುವೆಲಾದ ಆಳ್ವಿಕೆ ನಡೆಸಿದರು. 2002 ರಲ್ಲಿ ಎರಡನೇ ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇದೇ ವರ್ಷ ಜನವರಿ 10 ರಂದು ಆರು ವರ್ಷಗಳ ಕಾಲ ಅವಧಿಗೆ ಅಧಿಕಾರ ಸ್ವೀಕರಿಸಬೇಕಿತ್ತು ಆದರೆ ಅನಾರೋಗ್ಯದ ಕಾರಣ ಮುಂದೂಡಲಾಗಿತ್ತು.

**ನೇರ ನಗದು ವರ್ಗಾವಣೆ ಯೋಜನೆ ಗೆ ನೂತನ ನಿರ್ದೇಶಕರಾಗಿ ಸಿಂಧೂಶ್ರೀ ಕುಲ್ಲರ್**

ಯುಪಿಎ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ "ನೇರ ನಗದು ವರ್ಗಾವಣೆ" ಯೋಜನೆಯ ನಿರ್ದೇಶಕರಾಗಿ ಯೋಜನಾ ಆಯೋಗದ ಕಾರ್ಯದರ್ಶಿ ಸಿಂಧೂಶ್ರೀ ಕುಲ್ಲರ್ ರವರನ್ನು ನೇಮಕ ಮಾಡಲಾಗಿದೆ. ಸಿಂದೂಶ್ರಿಯವರು ಈಗಿರುವ ಹುದ್ದೆಯ ಜೊತೆಗೆ ಹೆಚ್ಚುವರಿಯಾಗಿ ಈ ಕಾರ್ಯವನ್ನು ನಿಭಾಯಿಸಲ್ಲಿದ್ದಾರೆ.

"ನೇರ ನಗದು ವರ್ಗಾವಣೆ ಯೋಜನೆ"

- ವಿವಿಧ ಯೋಜನೆಯ ಫಲಾನುಭವಿಗಳ ಖಾತೆಗೆ ನೇರವಾಗಿ ಹಣವನ್ನು ವರ್ಗಾಯಿಸುವ ಗುರಿಯನ್ನು ಹೊಂದಿರುವ ಈ ಯೋಜನೆಯನ್ನು ಜನವರಿ 1, 2013 ರಿಂದ ಜಾರಿಗೆ ತರಲಾಗಿದೆ. ಪ್ರಥಮ ಹಂತದಲ್ಲಿ ದೇಶದ ಆಯ್ದ ಕೆಲವು ರಾಜ್ಯಗಳ

ಜಿಲ್ಲೆಗಳಲ್ಲಿ ಮಾತ್ರ ಇದನ್ನು ಜಾರಿಗೊಳಿಸಲಾಗಿದೆ. ಕರ್ನಾಟಕದ ಧಾರವಾಡ, ತುಮಕೂರು ಮತ್ತು ಮೈಸೂರು ಈ ಮೂರು ಜಿಲ್ಲೆಗಳಲ್ಲಿ ಮಾತ್ರ ಸದ್ಯಕ್ಕೆ ಅನುಷ್ಠಾನಗೊಂಡಿದೆ. Your Money in Your hands (ನಿಮ್ಮ ಹಣ ನಿಮ್ಮ ಕೈಯಲ್ಲಿ) ಇದು ಈ ಯೋಜನೆಯ ಧ್ಯೇಯ ವಾಕ್ಯ

- 2013-14 ನೇ ಬಜೆಟ್ ನಲ್ಲಿ ಮಂಡಿಸಿರುವಂತೆ ಈ ಯೋಜನೆಯನ್ನು ಶೀಘ್ರವೇ ಅಂದರೆ ಈ ವರ್ಷದ ಡಿಸೆಂಬರ್ ವೇಳೆಗೆ ದೇಶದ್ಯಾಂತ ಜಾರಿಗೊಳಿಸಲಾಗುವುದು.

ಈ ಯೋಜನೆಯ ಮುಖ್ಯ ಉದ್ದೇಶಗಳು:

- ವ್ಯವಸ್ಥೆಯಿಂದ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ಅದರಿಂದ ಆಗುತ್ತಿರುವ ಸೋರಿಕೆಯನ್ನು ತಡೆಯುವ ಮೂಲಕ ಫಲಾನುಭವಿಗೆ ನೇರವಾಗಿ ಹಣವನ್ನು ತಲುಪಿಸುವುದು.
- ನಕಲಿ ದಾಖಲೆಗಳ ಸೃಷ್ಟೀಕರಣ ಮಾಡಿ ಎರಡೂ ಬಾರಿ ಯೋಜನೆಯ ಉಪಯೋಗ ಮಾಡುವದನ್ನು ತಡೆಯುವದು.
- ಹಣ ವರ್ಗಾವಣೆಯಲ್ಲಿ ಆಗುತ್ತಿರುವ ವಿಳಂಬವನ್ನು ಅಂತ್ಯಗೊಳಿಸುವುದು.

ಹಣ ವರ್ಗಾವಣೆ ಹೇಗೆ?

- ಫಲಾನುಭವಿಗಳಿಗೆ ಹಣ ವರ್ಗಾವಣೆ ಮಾಡುವಲ್ಲಿ ಬ್ಯಾಂಕ್ ಗಳು ಪ್ರಮುಖ ಪಾತ್ರವಹಿಸಲಿವೆ. ಆಧಾರ್ ಕಾರ್ಡುಗಳನ್ನು ಹೊಂದಿರುವ ಫಲಾನುಭವಿಗಳ ಖಾತೆಗೆ ಎಲೆಕ್ಟ್ರಾನಿಕ್ ಮಾಧ್ಯಮಗಳ (E-fund transfer)ಮೂಲಕ ನೇರವಾಗಿ ನಗದನ್ನು ವರ್ಗಾಯಿಸಲಾಗುವುದು.

ಯೋಜನೆಯ ಅಡತಡೆಗಳೇನು?

- ಆಧಾರ್ ಕಾರ್ಡುಗಳ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಈ ಯೋಜನೆಯ ಅನುಷ್ಠಾನಕ್ಕೆ ಅಡ್ಡಿಯಾಗಿದೆ. ಸದ್ಯ ಎಲ್ಲೆಲ್ಲಿ ಆಧಾರ್ ಕಾರ್ಡುಗಳು ಸಮರ್ಪಕವಾಗಿ ವಿತರಣೆಯಾಗಿದೆಯೋ ಅಂತಹ 51 ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.
- ಅನೇಕ ಹಳ್ಳಿಗಳೂ ಇಂದಿಗೂ ಬ್ಯಾಂಕಿಗ್ ಕ್ಷೇತ್ರದಿಂದ ವಂಚಿತರಾಗಿರುವುದು ಮತ್ತೊಂದು ಸಮಸ್ಯೆಯಾಗಿದೆ.

**ಬ್ರಿಟನ್ ಪುರಸ್ಕಾರಕ್ಕೆ ರಾಜೀವ್ ಚಂದ್ರಶೇಖರ್ ನಾಮ ನಿರ್ದೇಶನ**

ಬ್ರಿಟನ್ ಅಭಿವ್ಯಕ್ತಿ ಸ್ವಾತಂತ್ರ್ಯ ಪುರಸ್ಕಾರಕ್ಕೆ ರಾಜ್ಯ ಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ರವರು ನಾಮ ನಿರ್ದೇಶನಗೊಂಡಿದ್ದಾರೆ. ರಾಜೀವ್ ಚಂದ್ರಶೇಖರ್ ರವರು ಕನ್ನಡ ಪ್ರಭ ಹಾಗೂ ಸುವರ್ಣ ಸುದ್ದಿವಾಹಿನಿಯ ಮುಖ್ಯಸ್ಥರೂ ಆಗಿದ್ದಾರೆ.

- ಡಿಜಿಟಲ್ ಸ್ವಾತಂತ್ರ್ಯ ಕ್ಷೇತ್ರದಲ್ಲಿ ಅವರನ್ನು ನಾಮ ನಿರ್ದೇಶನಗೊಳಿಸಲಾಗಿದೆ. ಭಾರತದಲ್ಲಿ ಹೆಚ್ಚುತ್ತಿರುವ ಅಂತರ್ಜಾಲ ಸೆನ್ಸಾರ್ ಬಗ್ಗೆ ಅವರು ನಡೆಸುತ್ತಿರುವ ಹೋರಾಟ ಮಾಡುವ ಮೂಲಕ ಮತ್ತು ಮಾಧ್ಯಮಗಳಲ್ಲಿ ಲೇಖನಗಳ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಅವರು ಧನಿ ಎತ್ತಿದ್ದಾರೆ.

- ಮಾಹಿತಿ ತಂತ್ರಜ್ಞಾನ ಕಾಯಿದೆ ತಿದ್ದುಪಡಿ ತರುವಂತೆ ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ಇದಲ್ಲದೇ ಖಾಸಗಿ ವಿಧೇಯಕವನ್ನು ಅವರು ರಾಜ್ಯಸಭೆಯಲ್ಲಿ ಮಂಡಿಸಿದ್ದಾರೆ. ಆದ್ದರಿಂದ ಅವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗಿದೆ ಎಂದು "ದಿ ಇಂಡೆಕ್ಸ್ ಫ್ರಿಡಂ ಆಫ್ ಎಕ್ಸ್ಪ್ರೆಶನ್" ತಿಳಿಸಿದೆ.

**ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ವಿರೇನ್ ಜೆ ಶಾ ಇನ್ನಿಲ್ಲ**

ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಹಾಗೂ ಉದ್ಯಮಿ ವಿರೇನ್ ಜೆ ಶಾ ರವರು ನಿಧನರಾದರು. 86 ವರ್ಷ ಹರೆಯದವರಾಗಿದ್ದ ಶಾ ರವರು ಜೋರ್ಡನ್ ಪ್ರವಾಸದಲ್ಲಿದ್ದ ವೇಳೆ ಸಂಭವಿಸಿದ ಹಠಾತ್ ಹೃದಯಾಘಾತದಿಂದ ಮರಣಹೊಂದಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಮುಂಬೈಗೆ ತಂದು ಅಂತ್ಯ ಕ್ರಿಯೆ ನೇರವೇರಿಸಲಾಗುವುದೆಂದು ಮೂಲಗಳು ತಿಳಿಸಿವೆ.

ವಿರೇನ್ ಜೆ ಶಾ:

- ಕೊಲ್ಕತ್ತಾದಲ್ಲಿ ಮೇ 12, 1926 ರಲ್ಲಿ ಜನಿಸಿದ ಶಾ ರವರು ಬಾಂಬೆ ವಿವಿಯಿಂದ ಪದವಿ ಪಡೆದಿದ್ದರು. ಗುಜರಾತ್ ನ ಜುನಗಢ್ ನಿಂದ ಶಾ ರವರು 1967 ರಲ್ಲಿ ಮೊದಲ ಬಾರಿ ಸಂಸತ್ತಿಗೆ ಆಯ್ಕೆಯಾಗಿದ್ದರು.
- 1975 ರಿಂದ 1981 ರ ವರೆಗೆ ಮತ್ತು 1990 ರಿಂದ 1996 ರ ವರೆಗೆ ಎರಡು ಬಾರಿ ರಾಜ್ಯ ಸಭಾ ಸದಸ್ಯರಾಗಿ ಅವರು ನೇಮಕಗೊಂಡಿದ್ದರು.
- ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ 1999 ರಿಂದ 2004 ರ ತನಕ ಸೇವೆ ಸಲ್ಲಿಸಿದ ಶಾ ರವರು, ಮುಕುಲ್ ಲಿಮಿಟೆಡ್ ಸ್ಟೀಲ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸಹ ಕಾರ್ಯನಿರ್ವಹಿಸಿದ್ದರು.

ಪ್ರಧಾನಿ ಸಂತಾಪ:

- ಪ್ರಧಾನಿ ಮನಮೋಹನ್ ಸಿಂಗ್ ರವರಿಗೆ ತೀರಾ ಹತ್ತಿರದವರಾಗಿದ್ದ ಶಾ ರವರ ನಿಧನಕ್ಕೆ ಪ್ರಧಾನಿ ಸಂತಾಪ ಸೂಚಿಸಿದ್ದಾರೆ. ಶಾ ರವರ ನಿಧನದಿಂದ ದೇಶ ಒಬ್ಬ ಮಹಾನ್ ಚೇತನವನ್ನು ಕಳೆದುಕೊಂಡಿದೆ ಎಂದು ಶೋಕ ವ್ಯಕ್ತಪಡಿಸಿದ್ದಾರೆ.

**ಬ್ಲಾಕ್ ಬೆರಿ ಮ್ಯಾನೇಜಿಂಗ್ ಡೈರೆಕ್ಟರ್ ಸುನೀಲ್ ದತ್ ರಾಜೀನಾಮೆ**

ಬ್ಲಾಕ್ ಬೆರಿ ಇಂಡಿಯಾ ದ ಮ್ಯಾನೇಜಿಂಗ್ ಡೈರೆಕ್ಟರ್ ಸುನೀಲ್ ದತ್ ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಸುನೀಲ್ ರವರು ಡಿಸೆಂಬರ್ 2011 ರಲ್ಲಿ ಈ ಕಂಪನಿಗೆ ಸೇರ್ಪಡೆಗೊಂಡಿದ್ದರು. ಸುನೀಲ್ ರವರ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ಕಂಪನಿಯ ಉನ್ನತ ಮೂಲಗಳು ಧೃಡಪಡಿಸಿವೆ.

- ಸುನೀಲ್ ರವರಿಂದ ತೆರವುಗೊಂಡ ಈ ಸ್ಥಾನಕ್ಕೆ ಹಂಗಾಮಿ ನಿರ್ದೇಶಕರಾಗಿ ರಿಕ್ ಕೊಸ್ಟನಜೊ (Rick Costanzo) ರವರನ್ನು ನೇಮಕಮಾಡಲಾಗಿದೆ.

ಬ್ಲಾಕ್ ಬೆರಿ:

- ಮೊಬೈಲ್ ಕ್ಷೇತ್ರದಲ್ಲಿ ಹೆಸರುಗಳಿಸಿರುವ ಕೆನಡಾ ಮೂಲದ ಈ ಕಂಪನಿಯು ಹಿಂದೆ "ರಿಸರ್ಚ್ ಇನ್ ಮೊಷನ್" ಎಂದು ಕರೆಯಲಾಗುತ್ತಿತ್ತು. ಜಾಗತಿಕ ಮಟ್ಟದಲ್ಲಿ ಭದ್ರತ ಸುರಕ್ಷತೆಯನ್ನು ಹೊಂದಿರದ ಕಾರಣ ಭಾರತದಲ್ಲಿ ಈ ಮೊಬೈಲ್ ಗಳ ಬಳಕೆಯನ್ನು ನಿಷೇಧಿಸಲಾಗಿತ್ತು.
- ತೊಂದರೆಗಳನ್ನು ನಿವಾರಿಸಿಕೊಂಡು ಮತ್ತೆ ಭಾರತದಲ್ಲಿ ಮಾರುಕಟ್ಟೆಯನ್ನು ವಿಸ್ತರಿಸುವ ಆಕಾಂಕ್ಷೆಯನ್ನು ಹೊಂದಿರುವ ಈ ಕಂಪನಿಯು ಬ್ಲಾಕ್ ಬೆರಿ 10 OS ಮತ್ತು Z 10 ಎಂಬ ಹೊಸ ಬಗೆಯ ಮೊಬೈಲ್ ಗಳನ್ನು ಇತ್ತೀಚೆಗೆ ಪರಿಚಯಿಸಿದೆ.

**ವಿವಿಧ ರಾಜ್ಯಗಳಿಗೆ ರಾಜ್ಯಪಾಲರ ನೇಮಕ**

ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಮೂವರು ರಾಜ್ಯಗಳಿಗೆ ರಾಜ್ಯಪಾಲರ ವರ್ಗಾವಣೆ ಸೇರಿದಂತೆ ಎರಡೂ ರಾಜ್ಯಗಳಿಗೆ ಹೊಸ ರಾಜ್ಯಪಾಲರ ನೇಮಕಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

- ಮಾಜಿ ಸಿಬಿಐ ನಿರ್ದೇಶಕ ಅಶ್ವಿನ್ ಕುಮಾರ್ -ನಾಗಾಲ್ಯಾಂಡ್
- ಎಸ್.ಸಿ.ಜಮೀರ್ - ಒಡಿಶಾ
- ಡಿ.ವೈ.ಪಾಟೀಲ್ - ಬಿಹಾರ್
- ದೇವಾನಂದ್ ಕೊನ್ವಾರ್ - ತ್ರಿಪುರ
- ನಿಖಿಲ್ ಕುಮಾರ್ - ಕೇರಳ

**ಬ್ರೆಜಿಲ್ ನ ಗೋಲ್ ಕೀಪರ್ ಬ್ರೂನೊ ಫರ್ನಾಂಡಿಸ್ ಡಿಸೋಜಾ ಗೆ 22 ವರ್ಷ ಸೆರೆವಾಸ**

ಕೊಲೆ ಆರೋಪ ಎದುರುಸುತ್ತಿದ ಬ್ರೆಜಿಲ್ ನ ಗೋಲ್ ಕೀಪರ್ ಬ್ರೂನೊ ಫರ್ನಾಂಡಿಸ್ ಡಿಸೋಜಾ ರವರಿಗೆ 22 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗಿದೆ. ಫ್ಲೆಮಿಂಗ್ ತಂಡದ ಮಾಜಿ ನಾಯಕ ಬ್ರೂನೊ ಫೆರ್ನಾಂಡಿಸ್ ನನ್ನು ಐವರು ಮಹಿಳೆಯರು ಮತ್ತು ಇಬ್ಬರು ಪುರುಷರನ್ನು ಒಳಗೊಂಡ ನ್ಯಾಯಮಂಡಳಿಯು ಅಪರಾಧಿ ಎಂದು ಪರಿಗಣಿಸಿ ತೀರ್ಪು ನೀಡಿದೆ.

- ತನ್ನಿಂದ ದೂರವಾದ ಗೆಳತಿ ಎಲಿಸಾ ಸ್ಯಾಮುದಿ ಯವರನ್ನು ಕೊಲೆ ಮಾಡಿದ ಆರೋಪವನ್ನು ಅವರ ಮೇಲೆ ಹೊರಿಸಲಾಗಿತ್ತು. ಆದರೆ ಈ ಆರೋಪವನ್ನು ಅವರು ಅಲ್ಲಗೆಳೆದಿದ್ದರು. ಇದಕ್ಕೂ ಮೊದಲು ಸ್ಯಾಮುದಿ ರವರನ್ನು ಅಪಹರಿಸಿ ಗರ್ಭಪಾತ ಮಾಡಿಸಿದ್ದ ಕಾರಣ ನಾಲ್ಕು ವರ್ಷ ಜೈಲು ಶಿಕ್ಷೆ ಅನುಭವಿಸಿದ್ದರು.
- ಬ್ರೂನೊ ರವರ ನಾಯಕತ್ವದಲ್ಲಿ "ಫ್ಲೆಮಿಂಗ್" ತಂಡ 2009 ರಲ್ಲಿ "ಬ್ರೆಜಿಲ್ ಸೀರೇ ಎ" ಪ್ರಶಸ್ತಿಯನ್ನು ಗೆದ್ದಿತ್ತು.

**ಆರ್ಯನ್ ಬಾಲಾಜಿ: ಕಿಲಿಮಂಜಾರೋ ಏರಿದ ಭಾರತದ 7 ವರ್ಷದ ಬಾಲಕ**

ಭಾರತದ ಆರ್ಯನ್ ಬಾಲಾಜಿ ತನ್ನ ಏಳು ವರ್ಷದ ವಯಸ್ಸಿನಲ್ಲಿ ಆಫ್ರಿಕಾದ ಅತ್ಯಂತ ಎತ್ತರದ ಶಿಖರ ಕಿಲಿಮಂಜಾರೋ ಪ್ರರ್ವತವನ್ನು ಏರುವ ಮೂಲಕ ಸಾಧನೆಗೈದಿದ್ದಾರೆ.

- ಆರ್ಯನ್ ರವರು 5,895 ಮೀಟರ್ ಎತ್ತರದ ಕಿಲಿಮಂಜಾರೋ ಏರಿದ ವಿಶ್ವದ ಅತ್ಯಂತ ಕಿರಿಯ ಸಾಧಕ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ.

- 2012 ರ ಮೇ 15 ರಂದು ಈ ಪೋರ ಕಾಲಪತ್ಥರ್ ಶಿಖರವನ್ನೂ ಏರುವ ಮೂಲಕ ದಾಖಲೆ ಮಾಡಿದ್ದ.
- ಚಿಕ್ಕ ವಯಸ್ಸಲ್ಲೇ ಇಂತಹ ಸಾಧನೆ ಮಾಡಿರುವ ಆರ್ಯನ್ ನೌಕ ಅಧಿಕಾರಿ ಬಾಲಾಜಿರವರ ಪುತ್ರ.

**ಖ್ಯಾತ ಕರ್ನಾಟಿಕ್ ಸಂಗೀತಗಾರ ಶ್ರೀಪಾದ ಪಿನಾಕಪಾಣಿ ನಿಧನ**

ಹಿರಿಯ ಮತ್ತು ಪ್ರಸಿದ್ದ ಕರ್ನಾಟಿಕ್ ಸಂಗೀತಗಾರ ಶ್ರೀಪಾದ ಪಿನಾಕಪಾಣಿ ರವರು ಆಂಧ್ರ ಪ್ರದೇಶದಲ್ಲಿ ನಿಧನರಾದರು. ಇತ್ತೀಚೆಗೆ ಅವರ ಆರೋಗ್ಯ ಸ್ಥಿತಿ ತೀವ್ರ ಹದಗೆಟ್ಟಿತ್ತು. ಕರ್ನಾಟಿಕ್ ಸಂಗೀತದಲ್ಲಿ ಪರಿಣಿತರಾಗಿದ್ದ ಅವರಿಗೆ 100 ವರ್ಷ ವಯಸ್ಸಾಗಿತ್ತು.

- ಆಂಧ್ರಪ್ರದೇಶದ ಶ್ರೀಕಾಕುಲಂ ಜಿಲ್ಲೆಯವರಾದ ಪಾಣಿ ರವರು 1938 ರಲ್ಲಿ ವೈದ್ಯ ಪದವಿಯನ್ನು ಪೂರೈಸಿದರು. ನಂತರ 1945 ರಲ್ಲಿ ಉನ್ನತ ವ್ಯಾಸಂಗ ಮಾಡಿ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಪ್ರೋಫೆಸರ್ ಆಗಿ ಕೆಲ ಕಾಲ ಸೇವೆಸಲ್ಲಿಸಿದ್ದರು.
- ಪಿನಾಕಪಾಣಿಯವರು ಮೂಲತಃ ವೃತ್ತಿಯಲ್ಲಿ ವೈದ್ಯರಾಗಿದ್ದರೂ ಕರ್ನಾಟಿಕ್ ಸಂಗೀತದ ಮೇಲೆ ಅವರಿಗಿದ್ದ ಒಲವಿನಿಂದ ಅದರಡೆಗೆ ಆಕರ್ಷಿತರಾಗಿ ಅಪಾರ ಜ್ಞಾನವನ್ನು ಸಂಪಾದಿಸಿದ್ದರು. ಅವರಿಗೆ ಒಲಿದಿರುವ ಅನೇಕ ಪ್ರಶಸ್ತಿಗಳೇ ಅದಕ್ಕೆ ಸಾಕ್ಷಿ.
- ನೆಡದೂರಿ ಕೃಷ್ಣಮೂರ್ತಿ, ನೂಕಲ ಚಿನ್ನ ಸತ್ಯನಾರಾಯಣ ಮಲ್ಲಾಡಿ ಸೂರಿ ಬಾಬು ಸೇರಿದಂತೆ ಇತರರು ಪಾಣಿ ರವರ ಪ್ರಮುಖ ಶಿಷ್ಯರುಗಳು ಎನಿಸಿದ್ದಾರೆ.
- ಕರ್ನಾಟಿಕ್ ಸಂಗೀತದ ಕುರಿತಾಗಿ ಪಾಣಿ ರವರು ಇಂಗ್ಲೀಷ್ ಮತ್ತು ತೆಲುಗು ಭಾಷೆಗಳಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ಅವುಗಳಲ್ಲಿ "ಮನೊ ಧರ್ಮ ಸಂಗೀತಾಂ", "ಮೇಳಾ ರಾಗ ಮಲ್ಲಿಕಾ", "ಸಂಗೀತಾ ಸೌರಭಂ" ಮತ್ತು "ಪಲ್ಲವ ಗಾನ ಸುಧಾ" ಪ್ರಮುಖವೆನಿಸಿವೆ.

ಪಿನಾಕಪಾಣಿ ಅವರಿಗೆ ಸಂದಿರುವ ಪ್ರಶಸ್ತಿಗಳು:

- 1966 ರಲ್ಲಿ ಆಂಧ್ರ ಪ್ರದೇಶ ಸಂಗೀತಾ ನಾಟಕ ಅಕಾಡೆಮಿ ಪ್ರಶಸ್ತಿ.
- 1983 ರಲ್ಲಿ ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಪ್ರಶಸ್ತಿ
- 1984 ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಪ್ರಸಿದ್ಧ ವರ್ಣಚಿತ್ರಕಾರ ಗಣೇಶ್ ಪೈನೆ (Ganesh Pyne) ನಿಧನ**

ವಿಶ್ವ ಪ್ರಸಿದ್ದಿಗಳಿಸಿದ್ದ ವರ್ಣಚಿತ್ರಕಾರ 76 ವರ್ಷ ಹರೆಯದ ಗಣೇಶ್ ಫೈನೆ ತೀವ್ರ ಹೃದಯಾಘಾತದಿಂದ ಕೋಲ್ಕತ್ತಾದಲ್ಲಿ ನಿಧನರಾದರು. 1937 ರಲ್ಲಿ ಕೊಲ್ಕತ್ತಾದಲ್ಲಿ ಜನಿಸದ ಫೈನೆ ರವರು ವರ್ಣ ಚಿತ್ರಕಲೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

ಗಣೇಶ್ ಫೈನೆ ಬಗ್ಗೆ:

- ಕಲಾವಿದನ ಕಲಾವಿದ ಎಂದೇ ಪ್ರಸಿದ್ದ ಹೊಂದಿದ್ದ ಫೈನೆ ರವರು ತಮ್ಮ ಜೀವನದ ಐವತ್ತು ವರ್ಷಗಳನ್ನು ವರ್ಣಕಲೆಗೆ ಮೀಸಲಾಟ್ಟಿದ್ದರು. ಲಂಡನ್, ನ್ಯೂಯಾರ್ಕ್ ಮತ್ತು ಪ್ಯಾರೀಸ್ ಸೇರಿದಂತೆ ವಿಶ್ವದ ಅನೇಕ ನಗರಗಳಲ್ಲಿ ಅವರ ಕಲೆ ಪ್ರದರ್ಶನಗೊಂಡಿತ್ತು.

- ಅದ್ಭುತ ಕಲೆಗಾರರಾಗಿದ್ದ ಅವರಿಗೆ ವಿವಿಧ ರಾಜ್ಯಗಳ ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಕೇರಳ ಸರ್ಕಾರದ ರಾಜ ರವಿ ವರ್ಮ ಪ್ರಶಸ್ತಿ, 2012 ರಲ್ಲಿ ಭಾರತ ಚೇಂಬರ್ ಆಫ್ ಕಾಮರ್ಸ್ ನೀಡುವ ಜೀವಮಾನ ಸಾಧನೆ ಪ್ರಶಸ್ತಿ ಸೇರಿ ಇತರೆ ಪ್ರಶಸ್ತಿಗಳಿಗೆ ಫೈನೆ ಭಾಜನರಾಗಿದ್ದರು.
- ತಮ್ಮದೇ ಆದ ವಿಶಿಷ್ಟ ಶೈಲಿಯ ವರ್ಣಕಲೆ ಪರಿಣಿತಿ ಹೊಂದಿದ ಅವರನ್ನು ಅಬನಿಂದ್ರನಾಥ್ ಟಾಗೋರ್, ಪಾಲ್ ಕ್ಲೀ ರವರಿಗೆ ಹೋಲಿಸಲಾಗಿತ್ತು.

## ಕ್ಯಾಥೋಲಿಕ್ ಅನುಯಾಯಿಗಳ ನೂತನ ಪೋಪ್ ಆಗಿ ಜಾರ್ಜ್ ಮಾರಿಯೊ ಬರ್ಗೊಗ್ಲಿಯೊ

ಕ್ಯಾಥೋಲಿಕ್ ರೋಮನ್ ಕಾರ್ಡಿನಲ್ ಗಳು ಅರ್ಜೇಂಟೆನಾದ ಜಾರ್ಜ್ ಬರ್ಗೊಗ್ಲಿಯೊ (Jorge Bergoglio) ರವರನ್ನು ನೂತನ ಪೋಪ್ ಆಗಿ ಆಯ್ಕೆಮಾಡಿದ್ದಾರೆ. ಬರ್ಗೊಗ್ಲಿಯೊ ರವರು 16ನೇ ಬೆನೆಡಿಕ್ಟ್ ನ ಉತ್ತರಾಧಿಕಾರಿಯಾಗಿ ಅಧಿಕಾರವಹಿಸಿಕೊಳ್ಳಲ್ಲಿದ್ದಾರೆ.

- 1300 ವರ್ಷಗಳ ನಂತರ ಯುರೋಪಿಯನೇತರ ಪೋಪ್ ಆಗಿ ಬರ್ಗೊಗ್ಲಿಯೊ ರವರು ಈ ಹುದ್ದೆಯನ್ನು ಅಲಂಕರಿಸಲ್ಲಿದ್ದಾರೆ. ಅಲ್ಲದೇ ಈ ಹುದ್ದೆಯನ್ನು ಏರಿದ ದಕ್ಷಿಣಾ ಆಮೆರಿಕಾದ ಮೊದಲ ವ್ಯಕ್ತಿ.
- 13 ನೇ ಶತಮಾನದ ಕ್ರೈಸ್ತ ಧರ್ಮದ ಪ್ರಚಾರಕ ಮತ್ತು ಸಮಾಜ ಸುಧಾರಕರಾದ ಪಾದ್ರಿ ಪ್ರಾಂಸಿಸ್ (Francis) ರವರ ಹೆಸರಲ್ಲಿ ಬರ್ಗೊಗ್ಲಿಯೊ ಹುದ್ದೆಯನ್ನು ಅಲಂಕರಿಸಿದ್ದಾರೆ. ಈ ಹೆಸರಲ್ಲಿ ಹುದ್ದೆಯನ್ನು ಅಲಂಕರಿಸಿರುವವರಲ್ಲಿ ಬರ್ಗೊಗ್ಲಿಯೊ ರವರು ಪ್ರಥಮರು.

ಪೋಪ್ ಆಯ್ಕೆ ಮತ್ತು ಚಿಮ್ಮಣಿ ಹೊಗೆ:

- ಪೋಪ್ ರವರ ಆಯ್ಕೆಯ ಫಲಿತಾಂಶವನ್ನು ಸಿಸ್ಟಿನ್ ಚಾಪೆಲ್ ಚಿಮ್ಮಣಿಯಿಂದ ಹೊರಬರುವ ಹೊಗೆಯ ಬಣ್ಣದ ಮೂಲಕ ನಿರ್ಧರಿಸಲಾಗುತ್ತದೆ. ಚಿಮ್ಮಣಿಯಿಂದ ಹೊರಡುವ ಹೊಗೆ ಬಿಳಿಯ ಬಣ್ಣದಿಂದ ಕೂಡಿದ್ದರೆ ಪೋಪ್ ಆಯ್ಕೆ ಅಂತಿಮವಾಗಿರುವದನ್ನು ಸೂಚಿಸುತ್ತದೆ. ಒಂದು ವೇಳೆ ಚಿಮ್ಮಣಿಯಿಂದ ಕಪ್ಪು ಬಣ್ಣದ ಹೊಗೆ ಬಂದರೆ ಆಯ್ಕೆಯಲ್ಲಿ ಒಮ್ಮತ ಮೂಡದೇ ಅಂತಿಮವಾಗಿಲ್ಲವೆಂಬ ಅರ್ಥವನ್ನು ಸೂಚಿಸುತ್ತದೆ.

## ಕಾಂಗ್ರೆಸ್ ಅಧ್ಯಕ್ಷೆಯಾಗಿ 15 ವರ್ಷ ಪೂರೈಸಿದ ಸೋನಿಯಾ ಗಾಂಧಿ

ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ರವರು ಮಾರ್ಚ್ 13 ರಂದು 15 ವರ್ಷಗಳನ್ನು ಪೂರೈಸಿದರು. ಈ ಮೂಲಕ 127 ವರ್ಷಗಳ ಕಾಂಗ್ರೆಸ್ ಇತಿಹಾಸದಲ್ಲೇ ಇಷ್ಟೊಂದು ದೀರ್ಘ ಕಾಲ ಕಾರ್ಯನಿರ್ವಹಿಸಿದ ಮೊದಲಿಗರೆಂಬ ಹಿರಿಮೆಗೆ ಸೋಜಿಯಾ ರವರು ಪಾತ್ರರಾಗಿದ್ದಾರೆ.

- 1994 ರಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಅಧ್ಯಕ್ಷೆಯಾಗಿ ಸೋನಿಯಾ ಅಧಿಕಾರ ಸ್ವೀಕರಿಸಿದ್ದರು. ತದ ನಂತರ ಸತತ ಮೂರು ಬಾರಿ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

- ಸದ್ಯ ಈಗ ಸೋನಿಯಾ ರವರು ನಾಲ್ಕನೇ ಬಾರಿ ಅಧ್ಯಕ್ಷೆಯಾಗಿದ್ದು, ಅವರ ಅಧ್ಯಕ್ಷಾವಧಿ ಮಾರ್ಚ್ 2015 ಕ್ಕೆ ಕೊನೆಗೊಳ್ಳಲಿದೆ.

ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಬಗ್ಗೆ:

- 1985 ರಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಮೊದಲ ಅಧ್ಯಕ್ಷರು "W. C. ಬ್ಯಾನರ್ಜಿ".
- ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಮೊದಲ ಮಹಿಳಾ ಅಧ್ಯಕ್ಷರು" ಅನಿ ಬೆಸೆಂಟ್".
- ಮೊದಲ ಮುಸ್ಲಿಂ ಅಧ್ಯಕ್ಷರು: ಬಬ್ರುದ್ದೀನ್ ತ್ಯಾಬ್ಜಿ.
- ಮಹಾತ್ಮ ಗಾಂಧಿ 1924 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು.

**ಚೀನಾದ ನೂತನ ಅಧ್ಯಕ್ಷರಾಗಿ ಕ್ಸಿ ಜಿನ್ ಪಿಂಗ್**

ಜನಸಂಖ್ಯೆಯಲ್ಲಿ ವಿಶ್ವದ ಅತಿ ದೊಡ್ಡ ರಾಷ್ಟ್ರವೆನಿಸಿರುವ ಮತ್ತು ವಿಶ್ವದ ಅತಿ ದೊಡ್ಡ ಕಮ್ಯುನಿಷ್ಟ್ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಚೇನಾದ ನೂತನ ಅಧ್ಯಕ್ಷರಾಗಿ ಕ್ಸಿ ಜಿನ್ ಪಿಂಗ್ ರವರು ಆಯ್ಕೆಯಾಗಿದ್ದಾರೆ. ಕ್ಸಿ ರವರು ಕಳೆದ ನವೆಂಬರ್ ತಿಂಗಳಲ್ಲಿ ಕಮ್ಯೂನಿಷ್ಟ್ ಪಕ್ಷದ ಕಾರ್ಯದರ್ಶಿಯಾಗಿ ಅಧಿಕಾರವಹಿಸಿಕೊಂಡಿದ್ದರು. ಅಂದೇ ಕ್ಸಿ ರವರು ಚೇನಾದ ಮುಂದಿನ ಅಧ್ಯಕ್ಷರಾಗಲಿದ್ದಾರೆ ಎಂದು ನಿರೀಕ್ಷಿಸಲಾಗಿತ್ತು. ಪ್ರತಿ ಹತ್ತು ವರ್ಷಗಳಿಗೊಮ್ಮೆ ಚೇನಾದಲ್ಲಿ ಅಧಿಕಾರ ಹಸ್ತಾಂತರ ನಡೆಯುತ್ತದೆ.

- ಚೇನಾದ ಅಧ್ಯಕ್ಷರಾಗಿದ್ದ ಹೂ ಜಿಂಟಾವೋ ಮತ್ತು ಪ್ರಧಾನಿ ವೆನ್ ಜಿಯಾಬ್ ನಿವೃತ್ತರಾದ ಹಿನ್ನೆಲೆಯಲ್ಲಿ ಕ್ಸಿ ರವರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸಂಸತ್ ನಲ್ಲಿ ನಡೆದ ಚುನಾವಣೆಯಲ್ಲಿ 59 ವರ್ಷ ವಯಸ್ಸಿನ ಕ್ಸಿ ರವರ ಪರ 2,952 ಮತಗಳು ಬಂದರೆ ಕೇವಲ ಒಂದು ಮತ ವಿರೋಧವಾಗಿ ಬಂದಿದೆ. ಕ್ಸಿ ರವರು ಚೇನಾದ ಸೇನಾ ಮುಖ್ಯಸ್ಥರಾಗಿ ಸಹ ಕಾರ್ಯನಿರ್ವಹಿಸಲಿದ್ದಾರೆ.
- ಇದೇ ವೇಳೆ ಚೇನಾದ ಉಪಾಧ್ಯಕ್ಷರಾಗಿ "ಲೀ ಯುವಾನ್ ಚಾವೋ" ಆಯ್ಕೆಯಾದರೆ, ಲಿ ಕೆಯಾಂಗ್ (Li Kequing) ಪ್ರಧಾನ ಮಂತ್ರಿಯಾಗಿ ನೇಮಕಗೊಂಡಿದ್ದಾರೆ.

**ನೇಪಾಳದ ಮುಖ್ಯ ನ್ಯಾಯಾಧೀಶ ಕಿಲ್ ರಾಜ್ ರೆಗ್ಮಿ (Khil Raj Regmi) ಪ್ರಧಾನ ಮಂತ್ರಿಯಾಗಿ ನೇಮಕ**

ನೇಪಾಳದ ಮುಖ್ಯ ನ್ಯಾಯಾಧೀಶರಾದ ಕಿಲ್ ರಾಜ್ ರೆಗ್ಮಿ ರವರನ್ನು ನೇಪಾಳದ ಹಂಗಾಮಿ ಪ್ರಧಾನ ಮಂತ್ರಿಯಾಗಿ ನೇಮಿಸಲಾಗಿದೆ. ಈ ಮೂಲಕ ಇದೇ ಮೊದಲ ಬಾರಿಗೆ ನೇಪಾಳದಲ್ಲಿ ಅಧಿಕಾರದಲ್ಲಿರುವ ಮುಖ್ಯ ನ್ಯಾಯಾಧೀಶರೊಬ್ಬರು ಪ್ರಧಾನ ಮಂತ್ರಿ ಹುದ್ದೆಯನ್ನು ಅಲಂಕರಿಸಿದಂತಾಗಿದೆ.

- ಬಾಬುರಾಂ ಭಟ್ಟರಾಯ್ ರವರಿಂದ ಅಧಿಕಾರವಹಿಸಿಕೊಂಡ ರೆಗ್ಮಿ ರವರು ಹಂಗಾಮಿ ಸರ್ಕಾರದ ಮುಖ್ಯಸ್ಥರಾಗಿ ಚುನಾವಣೆ ನಡೆಯುವ ತನಕ ಕಾರ್ಯನಿರ್ವಹಿಸಲ್ಲಿದ್ದಾರೆ. ಇವರ ಜೊತೆಗೆ ಮಾಧವ್ ಗಿಮಿರೆ ರವರು ಗೃಹ ಮಂತ್ರಿಯಾಗಿ ಮತ್ತು ಹರಿ ಪ್ರಸಾದ್ ನುಪನೆ ರವರು ಕಾನೂನು ಸಚಿವರಾಗಿ ಅಧಿಕಾರ ವಹಿಸಿಕೊಂಡರು.

ನೇಪಾಳದಲ್ಲಿ ಜೂನ್ 21, 2013 ರಲ್ಲಿ ಚುನಾವಣೆ ನಡೆಯಲಿದೆ. ಆ ಬಳಿಕ ರೆಗ್ಮಿ ರವರು ತಮ್ಮ ಮೂಲ ಹುದ್ದೆಗೆ ಹಿಂತಿರುಗಲಿದ್ದಾರೆ.

**ರೆಡ್ಡಿ ಲ್ಯಾಬೋರೆಟರಿಸ್ ಸಂಸ್ಥಾಪಕ ಅಂಜಿ ರೆಡ್ಡಿ ಇನ್ನಿಲ್ಲ**

ಹೈದ್ರಾಬಾದ್ ಮೂಲದ ಔಷಧ ಕಂಪನಿ ರೆಡ್ಡಿ ಲ್ಯಾಬೋರೇಟರಿಸ್ ನ ಸಂಸ್ಥಾಪಕ ಮತ್ತು ಅಧ್ಯಕ್ಷರಾಗಿದ್ದ "ಕಲ್ಲಂ ಅಂಜಿ ರೆಡ್ಡಿ" ರವರು ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಸುಮಾರು 1.39 ಬಿಲಿಯನ್ ಡಾಲರ್ ಆಸ್ತಿಯ ಒಡೆತನವನ್ನು ಹೊಂದಿದ್ದ ರೆಡ್ಡಿರವರು ಔಷಧ ವಲಯಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದರು.

- ಜಾಗತಿಕ ಔಷಧಿ ಮಾರುಕಟ್ಟೆಯಲ್ಲಿ ಭಾರತ ಸ್ಪರ್ಧಿಸಲು ರೆಡ್ಡಿ ಲ್ಯಾಬೋರೇಟರಿಸ್ ನ ಶ್ರಮ ಬಹಳಷ್ಟಿದೆ. ಅಲ್ಲದೇ ಜನ ಸಾಮಾನ್ಯರಿಗೆ ಕೈಗೆಟುಕುವ ಔಷಧಿಗಳನ್ನು ಉತ್ಪಾದಿಸುವಲ್ಲಿ ಈ ಸಂಸ್ಥೆ ಗಣನೀಯ ಕೊಡುಗೆ ನೀಡಿದೆ.
- ಯಶಸ್ವಿ ಉದ್ಯಮಿ ಜೊತೆಗೆ ರೆಡ್ಡಿಯವರು ಸಮಾಜ ಸೇವೆಯಲ್ಲೂ ಗಮನ ಸೆಳೆದಿದ್ದರು. ರೆಡ್ಡಿ ಫೌಂಡೇಶನ್, ನಾಂದಿ ಫೌಂಡೇಶನ್ ಮತ್ತು NICE (Neo-Natal Intensive Care and Emergencies) ಸ್ಥಾಪಿಸುವ ಮೂಲಕ ಜನ ಸಾಮಾನ್ಯರಿಗೆ ಹತ್ತಿರವಾಗಿದ್ದರು. NICE (Neo-Natal Intensive Care and Emergencies) ಆಗ ತಾನೇ ಜನಿಸಿದ ಮಕ್ಕಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದು ಏಷ್ಯಾದಲ್ಲಿ ಇಂತಹ ಸೇವೆ ಬೇರೆಯಲ್ಲೂ ಇಲ್ಲ ಎಂಬುದು ವಿಶೇಷ.

ಅಂಜಿ ರೆಡ್ಡಿಯವರ ಬಗ್ಗೆ:

- 1940 ರಲ್ಲಿ ಗುಂಟೂರು ಜಿಲ್ಲೆಯ ತಾಡೆಪಲ್ಲಿಯಲ್ಲಿ ಜನಿಸಿದ ರೆಡ್ಡಿಯವರು ಎ.ಸಿ. ಕಾಲೇಜ್, ಗುಂಟೂರಿನಿಂದ 1958 ರಲ್ಲಿ ವಿಜ್ಞಾನದಲ್ಲಿ ಪದವಿಯನ್ನು ಪಡೆದರು. ನಂತರ ಬಾಂಬೆ ವಿವಿ ಯಿಂದ ಬಿ.ಎಸ್ಸಿ ಇನ್ ಪಾರ್ಮಸಿಟಿಕಲ್ ಮತ್ತು ಪೈನ್ ಕೆಮಿಕಲ್ ನಲ್ಲಿ ಪದವಿ ಪಡೆದರು. 1969 ರಲ್ಲಿ ಪುಣೆಯ ನ್ಯಾಷನಲ್ ಕೆಮಿಕಲ್ ಲ್ಯಾಬೋರೇಟರಿ ಯಿಂದ ಕೆಮಿಕಲ್ ಎಂಜನಿಯರಿಂಗ್ ನಲ್ಲಿ ಡಾಕ್ಟರೇಟ್ ಪದವಿಯನ್ನು ಸಹ ಪಡೆದುಕೊಂಡರು.
- 1984 ರಲ್ಲಿ ಡಾ.ರೆಡ್ಡಿ ಲ್ಯಾಬೋರೇಟರಿಸ್ ಸಂಸ್ಥೆಯನ್ನು ರೂ.25 ಲಕ್ಷ ಬಂಡವಾಳವನ್ನು ಹೂಡುವ ಮೂಲಕ ಆರಂಭಿಸಿ ಔಷಧ ವಲಯದಲ್ಲಿ ಕ್ರಾಂತಿಯನ್ನು ಸೃಷ್ಟಿಸಿದರು.
- ಆಂಧ್ರಪ್ರದೇಶದ ಕೈಗಾರಿಕಾ ಅಭಿವೃದ್ಧಿ ಕಾರ್ಪೋರೇಶನ್ ನ ಅಧ್ಯಕ್ಷರಾಗಿದ್ದ ರೆಡ್ಡಿಯವರು, ಪ್ರಧಾನ ಮಂತ್ರಿಗಳ ವ್ಯಾಪಾರ ಮತ್ತು ಉದ್ಯಮ ಕುರಿತಾದ ಸಲಹಾ ಮಂಡಳಿಯ ಸದಸ್ಯರೂ ಆಗಿದ್ದರು.
- ರೆಡ್ಡಿಯವರಿಗೆ 2011 ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಕೆನೆಚಿ ಅಯುಕಾವ: ಮಾರುತಿ ಸುಜುಕಿ ಕಂಪನಿಯ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ**

ದೇಶದ ಅತಿ ದೊಡ್ಡ ಕಾರು ತಯಾರಿಕಾ ಸಂಸ್ಥೆ ಮಾರುತಿ ಸುಜುಕಿ ಕಂಪನಿಯ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿ (CEO) ಕೆನೆಚಿ ಅಯುಕಾವ (Kenichi Ayukava) ರವರು ನೇಮಕಗೊಂಡಿದ್ದಾರೆ. ಏಪ್ರಿಲ್ 1, 2013 ರಿಂದ ಅಧಿಕೃತವಾಗಿ ಅಯುಕಾವ ರವರು ಅಧಿಕಾರವಹಿಸಿಕೊಳ್ಳಲಿದ್ದಾರೆ.

- ಹಾಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿರುವ "ನಕನಿಶಿ (Nakanishi) ರವರ ಉತ್ತರಾಧಿಕಾರಿಯಾಗಿ ಅಯುಕಾವ ರವರು ಅಧಿಕಾರವಹಿಸಿಕೊಳ್ಳಲಿದ್ದಾರೆ. ಮುಂದಿನ ತಿಂಗಳಲ್ಲಿ "ನಕನಿಶಿ" ರವರು ನಿವೃತ್ತಿ ಹೊಂದುವ ಕಾರಣ ಈ ಸ್ಥಾನ ತೆರವಾಗಲಿದೆ.

- 2010 ರಲ್ಲಿ ಮೂರು ವರ್ಷಗಳ ಕಾಲದ ವರೆಗೆ ನಕನಿಶಿ ರವರು ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿ ಅಧಿಕಾರವಹಿಸಿಕೊಂಡಿದ್ದರು.

**<u>“ಟೈಮ್ಸ್ ಇಂಟರ್ ನ್ಯಾಷನಲ್” ಸಂಪಾದಕರಾಗಿ “ಬಾಬಿ ಘೋಷ್”</u>**

ಭಾರತೀಯ ಮೂಲದ ಪ್ರಸಿದ್ದ ಪತ್ರಕರ್ತ ಬಾಬಿ ಘೋಷ್ ರವರು ಟೈಮ್ಸ್ ಇಂಟರ್ ನ್ಯಾಷನಲ್ ನ ಸಂಪಾದಕರಾಗಿ ನೇಮಕಗೊಂಡಿದ್ದಾರೆ. ಟೈಮ್ಸ್ ನ ಸಂಪಾದಕರಾಗಿ ನೇಮಕಗೊಂಡಿರುವ ಮೊದಲ ಆಮೆರಿಕನ್ನೇತರ ಅಂತರರಾಷ್ಟ್ರೀಯ ಸಂಪಾದಕ ಬಾಬಿ ಘೋಷ್.

- ಬಾಬಿ ಘೋಷ್ ರವರು 1998 ರಲ್ಲಿ ಟೈಮ್ಸ್ ನಿಯತಕಾಲಿಕೆಗೆ ಸೇರ್ಪಡೆಗೊಂಡರು. ಏಷ್ಯಾ ಆವೃತ್ತಿಯ ಹಿರಿಯ ಸಂಪಾದಕರಾಗಿ ಅವರು ಸಲ್ಲಿಸಿರುವ ಸೇವೆ ಅದ್ಭುತ.
- 2007 ರಲ್ಲಿ ಯುರೋಪಿಯನ್ ಆವೃತ್ತಿಯ ಹಿರಿಯ ಸಂಪಾದಕರಾಗಿ ನೇಮಕಗೊಂಡ ಕಾರಣ ಲಂಡನ್ ಗೆ ತೆರಳಿದರು. ಇರಾಕ್ ಯುದ್ದದಲ್ಲಿ ಬಾಬಿ ಘೋಷ್ ರವರು ಬಾಗ್ದಾದ್ ಬ್ಯೂರೋ ದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.

**<u>ಗೋವಾ ಲೋಕಾಯುಕ್ತರಾಗಿ ನಿವೃತ್ತ ನ್ಯಾ. ಸುದರ್ಶನ್ ರೆಡ್ಡಿ ನೇಮಕ</u>**

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಸುದರ್ಶನ್ ರೆಡ್ಡಿರವರು ಗೋವಾದ ನೂತನ ಮತ್ತು ಪ್ರಥಮ ಲೋಕಾಯುಕ್ತರಾಗಿ ನೇಮಕಗೊಂಡರು. ವಿರೋಧ ಪಕ್ಷಗಳ ವಿರೋಧ ನಡುವೆಯು ರೆಡ್ಡಿ ರವರಿಗೆ ಗೋವಾ ರಾಜ್ಯಪಾಲ W B ವಾಂಚೂ ರವರು ಮುಖ್ಯಮಂತ್ರಿ ಮನೋಹರ್ ಪಣ್ಣಿಕರ್ ರವರ ಸಮ್ಮುಖದಲ್ಲಿ ಪ್ರಮಾಣ ವಚನ ಭೋದಿಸಿದರು.

ಸುದರ್ಶನ್ ರೆಡ್ಡಿಯವರು ಮುಖ್ಯಮಂತ್ರಿ ಪಣ್ಣಿಕರ್ ರವರ ಕೈಗೊಂಬೆ ಎಂದು ವಿರೋಧ ಪಕ್ಷದವರು ಅವರ ನೇಮಕಾತಿಯನ್ನು ವಿರೋಧಿಸಿದ್ದರು. ಅಲ್ಲದೇ ವಿರೋಧ ಪಕ್ಷದ ಶಾಸಕರ ಗೈರು ಹಾಜರಿ ಸಮಾರಂಭದಲ್ಲಿ ಎದ್ದು ಕಾಣಿಸುತಿತ್ತು.

**<u>ಬಾಂಗ್ಲದೇಶ ಅಧ್ಯಕ್ಷ ಝಿಲ್ಲೂರು ರಹಮಾನ್ ನಿಧನ</u>**

ಬಾಂಗ್ಲದೇಶ ಅಧ್ಯಕ್ಷರಾದ ಮಹಮ್ಮದ್ ಝಿಲ್ಲೂರು ರಹಮಾನ್ (85) ರವರು ಮಾರ್ಚ್ 20 ರಂದು ನಿಧನರಾದರು. ಕಿಡ್ನಿ ಮತ್ತು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ರಹಮಾನ್ ರವರು ಚಿಕಿತ್ಸೆ ಫಲಕಾರಿಯಾಗದೆ ಸಿಂಗಾಪುರದ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ರಹಮಾನ್ ರವರ ಬಗ್ಗೆ:

- ಬಾಂಗ್ಲದೇಶದ ಹಿರಿಯ ರಾಜಕಾರಣಿ ಎನಿಸಿದ್ದ ರಹಮಾನ್ ರವರು ವೃತ್ತಿಯಲ್ಲಿ ವಕೀಲರಾಗಿದ್ದರು. 2008 ರಲ್ಲಿ ನಡೆದ ಚುನಾವಣೆಯಲ್ಲಿ ಅವಾಮೀ ಲೀಗ್ ಪಕ್ಷ ಅದ್ಭುತ ಗೆಲುವು ಸಾಧಿಸಿದ ನಂತರ 2009 ರಲ್ಲಿ ಬಾಂಗ್ಲ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

- ಬಾಂಗ್ಲ ಪ್ರಧಾನಿ ಶೇಕ್ ಹಸೀನಾ ರವರ ತಂದೆ ಶೇಕ್ ಮುಜಿಬುರ್ ರಹಮಾನ್ ರವರಿಗೆ ಆತ್ಮೀಯರಾಗಿದ್ದರು. 1975 ರ ದಂಗೆಯ ನಂತರ ಶೇಕ್ ಮುಜಿಬರ್ ರಹಮಾನ್ ಮತ್ತು ಅವರ ಕುಟುಂಬ ಸದಸ್ಯರು ಹತ್ಯೆಗೀಡಾದ ಬಳಿಕ ರಹಮಾನ್ ಅವಾಮೀ ಪಕ್ಷವನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಮೂರು ದಿನ ಶೋಕಾಚರಣೆ:

- ಬಾಂಗ್ಲ ಅಧ್ಯಕ್ಷ ಝಿಲ್ಲೂರು ರಹಮಾನ್ ರವರ ನಿಧನಕ್ಕೆ ಸಂತಾಪ ಸೂಚಿಸಲು ಬಾಂಗ್ಲದ್ಯಾಂತ ಮೂರು ದಿನಗಳ ಕಾಲ ಶೋಕಾಚರಣೆ ಆಚರಿಸಲಾಗುವುದು.

ಹಂಗಾಮಿ ರಾಷ್ಟ್ರಧ್ಯಕ್ಷರಾಗಿ ಅಬ್ದುಲ್ ಹಮೀದ್:

- ಬಾಂಗ್ಲ ಸಂವಿಧಾನದ ಅನ್ವಯ ಸಂಸತ್ತಿವ ಸ್ಪೀಕರ್ ಅಬ್ದುಲ್ ಹಮೀದ್ ರವರು ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

**<u>ಚಿನುವಾ ಅಚಿಬೆ: ನೈಜೀರಿಯಾದ ಪ್ರಸಿದ್ಧ ಲೇಖಕ ವಿಧಿವಶ</u>**

ವಿಶ್ವ ಮನ್ನಣೆಗಳಿಸಿದ್ದ ನೈಜೀರಿಯಾದ ಪ್ರಸಿದ್ದ ಲೇಖಕ, ಪ್ರೊಫೆಸರ್ ಮತ್ತು ರಾಜತಾಂತ್ರಿಕ ಚಿನೂವಾ ಅಚಿಬೆ (Chinua)ರವರು ಅನಾರೋಗ್ಯದ ಕಾರಣ ವಿಧಿವಶರಾದರು. ವಿಶ್ವ ಸಾಹಿತ್ಯದಲ್ಲಿ ಆಫ್ರಿಕಾದ ಸಾಹಿತ್ಯಕ್ಕೆ ವಿಶೇಷ ಮನ್ನಣೆಗಳಿಸಿಕೊಟ್ಟ ಕೀರ್ತಿ ಅಚಿಬೆ ರವರಿಗೆ ಸಲ್ಲುತ್ತದೆ.

- ಸಾಹಿತ್ಯ ಮಾತ್ರವಲ್ಲದೇ ನೈಜೀರಿಯಾದ ಪ್ರಜಾಪ್ರಭುತ್ವ ಸ್ಥಾಪನೆಗೂ ಅಚಿಬೆ ರವರು ಪ್ರಮುಖ ಪಾತ್ರವಹಿಸಿದ್ದರು. ತಮ್ಮ ಸಾಹಿತ್ಯ ಶಕ್ತಿಯ ಮೂಲಕವೇ ಆಫ್ರಿಕಾದಲ್ಲಿ ರಾಜಕೀಯ ಕ್ರಾಂತಿಗೆ ಮುನ್ನಡೆ ಬರೆದವರು ಅಚಿಬೆ.
- ತಮ್ಮ ಜೀವನದ ಬಹುಪಾಲನ್ನು ಆಮೆರಿಕಾದಲ್ಲಿ ಕಳೆದರೂ ಆಫ್ರಿಕಾದ ಹಿತಾಸಕ್ತಿ ಕಾಯುವಲ್ಲಿ ಅವರು ಎಂದು ಹಿಂದೆ ಬಿದ್ದವರಲ್ಲ. 1967 ರಲ್ಲಿ ಬಿಯಾಪ್ರನ್ (Biafran) ನೈಜೀರಿಯಾದಿಂದ ಬೇರ್ಪಡೆಗೊಂಡಾಗ ಅಚಿಬೆ ರವರು ಬಿಯಾಪ್ರನ್ ಬೆಂಬಲಕ್ಕೆ ನಿಂತು ಹೋರಾಟ ನಡೆಸಿದರು. ತದ ನಂತರ ರಾಜಕೀಯ ಪ್ರವೇಶ ಮಾಡಿದ ಅವರು ಭ್ರಷ್ಟಚಾರದಿಂದ ಬೇಸತ್ತು ರಾಜಕೀಯದಿಂದ ದೂರು ಉಳಿದು ಆಮೆರಿಕಾದಲ್ಲಿ ನೆಲೆಸಿದರು.
- 1958 ರಲ್ಲಿ ಪ್ರಕಟಗೊಂಡ ಅವರ "ಥಿಂಗ್ಸ್ ಫಾಲ್ ಅಪಾರ್ಟ್ (Things Fall Apart)" ಕಾದಂಬರಿಯು ಅಚಿಬೆ ರವರನ್ನು ವಿಶ್ವದಲ್ಲೆಡೆ ಗುರುತಿಸುವಂತೆ ಮಾಡಿತು. 20 ನೇ ಶತಮಾನದ ಶ್ರೇಷ್ಠ ಕಾದಂಬರಿ ಎನಿಸುವುದರ ಜತೆಗೆ 8 ಮಿಲಿಯನ್ ಪ್ರತಿಗಳು ಮಾರಾಟವಾಗುವು ಮೂಲಕ ದಾಖಲೆ ಬರೆದಿದೆ.

ಅಚಿಬೆ ರವರ ಪ್ರಮುಖ ಕಾದಂಬರಿಗಳು:

- "ಥಿಂಗ್ಸ್ ಫಾಲ್ ಅಫಾರ್ಟ್ (1958)
- "ನೊ ಲಾಂಗರ್ ಅಟ್ ಈಸೆ" (1960)
- ಅರೋ ಆಫ್ ದಿ ಗಾಡ್" (1964)
- "ಎ ಮ್ಯಾನ್ ಆಫ್ ದಿ ಪೀಫಲ್" (1966)

- "ಅಂಥಿಲ್ಸ್ ಆಫ್ ದಿ ಸವನ್ನ" (1987)

ಪ್ರಶಸ್ತಿಗಳು:

- "ಪೀಸ್ ಪ್ರೈಜ್ ಆಫ್ ದಿ ಜರ್ಮನ್ ಬುಕ್ ಟ್ರೇಡ್" ಕಾವನ್ ವೆಲ್ತ್ ಪ್ರೈಜ್" 2007 ರಲ್ಲಿ ಮ್ಯಾನ್ ಬುಕರ್ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಪ್ರಸಿದ್ಧ ಸಾಹಿತಿ ಬೆಳಗೆರೆ ಕೃಷ್ಣಶಾಸ್ತ್ರಿ ವಿಧಿವಶ**

ಹಿರಿಯ ಸಾಹಿತಿ ಮತ್ತು ಜನ ಸೇವಕ ಕೃಷ್ಣಶಾಸ್ತ್ರಿರವರು ವಿಧಿವಶರಾದರು. ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದ ಕೃಷ್ಣಶಾಸ್ತ್ರಿಗಳ ಕಣ್ಮರೆಯಿಂದ ಕನ್ನಡ ಸಾಹಿತ್ಯ ಅಪರೂಪ ಸಾಹಿತಿಯನ್ನು ಕಳೆದುಕೊಂಡಂತಾಗಿದೆ.

- ಮೋಕ್ಷಗುಂಡಂ ಅನ್ನಪೂರ್ಣಮ್ಮ ಮತ್ತು ಚಂದ್ರಶೇಖರ ಶಾಸ್ತ್ರಿಗಳ ಮಗನಾದ ಕೃಷ್ಣಶಾಸ್ತ್ರಿಗಳು ತಮ್ಮ ಕುಟುಂಬಕ್ಕೆ ಅಂಟಿಕೊಂಡಿದ್ದ ಸಾಹಿತ್ಯ ಅಭಿರುಚಿಯನ್ನು ಪೋಷಿಸಿದ್ದರು.
- ಇವರು ರಚಿಸಿರುವ "ಸಾಹಿತಿಗಳ ಸ್ಮೃತಿ" ಕೃತಿ ನಾಟಕ, ಕವನ ಸಂಕಲನ, ಸಾಹಿತ್ಯ ಲೋಕದ ದಿಗ್ಗಜರ ಒಡನಾಟ ಸುಮಧುರ ಘಳಿಗೆಯನ್ನು ಹೊಂದಿದೆ. ಇವರು "ಯೇಗ್ದಾಗೆಲ್ಲಾ ಐತೆ" ಅಪರೂಪದ ಕೃತಿ.
- ಇವರು ರಚಸಿದ "ಹಳ್ಳಿ ಚಿತ್ರ" ನಾಟಕಕ್ಕೆ ಕೇಂದ್ರ ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಹ ಲಭಿಸಿದೆ.
- ಇವರ ಶಿಕ್ಷಣ ಸೇವೆಗೆ ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ ಮತ್ತು ಇವರು ಅಮೂಲ್ಯವಾದ ಸಮಾಜ ಸೇವೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಅಂಥೋನಿ ಲೇವಿಸ್ (Anthony Lewis) ನಿಧನ**

ಎರಡು ಬಾರಿ ಪುಲಿಟ್ಜರ್ (Pulitzer) ಪ್ರಶಸ್ತಿಗೆ ಭಾಜನರಾಗಿದ್ದ, ನ್ಯೂಯಾರ್ಕ್ಸ್ ಟೈಮ್ಸ್ ಪತ್ರಿಕೆಯ ಅಂಕಣಕಾರ ಅಂಥೋನಿ ಲೇವಿಸ್ ರವರು ತಮ್ಮ 85 ನೇ ವಯಸ್ಸಿನಲ್ಲಿ ನಿಧನರಾದರು. ಹೃದಯ ಮತ್ತು ಮೂತ್ರ ಪಿಂಡಗಳ ಸಮಸ್ಯೆಯಿಂದ ಬಳಲುತಿದ್ದ ಅವರು ಚಿಕಿತ್ಸೆ ಫಲಕಾರಿಯಾಗಿದೆ ಕೊನೆಯುಸಿರೆಳೆದರು.

- ಅಂಥೋನಿ ಲೇವಿಸ್ ರವರು ನ್ಯೂಯಾರ್ಕ್ ಟೈಮ್ಸ್ ನಲ್ಲಿ ಅಂಕಣಕಾರರಾಗಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ವಾಕ್ ಸ್ವಾಂತಂತ್ರ್ಯ ಮತ್ತು ಮಾನವ ಹಕ್ಕುಗಳ ಬೆಂಬಲಕ್ಕೆ ನಿಂತು ದೀರ್ಘಕಾಲ ಹೋರಾಟ ನಡೆಸುವಲ್ಲೂ ಲೇವಿಸ್ ರವರು ಮುಂಚೂಣಿಯಲ್ಲಿದ್ದರು.
- ಆಮೆರಿಕಾ ಸರ್ಕಾರದ ಲಾಯಲ್ಟಿ ಕಾರ್ಯಕ್ರಮದ ಬಗ್ಗೆ ವಿಶ್ಲೇಷಿಸಿದಕ್ಕಾಗಿ 1955 ರಲ್ಲಿ ಮೊದಲ ಬಾರಿ ಪುಲಿಟ್ಜರ್ ಪ್ರಶಸ್ತಿಗೆ ಭಾಜನರಾಗಿದ್ದರು. ನಂತರ 1963 ರಲ್ಲಿ ಆಮೆರಿಕಾ ಸುಪ್ರೀಂ ಕೋರ್ಟ್ ನ ಬಗ್ಗೆ ಬರೆದ ಅಂಕಣಕ್ಕಾಗಿ ಎರಡನೇ ಬಾರಿ ಪುಲಿಟ್ಜರ್ ಪ್ರಶಸ್ತಿ ಅವರಿಗೆ ಲಭಿಸಿತ್ತು.
- ಕೇವಲ ಪತ್ರಕರ್ತನಲ್ಲದೇ ಲೇವಿಸ್ ರವರು ಲೇಖಕರು ಆಗಿದ್ದರು. ಲೇಖಕರಾಗಿ ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ.

ಪುಲಿಟ್ಜರ್ ಪ್ರಶಸ್ತಿ:

- ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತಾ ಕ್ಷೇತ್ರದಲ್ಲಿ ವಿಶಿಷ್ಠ ಸಾಧನೆ ಮಾಡಿದವರಿಗೆ ಆಮೆರಿಕಾ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡುತ್ತಿದೆ. ವಾಲ್ ಆಫ್ ಆಮೆರಿಕಾ ಪತ್ರಿಕೆಯ ಸಂಪಾದಕರಾದ ಜೋಸೆಫ್ ಪುಲಿಟ್ಜರ್ ರವರು ಈ ಪ್ರಶಸ್ತಿಯನ್ನು 1917 ರಲ್ಲಿ ಸ್ಥಾಪಿಸಿದರು.
- ಪ್ರತಿ ವರ್ಷ ಈ ಪ್ರಶಸ್ತಿಯನ್ನು 21 ವರ್ಗಗಳಿಗೆ ನೀಡಲಾಗುತ್ತಿದೆ. ಪ್ರಶಸ್ತಿಯು 10000 ಯು.ಎಸ್ ಡಾಲರ್ ನಗದನ್ನು ಒಳಗೊಂಡಿದೆ.

**ಇಂಡೋ-ರಷ್ಯಾ ವೈಜ್ಞಾನಿಕ ಸಹಕಾರ ರೂವಾರಿ ಮಾರ್ಚುಕ್ (Marchuk) ನಿಧನ**

ಭಾರತ ಮತ್ತು ರಷ್ಯಾ ನಡುವೆ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಭದ್ರ ಬುನಾದಿಯಾಕಲು ಅಪಾರ ಶ್ರಮವಹಿಸಿದ್ದ ರಷ್ಯಾದ ಸಂಪ್ರದಾಯವಾದಿ "ಗುರೆ ಮಾರ್ಚುಕ್" ರವರು ಮಾಸ್ಕೋದಲ್ಲಿ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು. ಮಾರ್ಚುಕ್ ರವರು ರಷ್ಯಾದ ಪ್ರಸಿದ್ದ ಭೌತವಿಜ್ಞಾನಿ ಮತ್ತು ಗಣಿತಶಾಸ್ತ್ರಜ್ಞ ಎನಿಸಿದ್ದರು.

- 1987 ರಲ್ಲಿ ಭಾರತದ ಪ್ರಧಾನಿ ರಾಜೀವ್ ಗಾಂಧಿ ಮತ್ತು ರಷ್ಯಾ ನಾಯಕ ಮೈಕಲ್ ಗೋರ್ಬಚೆವ್ ನೇತೃತ್ವದಲ್ಲಿ ಸ್ಥಾಪಿಸಲಾದ "ಇಂಟಿಗ್ರೇಟೆಡ್ ಲಾಂಗ್ ಟರ್ಮ್ ಪ್ರೋಗ್ರಾಂ (ILTP) ಆಫ್ ಕೋಆಫರೇಷನ್ ಇನ್ ಸೈನ್ಸ್ ಅಂಡ್ ಟೆಕ್ನಾಲಜಿ" ನಿರ್ಮಾಣದ ರೂವಾರಿ ಮಾರ್ಚುಕ್ ಆಗಿದ್ದರು.
- ಮಾರ್ಚುಕ್ ರವರು ILTP ಯ ಉಪಾಧ್ಯಕ್ಷರಾಗಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಭಾರತದ ಖ್ಯಾತ ವಿಜ್ಞಾನಿ ಸಿಎನ್ಆರ್ ರಾವ್ ಜೊತೆಗೂಡಿ ಹೇಲ್ತ್ ಕೇರ್, ಮಾಹಿತಿ ತಂತ್ರ ಜ್ಞಾನ ಮತ್ತು ಬಯೋಟೆಕ್ನಾಲಜಿ ಕ್ಷೇತ್ರಗಳಲ್ಲಿ ಅನೇಕ ಸಂಶೋಧನೆಗಳನ್ನು ಕೈಗೊಂಡಿದ್ದರು. ಮಾರ್ಚುಕ್ ರವರು "ರಾಷ್ಟ್ರೀಯ ವಿಜ್ಞಾನ ಅಕಾಡೆಮಿ"ಯ ಗೌರವ ಸದಸ್ಯರೂ ಆಗಿದ್ದರು.
- ಭಾರತದ ಪರ ಅಪಾರ ಒಲವನ್ನು ಹೊಂದಿದ್ದ ಮಾರ್ಚುಕ್ ರವರ ಸೇವೆಯನ್ನು ಗೌರವಿಸುವ ಸಲುವಾಗಿ ಭಾರತ ಸರ್ಕಾರ 2002 ರಲ್ಲಿ ಅವರಿಗೆ "ಪದ್ಮ ಭೂಷಣ" ಪ್ರಶಸ್ತಿಯನ್ನು ನೀಡಿತ್ತು.

**ಆಮೆರಿಕಾ ರಹಸ್ಯ ಸೇವಾ ವಿಭಾಗದ ಮೊದಲ ಮಹಿಳಾ ನಿರ್ದೇಶಕಿಯಾಗಿ "ಜೂಲಿಯಾ"**

ಆಮೆರಿಕಾ ರಹಸ್ಯ ಸೇವಾ(United States Secret Service (USSS)) ವಿಭಾಗದ ನಿರ್ದೇಶಕಿಯಾಗಿ "ಜೂಲಿಯಾ ಎ.ಪಿಯರ್ಸನ್" ರವರನ್ನು ಬರಾಕ್ ಒಬಾಮ ರವರು ನೇಮಕಮಾಡಿದ್ದಾರೆ. ಇದೇ ಮೊದಲ ಬಾರಿಗೆ ರಹಸ್ಯ ಸೇವಾ ವಿಭಾಗಕ್ಕೆ ಮಹಿಳೆಯನ್ನು ನಿರ್ದೇಶಕಿಯಾಗಿ ನೇಮಕಮಾಡಲಾಗಿದೆ. ಬೇಹುಗಾರಿಕೆ ವೃತ್ತಿಯಲ್ಲಿ ಅನುಭವ ಹೊಂದಿರುವ "ಜೂಲಿಯಾ" ರವರು ರಹಸ್ಯ ಸೇವಾ ವಿಭಾಗದ 23 ನೇ ನಿರ್ದೇಶಕ(ಕಿ) ಆಗಿದ್ದಾರೆ.

- ಜೂಲಿಯಾ ರವರು ಪೋಲಿಸ್ ಅಧಿಕಾರಿಯಾಗಿ ಒರ್ಲಾಂಡೋ ಪೋಲಿಸ್ ಇಲಾಖೆಯಲ್ಲಿ 1980 ರಿಂದ 1983 ವರೆಗೆ ಸೇವೆ ಸಲ್ಲಿಸಿದ್ದರು.

- ಆಮೆರಿಕಾದ ರಹಸ್ಯ ಸೇವಾ ವಿಭಾಗದಲ್ಲಿ 30 ವರ್ಷಗಳ ಅನುಭವವನ್ನು ಹೊಂದಿರುವ ಅವರು 2008 ರಲ್ಲಿ USSR ನ ಮಾನವ ಸಂಪನ್ಮೂಲ ಮತ್ತು ತರಭೇತಿ ವಿಭಾಗದ ಸಹಾಯಕ ನಿರ್ದೇಶಕಿಯಾಗಿ ಬಡ್ತಿ ಹೊಂದಿದ್ದರು.

ಆಮೆರಿಕಾ ರಹಸ್ಯ ಸೇವಾ ವಿಭಾಗ:

- ಆಮೆರಿಕಾ ರಹಸ್ಯ ಸೇವಾ ವಿಭಾಗವು ಆಮೆರಿಕಾದ ಫೆಡರಲ್ ಕಾನೂನು ಜಾರಿ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಕೇಂದ್ರ ಕಚೇರಿ ವಾಷಿಂಗ್ ಟನ್ ನಲ್ಲಿದ್ದು, 150 ಕ್ಕೂ ಹೆಚ್ಚು ಶಾಖೆಗಳು ಆಮೆರಿಕಾದಾದ್ಯಂತ ಕಾರ್ಯನಿರ್ವಹಿಸುತ್ತಿವೆ. 1865 ರಲ್ಲಿ ಸ್ಥಾಪಿಸಲಾದ ಈ ವಿಭಾಗವು ಮೊದಲಿಗೆ ಯು.ಎಸ್ ಕರೆನ್ಸಿ ನಕಲನ್ನು ತಡೆಯು ಹೊಣೆಗಾರಿಕೆಯನ್ನು ಹೊತ್ತಿತ್ತು. ಸದ್ಯ ಕರೆನ್ಸಿ ನಕಲನ್ನು ತಡೆಯುವುದರ ಜತೆಗೆ ಕ್ರಿಮಿನಲ್ ಪ್ರಕರಣಗಳ ತನಿಖೆ ಮತ್ತು ವಿದೇಶಿ ಸಚಿವರಗೆ ರಕ್ಷಣೆ ನೀಡುವ ಜವಾಬ್ದಾರಿಯನ್ನು ಹೊತ್ತಿದೆ.

**<u>IJBLF ಅಧ್ಯಕ್ಷರಾಗಿ ಬಾಬಾಸಾಹೇಬ್ ನೀಲಕಾಂತ್ ಕಲ್ಯಾಣಿ ನೇಮಕ</u>**

ಭಾರತ್ ಪೋರ್ಜ್ ಲಿಮಿಟೆಡ್ ನ ಛೇರಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಬಾಬಾಸಾಹೇಬ್ ನೀಲಕಾಂತ್ ಕಲ್ಯಾಣಿ ರವರನ್ನು ಇಂಡೋ-ಜಪಾನ್ ಬ್ಯುಸಿನೆಸ್ ಲೀಡರ್ ಫೋರಂ (IJBLF) ನ ಅಧ್ಯಕ್ಷರಾಗಿ ಭಾರತ ಸರ್ಕಾರ ನೇಮಕ ಮಾಡಿದೆ.

ಇಂಡೋ-ಜಪಾನ್ ಬ್ಯುಸಿನೆಸ್ ಲೀಡರ್ ಫೋರಂ:

- ಭಾರತ ಮತ್ತು ಜಪಾನ್ ದೇಶಗಳ ನಡುವೆ ಹೂಡಿಕೆ ಮತ್ತು ವ್ಯಾಪಾರವನ್ನು ಉತ್ತೇಜಿಸುವ ಮೂಲಕ ಉಭಯ ದೇಶಗಳ ಅಭಿವೃದ್ದಿಗೆ ಸಹಕರಿಸುವುದು ಇದರ ಮುಖ್ಯ ಗುರಿಯಾಗಿದೆ.
- ಈ ವೇದಿಕೆಯು 15 ಜನ ಸದಸ್ಯರನ್ನು ಒಳಗೊಂಡಿದೆ. ಖ್ಯಾತ ಉದ್ಯಮಿಗಳಾದ ಮುಖೇಶ್ ಅಂಬಾನಿ, ಅನಿಲ್ ಅಂಬಾನಿ, ಆದಿ ಗೋದ್ರೆಜ್, ಸುನೀಲ್ ಭಾರತಿ ಮಿತ್ತಲ್, ದೀಪಕ್ ಪಾರೇಕ್ ಮುಂತಾದವರು ಇದರ ಸದಸ್ಯರೆನಿಸಿದ್ದಾರೆ.

**<u>ಏರ್ ಟೆಲ್ ನ ಜಾಂಬಿಯಾ ಸೇವೆಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ "ಚಾರಿತಿ ಚಂದ ಲುಂಪ" ನೇಮಕ</u>**

ಭಾರತಿ ಏರ್ ಟೆಲ್ ಆಫ್ರಿಕಾದ ಜಾಂಬಿಯಾದಲ್ಲಿ ಆರಂಭಸಿರುವ ತನ್ನ ಸೇವೆಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ "ಚಾರಿತಿ ಚಂದ ಲುಂಪ" ರವರನ್ನು ನೇಮಕಮಾಡಿದೆ. ಈ ಮೂಲಕ ಏರ್ ಟೆಲ್ ಆಫ್ರಿಕಾದಲ್ಲಿ ತನ್ನ ಸೇವೆಗೆ ಮೊದಲ ಬಾರಿ ಮಹಿಳೆ ಮ್ಯಾನೇಜಿಂಗ್ ಡೈರೆಕ್ಟರನ್ನು ನೇಮಕ ಮಾಡಿಕೊಂಡಿದೆ.

- ಲುಂಪ ರವರ ಸೇವೆ ಮೇ 1, 2013 ರಿಂದ ಪ್ರಾರಂಭವಾಗಲಿರುವುದಾಗಿ ಏರ್ ಟೆಲ್ ನ ಜಾಂಬಿಯಾ ಛೇರಮನ್ ಜಾರ್ಜ್ ಸುಕೋಟ ತಿಳಿಸಿದ್ದಾರೆ.
- ಜಾಂಬಿಯಾ ಪ್ರಜೆ ಆಗಿರುವ ಲುಂಪ ರವರು MBA Finance ಪದವಿದರೆ ಆಗಿದ್ದು, ಖಾಸಗಿ ಮತ್ತು ಸರ್ಕಾರಿ ಸೇವೆಗಳಲ್ಲಿ ಅಪಾರ ಪರಿಣಿತಿಯನ್ನು ಲುಂಪ ರವರು ಹೊಂದಿದ್ದಾರೆ.
- ಲುಂಪ ರವರು ಜಾಂಬಿಯಾ ನ್ಯಾಷನಲ್ ಟ್ರಸ್ಟ್ ಬೋರ್ಡನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ ಆಗಿ ಸೇವೆ ಸಲ್ಲಿಸಿದ್ದರು. ನಂತರ ಜಾಂಬಿಯಾ ಎಕೊಬ್ಯಾಂಕ್ ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

- ದೇಶದ ಅತಿ ದೊಡ್ಡ ದೂರಸಂಪರ್ಕ ಕಂಪನಿ ಎನಿಸಿರುವ ಭಾರತಿ ಏರ್ ಟೆಲ್ ಆಫ್ರಿಕಾದ 17 ದೇಶಗಳಲ್ಲಿ ಎರಡು ವರ್ಷಗಳ ಹಿಂದೆ ತನ್ನ ಸೇವೆಯನ್ನು ಆರಂಭಿಸಿತು.

**TDSAT ಸದಸ್ಯರಾಗಿ "ಕುಲದೀಪ್ ಸಿಂಗ್" ನೇಮಕ**

"ದೂರಸಂಪರ್ಕ ವಿವಾದ ಇತ್ಯರ್ಥ ಮತ್ತು ಮೇಲ್ಮನವಿ ನ್ಯಾಯಮಂಡಳಿ (Telecom Dispute Settlement and Appellate Tribunal (TDSAT))" ಗೆ ಸದಸ್ಯರನ್ನು ನೇಮಕ ಮಾಡಲು ಸರ್ಕಾರ ಕೊನೆಗೂ ನಿರ್ಧರಿಸಿದೆ. ದೂರ ಸಂಪರ್ಕ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ "ಕುಲದೀಪ್ ಸಿಂಗ್" ರವರನ್ನು ನ್ಯಾಯಮಂಡಳಿಯ ಸದಸ್ಯರನ್ನಾಗಿ ಸರ್ಕಾರ ನೇಮಿಸಿದೆ. ಏಪ್ರಿಲ್ 1 ರಿಂದ ಸಿಂಗ್ ರವರು ಅಧಿಕಾರವನ್ನು ವಹಿಸಿಕೊಳ್ಳಲಿರುವರು.

- ಈ ಹಿಂದೆ ಮಂಡಳಿಯ ಸದಸ್ಯರಾಗಿದ್ದ "ಪ್ರಮೋದ್ ಕುಮಾರ್ ರಸ್ತೋಗಿ" ರವರು ನಿವೃತ್ತರಾದ ದಿನದಿಂದ ಈ ಸ್ಥಾನ ಭರ್ತಿಯಾಗಿದೆ ಹಾಗೇ ಉಳಿದಿತ್ತು.

ಸಿಂಗ್ ಬಗ್ಗೆ:

- ದೂರ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕುಲದೀಪ್ ಸಿಂಗ್ ರವರು 38 ವರ್ಷಗಳ ಅನುಭವವನ್ನು ಹೊಂದಿದ್ದಾರೆ. MTNL ಸಂಸ್ಥೆಯ ಮಂಡಳಿಯಲ್ಲಿ 8 ವರ್ಷಗಳ ಕಾಲ ಸದಸ್ಯರಾಗಿ ಅವರು ಕಾರ್ಯನಿರ್ವಹಿಸಿದ್ದರು. MTNL ಸಂಸ್ಥೆಯ ಛೇರಮನ್ ಕಮ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸಹ ಅವರು ಕೆಲಕಾಲ ಸೇವೆ ಸಲ್ಲಿಸಿದ್ದಾರೆ.

TDSAT:

- ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಕಾಯಿದೆ-1997 (TRAI Act-1997) ರ ಅಡಿಯಲ್ಲಿ ದೂರ ಸಂಪರ್ಕ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ತ್ವರಿತವಾಗಿ ಮತ್ತು ನ್ಯಾಯಯುತವಾಗಿ ವಿಲೇವಾರಿ ಮಾಡಿ, ಸೇವಾ ಕಂಪನಿಗಳು ಮತ್ತು ಗ್ರಾಹಕರ ಹಿತದೃಷ್ಟಿಯನ್ನು ಕಾಯುವ ಸಲುವಾಗಿ "ದೂರಸಂಪರ್ಕ ವಿವಾದ ಇತ್ಯರ್ಥ ಮತ್ತು ಮೇಲ್ಮನವಿ ನ್ಯಾಯಮಂಡಳಿಯನ್ನು" 2000 ದಲ್ಲಿ ಸ್ಥಾಪಿಸಲಾಗಿದೆ.
- ನ್ಯಾಯಮಂಡಳಿಯು ಒಬ್ಬ ಅಧ್ಯಕ್ಷ ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡಿದೆ. TDSAT ಯ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಎಸ್.ಬಿ. ಸಿನ್ಹಾ ರವರು ನವೆಂಬರ್ ನಲ್ಲಿ ನಿವೃತ್ತರಾಗಿದ್ದರು. ವಿಪರ್ಯಾಸವೆಂದರೆ ಇದುವರೆಗೂ ಮತ್ತೊಬ್ಬ ಅಧ್ಯಕ್ಷರ ನೇಮಕವಾಗದೇ ಈ ಸ್ಥಾನ ಖಾಲಿ ಉಳಿದಿದೆ. ಇನ್ನು ಸದಸ್ಯರ ಪೈಕಿ ರಸ್ತೋಗಿ ಅವರ ನೇಮಕಾತಿ ಹೊರತುಪಡಿಸಿ ಮತ್ತೊಂದು ಸ್ಥಾನಕ್ಕೆ ನೇಮಕಾತಿಯೇ ಆಗಿಲ್ಲ.

**ಇಂಗ್ಲೀಷ್ ನಟ ರಿಚರ್ಡ್ ಗ್ರಿಫಿತ್ಸ್ ನಿಧನ (Richard Griffiths)**

ಖ್ಯಾತ ಇಂಗ್ಲೀಷ್ ಸಿನಿಮಾ ಮತ್ತು ಟಿವಿ ಕಾರ್ಯಕ್ರಮ ನಟ, ರಿಚರ್ಡ್ ಗ್ರಿಫಿತ್ಸ್ ನಿಧನರಾದರು. ಹೃದಯ ಸಂಬಂಧಿ ಕಾಯಿಲೆಯಿಂದ ಅವರು ಬಳಲುತ್ತಿದ್ದರು. ಹ್ಯಾರಿ ಪಾಟರ್ ಸರಣಿ ಚಿತ್ರಗಳಲ್ಲಿ "ವರ್ನನ್ ಡರ್ಸಲೆ" ಪಾತ್ರದಲ್ಲಿನ ಅವರ ಅಭಿನಯ ವಿಶ್ವ ಮನ್ನಣೆಯನ್ನು ಗಳಿಸಿತು. ಗ್ರಿಫಿತ್ಸ್ ರವರು ಲಾರೆನ್ಸ್ ಒಲಿವರ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನಾಗಿದ್ದರು.

- ಬ್ರೇಕಿಂಗ್ ಗ್ಲಾಸ್, ಚಾರಿಯಟ್ ಆಫ್ ಫೈರ್, ಗೋರ್ಕಿ ಪಾರ್ಕ, ಶಾಂಘೈ ಸರ್ಪ್ರೈಸ್, ಹ್ಯಾರಿ ಪಾಟರ್ ಸರಣಿ ಚಿತ್ರಗಳು, ಫೈರೆಟ್ಸ್ ಆಫ್ ದಿ ಕೆರೆಬಿಯನ್ ಅವರ ಅಭಿನಯಿಸಿದ್ದ ಪ್ರಮುಖ ಚಿತ್ರಗಳು.
- ಲಾರೆನ್ಸ್ ಒಲಿವರ್ ಪ್ರಶಸ್ತಿ, ಡ್ರಾಮಾ ಡೆಸ್ಕ್ ಪ್ರಶಸ್ತಿ, ಟೋನಿ ಆವಾರ್ಡ್, ಔಟರ್ ಕ್ರಿಟಿಕ್ಸ್ ಸರ್ಕಲ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ರಿಚರ್ಡ್ ರವರಿಗೆ ಲಭಿಸಿದ್ದವು.

ಕರುನಾಡು ಎಗ್ಸಾಮ್ಸ್

# ಕ್ರೀಡೆ

**ದುಬೈ ಓಪನ್ ಟೆನ್ನಿಸ್ ಟೂರ್ನಿ: ನೊವಾಕ್ ಜೊಕೊವಿಕ್ ಗೆ ಪ್ರಶಸ್ತಿ**

ವಿಶ್ವದ ನಂ.1 ಟೆನ್ನಿಸ್ ಆಟಗಾರ ನೊವಾಕ್ ಜೊಕೊವಿಕ್ ರವರು ದುಬೈ ಓಪನ್ ಟೆನ್ನಿಸ್ ಟೂರ್ನಿಯ ಪುರಷರ ಸಿಂಗಲ್ಸ್ ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಸರ್ಬಿಯಾದ ಈ ಆಟಗಾರ ಚೆಝ್ ರಿಪಬ್ಲಿಕ್ ನ ಥಾಮಸ್ ಬೆರ್ಡಿಚ್ (Tomas Berdych) ರವರನ್ನು 7-5, 6-3 ಸೆಟ್ ಗಳಿಂದ ಮಣಿಸುವ ಮೂಲಕ ಪ್ರಶಸ್ತಿಗೆ ಭಾಜನರಾದರು.

ಭೂಪತಿ ಜೋಡಿ ಚಾಂಪಿಯನ್:

- ಮಹೇಶ್ ಭೂಪತಿ ಮತ್ತು ಫ್ರಾನ್ಸ್ ನ ಮೈಕಲ್ ಲೊದ್ರಾ ರವರು ದುಬೈ ಓಪನ್ ಟೆನ್ನಿಸ್ ನ ಪುರುಷರ ಡಬ್ಬಲ್ಸ್ ನಲ್ಲಿ ವಿಜೇತರಾದರು. ಈ ಜೋಡಿಯು ಫೈನಲ್ ಪಂದ್ಯದಲ್ಲಿ ರಾಬರ್ಟ್ ಲಿಂಡ್ ಸ್ಟೆಡ್ ಮತ್ತು ನಿನಾದ್ ಜಿಮೊಂಜಿಕ್ ಜೋಡಿಯನ್ನು 7-6, 7-6 ನೇರ ಸೆಟ್ ಗಳಿಂದ ಸೋಲಿಸುವ ಮೂಲಕ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.
- ಭೂಪತಿಗೆ ದುಬೈ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಇದು ಐದನೇ ಪ್ರಶಸ್ತಿ. ಈ ಮುಂಚೆ ಅವರು 1998 ರಲ್ಲಿ ಲಿಯಾಂಡರ್ ಫೇಸ್ ಜೊತೆ ಚಾಂಪಿಯನ್ ಆಗಿದ್ದರು. ನಂತರ 2004 ರಲ್ಲಿ ಪ್ಯಾಬ್ರಿಕ್ ಸಂತೊರೊ, 2008 ರಲ್ಲಿ ಮಾರ್ಕ್ ನೊವೆಲ್ಸ್ ಮತ್ತು ಕಳೆದ ವರ್ಷ ರೋಹನ್ ಬೋಪಣ್ಣ ಜೊತೆ ಪ್ರಶಸ್ತಿ ಗೆದ್ದಿದ್ದರು.

**ದೆಹಲಿಗೆ ವಿಜಯ್ ಹಜಾರೆ ಟ್ರೋಫಿ**

ಯುವ ಆಟಗಾರ ಉನ್ಮುಕ್ತ್ ಚಾಂದ್ ರವರ ಅಮೋಘ ಶತಕ ಮತ್ತು ರಜತ್ ಭಾಟಿಯಾ ರವರ ಅದ್ಭುತ ಬೌಲಿಂಗ್ ನೆರವಿನಿಂದ ದೆಹಲಿ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಕಪ್ ಅನ್ನು ಗೆದ್ದುಕೊಂಡಿತು.

- ವಿಶಾಖ ಪಟ್ಟಣದ ವೈ.ಎಸ್. ರಾಜಶೇಖರ್ ರೆಡ್ಡಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅಸ್ಸಾಂ ತಂಡವನ್ನು 75 ರನ್ ಗಳಿಂದ ಸೋಲಿಸಿದ ದೆಹಲಿ ತಂಡ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿತು.
- ಮೊದಲು ಬ್ಯಾಟ್ ಮಾಡಿದ ದೆಹಲಿ ತಂಡ 50 ಓವರ್ ಗಳಲ್ಲಿ 9 ವಿಕೆಟ್ ನಷ್ಟಕ್ಕೆ 290 ರನ್ ಗಳ ಗುರಿಯನ್ನು ನೀಡಿತು. ಕಠಿಣ ಗುರಿಯನ್ನು ಬೆನ್ನು ಹತ್ತಿದ ಅಸ್ಸಾಂ 44.2 ಓವರ್ ಗಳಲ್ಲಿ 215 ರನ್ ಗಳಿಗೆ ಆಲೌಟ್ ಆಯಿತು.
- ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ ಅಸ್ಸಾಂ ಆರಂಭದಲ್ಲೇ ಎಡವಿದರಿಂದ ಫೈನಲ್ ನಲ್ಲಿ ಪ್ರಶಸ್ತಿಗಳಿಸುವ ತನ್ನ ಕನಸು ಭಗ್ನಗೊಂಡಿತು.

**ಸಂತೋಷ್ ಟ್ರೋಫಿ: ಸರ್ವಿಸಸ್ ಮತ್ತೆ ಚಾಂಪಿಯನ್**

67 ನೇ ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್ ಬಾಲ್ ಚಾಂಪಿಯನ್ ಷಿಪ್ ನಲ್ಲಿ ಸರ್ವಿಸಸ್ ತಂಡ ಗೆಲುವಿನ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಕೇರಳ ಮತ್ತು ಸರ್ವಿಸಸ್ ತಂಡಗಳ ನಡುವೆ ನಡೆದ ಪ್ರಬಲ ಪೈಪೋಟಿಯಲ್ಲಿ ಕೇರಳ ತಂಡವನ್ನು ಪೆನಾಲ್ಟಿ ಶೂಟೌಟ್ ನಲ್ಲಿ ಮಣಿಸಿ ಈ ಸಾಧನೆಗೆ ಭಾಜನವಾಯಿತು.

- ಈ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಸರ್ವಿಸಸ್ ತಂಡ ಮೂರನೇ ಬಾರಿ ಈ ಪ್ರಶಸ್ತಿಯನ್ನು ಗೆದ್ದಾಂತಯಿತು.

- ಪಂದ್ಯ ನಿಗದಿತ ಅವಧಿಗಿಂತಲೂ ಹೆಚ್ಚು ಅವಧಿಯಲ್ಲೂ ಎರಡು ತಂಡಗಳು ಗೋಲು ಗಳಿಸಲು ವಿಫಲವಾದವು ಆಗ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆಹೋಗಲಾಯಿತು. ಇಲ್ಲೂ 3-3 ರಲ್ಲಿ ಸಮಬಲ ಕಂಡ ಬಂತು. ಆ ಬಳಿಕ "ಸಡನ್ ಡೆತ್" ನಲ್ಲಿ ಸರ್ವಿಸಸ್ ಗೆ ಜಯದ ಮಾಲೆ ದೊರೆಯಿತು.

**ಬಿಲ್ಲುಗಾರ್ತಿ ದೀಪಿಕಾ ಕುಮಾರಿ ವರ್ಷದ ಕ್ರೀಡಾಪಟು**

ಟಾಟಾ ಸ್ಟೀಲ್ ಸಂಸ್ಥೆಯ "ವರ್ಷದ ಕ್ರೀಡಾ ಪಟು" ಗೌರವಕ್ಕೆ ಪ್ರಸಿದ್ಧ ಬಿಲ್ಲುಗಾರ್ತಿ ದೀಪಿಕಾ ಕುಮಾರಿ ಆಯ್ಕೆಯಾಗಿದ್ದಾರೆ. ಸಂಸ್ಥೆಯ ಸ್ಥಾಪಕ ಜೆ.ಎನ್. ಟಾಟಾ ಅವರ 174 ನೇ ಜನ್ಮ ದಿನಾಚರಣೆಯ ಸಂಧರ್ಭದಲ್ಲಿ ದೀಪಿಕಾ ಗೆ ಈ ಗೌರವ ನೀಡಲಾಯಿತು.

- ದೀಪಿಕಾ ಕುಮಾರಿ ಸತತ ಮೂರನೇ ಬಾರಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.
- ಇತ್ತೀಚೆಗೆ ಹೈದಾರಬಾದ್ ನಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಅರ್ಚರಿ ಟೂರ್ನಿಯಲ್ಲಿ ಅಗ್ರಸ್ಥಾನಗಳಿಸಿದ್ದರು.

**ರಾಫೆಲ್ ನಡಾಲ್ ಗೆ ಮೆಕ್ಸಿಕನ್ ಓಪನ್ ಪ್ರಶಸ್ತಿ**

ಗಾಯದ ಸಮಸ್ಯೆಯಿಂದ ಬಳಲಿ ಚೇತರಿಸಿಕೊಂಡಿರುವ ರಾಫೆಲ್ ನಡಾಲ್ ರವರು ತಮ್ಮ ಅಮೋಘ ಪ್ರದರ್ಶನದಿಂದ ಮೆಕ್ಸಿಕನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರೂ. ಈ ವರ್ಷದಲ್ಲಿ ಇದು ನಡಾಲ್ ಗೆಲ್ಲುತ್ತಿರುವ ಎರಡನೇ ಪ್ರಶಸ್ತಿ.

- ಫೈನಲ್ ಪಂದ್ಯದಲ್ಲಿ ಮಾಜಿ ನಂ.1 ಆಟಗಾರ ನಡಾಲ್ 6-0, 6-2 ನೇರ ಸೆಟ್ ಗಳಿಂದ ಮೂರು ಬಾರಿಯ ಹಾಲಿ ಚಾಂಪಿಯನ್ ತಮ್ಮದೇ ದೇಶದ ಡೇವಿಡ್ ಫೆರರ್ ರವರನ್ನು ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.
- ಕಳೆದ ತಿಂಗಳು ಸಾವೊ ಪೌಲೊದಲ್ಲಿ ನಡೆದ ಟೂರ್ನಿಯಲ್ಲು ಸಹ ರಾಫೆಲ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು.

ವನಿತೆಯರ ಸಿಂಗಲ್ಸ್ ನಲ್ಲಿ ಇಟಲಿಯ ಅಗ್ರ ಶ್ರೇಯಾಂಕಿತ ಆಟಗಾರ್ತಿ ಸಾರಾ ಇರಾನಿ 6-0, 6-4 ಸೆಟ್ ಗಳಿಂದ ತಮ್ಮ ಎದುರಾಳಿ ಸ್ಪೇನ್ ನ ಕಾರ್ಲಾ ಸೂರೆಜ್ ನವಾರೋ ಅವರನ್ನು ಸೋಲಿಸಿ ಮಹಿಳೆಯರ ಸಿಂಗಲ್ಸ್ ನಲ್ಲಿ ವಿಜೇತರಾದರು.

**ಮಹಿಳಾ ವಿಶ್ವ ಕಪ್ ಕುಸ್ತಿ ಕೂಟ ಭಾರತಕ್ಕೆ ಐದನೇ ಸ್ಥಾನ**

ಮಂಗೋಲಿಯಾದಲ್ಲಿ ನಡೆದ ಮಹಿಳಾ ವಿಶ್ವಕುಸ್ತಿ ಕೂಟದಲ್ಲಿ ಭಾರತ ಮಹಿಳಾ ತಂಡದವರು ಐದನೇ ಸ್ಥಾನವನ್ನು ಪಡೆದರು. ಭಾರತದ ಪರ ಗೀತಾ ಫೊಗಟ್ ರವರನ್ನು ಹೊರತುಪಡಿಸಿ ಇತರೆ ಸ್ಪರ್ಧಿಗಳು ನಿರೀಕ್ಷಿತ ಪ್ರದರ್ಶನವನ್ನು ತೋರದ ಕಾರಣ ಭಾರತ ಐದನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

- ಇದೇ ಪ್ರಥಮ ಬಾರಿಗೆ ಸ್ಪರ್ಧಿಸಿದ್ದ ಗೀತಾ ಅವರು 59 ಕೆ.ಜಿ. ವಿಭಾಗದಲ್ಲಿ ಜಪಾನ್, ಕೆನಡಾ, ಮಂಗೋಲಿಯಾ ಮತ್ತು ಬೆಲಾರಸ್ ತಂಡ ಎದುರಾಳಿಗಳನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾದರು.
- ಎಂಟು ದೇಶಗಳು ಭಾಗವಹಿಸಿದ್ದ ಈ ಕೂಟದಲ್ಲಿ ಭಾರತ ಇದೇ ಮೊದಲ ಬಾರಿಗೆ ಅರ್ಹತೆಯನ್ನು ಪಡೆದಿತ್ತು.
- ಚೀನಾ ತಂಡ ಬಂಗಾರ, ಮಂಗೋಲಿಯಾ ತಂಡ ಬೆಳ್ಳಿ ಮತ್ತು ಜಪಾನ್ ತಂಡ ಕಂಚು ಪದಕಗಳನ್ನು ಗೆದ್ದುಕೊಂಡವು.

**ಹಾಕಿ ಜೂನಿಯರ್ ವಿಶ್ವ ಕಪ್ ಅತಿಥ್ಯ ವಹಿಸಲಿರುವ ಭಾರತ**

ಹಾಕಿ ಜೂನಿಯರ್ ವಿಶ್ವಕಪ್ ಪ್ರಶಸ್ತಿಗೆ ಅತಿಥ್ಯವಹಿಸಲಿರುವ ಅವಕಾಶ ಭಾರತಕ್ಕೆ ಲಭಿಸಿದೆ. ಈ ವರ್ಷದ ಡಿಸೆಂಬರ್ 6 ರಿಂದ 16 ರ ವರೆಗೆ ಈ ಟೂರ್ನಿಯನ್ನು ನವದೆಹಲಿ ಯಲ್ಲಿ ಆಯೋಜಿಸಲಾಗುವುದೆಂದು ಅಂತರ ರಾಷ್ಟ್ರೀಯ ಹಾಕಿ ಫೆಡರೇಷನ್ ಪ್ರಕಟಿಸಿದೆ.

- ಜೂನಿಯರ್ ವಿಶ್ವ ಕಪ್ ಟೂರ್ನಿಯಲ್ಲದೇ, ಹಾಕಿ ವಿಶ್ವಕಪ್ ಲೀಗ್ ನ ಫೈನಲ್ ಪಂದ್ಯಗಳು ಸಹ ಭಾರತದಲ್ಲಿ ನಡೆಯಲಿವೆ.
- ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಟೂರ್ನಿಯಲ್ಲಿ ಒಟ್ಟು 16 ದೇಶದ ತಂಡಗಳು ಭಾಗವಹಿಸಲಿವೆ.

ಏಷ್ಯಾನ್ ಅಥ್ಲೆಟಿಕ್ ಗ್ರ್ಯಾನ್ ಪ್ರಿ ಸ್ಥಳಾಂತರ:

- ಚೆನ್ನೈನಲ್ಲಿ ನಡೆಯಬೇಕಿದ್ದ ಏಷ್ಯಾನ್ ಅಥ್ಲೆಟಿಕ್ ಗ್ರ್ಯಾನ್ ಪ್ರಿ ಕೂಟವನ್ನು ಕೊಲಂಬೊ ಗೆ ಸ್ಥಳಾಂತರಿಸಲಾಗಿದೆ. ಶ್ರೀಲಂಕಾದ ಅಥ್ಲೇಟ್ ಗಳಿಗೆ ಅತಿಥ್ಯವಹಿಸಲು ತಮಿಳುನಾಡು ಸರ್ಕಾರ ನಿರಾಕರಿಸಿದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ.

**ಏಷ್ಯನ್ ಸೈಕ್ಲಿಂಗ್ ಚಾಂಪಿಯನ್ ಷಿಪ್: ಭಾರತದ ದೆಬೋರಾ ಗೆ ಕಂಚು**

ನವದೆಹಲಿಯ ಇಂದಿರಾ ಗಾಂಧಿ ವೆಲೊಡ್ರೋಮ್ ನಲ್ಲಿ ನಡೆಯುತ್ತಿರುವ ಏಷ್ಯನ್ ಸೈಕ್ಲಿಂಗ್ ಚಾಂಪಿಯನ್ ಷಿಪ್ ನಲ್ಲಿ ಅಂಡಮಾನ್ ನಿಕೋಬರ್ ಹುಡುಗಿ ದೆಬೋರಾ ಕಂಚು ಗೆಲ್ಲುವ ಮೂಲಕ ದೇಶಕ್ಕೆ ಮೊದಲ ಪದಕ ತಂದರು. ಸುನಾಮಿ ದುರಂತದಲ್ಲಿ ಬದುಕುಳಿದ ದೆಬೋರಾ ರವರು ಮಹಿಳಾ ದಿನದಂದೇ ಪದಕ ಗೆಲ್ಲುವ ಮೂಲಕ ಕ್ರೀಡಾಭಿಮಾನಿಗಳ ಮನ ಗೆದ್ದರು.

- ಮಹಿಳೆಯರ 500 ಮೀ ಟೈಮ್ ಟ್ರಯಲ್ ಸ್ಪರ್ಧೆಯಲ್ಲಿ ದೆಬೋರಾ ಮೂರನೇ ಸ್ಥಾನ ಪಡೆದರು. 37.841 ಸೆಕೆಂಡ್ ಗಳಲ್ಲಿ ಗುರಿ ಮುಟ್ಟುವ ಮೂಲಕ ಕಂಚಿನ ಪದಕಕ್ಕೆ ತೃಪ್ತಿಪಟ್ಟರು.
- ಜೂನಿಯರ್ ವಿಭಾಗದ ಈ ಸ್ಪರ್ಧೆಯಲ್ಲಿ ಕೊರಿಯಾದ ಯೊನ್ ಹಿ ಚಾಂಗ್ ಚಿನ್ನ ಗೆದ್ದರೆ, ಚೈನಿಸ್ ತೈಪೆಯ ಶಿವೊಯೊ ಚಾಂಗ್ ಬೆಳ್ಳಿ ಗೆದ್ದರು.
- ಸೈಕ್ಲಿಂಗ್ ನಲ್ಲಿ ಅಗ್ರಸ್ಥಾನದಲ್ಲಿರುವ ದೆಬೋರಾ ರವರನ್ನು ಭಾರತ ಸೈಕ್ಲಿಂಗ್ ಫೆಡರೇಷನ್ " ದಿ ವಂಡರ್ ಗರ್ಲ್" ಎಂದು ಕರೆದಿದೆ.

**ಭಾರತದ ಮನೋರಮಾ ಮತ್ತು ದೆಬೋರಾ ಗೆ ಕಂಚು**

ಭಾರತದ ಮನೋರಮಾ ಮತ್ತು ದೆಬೋರಾ ರವರು ಹೀರೋ ಸೈಕ್ಲಿಂಗ್ ಚಾಂಪಿಯನ್ ಷಿಪ್ ನ ಟೀಮ್ ಸ್ಪ್ರಿಂಟ್ ನಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

- ಈ ಜೋಡಿಯು ಮಲೇಷ್ಯಾದ ಫೈಹಾ ಶಾಹ್ ವತಿ ಮಹಮದ್ ಅದ್ವಾನ್ ಮತ್ತು ನೂರಲ್ ಅಲಿಸಾ ಅಜ್ಯಾನ್ ವಿರುದ್ಧ 0.148 ಸೆಕೆಂಡ್ ಗಳ ಅಂತರದಿಂದ ಜಯಿಸಿ ಭಾರತಕ್ಕೆ ಪದಕ ತಂದಿತ್ತರು.
- ಮೊದಲ ಸುತ್ತಿನ ಆರಂಭದಲ್ಲಿ ಮನೋರಮಾ ಮಲೇಷಿಯಾ ಪ್ರತಿಸ್ಪರ್ಧಿಗಿಂತ ಹಿನ್ನಡೆ ಅನುಭವಿಸಿದ್ದರು ಆದರೆ ದೆಬೋರಾ ರವರು ಈ ಅಂತರವನ್ನು ಕಡಿಮೆ ಮಾಡಿ ಸ್ಪರ್ಧೆಯನ್ನು ಪೂರ್ಣಗೊಳಿಸಿದರು.

**ಮಾದಕ ವಸ್ತು ಸೇವನೆ ಬಾಕ್ಸರ್ ರಾಮ್ ಸಿಂಗ್ ಅಮಾನತು**

ನಿಷೇಧಿತ ಮಾದಕ ವಸ್ತುನ್ನು ಸೇವನೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡ ಒಲಂಪಿಕ್ಸ್ ನಲ್ಲಿ ಕಂಚಿನ ಪದಕ ಗೆದ್ದ ಭಾರತದ ಬಾಕ್ಸರ್ ವಿಜೇಂದರ್ ಸಿಂಗ್ ಸ್ನೇಹಿತ ರಾಮ್ ಸಿಂಗ್ ರವರ ನ್ನು ರಾಷ್ಟ್ರೀಯ ಕ್ರೀಡಾ ಸಂಸ್ಥೆಯಿಂದ ಅಮಾನತುಗೊಳಿಸಲಾಗಿದೆ. ಜೊತೆಗೆ ಪಾಟಿಯಾಲದಲ್ಲಿ ನಡೆಯುತ್ತಿರುವ ಶಿಬಿರದಿಂದಲೂ ಹೊರಹಾಕಲಾಗಿದೆ.

- ಸೂಪರ್ ಹೇವಿ ವೇಟ್ ನಲ್ಲಿ ರಾಷ್ಟ್ರ ಮಟ್ಟದ ಚಾಂಪಿಯನ್ ಆಗಿರುವ ಮತ್ತು ಪಂಜಾಬ್ ಪೋಲಿಸ್ ಇಲಾಖೆಯಲ್ಲಿ ಪೇದೆಯಾಗಿ ಕಾರ್ಯನಿರ್ವಹಿಸುತ್ತಿರುವ ರಾಮ್ ಸಿಂಗ್ ಮಾದಕ ವಸ್ತು ಸೇವನೆಯಲ್ಲಿ ವಿಜೇಂದರ್ ಸಿಂಗ್ ಭಾಗಿಯಾಗಿರುವುದಾಗಿ ಹೇಳಿದ್ದಾರೆ.
- ಇತ್ತೀಚೆಗೆ ಪಂಜಾಬ್ ನ ಜಿರಾಕ್ಪುರ ನಗರದ ಸಮೀಪದ ಮನೆಯೊಂದರಲ್ಲಿ ರೂ.130 ಕೋಟಿ ಮೊತ್ತದ ಹೆರಾಯಿನ್ ಅನ್ನು ಪೋಲಿಸರು ವಶಪಡಿಸಿಕೊಂಡಿದ್ದರು. ಈ ಪ್ರಕರಣದ ಬೇರು ವಿಜೇಂದರ್ ವರೆಗೂ ಹಬ್ಬಿರುವ ಸಂಶಯ ವ್ಯಕ್ತವಾಗಿದ್ದು ಮುಂದಿನ ದಿನಗಳಲ್ಲಿ ಪೋಲಿಸ್ ವಿಚಾರಣೆಗೆ ಅವರನ್ನು ಒಳಪಡಿಸಲಾಗುವುದು.

**ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್: ಮಹಿಳೆಯರ ಸಿಂಗಲ್ಸ್ ನಲ್ಲಿ ಟಿನೆ ಬಾನ್ (Tine Baun) ಗೆ ಪ್ರಶಸ್ತಿ**

ಇಂಗ್ಲೆಂಡ್ ನ ಬಿರ್ಮಿಂಗ್ ಹ್ಯಾಮ್ ನಲ್ಲಿ ನಡೆಯುತ್ತಿರುವ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಮಹಿಳೆಯರ ಸಿಂಗಲ್ಸ್ ನಲ್ಲಿ ಟಿನೆ ಬಾನ್ ರವರು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಮೂರು ಬಾರಿ ವಿಶ್ವ ಜೂನಿಯರ್ ಚಾಂಪಿಯನ್ ಆಗಿರುವ ಥಾಯ್ಲೆಂಡ್ ನ ರಚನೊಕ್ ಇಂಟನಾನ್ (Ratchanok Intanon) ರವರನ್ನು 21-14, 16-21, 21-10 ಸೆಟ್ ಗಳಿಂದ ಮಣಿಸಿ ಈ ಪ್ರಶಸ್ತಿಯನ್ನು ಗೆದ್ದರು.

- ಈ ಪ್ರಶಸ್ತಿಯನ್ನು ಗೆಲ್ಲುವ ಮೂಲಕ 33 ವರ್ಷದ ಬಾನ್ ರವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಆಲ್ ಇಂಗ್ಲೆಂಡ್ ಓಪನ್ ಟೆನ್ನಿಸ್ ಪ್ರಶಸ್ತಿ ಗೆದ್ದ ಹಿರಿಯ ರು ಎನಿಸಿದ್ದಾರೆ.

ಟಿನ್ ಬಾನ್:

- ಟಿನ್ ಬಾನ್ ರವರು ಡೆನ್ಮಾರ್ಕ್ ದೇಶದ ಪ್ರಸಿದ್ದ ಬ್ಯಾಡ್ಮಿಂಟನ್ ಆಟಗಾರ್ತಿ. ಬಾನ್ ರವರಿಗೆ ಇದು ಮೂರನೇ ಪ್ರಶಸ್ತಿಯಾಗಿದ್ದು ಈ ಹಿಂದೆ 2008, 2010 ರಲ್ಲಿ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಪ್ರಶಸ್ತಿ:

- 1898 ರಲ್ಲಿ ಸ್ಥಾಪಿಸಲಾದ ಈ ಪ್ರಶಸ್ತಿ ವಿಶ್ವದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಬ್ಯಾಡ್ಮಿಂಟನ್ ಪ್ರಶಸ್ತಿಯಲ್ಲಿ ಒಂದಾಗಿದೆ. ವಾರ್ಷಿಕ ಈ ಟೂರ್ನಿಯನ್ನು ಆಯೋಜಿಸಲಾಗುತ್ತದೆ.

**ಡೇವಿಡ್ ಬೆಕಮ್ ವಿಶ್ವದ ಶ್ರೀಮಂತ ಫುಟ್ ಬಾಲ್ ಆಟಗಾರ**

ಪ್ರಸಿದ್ದ ಫುಟ್ ಬಾಲ್ ಆಟಗಾರ ಡೇವಿಡ್ ಬೆಕಮ್ ರವರು ವಿಶ್ವದ ಶ್ರೀಮಂತ ಫುಟ್ ಬಾಲ್ ಆಟಗಾರರಾಗಿ ಸುದ್ದಿ ಮಾಡಿದ್ದಾರೆ. Goal Rich List-2013 ಪ್ರಕಾರ ಬೆಕಮ್ ರವರ ಒಟ್ಟು ಆದಾಯ 175 ಮಿಲಿಯನ್ ಫೌಂಡ್ ಗಳು ಎಂದು ಹೇಳಲಾಗಿದೆ. 37 ವರ್ಷದ

ಈ ಪ್ರಸಿದ್ಧ ಆಟಗಾರ ಸದ್ಯ ಭಾರಿ ಬೇಡಿಕೆಯ ರಾಯಭಾರಿಯಾಗಿದ್ದು, ಕ್ರಿಸ್ಟಿಯಾನೊ ರೋನಾಲ್ಡೊ ಮತ್ತು ಲಿಯೋನೆಲ್ ಮೆಸ್ಸಿ ಗಿಂತಲೂ ಮುಂದಿದ್ದಾರೆ.

- 2012 ರಲ್ಲಿ ಬೆಕಮ್ ರವರು ಸಂಭಾವನೆ ಮತ್ತು ಬ್ರಾಂಡ್ ಗಳಿಗೆ ಪ್ರಚಾರ ರಾಯಭಾರಿಯಾಗಿ ಸಹಿ ಹಾಕುವು ಮೂಲಕ 20 ಮಿಲಿಯನ್ ಫೌಂಡ್ ಗಳಿಗಿಂತಲೂ ಅಧಿಕ ಮೊತ್ತವನ್ನು ಗಳಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಬೆಕಮ್ ರವರ ಆದಾಯ ಮೆಸ್ಸಿ ರವರ ಆದಾಯಕ್ಕಿಂತಲೂ 60 ಮಿಲಿಯನ್ ಫೌಂಡ್ ಜಾಸ್ತಿ ಇದೆ.
- ಮೂರನೇ ಸ್ಥಾನದಲ್ಲಿರುವ 28 ವರ್ಷದ ರೋನಾಲ್ಡೊ ರವರ ಆದಾಯ 112 ಮಿಲಿಯನ್ ಫೌಂಡ್ ಎಂದು ಹೇಳಲಾಗಿದೆ.
- ಇತ್ತೀಚೆಗೆ ಡೇವಿಡ್ ಬೆಕಮ್ ರವರು ಚೀನಾದ ಫುಟ್ ಬಾಲ್ ರಾಯಭಾರಿಯಾಗಿ ಸಹ ನೇಮಿಕಗೊಂಡಿದ್ದಾರೆ.

**ಸೆಲೆಬ್ರಿಟಿ ಕ್ರಿಕೆಟ್ ಲೀಗ್: ಕರ್ನಾಟಕ ಬುಲ್ಡೋಜರ್ಸ್ ತಂಡಕ್ಕೆ ಪ್ರಶಸ್ತಿ**

ಧ್ರುವ ಶರ್ಮಾ ರವರ ಅಮೋಘ ಅರ್ಧ ಶತಕದ ನೆರವಿನಿಂದ ಸುದೀಪ್ ನಾಯಕತ್ವ ವಹಿಸಿರುವ ಕರ್ನಾಟಕ ಬುಲ್ಡೋಜರ್ಸ್ ತಂಡ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ನಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ತೆಲುಗು ವಾರಿಯರ್ಸ್ ತಂಡವನ್ನು 25 ರನ್ ಗಳ ಅಂತರದಿಂದ ಸೋಲಿಸುವ ಮೂಲಕ ಪ್ರಶಸ್ತಿಗೆ ಭಾಜನವಾಯಿತು. ಈ ಹಿಂದೆ ಎರಡು ಸಲ ಫೈನಲ್ ತಲುಪಿದ್ದ ಕರ್ನಾಟಕ ತಂಡ ಪ್ರಶಸ್ತಿಗಳಿಸುವಲ್ಲಿ ವಿಫಲವಾಗಿತ್ತು.

ಸೆಲೆಬ್ರಿಟಿ ಕ್ರಿಕೆಟ್ ಲೀಗ್:

- ಟಿ-20 ಕ್ರಿಕೆಟ್ ನಿಂದ ಪ್ರೇರಿತಗೊಂಡು ಸೆಲೆಬ್ರಿಟಿ ಕ್ರಿಕೆಟ್ ಲೀಗ್ ನ್ನು ಆರಂಭಿಸಲಾಯಿತು. ಸಿನಿಮಾ ನಟರು ಮತ್ತು ಈ ಕ್ಷೇತ್ರಕ್ಕೆ ಸಂಬಂಧಿಸಿದರು ಮಾತ್ರ ಇದರಲ್ಲಿ ಆಟಗಾರರಾಗಿರುವರು. ಹೈದ್ರಾಬಾದ್ ಮೂಲದ ಧಾರವಾಹಿ ಉದ್ಯಮಿ ವಿಷ್ಣು ವರ್ಧನ್ ಇಂದೂರಿ CCI ನ ಸ್ಥಾಪಕರು ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ.

ಮೊದಲ ಆವೃತಿ:

- 2011 ರಲ್ಲಿ CCI ನ ಮೊದಲ ಆವೃತಿಯನ್ನ ಅನಾವರಣಗೊಳಿಸಲಾಯಿತು. ಆಗ ಕೇವಲ ನಾಲ್ಕು ತಂಡಗಳು ಮಾತ್ರ ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ಚೆನ್ನೈ ರಿನೋಸ್ ತಂಡ ಕರ್ನಾಟಕ ತಂಡವನ್ನು ಮಣಿಸುವು ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತ್ತು.

ಎರಡನೇ ಆವೃತಿ:

- ಎರಡನೇ ಆವೃತಿಯಲ್ಲಿ ಕೇರಳ ಸ್ಟ್ರೈಕರಸ್ ಮತ್ತು ಬೆಂಗಾಲ್ ಟೈಗರ್ಸ್ ತಂಡಗಳು ಸೇರ್ಪಡೆಗೊಳ್ಳುವ ಮೂಲಕ ತಂಡಗಳ ಸಂಖ್ಯೆ 6 ಕ್ಕೆ ಏರಿತು. ಮತ್ತೇ ಈ ಆವೃತಿಯಲ್ಲಿ ಚೆನ್ನೈ ರಿನೋಸ್ ತಂಡ ಕರ್ನಾಟಕ ತಂಡವನ್ನು ಮಣಿಸುವು ಮೂಲಕ ಸತತ ಎರಡನೇ ಬಾರಿ ಪ್ರಶಸ್ತಿಯನ್ನು ಬಾಚಿಕೊಂಡಿತು.

ಮೂರನೇ ಆವೃತಿ:

- ಈ ಬಾರಿ ಭಾಗವಹಿಸಿದ್ದ ಒಟ್ಟು ತಂಡಗಳ ಸಂಖ್ಯೆ 8. ವೀರ್ ಮರಾಠಿ ಮತ್ತು ಬೋಜ್ ಪುರಿ ದಬಾಂಗ್ ಹೊಸದಾಗಿ ಸೇರ್ಪಡೆಗೊಂಡ ಎರಡು ತಂಡಗಳು. ಬಾಲಿವುಡ್ ತಾರೆ ಬಿಪಾಶ ಬಸು ಈ ಬಾರಿಯ ಲೀಗ್ ನ ರಾಯಬಾರಿ. ಫೈನಲ್

ಪಂದ್ಯದಲ್ಲಿ ಕರ್ನಾಟಕ ತಂಡ ತೆಲುಗು ವಾರಿಯರ್ಸ್ ತಂಡವನ್ನು ಸೋಲಿಸಿ ಫೈನಲ್ ನಲ್ಲಿ ಪ್ರಶಸ್ತಿ ಗೆಲ್ಲುವ ಕನಸನ್ನು ನನಸು ಮಾಡಿಕೊಂಡಿತು.

**ಅರ್ಚರಿಯಲ್ಲಿ ಬಂಗಾರ ಗೆದ್ದ ಭಾರತದ ಪುರಷರ ತಂಡ**

ಬ್ಯಾಂಕಾಕ್ ನಲ್ಲಿ ನಡೆಯುತ್ತಿರುವ ಏಷ್ಯನ್ ಅರ್ಚರಿ ಗ್ರ್ಯಾನ್ ಪ್ರಿ ನಲ್ಲಿ ಭಾರತದ ಪುರುಷರ ತಂಡದವರು ಕಾಂಪೌಂಡ್ ವಿಭಾಗದಲ್ಲಿ ಚಿನ್ನ ಗೆದ್ದಿದ್ದಾರೆ.

- ಫೈನಲ್ ಪಂದ್ಯದಲ್ಲಿ ಭಾರತದ ಸಂದೀಪ್ ಕುಮಾರ್, ಅಭಿಷೇಕ್ ವರ್ಮಾ ಮತ್ತು ಜಿಜ್ಞಾಸ್ ಚಿಟ್ಟಿಬೊಮ್ಮ ಅವರನ್ನೊಳಗೊಂಡ ಭಾರತ 226-218 ಅಂತರದಲ್ಲಿ ವಿಯೆಟ್ನಾಂ ತಂಡವನ್ನು ಸೋಲಿಸಿ ಪದಕವನ್ನು ಗೆದ್ದಿಕೊಂಡಿದೆ.
- ಭಾರತ ತಂಡ ಕ್ವಾರ್ಟರ್ ಫೈನಲ್ ನಲ್ಲಿ 234-221 ರಲ್ಲಿ ಸಿಂಗಾಪುರ ತಂಡವನ್ನು ಮಣಿಸಿದ್ದರೆ. ಸೆಮಿಫೈನಲ್ ನಲ್ಲಿ ಇಂಡೋನೇಷಿಯಾದ ಎದುರು 226-220 ರಲ್ಲಿ ಗೆಲುವು ಸಾಧಿಸಿತ್ತು.
- ಅತಾನು ಭಾನು, ರಾಹುಲ್ ಬ್ಯಾನರ್ಜಿ ಮತ್ತು ವಿನೋದ್ ಸ್ವನ್ಸಿ ರವರನ್ನು ಒಳಗೊಂಡ ಭಾರತ ರಿಕರ್ವ್ ತಂಡ ಕಂಚಿನ ಪದಕವನ್ನು ಜಯಿಸಿದೆ. ಮೂರನೇ ಸ್ಥಾನಕ್ಕೆ ನಡೆದ ಪೈಪೋಟಿಯಲ್ಲಿ ಈ ತಂಡ 217-203 ರಲ್ಲಿ ರಷ್ಯಾ ತಂಡವನ್ನು ಸೋಲಿಸಿ ಕಂಚಿಗೆ ತೃಪ್ತಿ ಪಟ್ಟಿಕೊಂಡಿತು.

**ಲಾರೆಯಸ್ ವರ್ಲ್ಡ್ ಸ್ಪೋರ್ಟ್ಸ್ ಆವಾರ್ಡ್ಸ್: ಜೆಸ್ಸಿಕ ಎನ್ನಿಸ್ ಗೆ ವರ್ಷದ ಆಟಗಾರ್ತಿ ಪ್ರಶಸ್ತಿ**

ಲಾರೆಯಸ್ ವರ್ಲ್ಡ್ ಸ್ಪೋರ್ಟ್ಸ್ ಆವಾರ್ಡ್ಸ್ (Laureus World Sports)-2013 ನ್ನು ಇತ್ತೀಚೆಗೆ ರಿಯೋ ಡಿ ಜೆನ್ಸೆರೊ ದಲ್ಲಿ ನಡೆದ ಸಮಾರಂಭದಲ್ಲಿ ಪ್ರಕಟಿಸಲಾಯಿತು. ಈ ಬಾರಿ ಪ್ರಶಸ್ತಿ ಗೆದ್ದ ಕ್ರೀಡಾ ಪಟುಗಳ ವಿವರ ಇಲ್ಲಿದೆ.

- ವರ್ಷದ ವಿಶ್ವ ಆಟಗಾರ್ತಿ ಪ್ರಶಸ್ತಿ: 2012 ರ ಲಂಡನ್ ಒಲಂಪಿಕ್ಸ್ ನಲ್ಲಿ ಚಿನ್ನ ಗೆದ್ದ ಜೆಸ್ಸಿಕ ಎನ್ನಿಸ್ (Jessica Ennica) ರವರಿಗೆ ಈ ಬಾರಿಯ ವರ್ಷದ ಆಟಗಾರ್ತಿ ಪ್ರಶಸ್ತಿಯನ್ನು ನೀಡಲಾಗಿದೆ.
- ವರ್ಷದ ವಿಶ್ವ ಆಟಗಾರ ಪ್ರಶಸ್ತಿ: ಜಮೈಕಾದ ಓಟಗಾರ "ಉಸೇನ್ ಬೋಲ್ಟ್" ರವರಿಗೆ ವರ್ಷದ ವಿಶ್ವ ಆಟಗಾರ ಪ್ರಶಸ್ತಿಯನ್ನು ನೀಡಲಾಗಿದೆ. ಉಸೇನ್ ರವರು ಮೂರನೇ ಬಾರಿ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.
- ಲಾರೆಯಸ್ ಬ್ರೇಕ್ ಥ್ರೂ (Breakthrough) ಪ್ರಶಸ್ತಿ: ಖ್ಯಾತ ಟೆನ್ನಿಸ್ ಆಟಗಾರ "ಆಂಡ್ರೆ ಮುರ್ರೆ" ರವರನ್ನು ವರ್ಷದ ಲಾರೆಯಸ್ ಬ್ರೇಕ್ ಥ್ರೂ ಪ್ರಶಸ್ತಿ ಆಯ್ಕೆ ಮಾಡಲಾಗಿದೆ. ಮುರ್ರೆ ರವರು 2012 ರ ಲಂಡನ್ ಒಲಂಪಿಕ್ಸ್ ನಲ್ಲಿ ಸಿಂಗಲ್ಸ್ ವಿಭಾಗದಲ್ಲಿ ಚಿನ್ನ ಹಾಗೂ ಡಬಲ್ಸ್ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು.
- ಜೀವ ಮಾನ ಸಾಧನೆ ಪ್ರಶಸ್ತಿ: ಲಂಡನ್ ಒಲಂಪಿಕ್ಸ್ ಪ್ರಾಯೋಜಕ ಸಮಿತಿಯ ಅಧ್ಯಕ್ಷರಾಗಿದ್ದ "ಸೆಬೆಸ್ಟಿಯನ್ ಕೋ" ರವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡುವ ಮೂಲಕ ಗೌರವಿಸಲಾಗಿದೆ.
- ವಿಕಲಚೇತನರ ವಿಭಾಗದಲ್ಲಿ ವರ್ಷದ ವಿಶ್ವ ಆಟಗಾರ ಪ್ರಶಸ್ತಿ: ಈ ಪ್ರಶಸ್ತಿಗೆ "ಡೆನಿಯಲ್ ಡಿಯಾಸ್" ರವರನ್ನು ಆಯ್ಕೆಮಾಡಲಾಗಿದೆ. ಪ್ಯಾರಾಲಿಂಪಿಕ್ ನಲ್ಲಿ ಈಜು ವಿಭಾಗದಲ್ಲಿ ಪ್ರಸಿದ್ದರಾಗಿರುವ ಡಿಯಾಸ್ ರವರಿಗೆ ಇದು ಎರಡನೇ ಸಲದ ಪ್ರಶಸ್ತಿಯಾಗಿದೆ.

- ಲಾರೆಯಸ್ ಅಕಾಡೆಮಿ ಅಸಾಧಾರಣ ಸಾಧನೆ ಪ್ರಶಸ್ತಿ: ಅಮೆರಿಕಾದ ಖ್ಯಾತ ಈಜುಗಾರ "ಮೈಕಲ್ ಪೆಲ್ಪ್" ಈ ಬಾರಿ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.
- ಲಾರೆಯಸ್ ವರ್ಷದ ವಿಶ್ವ ತಂಡ ಪ್ರಶಸ್ತಿ: ಯುರೋಪಿಯನ್ ರೈಡರ್ಸ್ ತಂಡಕ್ಕೆ ಈ ಬಾರಿ ಪ್ರಶಸ್ತಿ ಒಲಿದಿದೆ.

ಲಾರೆಯಸ್ ಪ್ರಶಸ್ತಿ:

- ಜಾಗತಿಕ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಶ್ರೇಷ್ಟ ಕ್ರೀಡಾಪಟುಗಳಿಗೆ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ನೀಡಲಾಗುತ್ತಿದೆ. ಲಾರೆಯಸ್ ಆಯ್ಕೆ ಸಮಿತಿಯು ಆರು ವಿಭಾಗಗಳಲ್ಲಿ ಆಯ್ಕೆ ಮಾಡಲಾಗುವ ಕ್ರೀಡಾ ಪಟುಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.
- ಪ್ರಶಸ್ತಿ ಪಡೆದ ಪ್ರತಿ ಆಟಗಾರರಿಗೂ 30 ಸೇ.ಮಿ ಎತ್ತರ ಮತ್ತು 2.5 ಕೆ.ಜಿ ತೂಕವಿರುವ ಲಾರೆಯಸ್ ಪ್ರತಿಮೆಯನ್ನು ನೀಡಲಾಗುವುದು. ಪ್ರತಿ ಪ್ರತಿಮೆಯೂ 670 ಗ್ರಾಂ ಬೆಳ್ಳಿ ಮತ್ತು 670 ಗ್ರಾಂ ಚಿನ್ನದಿಂದ ಮಾಡಲಾಗಿರುತ್ತದೆ.

**ಗವಾಸ್ಕಾರ್ ಟೆಸ್ಟ್ ಟ್ರೋಫಿ: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಜಯ**

ಪ್ರತಿಷ್ಠಿತ ಬಾರ್ಡರ್ ಗವಾಸ್ಕರ್ ಟೆಸ್ಟ್ ಸರಣಿಯನ್ನು ಭಾರತ ಕೈವಶಮಾಡಿಕೊಂಡಿದೆ. ಮೊಹಲಿಯಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲೂ ಭಾರತ ಭರ್ಜರಿ ಜಯಗಳಿಸುವ ಮೂಲಕ ಸರಣಿಯನ್ನು ತನ್ನದಾಗಿಸಿಕೊಂಡಿತು.

- ಆಸೀಸ್ ವಿರುದ್ಧದ 3 ನೇ ಪಂದ್ಯದಲ್ಲಿ ಭಾರತ 6 ವಿಕೆಟ್ ಗಳ ಜಯಸಾಧಿಸಿದೆ. 4 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ 3-0 ಮುನ್ನಡೆಯನ್ನು ಕಾಯ್ದುಕೊಂಡು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.
- ಮುರಳಿ ವಿಜಯ್ ಮತ್ತು ಚೇತೇಶ್ವರ ಪೂಜಾರ ರವರು ಮೊದಲನೇ ಇನ್ನಿಂಗ್ಸ್ ನಲ್ಲಿ ನೀಡಿದ ಅದ್ಭುತ ಆಟದಿಂದ ಪಂದ್ಯ ಗೆಲ್ಲುವ ಭಾರತದ ಕನಸು ಸುಗಮವಾಯಿತು. ಆಸ್ಟ್ರೇಲಿಯಾದ 408 ರನ್ ಗಳ ಗುರಿಯನ್ನು ಬೆನ್ನಟ್ಟಿದ ಭಾರತ ಮೊದಲ ಇನ್ನಿಂಗ್ಸ್ ನಲ್ಲಿ 499/10 ರನ್ ಗಳನ್ನು ಪೇರಿಸುವ ಮೂಲಕ 97 ರನ್ ಗಳ ಇನ್ನಿಂಗ್ಸ್ ಮುನ್ನಡೆಯನ್ನು ಸಾಧಿಸಿತ್ತು. ಎರಡನೇ ಇನ್ನಿಂಗ್ಸ್ ನಲ್ಲಿ ಭಾರತದ ಬೌಲರ್ ಭುವನೇಶ್ವ ಕುಮಾರ್ ರವರ ದಾಳಿಗೆ ತತ್ತರಿಸಿದ ಆಸ್ಟ್ರೇಲಿಯಾ 233 ರನ್ ಗಳಿಗೆ ಆಲೌಟ್ ಆಯಿತು.
- ಭಾರತದ ಶಿಖರ್ ಧವನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಅಜ್ಲಾನ್ ಷಾ ಹಾಕಿ ಟ್ರೋಫಿ: ಆಸ್ಟ್ರೇಲಿಯಾಗೆ ಪ್ರಶಸ್ತಿಯ ಗರಿ**

ಮಲೇಷಿಯಾದಲ್ಲಿ ನಡೆದ ಅಜ್ಲಾನ್ ಷಾ ಹಾಕಿ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಫೈನಲ್ ಪಂದ್ಯದಲ್ಲಿ ಅತಿಥೇಯ ಮಲೇಷಿಯಾ ತಂಡವನ್ನು 3-2 ಗೋಲುಗಳಿಂದ ಮಣಿಸಿದ ಆಸ್ಟ್ರೇಲಿಯಾ ತಂಡ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

- ಆಸ್ಟ್ರೇಲಿಯಾದ ಪರ ನಿಕೊಲಸ್ ಬಡ್ಡಿಯೊನ್, ಡೇನಿಯಲ್ ಬೀಲ್ ಮತ್ತು ಟ್ರೆಂಟ್ ಮಿಲ್ಟನ್ ಗೋಲು ಗಳಿಸುವ ಮೂಲಕ ಮಲೇಷಿಯಾ ತಂಡಕ್ಕೆ ಆಘಾತ ನೀಡಿದರು. ಆಸ್ಟ್ರೇಲಿಯಾಕ್ಕೆ ಇದು ಏಳನೇ ಟ್ರೋಫಿ ಎಂಬುದು ಗಮನಾರ್ಹ.

- ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ನಡೆದ ಪೈಪೋಟಿಯಲ್ಲಿ ನ್ಯೂಜಿಲ್ಯಾಂಡ್ ತಂಡವನ್ನು ಮಣಿಸಿದ ಕೊರಿಯಾ ಕಂಚಿನ ಪದಕಕ್ಕೆ ತೃಪ್ತಿಪಡೆದುಕೊಂಡಿತು.

ಭಾರತಕ್ಕೆ ಐದನೇ ಸ್ಥಾನ:

- ಆರು ರಾಷ್ಟ್ರಗಳು ಪಾಲ್ಗೊಂಡಿದ್ದ ಟೂರ್ನಿಯಲ್ಲಿ ಭಾರತಕ್ಕೆ ಐದನೇ ಸ್ಥಾನ ದೊರೆತಿದೆ. ಭಾರತ ವಿರುದ್ಧ ಪರಾಭವಗೊಂಡ ಪಾಕಿಸ್ತಾನ ಟೂರ್ನಿಯಲ್ಲಿ ಕೊನೆಯ ಸ್ಥಾನಗಳಿಸಿತು.

**ಆಸ್ಟ್ರೇಲಿಯಾ ಗ್ರಾಂಡ್ ಪ್ರಿಕ್ಸ್ 2013: ರೈಕೊನೆನ್ ಚಾಂಪಿಯನ್**

ಆಸ್ಟ್ರೇಲಿಯಾದ ಫಾರ್ಮೂಲ ಓನ್ ರೇಸರ್ ನ ಚಾಲಕ ಲೋಟಸ್ ತಂಡದ ಕಿಮಿ ರೈಕೊನೆನ್ ರವರು ಆಸ್ಟ್ರೇಲಿಯಾ ಗ್ರಾಂಡ್ ಪ್ರಿಕ್ಸ್ 2013 ನ ಋತುವಿನಲ್ಲಿ ಚೊಚ್ಚಲ ರೇಸ್ ಗೆದ್ದುಕೊಂಡರು.

- ಫೆರಾರಿ ತಂಡದ ಫೆರ್ನಾಂಡೊ ಅಲೊನ್ಸೊ ಎರಡನೇ ಸ್ಥಾನ ಪಡೆದರೆ, ಹಾಲಿ ಚಾಂಪಿಯನ್ ರೆಡ್ ಬುಲ್ ತಂಡದ ಸೆಬಾಸ್ಟಿಯನ್ ವೆಟೆಲ್ ರವರು ಮೂರನೇ ಸ್ಥಾನಗಳಿಸಿದರು.

ಕಿಮಿ ರೈಕೊನೆನ್:

- 2001 ರಲ್ಲಿ ಫಾರ್ಮೂಲ ಓನ್ ಡ್ರೈವರ್ ಆಗಿ ವೃತ್ತಿ ಆರಂಭಿಸಿದ ಕಿಮಿ ರವರು ಇದು ವರೆಗೂ ಫಾರ್ಮುಲಾ ಓನ್ ನಲ್ಲಿ 20 ಟೈಟಲ್ ಗಳನ್ನು ಗೆದ್ದಿದ್ದಾರೆ.
- 2007 ರಲ್ಲಿ ಫೆರಾರಿ ತಂಡದ ವಿಶ್ವ ಚಾಂಪಿಯನ್ ಆಗಿ ಕಿಮಿ ರವರು ಹೊರ ಹೊಮ್ಮಿದ್ದರು.

**BNP ಪರಿಬಾಸ್ ಓಪನ್ ಟೆನಿಸ್ ಟೂರ್ನಿ ರಫೆಲ್ ನಡಾಲ್ ಗೆ ಪ್ರಶಸ್ತಿ**

ಸ್ಪೇನ್ ನ ರಫೆಲ್ ನಡಾಲ್ ರವರು ಇಂಡಿಯನ್ ವೆಲ್ಸ್ BNP ಪರಿಬಾಸ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ವಿಭಾಗದಲ್ಲಿ ಪ್ರಶಸ್ತಿಗಳಿಸಿದ್ದಾರೆ. ಫೈನಲ್ ನಲ್ಲಿ ನಡಾಲ್ ರವರು 4-6, 6-3, 6-4 ರಲ್ಲಿ ಅರ್ಜೆಂಟೀನಾದ ಜುವಾನ್ ಮಾರ್ಟಿನ್ ಡೆಲ್ ಪೆಟ್ರೊ ಅವರನ್ನು ಸೋಲಿಸಿದರು. ರಫೆಲ್ ರವರಿಗೆ ತಮ್ಮ ವೃತ್ತಿ ಜೀವನದ 600ನೇ ಗೆಲುವು ಇದಾಗಿದೆ. ಜೊತೆಗೆ ಶ್ರೇಣಿಯಲ್ಲಿ ನಾಲ್ಕನೇ ಸ್ಥಾನಕ್ಕೇರಲಿದ್ದಾರೆ.

- ಈ ವರ್ಷದಲ್ಲಿ ರಫೆಲ್ ರವರು ಗೆಲ್ಲುತ್ತಿರುವ ಮೂರನೇ ಪ್ರಶಸ್ತಿ ಇದಾಗಿದೆ. ಈ ಮುಂಚೆ ಬ್ರೆಜಿಲ್ ಮತ್ತು ಮೆಕ್ಸಿಕನ್ ಓಪನ್ ಪ್ರಶಸ್ತಿಗೆ ರಫೆಲ್ ರವರು ಭಾಜನರಾಗಿದ್ದರು.

ಶರ್ಪೋವಾಗೆ ಪ್ರಶಸ್ತಿ:

- ಪರಿಬಾಸ್ ಓಪನ್ ಟೆನ್ನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಮಾರಿಯಾ ಶರ್ಪೋವಾ ರವರು ವಿಜೇತರಾಗಿದ್ದಾರೆ. ಶರ್ಪೋವಾ ರವರು ಫೈನಲ್ ನಲ್ಲಿ 6-2, 6-2 ರಲ್ಲಿ ಡೆನ್ಮಾರ್ಕ್ ನ ಕರೋಲಿನಾ ವಾಜ್ನಿಯಾಕಿ ಎದುರು ಜಯಗಳಿಸಿದರು.
- ಶರ್ಪೋವಾ ರವರು ಎರಡನೇ ಬಾರಿ ಪರಿಬಾಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಹಿಂದೆ 2006 ರಲ್ಲಿ ಈ ಪ್ರಶಸ್ತಿಯನ್ನು ಜಯಿಸಿದ್ದರು.

- 2013 ನೇ ವರ್ಷದಲ್ಲಿ ಶರ್ಪೋವಾ ರವರಿಗೆ ಇದು ಮೊದಲನೇ ಪ್ರಶಸ್ತಿಯಾಗಿದ್ದು, ಈ ಪ್ರಶಸ್ತಿ ಗೆಲ್ಲುವ ಮೂಲಕ ಎರಡನೇ ಸ್ಥಾನಕ್ಕೆ ಏರಿದ್ದಾರೆ.

**ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್ ನ ತಾಂತ್ರಿಕ ಸಮಿತಿ ಮುಖ್ಯಸ್ಥರಾಗಿ ಭುಟಿಯಾ**

ಭಾರತ ಫುಟ್ ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾರವರು ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್ ನ ತಾಂತ್ರಿಕ ಸಮಿತಿಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಭಾರತ ಫುಟ್ ಬಾಲ್ ತಂಡದ ಯಶಸ್ವಿ ಆಟಗಾರರೆನಿಸಿದ್ದ ಭುಟಿಯಾ ರವರು 2011 ರಲ್ಲಿ ಅಂತರ ರಾಷ್ಟ್ರೀಯ ಫುಟ್ ಬಾಲ್ ಗೆ ವಿದಾಯ ಹೇಳಿದ್ದರು.

- ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್ ರ ಅಧ್ಯಕ್ಷರಾಗಿರುವ ಪ್ರಫುಲ್ ಪಟೇಲ್ ರವರು ಭುಟಿಯಾ ರವರ ಆಯ್ಕೆಯನ್ನು ಅಂತಿಮಗೊಳಿಸಿದ್ದಾರೆ. ಭುಟಿಯಾ ರವರ ನೇಮಕಾತಿಯಿಂದ ಇಲ್ಲಿಯವರೆಗೂ ತಾಂತ್ರಿಕ ಸಮಿತಿಯ ಮುಖ್ಯಸ್ಥರಾಗಿದ್ದ ಮೊಹಮ್ಮದ್ ಹಬೀಬ್ ರವರು ತಮ್ಮ ಹುದ್ದೆಯಿಂದ ಕೆಳಗಿಳಿಯಲಿದ್ದಾರೆ.
- 107 ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಭುಟಿಯಾ ರವರು 42 ಗೋಲುಗಳನ್ನು ಗಳಿಸಿದ್ದಾರೆ. ಭುಟಿಯಾ ರವರ ನಾಯಕತ್ವದಡಿ ಭಾರತ ಎರಡು ಸಲ ನೆಹರು ಕಪ್, ಮೂರು ಸಲ ಎಸ್ಎಎಫ್, ಎಲ್ ಜಿ ಕಪ್ ಮತ್ತು 2008 ರಲ್ಲಿ ಎಎಫ್ ಸಿ ಚಾಲೆಂಜ್ ಕಪ್ ಟೂರ್ನಿಯನ್ನು ಗೆದ್ದುಕೊಂಡಿತ್ತು.

**ಇಟಲಿಯ ಅಥ್ಲೆಟಿಕ್ ಪಿಟ್ರೊ ಮೆನ್ನ (Pietro Mennea) ನಿಧನ**

ಇಟಲಿಯ ಪ್ರಸಿದ್ಧ ಅಥ್ಲೆಟಿಕ್ ಪಿಟ್ರೋ ಮೆನ್ನ (60) ಅನಾರೋಗ್ಯದ ಕಾರಣದಿಂದ ರೋಮ್ ನಲ್ಲಿ ನಿಧನರಾದರು. ಇಟಲಿಯ ಸರ್ವ ಶ್ರೇಷ್ಠ ಕ್ರೀಡಾ ಪಟುಗಳಲ್ಲಿ ಪ್ರಮುಖರೆನಿಸದ್ದ ಅವರು ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು.

ಪಿಟ್ರೋ ಮೆನ್ನ ಸಾಧನೆಗಳು:

- 1980 ರಲ್ಲಿ ರಷ್ಯಾದ ಮಾಸ್ಕೋದಲ್ಲಿ ನಡೆದ ಒಲಂಪಿಕ್ ಪಂದ್ಯದಲ್ಲಿ ಪಿಟ್ರೊ ಮೆನ್ನ ರವರು 200 ಮೀ ಓಟ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದರು.
- ಪಿಟ್ರೊ ರವರು ಇಟಲಿಯ ಹೊರಗಡೆ 100 ಮೀ ಮತ್ತು 200 ಮೀ ಓಟದಲ್ಲಿ 14 ಭಾರಿ ಚಾಂಪಿಯನ್ ಆಗಿದ್ದರು.
- 1979 ರಂದು ಮೆಕ್ಸಿಕೊದಲ್ಲಿ ಪಿಟ್ರೊ ಕೇವಲ 19.72 ಸೆಕೆಂಡ್ ಗಳಲ್ಲಿ 200 ಮೀ ಕ್ರಮಿಸುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದ್ದರು. ಸುಮಾರು 2 ದಶಕಗಳ ಕಾಲ ಅಳಿಯದೇ ಉಳಿದಿದ್ದ ಈ ದಾಖಲೆಯನ್ನು ಅಮೆರಿಕಾದ ಮೈಕಲ್ ಜಾನ್ ಸನ್ 1996 ರಲ್ಲಿ ಅಳಿಸಿದರು.
- 1984 ರಲ್ಲಿ ಲಾಸ್ ಎಂಜಲೀಸ್ ನಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಪಾಲ್ಗೊಳ್ಳುವ ಮೂಲಕ ಸತತ ನಾಲ್ಕು ಬಾರಿ ಒಲಂಪಿಯನ್ ನಲ್ಲಿ ಕಾಣಿಸಿಕೊಂಡ ಪ್ರಥಮ ಕ್ರೀಡಾಪಟು ಎಂದೆನಿಸಿದ್ದರು.
- ತಮ್ಮ ಕ್ರೀಡಾ ಕೌಶಲ್ಯದಿಂದ ಇಟಲಿಗೆ ಕೀರ್ತಿ ತಂದ ಪಿಟ್ರೋ ರವರು 1988 ರಲ್ಲಿ ನಿವೃತ್ತಿ ಘೋಷಿಸಿದ್ದರು.

<u>ಗಾಲ್ಫ್: ಮತ್ತೆ ನಂ.1 ಸ್ಥಾನಕ್ಕೆ ಮರಳಿದ ಟೈಗರ್ ವುಡ್</u>

ಅಮೆರಿಕಾ ವೃತ್ತಿಪರ ಗಾಲ್ಫ್ ಪಟು ಟೈಗರ್ ವುಡ್ ಮತ್ತೆ ಮಿಂಚಿದ್ದಾರೆ. ಫ್ಲೋರಿಡಾದಲ್ಲಿ ನಡೆದ ಅರ್ನಾಲ್ಡ್ ಪಾಮರ್ ಇನವೈಟೇಷನಲ್ (Arnold Palmer Invitational) PGA ಟೂರ್ ಟೈಟಲ್-2013 ರಲ್ಲಿ ಟೈಗರ್ ವುಡ್ ರವರು ಜಸ್ಟೀನ್ ರೋಸ್ ವಿರುದ್ಧ 69-70-66-70 ರಲ್ಲಿ ಜಯಗಳಿಸಿದರು.

- ಈ ಗೆಲುವಿನ ಮೂಲಕ ಟೈಗರ್ ವುಡ್ ರವರು ವಿಶ್ವ ಗಾಲ್ಫ್ ಶ್ರೇಣಿ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ. ಇದುವರೆಗೂ ಅಗ್ರಸ್ಥಾನದಲ್ಲಿದ್ದ ರೊರಿ ರಾಯ್ (Rory McIlroy) ರವರು ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ. 2013 ನೇ ಋತುವಿನಲ್ಲಿ ಟೈಗರ್ ವುಡ್ ರವರಿಗೆ ಇದು ಮೂರನೇ PGA ಟೂರ್ ಟೈಟಲ್ ಆಗಿದ್ದು, ಒಟ್ಟಾರೆಯಾಗಿ 77 PGA ಟೈಟಲ್ ಆಗಿದೆ.
- ರನ್ನರ್ ಆಫ್ ಆದ ಜಸ್ಟೀಸ್ ರೋಸ್ ರವರಿಗೆ ಪಟ್ಟಿಯಲ್ಲಿ ಮೂರನೇ ಸ್ಥಾನ ಲಭಿಸಿದೆ.

ಟೈಗರ್ ವುಡ್:

- ಟೈಗರ್ ವುಡ್ ರವರು ಆಮೆರಿಕಾ ಪ್ರಸಿದ್ದ ವೃತ್ತಿಪರ ಗಾಲ್ಫ್ ಪಟು. ಫೋರ್ಬ್ಸ್ ಪತ್ರಿಕೆ ಇವರನ್ನು ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಅಥ್ಲೇಟಿಕ್ ಎಂದು ಹೊಗಳಿತ್ತು.
- 1997 ರಲ್ಲಿ ಗಾಲ್ಫ್ ಶ್ರೇಣಿ ಪಟ್ಟಿಯಲ್ಲಿ ಟೈಗರ್ ವುಡ್ ರವರು ಪ್ರಥಮ ಬಾರಿಗೆ ಅಗ್ರಸ್ಥಾನಕ್ಕೆ ಏರಿದ್ದರು.
- ಆಗಸ್ಟ್ 1999 ರಿಂದ ಸೆಪ್ಟೆಂಬರ್ 2004 ರ ವರೆಗೆ ಸುಮಾರು 264 ವಾರಗಳ ತನಕ ಅಗ್ರ ಸ್ಥಾನದಲ್ಲೇ ಮುಂದುವರೆದ ಕೀರ್ತಿ ಟೈಗರ್ ವುಡ್ ಗೆ ಸಲ್ಲುತ್ತದೆ. ಬಳಿಕ ಜೂನ್ 2005 ರಿಂದ ಅಕ್ಟೋಬರ್ 2010 ರ ವರೆಗೆ ಪುನಃ ನಂ.1 ಗಾಲ್ಫ್ ಆಟಗಾರನಾಗಿ ಮಿಂಚಿದ್ದರು.

## ಪ್ರಶಸ್ತಿ

### ಭಾರತ ಮೂಲದ ಲೇಖಕ ಅನಿಲ್ ಅನಂತ್ ಸ್ವಾಮಿಗೆ ಪ್ರಶಸ್ತಿ

ಬ್ರಿಟನ್ನಿನ ಸಂಸ್ಥೆಯೊಂದು ನೀಡುವ ಭೌತಶಾಸ್ತ್ರ ಪ್ರಶಸ್ತಿಗೆ ಭಾರತ ಮೂಲದ ಲೇಖಕ ಅನಿಲ್ ಅನಂತಸ್ವಾಮಿ ನೇಮಕಗೊಂಡಿದ್ದಾರೆ. ಅನಿಲರವರು "ನ್ಯೂ ಸೈಂಟಿಸ್ಟ್" ನಿಯತಕಾಲಿಕೆಯ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವರು. ಇವರು "ದಿ ಎಡ್ಜ್ ಆಫ್ ಫಿಸಿಕ್ಸ್" ಎಂಬ ಕೃತಿಯನ್ನು ಬರೆದಿದ್ದಾರೆ.

- ಭೌತಶಾಸ್ತ್ರ ವಿಷಯದಲ್ಲಿ ಪರಿಣಿತಿ ಹೊಂದಿ ಮುಂದಿನ ಪೀಳಿಗೆಗೆ ಭೌತಶಾಸ್ತ್ರದ ಬಗ್ಗೆ ಅರಿವು ಮೂಡಿಸಲು ಶ್ರಮಿಸುವ ಪತ್ರಕರ್ತರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಈ ಪ್ರಶಸ್ತಿಗೆ ಭಾಜನರಾದವರು ಜಪಾನ್ ದೇಶಕ್ಕೆ ತೆರಳಿ, ಅಲ್ಲಿನ ಭೌತಶಾಸ್ತ್ರ ಪ್ರಯೋಗಾಲಯದಲ್ಲಿ ಅಧ್ಯಯನ ನಡೆಸುಬಹುದಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ಕಂಪನಿಯೇ ಭರಿಸುತ್ತದೆ.

### ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಸಂಗೀತ ಪ್ರಶಸ್ತಿ ಪ್ರಕಟ

ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಸಂಗೀತ ಪ್ರಶಸ್ತಿಯನ್ನು 2010 ಮತ್ತು 2011-12 ನೇ ಸಾಲಿಗೆ ಪ್ರಕಟಿಸಲಾಗಿದೆ. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮೆರೆದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ವಿವಿಧ ಭಾಗಗಳಲ್ಲಿ ಆಯ್ಕೆಯಾದ ಮಹನೀಯರ ಹೆಸರನ್ನು ಇಲ್ಲಿ ಕೊಡಲಾಗಿದೆ.

- ಟಿ. ಚೌಡಯ್ಯ ಪ್ರಶಸ್ತಿ (2010): ಮೈಸೂರಿನ ವಿದ್ವಾನ್ ಎನ್.ಮಹಾದೇವಪ್ಪ. ಪ್ರಶಸ್ತಿಯ ಮೊತ್ತ 5 ಲಕ್ಷ
- ಸಂತ ಶಿಶುನಾಳ ಶರೀಫ (2011): ಬೆಂಗಳೂರಿನ ನಾರಾಯಣ ರಾವ್ ಮಾನೆ. ಪ್ರಶಸ್ತಿಯ ಮೊತ್ತ 3 ಲಕ್ಷ.
- ಶ್ರೀ ನಿಜಗುಣ ಪುರಂದರ (2011): ಗೌರಿಬಿದನೂರಿನ ಕುರುಡಿ ವೆಂಕಟಚಾರ್
- ಕನಕಶ್ರೀ (2011): ಕಾ.ತ. ಚಿಕ್ಕಣ್ಣ: ಪ್ರಶಸ್ತಿಯ ಮೊತ್ತ 5 ಲಕ್ಷ.
- ಜಾನಪದ ಶ್ರೀ: 2011 ನೇ ಸಾಲಿನಲ್ಲಿ ಕಾಶಿಬಾಯಿ ದಾದನಟ್ಟಿ ಮತ್ತು 2012 ರಲ್ಲಿ ಬೈಲಹೊಂಗಲದ ಫಕೀರಪ್ಪ ದೊಡ್ಡವಾಡ. ಪ್ರಶಸ್ತಿಯ ಮೊತ್ತ ತಲಾ 3 ಲಕ್ಷ.

### ಪಂಡಿತ್ ರಾಜೀವ್ ಮತ್ತು ಚಟರ್ಜಿಗೆ "ಪುಟ್ಟರಾಜ ಗವಾಯಿ ಪ್ರಶಸ್ತಿ"

ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನ ನೀಡಲಾಗುವ "ಪುಟ್ಟರಾಜ ಗವಾಯಿ ಪ್ರಶಸ್ತಿ" ಯನ್ನು ಪ್ರಕಟಿಸಲಾಗಿದೆ. ಇದೇ ಮೊದಲ ಬಾರಿಗೆ ಈ ಪ್ರಶಸ್ತಿಯನ್ನು ಇಬ್ಬರಿಗೆ ನೀಡಲಾಗುತ್ತಿದೆ.

- ಪ್ರಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಮತ್ತು ಪ್ರಸಿದ್ಧ ಸಿತಾರ್ ವಾದಕ ಪಂಡಿತ್ ಪಾರ್ಥ ಚಟರ್ಜಿ ಅವರನ್ನು ಈ ಸಾಲಿನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- 1 ಲಕ್ಷ ನಗದು ಮೊತ್ತವನ್ನು ಹೊಂದಿರುವ ಈ ಪ್ರಶಸ್ತಿಯನ್ನು ಇಬ್ಬರಿಗೂ ಹಂಚಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಸದಾನಂದ ಕನವಳ್ಳಿ ತಿಳಿಸಿದ್ದಾರೆ.

**ರಾಷ್ಟ್ರಪತಿ ಪ್ರಣಭ್ ಮುಖರ್ಜಿಗೆ ಢಾಕಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್**

ಢಾಕಾ ವಿಶ್ವವಿದ್ಯಾಲಯ ತನ್ನ 47 ನೇ ಘಟಿಕೋತ್ಸವದಲ್ಲಿ ಭಾರತದ ರಾಷ್ಟ್ರಪತಿ ಪ್ರಣಭ್ ಮುಖರ್ಜಿಯವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಬಾಂಗ್ಲದೇಶದ ರಾಷ್ಟ್ರಾಧ್ಯಕ್ಷರಾದ ಜಿಲ್ಲೂರು ರೆಹಮಾನ್ ರವರು ಪ್ರಣಭ್ ಮುಖರ್ಜಿ ಪದವಿಯನ್ನು ಪ್ರದಾನ ಮಾಡಿದರು.

- ಪ್ರಣಬ್ ರವರು ರಾಷ್ಟ್ರಪತಿಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ ಬಾಂಗ್ಲ ದೇಶದ ಪ್ರವಾಸ ಅವರ ಮೊದಲ ವಿದೇಶ ಪ್ರವಾಸವಾಗಿದೆ.
- ಬಾಂಗ್ಲ ಮತ್ತು ಭಾರತ ದೇಶಗಳ ನಡುವಿನ ಸಂಬಂಧವನ್ನು ಈ ಪ್ರವಾಸ ಮತ್ತಷ್ಟು ಗಟ್ಟಿಗೊಳಿಸಲಿದೆ ಎಂದು ತಿಳಿಯಲಾಗಿದೆ.

**"ನಿರ್ಭಯ" ಗೆ ಅಮೆರಿಕಾದ ಪ್ರಶಸ್ತಿ**

ದೆಹಲಿಯ ಬಸ್ಸಿನಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ಜೀವ ತೆತ್ತ ದೆಹಲಿ ಪ್ಯಾರಮೆಡಿಕಲ್ ವಿದ್ಯಾರ್ಥಿನಿ "ನಿರ್ಭಯ" ಗೆ ಅಮೆರಿಕಾದ "ಇಂಟರ್ ನ್ಯಾಷನಲ್ ವುವೆನ್ ಆಫ್ ಕರೇಜ್ ಅವಾರ್ಡ್-2013 (International Women of Courage Award)" ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

- ಸಾಮೂಹಿಕ ಅತ್ಯಾಚಾರದ ನಂತರವೂ "ನಿರ್ಭಯ" ರವರು ತೋರಿದ ಧೈರ್ಯ ಇಡೀ ಮಹಿಳಾ ಸಮುದಾಯಕ್ಕೆ ಒಂದು ಮಾದರಿಯಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಅಪರಾಧಿಗಳಿಗೆ ಶಿಕ್ಷೆ ವಿಧಿಸುವಂತೆ ಅವರು ನೀಡಿದ ಹೇಳಿಕೆ ಶ್ಲಾಘನೀಯ ಮತ್ತು ಈ ಕೃತ್ಯದ ನಂತರ ಮಹಿಳಾ ಶೋಷಣೆ ವಿರುದ್ದ ನಡೆದ ಪ್ರತಿಭಟನೆಗಳು ಮಹಿಳಾ ಹಕ್ಕುಗಳನ್ನು ಎತ್ತಿ ಹಿಡಿಯುತ್ತವೆ ಎಂದು ಬಣ್ಣಿಸಲಾಗಿದೆ.
- 2007 ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದ್ದು, ಇದುವರೆಗೂ 45 ದೇಶದ ಸುಮಾರು 67 ಮಹಿಳೆಯರಿಗೆ ನೀಡಲಾಗಿದೆ.
- "ನಿರ್ಭಯ" ಗೆ ಮರಣೋತ್ತರವಾಗಿ ನೀಡಲಾಗುತ್ತಿರುವ ಈ ಪ್ರಶಸ್ತಿ ಸಮಾರಂಭದಲ್ಲಿ ಅಮೆರಿಕಾದ ಪ್ರಥಮ ಮಹಿಳೆ ಮಿಷೆಲ್ ಒಬಾಮ ರವರು ಭಾಗವಹಿಸಲಿದ್ದಾರೆ.
- "ನಿರ್ಭಯ" ರವರನ್ನು ಹೊರತುಪಡಿಸಿ ಟಿಬೆಟ್ ನ "ಸೆರಿಂಗ್ ವೊಸರ್ (Tsering Woeser)" ಮತ್ತು ರಷ್ಯಾದ ಪತ್ರಕರ್ತೆಯರು ಹಾಗೂ ಮಾನವ ಹಕ್ಕು ಹೋರಾಟಗಾರರು ಆದ ಎಲೆನಾ ಮಿಲಶಿನ (Elena Milashina) ಮತ್ತು ರಜಾನ್ ಝೆತುನಾಃ (Razan Zeithunah) ರವರನ್ನು ಸಹ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ಹರಿರಾಮ್ ಮೀನಾ ಗೆ ಬಿಹಾರಿ ಪುರಸ್ಕಾರ-2012 ಪ್ರಶಸ್ತಿ**

ರಾಜಸ್ತಾನದ ಪ್ರಸಿದ್ದ ಲೇಖಕರಾದ ಹರಿರಾಮ್ ಮೀನಾರವರನ್ನು 2012 ನೇ ಸಾಲಿನ ಬಿಹಾರಿ ಪುರಸ್ಕಾರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 2008 ರಲ್ಲಿ ಹೊರತರಲಾದ ಅವರ "ದೂನಿ ತಪೆ ತೀರ್ (Dhooni Tape Teer)" ಹಿಂದಿ ಕಾದಂಬರಿಗೆ ಈ ಪ್ರಶಸ್ತಿ ಲಭಿಸಿದೆ. ನವೆಂಬರ್ 17, 1913 ರಲ್ಲಿ ರಾಜಸ್ತಾನದ ಬನ್ಸವಾರ ಜಿಲ್ಲೆಯಲ್ಲಿ ಬುಡಕಟ್ಟು ಜನಾಂಗದವರು ಸಾವನ್ನಪ್ಪಿದ ಘಟನೆಯನ್ನು

ಆಧಾರವಾಗಿಟ್ಟುಕೊಂಡು ಈ ಕಾದಂಬರಿಯನ್ನು ರಚಿಸಲಾಗಿದೆ. ನಂದ ಕುಮಾರ್ ಆಚಾರ್ಯ ರವರು ಅಧ್ಯಕ್ಷರಾಗಿದ್ದ ಆಯ್ಕೆ ಸಮಿತಿಯು ಹರಿರಾಮ್ ರವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಬಿಹಾರಿ ಪುರಸ್ಕಾರ:

- ಬಿಹಾರಿ ಪುರಸ್ಕಾರ ಪ್ರಶಸ್ತಿಯನ್ನು ಕೆ.ಕೆ. ಬಿರ್ಲಾ ಫೌಂಡೇಷನ್ 1991 ರಲ್ಲಿ ಸ್ಥಾಪಿಸಿತು. ಈ ಪ್ರಶಸ್ತಿಯನ್ನು ಪ್ರತಿ ವರ್ಷ ಕೇವಲ ರಾಜಸ್ತಾನಿ ಲೇಖಕರಿಗೆ ಮಾತ್ರ ನೀಡಲಾಗುತ್ತದೆ. ಕಾದಂಬರಿಯು ಹಿಂದಿ ಅಥವಾ ರಾಜಸ್ತಾನಿ ಭಾಷೆಯಲ್ಲಿ ಮಾತ್ರ ಇದ್ದು, ಕಳೆದ ಹತ್ತು ವರ್ಷಗಳಲ್ಲಿ ಪ್ರಕಟಣೆಗೊಂಡಿರಬೇಕು.
- ಪ್ರಶಸ್ತಿಯು ಫಲಕ ಮತ್ತು 1 ಲಕ್ಷ ನಗದನ್ನು ಒಳಗೊಂಡಿದೆ.

**ಧರ್ಮಸ್ಥಳದ ವಿರೇಂದ್ರ ಹೆಗ್ಗಡೆ ರವರಿಗೆ ದೇವಿ ಅಹಿಲ್ಯಾ ಬಾಯಿ ಪ್ರಶಸ್ತಿ**

ಮಧ್ಯಪ್ರದೇಶದ ಶ್ರೀ ಅಹಿಲೋತ್ಸವ ಸಮಿತಿ ನೀಡುವ ದೇವಿ ಅಹಿಲ್ಯಾ ಬಾಯಿ ಪ್ರಶಸ್ತಿಯನ್ನು ಈ ಬಾರಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗ್ಗಡೆಯವರಿಗೆ ನೀಡಿ ಸನ್ಮಾನಿಸಲಾಗಿದೆ. ಇಂಧೋರ್ ನಲ್ಲಿ ನಡೆದ ಸಮಾರಂಭದಲ್ಲಿ ಹೆಗ್ಗಡೆ ರವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟನ ನಿವೃತ್ತ ನ್ಯಾಯಾಮೂರ್ತಿ ರಮೇಶ್ ಚಂದ್ರ ಲಾಹೋಂ ಮತ್ತು ಸ್ವಾಮೀ ಸ್ವರೂಪನಂದ ಸರಸ್ವತಿಯವರು ಹಾಜರಿದ್ದರು.

- ಹೆಗ್ಗಡೆಯವರು ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಮತ್ತು ಸಮಾಜಕ್ಕೆ ನೀಡಿರುವ ಸೇವೆಗಳನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ಈ ಪ್ರಶಸ್ತಿಯು ಒಂದು ಲಕ್ಷ ನಗದನ್ನು ಒಳಗೊಂಡಿದೆ. ಈ ಹಿಂದೆ ಡಾ.ಬಿ.ಆರ್.ಚಿದಂಬರಂ, ವಿಜಯರಾಜ ಸಿಂದಿಯಾ, ನಾನಜಿ ದೇಶಮುಖ್ ಮತ್ತು ಸುಧಾ ಮೂರ್ತಿ ರವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಅರುಣ್ ಜೇಟ್ಲಿ, ಕರಣ್ ಸಿಂಗ್ ಮತ್ತು ಶರದ್ ಯಾದವ್ ಉತ್ತಮ ಸಂಸದೀಯ ಪಟು ಪ್ರಶಸ್ತಿ**

ಬಿಜೆಪಿ ನಾಯಕ ಅರುಣ್ ಜೇಟ್ಲಿ, ಕಾಂಗ್ರೆಸ್ ನ ಎಂಪಿ ಕರಣ್ ಸಿಂಗ್ ಮತ್ತು ಜೆಡಿ(ಯು) ನ ಎಂಪಿ ಶರದ್ ಯಾದವ್ ರವರನ್ನು ಸಂಸದೀಯ ಪ್ರಶಸ್ತಿ ಸಮಿತಿಯು 2010, 2011 ಮತ್ತು 2012 ಸಾಲಿನ ಉತ್ತಮ ಸಂಸದೀಯ ಪಟು ಪ್ರಶಸ್ತಿಗೆ ಆಯ್ಕೆ ಮಾಡಿದೆ.

- ಅರುಣ್ ಜೇಟ್ಲಿ ಮತ್ತು ಕರಣ್ ಸಿಂಗ್ ರವರು ಗುಜರಾತ್ ಮತ್ತು ದೆಹಲಿಯಿಂದ ರಾಜ್ಯ ಸಭಾ ಸದಸ್ಯರಾಗಿದ್ದಾರೆ.
- ಶರದ್ ಯಾದವ್ ರವರು ಬಿಹಾರದ ಮಾದೇಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿರುವರು.
- ಲೋಕ ಸಭಾ ಸ್ಪೀಕರ್ ಆಗಿರುವ ಮೀನಾ ಕುಮಾರಿಯವರು ಅಧ್ಯಕ್ಷತೆ ವಹಿಸಿರುವ ಸಮಿತಿಯು ಈ ಮೂವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಉತ್ತಮ ಸಂಸದೀಯ ಪ್ರಶಸ್ತಿ:

- ಉತ್ತಮ ಸಂಸದೀಯ ಪಟು ಪ್ರಶಸ್ತಿಯನ್ನು 1994 ರಲ್ಲಿ ಸ್ಥಾಪಿಸಲಾಗಿದ್ದು, ಸಂಸದೀಯ ಪ್ರಶಸ್ತಿ ಸಮಿತಿಯು ಆಯ್ಕೆ ಮಾಡಿದ ನಂತರ ಸಂಸತ್ತಿನ ಕಾರ್ಯಕಾರಿ ಸಮಿತಿ ಒಪ್ಪಿದ ಮೇಲೆ ನೀಡಲಾಗುತ್ತಿದೆ.

**ಮಹಿಳಾ ದಿನದಂದು ನೀಡಲಾಗುವ ಸ್ತ್ರೀಶಕ್ತಿ ಪ್ರಶಸ್ತಿ ಪ್ರಕಟ**

- ಡಿಸೆಂಬರ್ 6 ರಂದು ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ದೆಹಲಿಯ ಪ್ಯಾರ ಮೆಡಿಕಲ್ ವಿದ್ಯಾರ್ಥಿನಿ "ನಿರ್ಭಯ" ಗೆ ರಾಣಿ ಲಕ್ಷಿಬಾಯಿ ಪ್ರಶಸ್ತಿ-2012 ನ್ನು ಮರೋಣತ್ತರವಾಗಿ ನೀಡಲಾಗಿದೆ. ರಾಷ್ಟ್ರಪತಿ ಪ್ರಣಭ್ ಮುಖರ್ಜಿಯವರು ಈ ಪ್ರಶಸ್ತಿಯನ್ನು ನಿರ್ಭಯರವರ ತಾಯಿಗೆ ನೀಡಿದರು. ಪ್ರಶಸ್ತಿಯು ಫಲಕ ಮತ್ತು ರೂ.3 ಲಕ್ಷ ನಗದನ್ನು ಒಳಗೊಂಡಿದೆ.
- ರಾಣಿ ರುದ್ರಮ್ಮ ದೇವಿ ಪ್ರಶಸ್ತಿ-2012: ಅಸ್ಸಾಂ ನ ಪ್ರಣಿತ ತಲುಕ್ದರ್ (Pranitha Talukdar) ರವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅಸ್ಸಾಂ ನ ಬರ್ಪೆಟದವರಾದ ಪ್ರಣಿತ ರವರು ಸಾಮಾಜಿಕ ಕಾರ್ಯಕರ್ತೆಯಾಗಿದ್ದು, ಮಹಿಳೆಯರಿಗೊಸ್ಕರ ಕಾರ್ಯಕ್ರಮಗಳು ಮತ್ತು ಸೆಮಿನರಗಳನ್ನು ಆಯೋಜಿಸುವ ಮೂಲಕ ಮಹಿಳೆಯರ ಅಭಿವೃದ್ಧಿಗೆ ದುಡಿಯುತ್ತಿರುವರು.
- ಮಾತಾ ಜೀಜಬಾಯಿ ಪ್ರಶಸ್ತಿ-2012: ದೆಹಲಿಯ ಮೂಲದ ಸೋನಿಕ ಅಗರವಾಲ್ ರವರಿಗೆ ಈ ಬಾರಿಯ ಮಾತಾ ಜೀಜಬಾಯಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಸ್ವ ಸಹಾಯ ಗುಂಪುಗಳಿಗೆ ಪ್ರೋತ್ಸಾಹ ಮತ್ತು ಮಹಿಳೆಯರ ಶಿಕ್ಷಣವನ್ನು ಉತ್ತೇಜಿಸುವಲ್ಲಿ ಸೋನಿಕರವರು ಶ್ರಮಿಸುತ್ತಿದ್ದಾರೆ.
- ಕನ್ನಗಿ ಪ್ರಶಸ್ತಿ-2012: ಕರ್ನಾಟಕದ ಗುರಮ್ಮ ಎಸ್ ಸಂಕಿನ ರವರಿಗೆ 2012 ನೇ ಸಾಲಿನ ಕನ್ನಗಿ ಪ್ರಶಸ್ತಿಯನ್ನು ನೀಡಲಾಗಿದೆ. ಸ್ತ್ರೀ ಶಿಕ್ಷಣ ಮತ್ತು ಸ್ವ ಸಹಾಯ ಸಂಘಗಳಿಗೆ ಪ್ರೋತ್ಸಾಹ ಹಾಗೂ ಮಹಿಳೆಯರಲ್ಲಿ ಸ್ವ ಉದ್ಯೋಗದ ಪರಿಕಲ್ಪನೆಯನ್ನು ಭಿತ್ತಿ ಅವರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಗುರಮ್ಮ ರವರು ನೀಡಿರುವ ಕೊಡುಗೆ ಅಪಾರ. ಕವಿ ಮತ್ತು ಹಾಡುಗಾರ್ತಿಯಾಗಿರುವ ಗುರಮ್ಮ ರವರು ತಮ್ಮ ಹಾಡುಗಳ ಮೂಲಕ ಶಿಕ್ಷಣದ ಮಹತ್ವವನ್ನು ಸಾರುತ್ತಿರುವುದ ಶ್ಲಾಘನೀಯ.
- ರಾಣಿ ಗೈದಿನ್ಲಿ ಝುಲಿಯಾಂಗ್ ಪ್ರಶಸ್ತಿ-2012: ಕೇರಳದ ಶ್ರೀ ಮತಿ ಒಮನ ರವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅನಾಥ ಮತ್ತು ದೌರ್ಜನ್ಯಕೊಳಗಾದ ಮಹಿಳೆಯರ ಆರೈಕೆ, ಮಹಿಳೆಯರ ಸಬಲೀಕರಣ ಮತ್ತು ಪರಿಸರ ಸಂರಕ್ಷಣೆಗೆ ಅವರು ಸಲ್ಲಿಸಿರುವ ಉದಾರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

ಮಹಿಳೆಯರ ಅಭಿವೃದ್ಧಿ ಮೂಲಕ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುತ್ತಿರುವ ಮಹಿಳೆಯರನ್ನು ಗೌರವಿಸುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯವೂ ಸ್ತ್ರೀ ಶಕ್ತಿ ಪ್ರಶಸ್ತಿಗಳನ್ನು ನೀಡುತ್ತಿದೆ. ರಾಣಿ ರುದ್ರಮ್ಮ ದೇವಿ ಪ್ರಶಸ್ತಿಯನ್ನು (2007) ಹೊರತುಪಡಿಸಿ ಇತರೆ ಸ್ತ್ರೀಶಕ್ತಿ ಪ್ರಶಸ್ತಿಗಳನ್ನು 1999 ರಲ್ಲಿ ಸ್ಥಾಪಿಸಲಾಗಿದೆ. ಪ್ರಶಸ್ತಿಗಳು ಫಲಕ ಮತ್ತು ರೂ. 3ಲಕ್ಷ ನಗದನ್ನು ಒಳಗೊಂಡಿವೆ.

**ಪಂಡಿತ್ ರವಿ ಶಂಕರ್ ಗೆ ಟಾಗೋರ್ ಪ್ರಶಸ್ತಿ**

ಸಿತಾರ್ ಮಾಂತ್ರಿಕ ರವಿ ಶಂಕರ್ ರವರಿಗೆ ಸಾಂಸ್ಕೃತಿಕ ಸಾಮರಸ್ಯಕ್ಕೆ ನೀಡಲಾಗುವ ಟಾಗೋರ್ ಪ್ರಶಸ್ತಿಯನ್ನು ಮರೋಣತ್ತರವಾಗಿ ನೀಡಲಾಗಿದೆ. ರಾಷ್ಟ್ರಪತಿ ಪ್ರಣಭ್ ಮುಖರ್ಜಿ ರವರು ಈ ಪ್ರಶಸ್ತಿಯನ್ನು ರವಿ ಶಂಕರ್ ರವರ ಧರ್ಮಪತ್ನಿ ಸುಕನ್ಯಾ ಶಂಕರ್ ರವರಿಗೆ ಪ್ರಧಾನ ಮಾಡಿದರು. ಪ್ರಧಾನ ಮಂತ್ರಿ ಮನ ಮೋಹನ್ ಸಿಂಗ್ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಈ ಸಂಧರ್ಭದಲ್ಲಿ ಹಾಜರಿದ್ದರು.

- ರವೀಂದ್ರ ನಾಥ್ ಟಾಗೋರ್ ರವರ 150 ನೇ ಜನ್ಮ ದಿನದ ಸ್ಮರಣಾರ್ಥ ಈ ಪ್ರಶಸ್ತಿಯನ್ನು 2011 ಸ್ಥಾಪಿಸಲಾಗಿದ್ದು, ಅಂದಿನ ಹಣಕಾಸು ಸಚಿವರಾದ ಶ್ರೀ ಪ್ರಣಭ್ ಮುಖರ್ಜಿರವರು ಈ ಪ್ರಶಸ್ತಿ ಬಗ್ಗೆ ಬಜೆಟ್ ನಲ್ಲಿ ಪ್ರಸ್ತಾಪಿಸಿದ್ದರು.
- ಮನ ಮೋಹನ್ ಸಿಂಗ್ ನೇತೃತ್ವದ ಆಯ್ಕೆ ಸಮಿತಿಯು ರವಿ ಶಂಕರ್ ರವರಿಗೆ ಮರೋಣತ್ತರವಾಗಿ ಈ ಪ್ರಶಸ್ತಿಯನ್ನು ನೀಡಲು ಆಯ್ಕೆಮಾಡಿದ್ದು, ರವಿ ಶಂಕರ್ ರವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರೆನಿಸಿದ್ದಾರೆ.
- ಈ ಪ್ರಶಸ್ತಿಯು ರೂ.2 ಕೋಟಿ ನಗದನ್ನು ಒಳಗೊಂಡಿದೆ.

**ಯಶಸ್ವಿ ಉದ್ಯಮಿಗಳಿಗೆ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ ಕೆನರಾ ಬ್ಯಾಂಕ್**

ಸಾರ್ವಜನಿಕ ವಲಯದ ಕೆನರಾ ಬ್ಯಾಂಕ್ ಯಶಸ್ವಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸುವ ಸಲುವಾಗಿ ವಾರ್ಷಿಕ ಪ್ರಶಸ್ತಿಯನ್ನು ನೀಡವು ಯೋಜನೆಯನ್ನು ಪ್ರಕಟಿಸಿದೆ. ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಕೆನರಾ ಬ್ಯಾಂಕ್ ನ ಮ್ಯಾನೇಜಿಂಗ್ ಡೈರೆಕ್ಟರ್ ಆರ್.ಕೆ.ದುಬೆ ರವರು ಈ ನಿರ್ಣಯವನ್ನು ತಿಳಿಸಿದ್ದಾರೆ.

- ಕೆನರಾ ಬ್ಯಾಂಕ್ ನಿಂದ ಸಾಲ ಪಡೆದ ಯಶಸ್ವಿ ಮಹಿಳಾ ಉದ್ಯಮಿಗಳಿಗೆ ರೂ.25000, ರೂ.50000 ಮತ್ತು ರೂ 100000 ಮೊತ್ತದ ಪ್ರಶಸ್ತಿಯನ್ನು ನೀಡಲಾಗುವುದು. ಪ್ರಶಸ್ತಿಯನ್ನು ಹೊರತುಪಡಿಸಿ ಮಹಿಳಾ ಸಿಬ್ಬಂದಿಯನ್ನೇ ಹೊಂದಿರುವ 10 ಶಾಖೆಗಳನ್ನು ಸಹ ತೆರೆಯಲು ಬ್ಯಾಂಕ್ ನಿರ್ಧರಿಸಿದೆ.
- ಅಷ್ಟೇ ಅಲ್ಲದೇ 26 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ 5 ರಂತೆ ಶಾಲೆಗಳಲ್ಲಿ ಒಟ್ಟು 130 ಬಾಲಕಿಯರ ಶೌಚಾಲಯಗಳನ್ನು ನಿರ್ಮಿಸಲು ಬ್ಯಾಂಕ್ ಮುಂದಾಗಿದೆ. ಈ ಸಂಬಂಧ 1 ಕೋಟಿ ಮೊತ್ತವನ್ನು ವ್ಯಯಿಸಲಿದೆ.
- ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಕೈಗೊಳ್ಳುವ ಮಹಿಳೆಯರಿಗೆ ರೂ.5 ಲಕ್ಷದ ಪ್ರಕ್ರಿಯೆ ಶುಲ್ಕಗಳನ್ನು ಕೈಬಿಡಲು ಬ್ಯಾಂಕ್ ನಿರ್ಧರಿಸಿರುವುದಾಗಿ ಇದೇ ಸಂದರ್ಭದಲ್ಲಿ ದುಬೆ ರವರು ಹೇಳಿದರು.

**ಸಾರ್ಕ್ ಸಾಹಿತ್ಯ ಪ್ರಶಸ್ತಿ ಪ್ರಕಟ: ಭಾರತದ ಸಾಹಿತಿ ಅಭಯ್ ಗೆ ಪ್ರಶಸ್ತಿ**

ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದವರಿಗೆ ಕೊಡಲಾಗುವ ಸಾರ್ಕ್ ಸಾಹಿತ್ಯ ಪ್ರಶಸ್ತಿಯನ್ನು (SAARC Literary Award) ಪ್ರಕಟಿಸಲಾಗಿದೆ. ಈ ಬಾರಿ ಭಾರತದ ಅಭಯ್ ಕೆ ಸೇರಿದಂತೆ ವಿವಿಧ ದೇಶಗಳ ಐದು ಸಾಹಿತಿಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿ ಪಡೆದ ಸಾಹಿತಿಗಳ ವಿವರ ಇಲ್ಲಿದೆ.

- ಅಭಯ್ ಕೆ - ಭಾರತ
- ಫರ್ ಹೀನ್ ಚೌಧರಿ - ಪಾಕಿಸ್ತಾನ
- ಅಬ್ದುಲ್ ಕಾಲಿಕ್ ರಶೀದ್ -ಆಫ್ಘಾನಿಸ್ತಾನ
- ಸುಮನ್ ಪೋಕ್ರೆಲ್ - ನೇಪಾಳ
- ದಯ ದಿಸೆನಾಯಕೆ -ಶ್ರೀಲಂಕಾ

ಸಾರ್ಕ್ ಸಾಹಿತ್ಯ ಪ್ರಶಸ್ತಿ:

- ದಕ್ಷಿಣಾ ಏಷ್ಯಾ ವಲಯದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಅ ಪಾರ ಸೇವೆಯನ್ನು ಸಲ್ಲಿಸಿ, ಸಾಹಿತ್ಯದ ಬೆಳವಣಿಗೆಗೆ ಕಾರಣವಾಗಿರುವ ಸಾಹಿತಿಗಳಿಗೆ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ನೀಡಲಾಗುತ್ತಿದೆ.
- ಈ ಪ್ರಶಸ್ತಿಯನ್ನು 2000 ರಲ್ಲಿ ಸ್ಥಾಪಿಸಲಾಗಿದೆ. ಈ ಬಾರಿಯ ಸಾರ್ಕ್ ಸಾಹಿತ್ಯ ಸಮ್ಮೇಳನದಲ್ಲಿ ಪರಿಸರ, ಸಾಹಿತ್ಯ ಮತ್ತು ಸಂಸ್ಕೃತಿಗೆ ಹೆಚ್ಚು ಒತ್ತು ನೀಡಲಾಗಿತ್ತು.

**ಹರ್ ದೀಪ್ ಸಿಂಗ್ ಪುರಿಗೆ ಶಾಶ್ವತ ಜಾಗೃತ ಪ್ರಶಸ್ತಿ**

ವಿಶ್ವಸಂಸ್ಥೆಯಲ್ಲಿ ಭಾರತದ ಮಾಜಿ ಖಾಯಂ ಪ್ರತಿನಿಧಿಯಾಗಿದ್ದ ಹರ್ ದೀಪ್ ಸಿಂಗ್ ಪುರಿ ಅವರು ಮಾನವೀಯತೆಗೆ ನೀಡದ ಅವಿಸ್ಮರಣೀಯ ಸೇವೆಗಾಗಿ ಪ್ರತಿಷ್ಠಿತ "ಥೋಮಸ್ ಜೆಫರನಸ್ ಶಾಶ್ವತ ಜಾಗೃತ ಪ್ರಶಸ್ತಿ" ಯನ್ನು ನೀಡಲಾಗಿದೆ. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್-ಕಿ-ಮೂನ್ ರವರು ಸಿಂಗ್ ರವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

- ಇದೇ ವೇಳೆ ವಿಶ್ವ ಸಂಸ್ಥೆಯ ಪಾಕಿಸ್ತಾನದ ಮಾಜಿ ಪ್ರತಿನಿಧಿಯಾದ "ಅಬ್ದುಲ್ಲಾ ಹುಸೈನ್ ಹಾರೂನ್" ರವರಿಗೂ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ದಕ್ಷಿಣಾ ಏಷ್ಯಾ ವ್ಯವಹಾರಗಳಿನ ರಾಷ್ಟ್ರೀಯ ಸಲಹ ಮಂಡಳಿ ಈ ಮಾಜಿ ಪ್ರತಿನಿಧಿಗಳನ್ನು ಪ್ರಶಸ್ತಿಗೆ ಆಯ್ಕೆಮಾಡಿತ್ತು.

**ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟ: ಅರ್ಜುನ್ ಸರ್ಜಾ ಗೆ ಅತ್ಯುತ್ತಮ ನಟ ಪ್ರಶಸ್ತಿ**

2011 ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟಗೊಂಡಿದ್ದು, ಪ್ರಸಾದ್ ಚಿತ್ರದಲ್ಲಿನ ಅಮೋಘ ಅಭಿನಯಕ್ಕೆ ಅರ್ಜುನ್ ಸರ್ಜಾ ರವರಿಗೆ ಈ ಸಾಲಿನ ಅತ್ಯುತ್ತಮ ನಟ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿಯ ಮುಖ್ಯ ವಿವಿರ ಇಲ್ಲಿದೆ.

ಅತ್ಯುತ್ತಮ ನಟ (ಅಬ್ಬಯ ನಾಯ್ಡು ಪ್ರಶಸ್ತಿ): ಅರ್ಜುನ್ ಸರ್ಜಾ (ಚಿತ್ರ: ಪ್ರಸಾದ್)

ಅತ್ಯುತ್ತಮ ನಟಿ: ಭಾವಾನ (ಚಿತ್ರ: ಭಾಗೀರಥಿ)

ಅತ್ಯುತ್ತಮ ಚಿತ್ರ: ಪ್ರಸಾದ್

ಎರಡನೇ ಅತ್ಯುತ್ತಮ ಚಿತ್ರ: ಕೂರ್ಮಾವತಾರ

ಮೂರನೇ ಅತ್ಯುತ್ತಮ ಚಿತ್ರ: ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ

ಅತ್ಯುತ್ತಮ ಮನರಂಜನಾ ಚಿತ್ರ ಪ್ರಶಸ್ತಿ: ಸಾರಥಿ

ಉತ್ತಮ ಸಾಮಾಜಿಕ ಕಾಳಜಿ: ಸರಸಮ್ಮನ ಸಮಾಧಿ

ಡಾ.ರಾಜ್ ಕುಮಾರ್ ಪ್ರಶಸ್ತಿ: ಹಂಸಲೇಖ

ಡಾ.ವಿಷ್ಣು ವರ್ಧನ್ ಪ್ರಶಸ್ತಿ: ಅನಂತ್ ನಾಗ್

ಪುಟ್ಟಣ್ಣ ಕಣಗಾಲ್ ಪ್ರಶಸ್ತಿ: ಡಿ.ರಾಜೇಂದ್ರ ಬಾಬು

ಅತ್ಯುತ್ತಮ ಸಂಗೀತಾ ನಿರ್ದೇಶಕ: ಅನೂಪ್ ಸೀಳಿನ್

ಅತ್ಯುತ್ತಮ ಮಕ್ಕಳ ಚಿತ್ರ: ಕಂಸಾಳೆ ಕೈಸಾಳೆ

ತೀರ್ಪುಗಾರರ ಆಯ್ಕೆ ಪ್ರಶಸ್ತಿ: ಶ್ರೀರಾಜನ್

ಪ್ರಶಸ್ತಿಯ ಮೊತ್ತ: ಅತ್ಯುತ್ತಮ ನಟ ಮತ್ತು ನಟಿ ಪ್ರಶಸ್ತಿ (ರೂ.20000 ನಗದು ಮತ್ತು ಬೆಳ್ಳಿ ಪದಕ). ಡಾ.ರಾಜ್ ಕುಮಾರ್ ಪ್ರಶಸ್ತಿ, ಡಾ.ವಿಷ್ಣು ವರ್ಧನ್ ಪ್ರಶಸ್ತಿ ಮತ್ತು ಪುಟ್ಟಣ್ಣ ಕಣಗಾಲ್ ಪ್ರಶಸ್ತಿ (ರೂ.2,00,000 ನಗದು ಮತ್ತು ಚಿನ್ನದ ಪದಕ).

**ರಾಜೀವ್ ಗಾಂಧಿ ರಾಷ್ಟ್ರೀಯ ಗುಣಮಟ್ಟ ಪ್ರಶಸ್ತಿ -2011 ಪ್ರಕಟ**

ಭಾರತೀಯ ಗುಣಮಟ್ಟ ಮಾಪನ (Indian Bureau of Standards) ನೀಡಲಾಗುವ ರಾಜೀವ್ ಗಾಂಧಿ ರಾಷ್ಟ್ರೀಯ ಗುಣಮಟ್ಟ ಪ್ರಶಸ್ತಿ (Rajiv Ghandi National Quality Award)ಯನ್ನು ಪ್ರಕಟಿಸಲಾಗಿದೆ. ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವರಾದ ಕಮಲ್ ನಾಥ್ ರವರು ಈ ಪ್ರಶಸ್ತಿಯನ್ನು ನೀಡಿದರು. ಪ್ರಶಸ್ತಿ ವಿವರ:

- ಅತ್ಯುತ್ತಮ ಪ್ರಶಸ್ತಿ: DAV, ACC ಸೀನಿಯರ್ ಸೆಕೆಂಡರಿ ಪಬ್ಲಿಕ್ ಸ್ಕೂಲ್, ಬಿಲಾಸ್ ಪುರ, ಹಿಮಾಚಲ ಪ್ರದೇಶ ಕ್ಕೆ ನೀಡಲಾಗಿದೆ. ಅತ್ಯುತ್ತಮ ಗುಣಮಟ್ಟದ ಸೇವೆಯನ್ನು ನೀಡುತ್ತಿರುವುದಕ್ಕಾಗಿ ಈ ಶಾಲೆಗೆ ಪ್ರಶಸ್ತಿಯನ್ನು ನೀಡಲಾಗಿದೆ.
- ದೊಡ್ಡ ಪ್ರಮಾಣದ ತಯಾರಿಕಾ ಉದ್ಯಮ (Large Scale Production Industry): ನೋಕಿಯಾ ಸೈಮನ್ಸ್ ಪ್ರೈವೇಟ್ ಲಿಮಿಟೆಡ್, ಕಾಂಚೀಪುರಂ, ತಮಿಳುನಾಡು.
- ದೊಡ್ಡ ಪ್ರಮಾಣದ ಸೇವಾ ಉದ್ಯಮ (Large Scale Service Industry): ಆರ್ ಸಿಸ್ಟಮ್ ಸರ್ವಿಸ್ ಲಿಮಿಟೆಡ್, ನೋಯ್ಡಾ, ಉತ್ತರ ಪ್ರದೇಶ.
- ಸಣ್ಣ ಪ್ರಮಾಣದ ತಯಾರಿಕಾ ಉದ್ಯಮ: ಟೆನ್ಕೊಕಾರ್ಟ್ ಪ್ರೈವೇಟ್ ಲಿಮಿಟೆಡ್, ರುದ್ರಪುರ, ಉತ್ತರಖಂಡ್.

ರಾಜೀವ್ ಗಾಂಧಿ ರಾಷ್ಟ್ರೀಯ ಗುಣಮಟ್ಟ ಪ್ರಶಸ್ತಿ:

ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ನೀಡಲಾಗುವ ಈ ಪ್ರಶಸ್ತಿಯನ್ನು 1991 ರಲ್ಲಿ ಸ್ಥಾಪಿಸಲಾಗಿದೆ. ಉತ್ಪಾದನೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಉದ್ಯಮ ಮತ್ತು ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ಕೊಡಲಾಗುತ್ತಿದೆ.

**ತಾನ್ ತ್ವಾನ್ ಇಂಗ್ (Tan Twan Eng) ಗೆ ಮ್ಯಾನ್ ಏಷ್ಯಾ ಸಾಹಿತ್ಯ ಪ್ರಶಸ್ತಿ**

ಮಲೇಷಿಯಾ ಮೂಲದ ಲೇಖಕ ತಾನ್ ತ್ವಾನ್ ಇಂಗ್ ರವರಿಗೆ 2012 ನೇ ಸಾಲಿನ ಮ್ಯಾನ್ ಏಷ್ಯಾ ಸಾಹಿತ್ಯ ಪ್ರಶಸ್ತಿ(Man Asian Literary Award) ಯನ್ನು ನೀಡಲಾಗಿದೆ. ತಾನ್ ರವರು ಈ ಪ್ರಶಸ್ತಿಯನ್ನು ಪಡೆದ ಮೊದಲ ಮಲೇಷಿಯಾ ಲೇಖಕ ಎನಿಸಿದ್ದಾರೆ. ತಾನ್ ರವರ "ದಿ ಗಾರ್ಡನ್ ಆಫ್ ಮಾರ್ನಿಂಗ್ ಮಿಸ್ಟ್ (The Garden of Morning Mist)" ಕಾದಂಬರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಪಟ್ಟಿಯಲ್ಲಿದ್ದ ಟಾಪ್ 5:

- ಬಿಟ್ವೀನ್ ದಿ ಕ್ಲೆ ಅಂಡ್ ಡಸ್ಟ್- ಮುಶ್ರಫ್ ಅಲಿ ಫಾರೂಕಿ (ಪಾಕಿಸ್ತಾನ)
- ದಿ ಬ್ರೀಫ್ ಕೇಸ್ - ಹಿರೊಮಿ ಕವಕಮಿ (ಜಪಾನ್)

- ಸ್ಸೈಲೆಂಟ್ ಹೌಸ್ -ಒರ್ಹನ್ ಪಮುಕ್ (ಟರ್ಕಿ)
- ನಾರ್ಕೊಪಾಲಿಸ್ - ಜೀತ್ ತಯ್ಯಿಲ್ (ಭಾರತ)
- ದಿ ಗಾರ್ಡನ್ ಆಫ್ ಇವನಿಂಗ್ ಮಿಸ್ಟ್- ತಾನ್ ತ್ವಾನ್ ಇಂಗ್

ದಿ ಗಾರ್ಡನ್ ಆಫ್ ಇವನಿಂಗ್ ಮಿಸ್ಟ್:

- ಜಪಾನ್ ಮಲೇಷಿಯಾವನ್ನು ಅಕ್ರಮಿಸಿಕೊಂಡ ಮೇಲೆ ಮಲೇಯಾದ ಸ್ಥಿತಿಯನ್ನು ಆಧಾರಿತ ಕಾದಂಬರಿ. ಕ್ರೂರತನ, ಪ್ರೀತಿ, ದಂಗೆ ಮತ್ತು ರಾಷ್ಟ್ರೀಯ ಒಗ್ಗಟ್ಟು ಇತ್ಯಾದಿಗಳನ್ನು ಕಾದಂಬರಿ ಒಳಗೊಂಡಿದೆ.

ಮ್ಯಾನ್ ಏಷ್ಯನ್ ಸಾಹಿತ್ಯ ಪ್ರಶಸ್ತಿ:

- ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ಏಷ್ಯಾ ಮೂಲದ ಲೇಖಕರಿಗೆ 2007 ರಿಂದ ನೀಡಲಾಗುತ್ತಿದೆ. ಇಂಗ್ಲಿಷ್ ಅಥವಾ ಇಂಗ್ಲಿಷ್ ಗೆ ಭಾಷಾಂತರಗೊಂಡಿರುವ ಕಾದಂಬರಿಗಳನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಪ್ರಕಟಗೊಳಿಸುವ ಈ ಪ್ರಶಸ್ತಿಯ ಮೊತ್ತ 30000 ಅಮೆರಿಕನ್ ಡಾಲರ್.

ಈ ಹಿಂದೆ ಪ್ರಶಸ್ತಿಗಳಿಸಿದವರು:

- ಕ್ಯೂಯಾಂಗ್ ಶೂಕ್ ಸಿನ್-2011
- ಬಿ ಪೀಯೊ-2010
- ಸು ಟಾಂಗ್-2009
- ಮಿಗಲ್ ಸಿಜುಕೊ-2008
- ಜಿಯಾಂಗ್ ರೊಂಗ್- 2007

## ಮಾದಕ ವಸ್ತು ಮತ್ತು ಮದ್ಯಪಾನ ತಡೆಗೆ ಪ್ರಶಸ್ತಿ ನೀಡಲಿರುವ ಕೇಂದ್ರ ಸರ್ಕಾರ

ಮಾದಕ ವಸ್ತುಗಳ ಸೇವನೆ ಮತ್ತು ಮದ್ಯಪಾನದಂತಹ ಚಟಗಳಿಗೆ ಬಲಿಯಾಗುತ್ತಿರುವ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇವುಗಳ ಕಡಿವಾಣಕ್ಕೆ ಶ್ರಮಿಸುವ ಕೈಗಳಿಗೆ ಪ್ರಶಸ್ತಿಯನ್ನು ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮದ್ಯಪಾನ, ಮಾದಕ ವಸ್ತುಗಳ ಸೇವನೆಯನ್ನು ಮುಕ್ತಗೊಳಿಸುವುದರ ಜೊತೆಗೆ ಹಾನಿಗೊಳಗಾದವರಿಗೆ ಪುನರ್ ಜೀವನ ಕಲ್ಪಿಸಲು ಶ್ರಮಿಸುವವರನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಸಾಮಾಜಿಕ ನ್ಯಾಯಾ ಮತ್ತು ಸಬಲೀಕರಣ ಸಚಿವಾಲಯವೂ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿದೆ.

- ಮದ್ಯಪಾನ, ಮಾದಕ ವಸ್ತುಗಳ ಸೇವನೆಯನ್ನು ತಡೆಯಲು ಶ್ರಮಿಸುವ ಎಲ್ಲಾ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯತಿಗಳು ಮತ್ತು ವ್ಯಕ್ತಿಗಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಜಾತಿ ಭೇದ, ಲಿಂಗ ಭೇದ ವಿಲ್ಲದೇ ಈ ಪ್ರಶಸ್ತಿಗೆ ಅರ್ಹರನ್ನು ಆಯ್ಕೆಮಾಡಲಾಗುವುದು.
- ಮಾದಕ ವಸ್ತು ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತರ ರಾಷ್ಟ್ರೀಯ ದಿನವಾದ ಜೂನ್ 26 ರಂದು ಈ ಪ್ರಶಸ್ತಿಯನ್ನು ವಿತರಿಸಲಾಗುವುದು.

- ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತು ಸೇವನೆ ಮತ್ತು ಮದ್ಯಪಾನ ಚಟಕ್ಕೆ ಬೀಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಇಂತಹ ದುಶ್ಚಟಗಳಿಗೆ ಬಲಿಯಾಗುವವರಲ್ಲಿ ಯುವಕರೇ ಹೆಚ್ಚು. ಪಂಜಾಬ್, ಮಣಿಪುರ ಮತ್ತಿತರ ರಾಜ್ಯಗಳಲ್ಲಿ ಈ ಸಮಸ್ಯೆ ಗಂಭೀರವಾಗಿದೆ.

**60 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ**

60 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪ್ರಕಟಗೊಳಿಸಲಾಗಿದ್ದು, ಕನ್ನಡದ "ಭಾರತ್ ಸ್ಟೋರ್ಸ್" ಚಿತ್ರವೂ ಅತ್ಯುತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿದೆ. ಬಸು ಚಟರ್ಜಿ ನೇತೃತ್ವವಹಿಸಿದ್ದ 60 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಕಿರು ನೋಟ:

- ಅತ್ಯುತ್ತಮ ರಾಷ್ಟ್ರೀಯ ಚಿತ್ರ ಪ್ರಶಸ್ತಿ: "ಕಹಾನಿ"
- ಅತ್ಯುತ್ತಮ ಹಿಂದಿ ಚಿತ್ರ: ಫಿಲ್ಮಿಸ್ತಾನ್
- ಅತ್ಯುತ್ತಮ ಮನರಂಜನೆ ಚಿತ್ರ: ವಿಕಿ ಡೋನರ್ ಮತ್ತು ಉಸ್ತಾದ್ ಹೋಟೆಲ್
- ಅತ್ಯುತ್ತಮ ನಟ ಪ್ರಶಸ್ತಿ: ಇರ್ಫಾನ್ ಖಾನ್ (ಪಾನ್ ಸಿಂಗ್ ತೋಮರ್)
- ಅತ್ಯುತ್ತಮ ಮಕ್ಕಳ ಚಿತ್ರ: ದೇಖ್ ಇಂಡಿಯನ್ ಸರ್ಕಸ್.
- ಅತ್ಯುತ್ತಮ ನಟಿ ಪ್ರಶಸ್ತಿ: ಉಷಾ ಜಾಧವ್ (ದಾಗ್ ಮರಾಠಿ ಚಿತ್ರ)
- ಅತ್ಯುತ್ತಮ ಹಿನ್ನಲೆ ಗಾಯಕ: ಶಂಕರ್ ಮಹದೇವನ್ (ಬೋಲೋ ನಾ)
- ಅತ್ಯುತ್ತಮ ಹಿನ್ನಲೆ ಗಾಯಕಿ: ಆರತಿ ಆಂಕಾಲಿಕರ್ (ಸಂಹಿತಾ ಮರಾಠಿ ಚಿತ್ರ)
- ಅತ್ಯುತ್ತಮ ತೆಲುಗು ಚಿತ್ರ: ಈಗ
- ಅತ್ಯುತ್ತಮ ಮಲಯಾಳಂ ಚಿತ್ರ: ಸೆಲ್ಲೂ ಲಾಯ್ಡ್
- ಅತ್ಯುತ್ತಮ ಸಾಮಾಜಿಕ ಚಿತ್ರ: "ಬಿಯಾಂಡ್ ದಿ ಮಿಸ್ಟ್"
- ವಿಶೇಷ ತೀರ್ಪುಗಾರ ಪ್ರಶಸ್ತಿ ನಟ: ನವಾಜುದ್ದೀನ್
- ವಿಶೇಷ ತೀರ್ಪುಗಾರ ಪ್ರಶಸ್ತಿ ನಟಿ: ಪರಿಣಿತ.
- ಅತ್ಯುತ್ತಮ ಚೊಚ್ಚಲ ನಿರ್ದೇಶನಕ್ಕೆ ನೀಡುವ ಇಂಧಿರಾ ಗಾಂಧಿ ಪ್ರಶಸ್ತಿ: ಚಿತ್ತಗಾಂಗ್.

  ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿರುವ "ಭಾರತ್ ಸ್ಟೋರ್ಟ್ಸ್" ಚಿತ್ರದ ನಿರ್ದೇಶಕರು ಪಿ.ಶೇಷಾದ್ರಿ ಮತ್ತು ನಿರ್ಮಾಪಕರು ಬಸಂತ್ ಪಾಟೀಲ್. ನಿರ್ದೇಶಕ ಪಿ.ಶೇಷಾದ್ರಿ ರವರಿಗೆ ಇದು ಏಳನೇ ಪ್ರಶಸ್ತಿ.

**ಸುಗತಕುಮಾರಿಗೆ ಸರಸ್ವತಿ ಸಮ್ಮಾನ್-2012 ಪ್ರಶಸ್ತಿ**

ಮಲಯಾಳಂನ ಪ್ರಸಿದ್ಧ ಕವಯತ್ರಿ ಸುಗತಕುಮಾರಿ ರವರು 2012 ನೇ ಸಾಲಿನ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸುಪ್ರೀಂ ಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಆರ್.ಸಿ.ಲಹೋಟಿ ಅವರು ನೇತೃತ್ವ ವಹಿಸಿದ್ದ 13 ಸದಸ್ಯರ ತಂಡ ಸುಗತ ಕುಮಾರಿ ಯವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಿದೆ.

- ಸುಗತಕುಮಾರಿ ರವರ "ಮಣಲೆಳತ್ತು" ಕವನ ಸಂಕಲನಕ್ಕೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 2006 ರಲ್ಲಿ ಪ್ರಕಟಗೊಂಡ "ಮಣಲೆಳತ್ತು" ಕವನ ಸಂಕಲನ 27 ಕವನಗಳನ್ನು ಒಳಗೊಂಡಿದೆ.

ಸುಗತಕುಮಾರಿ:

- ಸುಗತಕುಮಾರಿ ರವರು ಮಲಯಾಳಂನ ಪ್ರಸಿದ್ಧ ಕವಯತ್ರಿ. ಕವಯತ್ರಿ ಜತೆಗೆ ಪರಿಸರ ಹೋರಾಟಗಾರ್ತಿಯಾಗಿರುವ 79 ವರ್ಷದ ಸುಗತಕುಮಾರಿ, ಕೇರಳ ರಾಜ್ಯ ಮಹಿಳಾ ಆಯೋಗ್ಯದ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದರು.

ಸರಸ್ವತಿ ಸಮ್ಮಾನ್ ಪ್ರಶಸ್ತಿ:

- ಕೆ.ಕೆ.ಬಿರ್ಲಾ ಫೌಂಡೇಶನ್ ನೀಡಲಾಗುವ ಈ ಪ್ರಶಸ್ತಿಯನ್ನು 1991 ರಲ್ಲಿ ಸ್ಥಾಪಿಸಲಾಗಿದೆ.
- ಪ್ರಶಸ್ತಿಯೂ 10 ಲಕ್ಷ ನಗದು ಮತ್ತು ಫಲಕವನ್ನೊಳಗೊಂಡಿದೆ. 10 ವರ್ಷಗಳಲ್ಲಿ ಭಾರತೀಯ ಭಾಷೆಯಲ್ಲಿ ಪ್ರಕಟಗೊಂಡ ಪ್ರಮುಖ ಸಾಹಿತ್ಯ ಕೃತಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಕಳೆದ ವರ್ಷ ಈ ಪ್ರಶಸ್ತಿಯನ್ನು "ರೋಹಿತ್ ಗೌತಮ್" ರವರ "ಬಂಗ್ ಭೂಮಿ" ಗೆ ನೀಡಲಾಗಿದೆ.

**ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿ ಪ್ರಕಟ: ಮಧ್ಯಪ್ರದೇಶಕ್ಕೆ ಎರಡು ಪ್ರಶಸ್ತಿ**

26ನೇ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಮಧ್ಯಪ್ರದೇಶ ಈ ಬಾರಿ ಎರಡು ವಿಭಾಗದಲ್ಲಿ ಪ್ರಶಸ್ತಿಯನ್ನು ಬಾಚಿಕೊಂಡಿದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿ 2011-12 ಸಮಾರಂಭದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ಪ್ರಶಸ್ತಿಯನ್ನು ವಿತರಿಸಿದರು.

- ಪ್ರಮುಖ ಪ್ರವಾಸಿ ತಾಣವಾಗಿ ಅತ್ಯುತ್ತಮ ನಾಗರಿಕ ನಿರ್ವಹಣೆ ವಿಭಾಗದಲ್ಲಿ ಪ್ರಶಸ್ತಿ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಕೈಗೊಳ್ಳುವ ನಾವೀನ್ಯ ಮತ್ತು ಅನನ್ಯ ಯೋಜನೆಯಡಿ ಮತ್ತೊಂದು ಪ್ರಶಸ್ತಿಯನ್ನು ಮಧ್ಯಪ್ರದೇಶ ತನ್ನದಾಗಿಸಿಕೊಂಡಿದೆ.
- ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ಇತ್ತೀಚೆಗೆ ಮಧ್ಯಪ್ರದೇಶ ದೇಶದಲ್ಲೇ ಮೊದಲ ಬಾರಿಗೆ "ಏರ್ ಟ್ಯಾಕ್ಸಿ (Air Taxi)" ಯೋಜನೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯವೆನಿಸಿದೆ.

**ಜಪಾನ್ ನ ಟೊಯೊ ಇಟೊ (Toyo Ito) ಗೆ ಪ್ರಿಟ್ಜಕರ್ ಆರ್ಕಿಟೆಕ್ಚರ್ಪ್ರಶಸ್ತಿ- 2013**

ನೊಬೆಲ್ ವಾಸ್ತುಶಿಲ್ಪ ಪ್ರಶಸ್ತಿ ಎಂದೇ ಪ್ರಸಿದ್ಧ ಹೊಂದಿರುವ ಪ್ರಿಟ್ಜಕರ್ ವಾಸುಶಿಲ್ಪ (Pritzker Architecture) ಪ್ರಶಸ್ತಿ -2013 ಗೆ ಜಪಾನ್ ನ ಪ್ರಸಿದ್ಧ ವಾಸ್ತುಶಿಲ್ಪಿ ಟಯೊ ಇಟೊ ರವರು ಪಾತ್ರರಾಗಿದ್ದಾರೆ. 71 ವರ್ಷದ ಟಯೊ ಇಟೊ ರವರು ಈ ಪ್ರಶಸ್ತಿಯನ್ನು ಗೆದ್ದ ಜಪಾನ್ ನ ಆರನೇ ವಾಸ್ತುಶಿಲ್ಪಿ.

- ಈ ಮುಂಚೆ ಹಿರೋಶಿಮಾ ಪೀಸ್ ಮೆಮೊರಿಯಲ್ ನ ವಿನ್ಯಾಸಗಾರ ಕೆಂಜೋ ತಂಗೆ (1987), ಪುಮಿಹಿಕೊ ಮಕಿ (1993), ಚರ್ಚ್ ಆಫ್ ದಿ ಲೈಟ್ ನ ವಿನ್ಯಾಸಗಾರ ತಡೊ ಅಂಡೊ(1995), ಕಜುಯೊ ಸೆಜಿಮ ಮತ್ತು ಯು ನಿಶಿಜವ (2010) ರಲ್ಲಿ ಈ ಪ್ರಶಸ್ತಿಗೆ ಆಯ್ಕೆಯಾದ ಜಪಾನ್ ನ ಇತರೆ ವಾಸ್ತುಶಿಲ್ಪಿಗಳು.
- 100000 ಯು.ಎಸ್ ಡಾಲರ್ ಹಾಗೂ ಕಂಚಿನ ಪದಕವನ್ನು ಒಳಗೊಂಡಿರುವ ಈ ಪ್ರಶಸ್ತಿಯನ್ನು ಮೇ 29, 2013 ರಂದು ನೀಡಲಾಗುವುದು.

ಪ್ರಿಟ್ಜಕರ್ ವಾಸುಶಿಲ್ಪ ಪ್ರಶಸ್ತಿ ಬಗ್ಗೆ:

- ವಾಸುಶಿಲ್ಪ ವಿನ್ಯಾಸ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದಂತವರಿಗೆ ನೀಡಲಾಗುವ ಈ ಪ್ರಶಸ್ತಿಯನ್ನು 1979 ರಲ್ಲಿ ಸ್ಥಾಪಿಸಲಾಗಿದೆ. ಪ್ರಸಿದ್ಧ ಉದ್ಯಮಿ ದಿವಂಗತ ಜೆ ಎ ಪ್ರಿಟ್ಜಕರ್ ಈ ಪ್ರಶಸ್ತಿಯ ಸಂಸ್ಥಾಪಕರು.
- ಪ್ರತಿ ವರ್ಷ ಮೇ ತಿಂಗಳಲ್ಲಿ ನೀಡಲಾಗುವ ಈ ಪ್ರಶಸ್ತಿಯನ್ನು ಮೊದಲ ಬಾರಿಗೆ 1979 ರಲ್ಲಿ ಫಿಲಿಪ್ ಜಾನ್ ಸನ್ ರವರಿಗೆ ನೀಡಲಾಗಿತ್ತು.
- ಈ ಪ್ರಶಸ್ತಿಯು 100000 ಯು.ಎಸ್ ಡಾಲರ್ ಮತ್ತು ಕಂಚಿನ ಪದಕವನ್ನು ಒಳಗೊಂಡಿದೆ.

**ಎಸ್. ವೆಂಕಟ ಮೋಹನ್ ಗೆ ನ್ಯಾಷನಲ್ ಬಯೋಸೈನ್ಸ್-2012 ಪ್ರಶಸ್ತಿ**

ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿಯ (IICT) ಖ್ಯಾತ ವಿಜ್ಞಾನಿ ಎಸ್. ವೆಂಕಟ ಮೋಹನ್ ರವರಿಗೆ 2012 ನೇ ಸಾಲಿನ ನ್ಯಾಷನಲ್ ಬಯೋಸೈನ್ಸ್ ಪ್ರಶಸ್ತಿ (National Bioscience Award)ಯನ್ನು ನೀಡಿ ಗೌರವಿಸಲಾಗಿದೆ. IICT ಯ ಬಯೋಎಂಜನಿಯರಿಂಗ್ ಮತ್ತು ಪರಿಸರ ವಿಭಾಗದಲ್ಲಿ ವೆಂಕಟ ಮೋಹನ್ ರವರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ತ್ಯಾಜ್ಯದಿಂದ ಜೈವಿಕ ಇಂಧನವನ್ನು ತಯಾರಿಸುವ ತಂತ್ರಜ್ಞಾನವನ್ನು ಅನ್ವೇಷಣೆಗೊಳಿಸಿರುವುದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ನ್ಯಾಷನಲ್ ಬಯೋಸೈನ್ಸ್ ಆವಾರ್ಡ್:

- ನ್ಯಾಷನಲ್ ಬಯೋಸೈನ್ಸ್ ಆವಾರ್ಡ್ ಅಥವಾ N-BIOS ಪ್ರಶಸ್ತಿಯನ್ನು 45 ವರ್ಷ ಕೆಳಗಿನ ಯುವ ವಿಜ್ಞಾನಿಗಳ ಸಾಧನೆಯನ್ನು ಪ್ರೋತ್ಸಾಹಿಸಲು ನೀಡಲಾಗುತ್ತದೆ.
- ಜೀವ ವಿಜ್ಞಾನಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡ ಅಥವಾ ಪೇಟೆಂಟ್ ಪಡೆದ ಹೊಸ ಸಂಶೋಧನೆಗಳಿಗೆ ಪ್ರತಿ ವರ್ಷ ಈ ಪ್ರಶಸ್ತಿಯನ್ನು ಕೊಡಲಾಗುವುದು.
- ಈ ಪ್ರಶಸ್ತಿಯು CSIR ನೀಡಲಾಗುವು ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಗೆ ಸಮಾನವಾದದ್ದು ಎಂದು ಭಾವಿಸಲಾಗಿದೆ.

**ನಾರಾಯಣ ಹೃದಯಾಲಯಕ್ಕೆ "ಬೋಲ್ಡ್ ನೆಸ್ ಇನ್ ಬ್ಯುಸಿನೆಸ್" ಪ್ರಶಸ್ತಿ**

ಅನಿವಾಸಿ ಭಾರತೀಯ ಲಕ್ಷ್ಮಿ ಮಿತ್ತಲ್ ಒಡೆತನದ ಆರ್ಸೆಲರ್ ಮಿತ್ತಲ್ ಸಂಸ್ಥೆ ಮತ್ತು ಫೈನಾನ್ಸಿಯಲ್ ಟೈಮ್ಸ್ ವತಿಯಿಂದ ನೀಡುವ "ಬೋಲ್ಡ್ ನೆಸ್ ಇನ್ ಬ್ಯುಸಿನೆಸ್" ಪ್ರಶಸ್ತಿಗೆ 2013 ನೇ ಸಾಲಿನಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯ ಮತ್ತು ಆಟೋಮೊಬೈಲ್ ಕ್ಷೇತ್ರದ ದಿಗ್ಗಜ ಮಹೀಂದ್ರಾ ಅಂಡ್ ಮಹೀಂದ್ರಾ ಕಂಪನಿ ಆಯ್ಕೆಯಾಗಿವೆ. ಉನ್ನತ ಸೇವೆಗಳಿಗೆ ಏಳು ವಿಭಾಗದಲ್ಲಿ ನೀಡಲಾಗುವ ಈ ಪ್ರಶಸ್ತಿಯಲ್ಲಿ ಎರಡು ಪ್ರಶಸ್ತಿಗಳು ಇವುಗಳ ಪಾಲಾಗಿವೆ.

- ಬೆಂಗಳೂರಿನ ನಾರಾಯಣ ಹೃದಯಾಲಯ ಸಾಮಾಜಿಕ ಹೊಣೆಗಾರಿಕೆ ವಿಭಾಗದಲ್ಲಿ ಈ ಪ್ರಶಸ್ತಿಯನ್ನು ಗೆದ್ದುಕೊಂಡರೆ ಮಹೀಂದ್ರಾ ಅಂಡ್ ಮಹೀಂದ್ರಾ ಸಂಸ್ಥೆ ಮಾರುಕಟ್ಟೆ ವಿಸ್ತರಣೆ ವಿಭಾಗದಲ್ಲಿ ಈ ಪ್ರಶಸ್ತಿಗೆ ಭಾಜನವಾಗಿದೆ.
- ಗ್ಲೆನ್ ಕೊರ್ ನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಐವಾನ್ ಗ್ಲಾನೆಸ್ ಬರ್ಗ್ ರವರು "ವರ್ಷದ ವ್ಯಕ್ತಿ ಪ್ರಶಸ್ತಿ"ಗೆ ಆಯ್ಕೆಯಾಗಿದ್ದಾರೆ. ಮೊಂಡಾರ್ಗಾನ್ ಕಾರ್ಪೋರೇಷನ್ "ಡ್ರೈವರ್ ಆಫ್ ಚೆಂಜ್" ಪ್ರಶಸ್ತಿಗೆ ಪಾತ್ರವಾಗಿದೆ.
- ಡಾ.ದೇವಿ ಶೆಟ್ಟಿ ನೇತೃತ್ವದ ನಾರಾಯಣ ಹೃದಯಾಲಯದ ಬೆಂಗಳೂರಿನಲ್ಲಿನ ಹೃದ್ರೋಗ ವಿಭಾಗವು ವಿದೇಶ ಅತಿ ದೊಡ್ಡ ಹೃದ್ರೋಗ ವಿಭಾಗವಾಗಿದೆ. ಈ ಆಸ್ಪತ್ರೆಯು 25 ದೇಶಗಳ ಸುಮಾರು 15,000 ರೋಗಿಗಳಿಗೆ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ವಿಶ್ವ ಪ್ರಸಿದ್ದಿ ಹೊಂದಿದೆ.

**ನಟ, ನಿರ್ಮಾಪಕ ದ್ವಾರಕೀಶ್ ಗೆ ದಾದಾ ಸಾಹೇಬ್ ಪಾಲ್ಕೆ ಅಕಾಡೆಮಿ ಪ್ರಶಸ್ತಿ**

ಕನ್ನಡದ ಹಿರಿಯ ನಟ, ನಿರ್ಮಾಪಕ ಮತ್ತು ನಿರ್ದೇಶಕ ದ್ವಾರಕೀಶ್ ರವರು ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಏಪ್ರಿಲ್ 30 ರಂದು ಮುಂಬೈನಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ.

- ಭಾರತೀಯ ಚಿತ್ರರಂಗಕ್ಕೆ ಸಲ್ಲಿಸಿದ ಸೇವೆಗಾಗಿ ದ್ವಾರಕೀಶ್ ರವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗಿದೆ.
- ಈ ಹಿಂದೆ ಇದೇ ಪ್ರಶಸ್ತಿಗೆ ನಿರ್ಮಾಪಕಿ ಪಾರ್ವತಮ್ಮ ರಾಜಕುಮಾರ್, ಆರ್.ಲಕ್ಷಣ್, ಕೆಸಿಎನ್ ಗೌಡ ಮತ್ತು ಸಿವಿಎನ್ ಶಾಸ್ತ್ರಿ ಭಾಜನರಾಗಿದ್ದರು.
- ಪ್ರತಿ ವರ್ಷ ಆಯಾ ಭಾಷೆಯ ಚಲನಚಿತ್ರ ಮಂಡಳಿ ಅರ್ಹರನ್ನು ಈ ಪ್ರಶಸ್ತಿಗೆ ಶಿಫಾರಸ್ಸು ಮಾಡುತ್ತದೆ. ಈ ಬಾರಿ ಜೀವಮಾನ ಸಾಧನೆಗಾಗಿ ದ್ವಾರಕೀಶ್ ರವರಿಗೆ ಲಭಿಸಿದೆ.
- ಅಂದಹಾಗೇ, ಚಾರುಲತ ಸಿನಿಮಾದ ನಂತರ ದ್ವಾರಕೀಶ್ ಮತ್ತೊಂದು ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರದ ಹೆಸರು "ಬ್ರೆಡ್ ಬಟರ್ ಜಾಮ್".

**ವಿನೀತ್ ಜೈನ್ ಗೆ ನ್ಯೂಸ್ ಟೆಲಿವಿಷನ್ ಆವಾರ್ಡ್-2013**

ಇಂಡಿಯಾಟೆಲಿವಿಷನ್.ಕಾಂ ನೀಡುವ ನ್ಯೂಸ್ ಟೆಲಿವಿಷನ್ ಪ್ರಶಸ್ತಿಗೆ ಟೈಮ್ಸ್ ಗ್ರೂಪ್ ನ ಮ್ಯಾನೇಜಿಂಗ್ ಡೈರೆಕ್ಟರ್ "ವಿನೀತ್ ಜೈನ್" ಆಯ್ಕೆಯಾಗಿದ್ದಾರೆ. ಮಾರ್ಚ್ 25 ರಂದು ನವದೆಹಲಿಯಲ್ಲಿ ತಾಜ್ ಪ್ಯಾಲೆಸ್ ನಲ್ಲಿ ನಡೆದ 6ನೇ ನ್ಯೂಸ್ ಟೆಲಿವಿಷನ್ ಪ್ರಶಸ್ತಿ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ವಿನೀತ್ ಜೈನ್ ರವರು ಟೈಮ್ಸ್ ಆಫ್ ಇಂಡಿಯಾ

ಸಮೂಹವನ್ನು ದೂರದರ್ಶನ ಕ್ಷೇತ್ರಕ್ಕೆ ತರಲು ಶ್ರಮಿಸಿದ ಕಾರಣಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. Zoom, ET ಮತ್ತು ಟೈಮ್ಸ್ ನೌ ಚಾನಲ್ಗಳ ಮೂಲಕ ಟೈಮ್ಸ್ ಗ್ರೂಪ್ ದೂರದರ್ಶನಕ್ಕೂ ಕಾಲಿಟ್ಟಿದೆ.

ನ್ಯೂಸ್ ಟೆಲಿವಿಷನ್ ಪ್ರಶಸ್ತಿ:

- ಇಂಡಿಯಾಟೆಲಿವಿಷನ್.ಕಾಂ ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡುತ್ತ ಬರುತ್ತಿದೆ.
- ಹಿಂದಿ, ಇಂಗ್ಲೀಷ್, ಮರಾಠಿ ಮತ್ತು ತೆಲುಗು ಭಾಷೆಯಲ್ಲಿ ಸುದ್ದಿಯನ್ನು ಭಿತ್ತರಿಸುವ ಚಾನಲ್ ಗಳ ಮುಖ್ಯಸ್ಥರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.
- ಕಲೆ, ಕ್ರೀಡೆ, ಅಪರಾಧ ಪ್ರಕರಣ, ಮನರಂಜನೆ ಹೀಗೆ ವಿವಿಧ ವರ್ಗಗಳಿಗೆ ಪ್ರಶಸ್ತಿಗಳನ್ನು ನೀಡಲಾಗುವುದು.

**ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿ (National Photo Awards) -2011-12 ಪ್ರಕಟ**

ಎರಡನೇ ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. 2011-12 ನೇ ಸಾಲಿನ ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿಯನ್ನು ಲೋಕ ಸಭಾ ಸ್ಪೀಕರ್ ಮೀರಾ ಕುಮಾರಿಯವರು ಹೆಸರಾಂತ ಛಾಯಾಚಿತ್ರ ಕಾರರಿಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ವಿತರಿಸಿದರು.

ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿ -2011-12 ವಿವರಗಳು:

- ಜೀವಮಾನ ಸಾಧನೆ ಪ್ರಶಸ್ತಿ: ಪ್ರಣಲಾಲ್ ಪಟೇಲ್, ಟಿ.ಎಸ್. ನಾಗರಾಜನ್ ಮತ್ತು ಟಿ.ಎನ್.ಎ ಪೆರುಮಲ್ ರವರಿಗೆ ಲಭಿಸಿದೆ.
- 2011-12 ನೇ ಸಾಲಿನ ಅತ್ಯುತ್ತಮ ವೃತ್ತಿಪರ ಛಾಯಾಗ್ರಾಹಕ ಪ್ರಶಸ್ತಿ: ಸಲಿಲ್ ಬೆರ (Salil Bera)
- 2011-12 ನೇ  ಸಾಲಿನ ಅತ್ಯುತ್ತಮ ವೃತ್ತಿಪರ ಛಾಯಾಗ್ರಾಹಕ ಪ್ರಶಸ್ತಿ (ಪರಿಸರ): ಪಂಕಜ್ ಶರ್ಮಾ
- 2011-12 ನೇ ಸಾಲಿನ ಅತ್ಯುತ್ತಮ ವೃತ್ತಿಪರ ಛಾಯಾಗ್ರಾಹಕ ಪ್ರಶಸ್ತಿ (ಓಪನ್ ಕೆಟಗರಿ): ಅನಿಲ್ ರಿಸಲ್ ಸಿಂಗ್
- ಅತ್ಯುತ್ತಮ ಹವ್ಯಾಸಿ ಛಾಯಾಗ್ರಾಹಕ ಪ್ರಶಸ್ತಿ - 2011-12: ಸುಭಾಷ್ ಜಿರಂಗೆ
- ಅತ್ಯುತ್ತಮ ಹವ್ಯಾಸಿ ಛಾಯಾಗ್ರಾಹಕ ಪ್ರಶಸ್ತಿ -2011-12 (ಲಲಿತ ಕಲೆ)-ದೆಬಶಿಷ್ ಘೋಷ್ ರೇ

ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿ:

- ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿಯನ್ನು ಭಾರತ ಸರ್ಕಾರ ಉತ್ತಮ ವೃತ್ತಿಪರ ಮತ್ತು ಹವ್ಯಾಸಿ ಛಾಯಾಗ್ರಾಹಕರಿಗೆ ವಿವಿಧ ವರ್ಗಗಳಲ್ಲಿ ನೀಡುತ್ತಿದೆ. ಈ ಸಾಲಿನ ಪ್ರಶಸ್ತಿ ಎರಡನೇ ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿ.\

ಪ್ರಣಲಾಲ್ ಪಟೇಲ್: 104 ವರ್ಷದ ಹಿರಿಯ ಛಾಯಾಗ್ರಾಹಕ. ಪ್ರಾಥಮಿಕ ಶಾಲಾ ಶಿಕ್ಷರರಾಗಿದ್ದ ಪಟೇಲ್ ರವರು ಹವ್ಯಾಸಕ್ಕಾಗಿ ಛಾಯಾಚಿತ್ರ ವೃತ್ತಿಯನ್ನು ಬೆಳೆಸಿಕೊಂಡರು. ಕಾಲಾಕ್ರಮೇಣ ಛಾಯಚಿತ್ರವನ್ನೇ ವೃತ್ತಿಯಾಗಿ ಆರಿಸಿಕೊಂಡು ಪ್ರಖ್ಯಾತರಾದರು. ಭಾರತ ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿನ ಅಪರೂಪದ ಫೋಟೊಗಳನ್ನು ತಮ್ಮ ಕೌಶಲ್ಯದಿಂದ ಸೆರೆಹಿಡಿದಿದ್ದು ವೃತ್ತಿಯಲ್ಲಿ ಅವರಿಗಿದ್ದ ಆಸಕ್ತಿಯನ್ನು ಬಿಂಬಿಸಿದೆ.

ಟಿ.ಎನ್.ಎಸ್ ನಾಗರಾಜನ್: ಮತ್ತೊಬ್ಬ ಪ್ರಸಿದ್ಧ ಛಾಯಾಗ್ರಾಹಕ. ದೇಶ ವಿದೇಶಗಳಲ್ಲಿ ಇವರ ತೆಗೆದಿರುವ ಛಾಯಾಚಿತ್ರಗಳನ್ನು ಪ್ರದರ್ಶಿಲಾಗಿದೆ. 1987 ರಲ್ಲಿ ಇವರಿಗೆ PATA ಗೋಲ್ಡ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಛಾಯಾಗ್ರಾಹಕರಲ್ಲದೇ ಇವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. "ದಿ ಸ್ಟೋರಿ ಆಫ್ ಮೈ ಲೈಫ್" ಇವರ ಆತ್ಮಚರಿತ್ರೆ.

ಟಿ.ಎನ್.ಎ ಪೆರುಮಲ್: ಪೆರುಮಲ್ ರವರು "ಭಾರತ ಫೋಟೊಗ್ರಾಫಿಯಾ ಪಿತಾಮಹಾ" ಎನಿಸಿದ್ದಾರೆ. ಇವರು ಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕ. ಪರಿಸರ ಕುರಿತು ಇವರು ಸೆರಿಹಿಡಿದಿರುವ ಛಾಯಾಚಿತ್ರಗಳಿಗೆ ದೇಶ ವಿದೇಶ ಪ್ರಶಸ್ತಿಗಳು ಒಲಿದು ಬಂದಿವೆ. ರಾಯಲ್ ಫೋಟೊಗ್ರಾಫಿಕ್ ಸೊಸೈಟಿಯ ಫೇಲೊ ಗೌರವಕ್ಕೆ ಇವರು ಪಾತ್ರರಾಗಿದ್ದರು. ಮೈಸೂರು ಫೋಟೊಗ್ರಾಫಿ ಸೊಸೈಟಿಯ ಸದಸ್ಯ ಮತ್ತು ಫೆಡರಲ್ ಆಫ್ ಇಂಡಿಯನ್ ಫೋಟೊಗ್ರಾಪಿಯ ಜೀವಿತಾವಧಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಕರುನಾಡು ಎಗ್ಸಾಮ್ಸ್